Digitization by eGangotri and Sarayu Trust. Funding by MoE-IKS

ಶ್ರೀ ಸಿದ್ಧಾಂತ ಶಿಖಾಮಣಿ

ಪ್ರವಚನಪ್ರಭೆ



HIBARE ARTS

ವಿದ್ಯಾವಾಚಸ್ಪತಿ

ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಜಂಗಮವಾಡಿ ಮಠ, ವಾರಣಾಸಿ

ಕಿರಣ ೫೪-೬೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math. Varanasi
Acc. No. ....

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಸಿದ್ಧಾಂತ ಶಿಖಾಮಣಿ

ಪ್ರವಚನಪ್ರಭೆ

(ಷೋಡಶ ಪರಿಚ್ಛೇದಃ)

ಕಿರಣ : ೫೪-೬೨

(ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮಸ್ಥಲ, ಸಕಾಯಸ್ಥಲ, ಅಕಾಯಸ್ಥಲ, ಪರಕಾಯಸ್ಥಲ, ಧರ್ಮಾಚಾರಸ್ಥಲ, ಭಾವಾಚಾರಸ್ಥಲ ಮತ್ತು ಜ್ಞಾನಾಚಾರಸ್ಥಲ)

ಆಶೀರ್ವಚನ

''ವಿದ್ಯಾವಾಚಸ್ಪತಿ''
ಶ್ರೀಮತ್ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು
ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
ಜಂಗಮವಾಡಿಮಠ, ವಾರಾಣಸಿ

ಸಂಕಲನೆ–ಸಂಪಾದನೆ
''ಶಕ್ತಿವಿಶಿಷ್ಟಾದ್ವೈತ ವೇದಾಂತಾಚಾರ್ಯ''
ಶ್ರೀ ಷ.ಬ್ರ.ಡಾ. ಮಹಾದೇವ ಶಿವಾಚಾರ್ಯಸ್ವಾಮಿಗಳು
ಎಂ.ಎ. ಪಿ.ಎಚ್.ಡಿ.
ಬೃಹನ್ಮಠ, ಬಬಲೇಶ್ವರ

ಪ್ರಕಾಶಕರು :
ಶ್ರೀಗುರು ಅಮರೇಶ್ವರ ಪ್ರಕಾಶನ, ಅಮರೇಶ್ವರಮಠ
ಗುಳೇದಗುಡ್ಡ– ೫೮೭ ೨೦೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

SHRI SIDDHANTHA SHIKHAMANI-PRAVACHANA PRABHE

Kirana 54-62

By. H. H. Shri 1008 Jagadguru Dr. Chandrashekhar Shivacharya Mahaswamiji.

Edited by : Dr. Mahadev Shivacharya Swamiji Bableshwar

Published by : Sri Guru Amareshwar Prakashan, Amareshwarmath Guledgudda-587 203. Ph. 66864 (08357)
Dist. Bagalkot State- Karnataka

1999

Price : Rs. 30-00

Q234:2
33N9

ಪ್ರಥಮ ಮುದ್ರಣ : ೧೯೯೯

ಪ್ರತಿಗಳು : ೨೦೦೦

ಪುಟಗಳು : 10+140

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7204

ಗ್ರಂಥದ ಹಕ್ಕುಗಳೆಲ್ಲ ಶ್ರೀ ಕಾಶೀ ಮಹಾಪೀಠಕ್ಕೆ ಸೇರಿರುತ್ತವೆ.

ಬೆಲೆ : ರೂ. ೩೦–೦೦

ಮುಖಪುಟ ವಿನ್ಯಾಸ :
ಹಿಬಾರೆ ಆರ್ಟ್ಸ್, ಬೆಂಗಳೂರು

ಮುಖಪುಟ ಮುದ್ರಣ :
ಶ್ರೀ ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

ಮುದ್ರಕರು :
ಫ. ಶಿ. ಭಾಂಡಗೆ ✆ 38617
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್,
ಕಾಗದಗೇರಿ ಓಣಿ ಗದಗ–೫೮೨ ೧೦೧.
✆ (O) 37566, 35509, 36578 (R)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹರ್ಷಿ ಅಗಸ್ತ್ಯರಿಗೆ
ವೀರಶೈವ (ಶಿವಾದ್ವೈತ) ಸಿದ್ಧಾಂತವನ್ನು ಬೋಧಿಸುತ್ತಿರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗ್ರಂಥ ದಾಸೋಹಿಗಳು

ಶ್ರೀ ಫಕೀರಪ್ಪ ತೋಟಪ್ಪ ಗಡ್ಡಿ ಹಾಗೂ ಶ್ರೀಮತಿ ನೀಲಮ್ಮ ಫಕೀರಪ್ಪ ಗಡ್ಡಿ

''ಶ್ರೀ ಸಿದ್ಧಾಂತ ಶಿಖಾಮಣಿಯ ಪ್ರವಚನ ಪ್ರಭೆ'' ಇದೊಂದು ಅಪೂರ್ವವಾಗಿ ಬರೆದಂಥ ಸಂಶೋಧನಾತ್ಮಕ ಗ್ರಂಥ. ಅತ್ಯಮೂಲ್ಯವಾದ ವಿಷಯವನ್ನು ಹೊಂದಿದ ಈ ಗ್ರಂಥ ವೀರಶೈವ ಇತಿಹಾಸದಲ್ಲಿ ಚಿರಂತನ ಚಿಂತನ ಗ್ರಂಥ. ಐತಿಹಾಸಿಕ ನೆಲೆಗಟ್ಟಿನ ಮೇಲೆ ಬರೆದಂಥ ಈ ಗ್ರಂಥದ ಪ್ರಕಟಣೆಯ ಸೇವೆಯನ್ನು ಸಲ್ಲಿಸಿದವರು ಗದಗ ನಗರದ ಗಣ್ಯ ನಾಗರಿಕರು, ಪಂಚ ಪೀಠಗಳ ಬಗೆಗೆ ಅಗಾಧ ಭಕ್ತಿಯನ್ನು ಹೊಂದಿದವರೂ ಆದ ಶ್ರೀ ಫಕೀರಪ್ಪ ತೋಟಪ್ಪ ಗಡ್ಡಿ. ಮೂಲತಃ ಲಕ್ಷ್ಮೇಶ್ವರದವರಾದ ಇವರ ತಂದೆ ಲಿಂ|| ತೋಟಪ್ಪ ಗಡ್ಡಿ ಚಿಕ್ಕ ವ್ಯಾಪಾರ ಮಾಡುತ್ತಾ ''ಗುರು ಸೇವೆಯಲ್ಲಿ ಸದಾ ನಿರತರು. ಮಹಾತಪಸ್ವಿ ಶ್ರೀ ರಂಭಾಪುರಿ ಪೀಠದ ಶಿವೈಕ್ಯ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಭಗವತ್ಪಾದಂಗಳವರ ಸೇವೆಯನ್ನು ಭಕ್ತಿಯಿಂದ ತ್ರಿಕರಣ ಪೂರ್ವಕವಾಗಿ ಮಾಡಿದ ಫಲವೇ ಅವರ ಏಕಮೇವ ಪುತ್ರ ಶ್ರೀ ಫಕೀರಪ್ಪ ಗಡ್ಡಿ. ಇವರೂ ಸಹಿತ ತಂದೆ-ತಾಯಿಗಳ ಒಳ್ಳೇ ಸಂಸ್ಕಾರದಲ್ಲಿ ಜಗದ್ಗುರುಗಳವರ ಕರುಣೆಯ ಕೂಸಾಗಿ ಬೆಳೆದರು. ವ್ಯಾಪಾರೀ ರಂಗದಲ್ಲಿ ಕಾಲಿಟ್ಟು ಅದರಲ್ಲಿ ಪೂರ್ಣ ಪ್ರತಿಭೆ ಸಾಧಿಸಿದ್ದಾರೆ. ಇವರ ಸಹೋದರಿ ಶ್ರೀಮತಿ ಶಾಂತಕ್ಕನನ್ನು ಶ್ರೀಮಂತ ಶ್ರೀ ಚನ್ನಬಸಪ್ಪನವರು ಕೋತಂಬರಿಯವರ ಸಂಗಡ ವಿವಾಹ ಮಾಡಿಕೊಟ್ಟರು. ಇವರು ದಾನಿಗಳು, ಧರ್ಮಾಭಿಮಾನಿಗಳು, ವ್ಯಾಪಾರದಲ್ಲಿ ನಿಯತ್ತನ್ನು ಪಾಲಿಸಿಕೊಂಡು ಬಂದು ಪ್ರಸಿದ್ಧರಾಗಿದ್ದಾರೆ.

ದಿ. ೧೭-೧೦-೧೯೩೩ರಲ್ಲಿ ಜನಿಸಿದ ಫಕೀರಪ್ಪನವರು ಪ್ರಾಥಮಿಕ ಶಿಕ್ಷಣ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಧಾರವಾಡದಲ್ಲಿ ಪೂರೈಸಿದರು. ಆ ಅವಧಿಯಲ್ಲಿ ಧಾರವಾಡದ ನವಕಲ್ಯಾಣಮಠದ, ಯೋಗಸಿದ್ಧ ಪುರುಷರಾದ ಶ್ರೀ ಕುಮಾರ ಸ್ವಾಮಿಗಳ ಲಾಲನೆ, ಪಾಲನೆಯಲ್ಲಿಯೇ ಬೆಳೆದದ್ದು ಪೂರ್ವಜನ್ಮದ ಪುಣ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಶಿಕ್ಷಣವನ್ನು ಅಲ್ಲಿಗೆ ನಿಲ್ಲಿಸಿ ಹೊಸಪೇಟೆಯಲ್ಲಿದ್ದ ಅವರ ಮಾವಂದಿರಾದ ಶ್ರೀ ಚನ್ನಬಸಪ್ಪ ಕೋತಂಬರಿ ಇವರ ಮಾರ್ಗದರ್ಶನದಲ್ಲಿ ೧೯೫೧ ರಿಂದ ೧೯೬೪ರ ವರೆಗೆ ಪೆಟ್ರೋಲಿಯಂ ಹಾಗೂ ಸೀಮೆ ಎಣ್ಣೆ ವ್ಯವಹಾರದಲ್ಲಿ ತಲ್ಲೀನತೆ. ಕಾಲ ಕ್ರಮೇಣ ಗದಗದಲ್ಲಿ ಪೆಟ್ರೋಲ ಹಾಗೂ ಸೀಮೆ ಎಣ್ಣೆ ವ್ಯಾಪಾರ ಪ್ರಾರಂಭ. ಗದಗನ್ನು ವಾಪಾರೀ ಕ್ಷೇತ್ರ ಹಾಗೂ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಕೊಪ್ಪಳದಲ್ಲಿಯೂ ಇದೇ ವ್ಯಾಪಾರವನ್ನು ಪ್ರಾರಂಭಿಸುವದರ ಜೊತೆಗೆ ಅಲ್ಲಿ ಸುಮಾರು ೪೫ ಎಕರೆ ಭೂಮಿ ಯನ್ನು ಕೊಂಡು ಆದರ್ಶ ಒಕ್ಕಲುತನ ಪ್ರಾರಂಭಿಸಿದರು. ಅದರಲ್ಲಿಯೂ ಪೂರ್ಣ ಯಶಸ್ವಿಯಾಗಿದ್ದಾರೆ. ಹೀಗೆ ವ್ಯಾಪಾರದಲ್ಲಿ ಹಾಗೂ ಕೃಷಿಯಲ್ಲಿ ಒಳ್ಳೇ ಪ್ರಗತಿ ಸಾಧಿಸಿದ್ದಾರೆ. ತ್ರಿಕಾಲ ಜ್ಞಾನಿ, ಶರಣ ಶ್ರೇಷ್ಠ ಮೌನತಪಸ್ವಿ ಶ್ರೀ ಚಿಕೇನಕೊಪ್ಪದ ಶರಣರ ಶಿಷ್ಯರಾಗಿ ಅವರ ಸೇವೆ ಮಾಡುವ ಭಾಗ್ಯ ಬಂದದ್ದು ಜೀವನದಲ್ಲಿ ಪ್ರಾಪ್ತವಾದ ಅಪೂರ್ವ ಬದಲಾವಣೆ. ಆಚಾರ್ಯರ, ಶರಣರ, ಸಂತರ ಸೇವೆಯಲ್ಲಿಯೇ ಹೆಚ್ಚಿನ ಅವಧಿಯನ್ನು ಕಳೆಯುವ ಸುಯೋಗ ಅವರಿಗೆ ಬಂದದ್ದು ಜೀವನದಲ್ಲಿ ಕೂಡಿಬಂದ ಮಹಾಭಾಗ್ಯ. ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಸ್ನೇಹ ಬದುಕಿನ ಆದರ್ಶಗಳು. ಜೀವನದಲ್ಲಿ ಇಂದು ಎಲ್ಲವನ್ನು ಪಡೆದಿದ್ದರೂ ಬಲ್ಲಿದರೆಂಬ ಹೆಮ್ಮೆ ಇಲ್ಲ. ಎನಗಿಂತ ಕಿರಿಯರಿಲ್ಲ ಎನ್ನುವ ಅವರ ಮಾತು ಸಂಸ್ಕಾರದ ಪ್ರತೀಕ. ಇವರ ಪತ್ನಿ ಶ್ರೀಮತಿ ನೀಲಮ್ಮನವರು ಪತಿಗೆ ತಕ್ಕ ಸತಿ. ಇವರೂ ಸಹಿತ ಬಾಲ್ಯದಲ್ಲಿ ಬಂಕಾಪುರ ಜನ್ಮಭೂಮಿ ಆಗಿದ್ದರಿಂದ ಪೂಜ್ಯ ಷ. ಬ್ರ. ಲಿಂ| ರುದ್ರಮುನಿ ಶಿವಾಚಾರ್ಯರು ಅರಳೆಲೆಮಠ ಅವರ ಸೇವೆಯ ಅವಕಾಶ, ಅವರ ಆಶೀರ್ವಾದದ ನಂತರ ಇವರ ತಂದೆಯ ಸಂಗಡ ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಶಿವಾಚಾರ್ಯರ ಆಶೀರ್ವಾದ ಈ ದಂಪತಿಗಳಿಗೆ ರಕ್ಷಾ ಕವಚವಾಗಿದ್ದು ಇಂದು ಕಾಶೀ ಜ್ಞಾನಪೀಠದ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಭಗತ್ಪಾದಂಗಳವರ ಸೇವಾ ಮಾಡುವ ಭಾಗ್ಯ ಬಂದದ್ದು ಯೋಗಾ ಯೋಗ.

ಐದು ಜನ ಪುತ್ರರು. ಬಸವರಾಜ ಇಂಜನೀಯರನಾಗಿ ವ್ಯಾಪಾರದಲ್ಲಿದ್ದಾನೆ. ಚಿ. ಸೋಮೇಶ್ವರ ಎಮ್. ಬಿ. ಬಿ. ಎಸ್., ಎಮ್.ಡಿ. ಮುಗಿಸಿ ಬಳ್ಳಾರಿಯಲ್ಲಿ ಪ್ರಸಿದ್ಧ ವೈದ್ಯ ಇವರ ಧರ್ಮಪತ್ನಿಯೂ ವೈದ್ಯಳೇ. ನಾಗರಾಜ ಕೊಪ್ಪಳದಲ್ಲಿ, ವಿಜಯಕುಮಾರ ಹಾಗೂ ಗಂಗಾಧರ ಗದುಗಿನಲ್ಲಿ ಪೆಟ್ರೋಲ ಹಾಗೂ ಸೀಮೆ ಎಣ್ಣೆ ವ್ಯಾಪಾರದಲ್ಲಿದ್ದಾರೆ. ಎಲ್ಲರೂ ಸುಸಂಸ್ಕೃತರು ಆಗಿದ್ದು ಈ ದಂಪತಿಗಳ ಪುಣ್ಯ; ವಿಶೇಷ ಒಬ್ಬಳೇ ಪುತ್ರಿ . ಚಿ. ಪಾರಮ್ಮ ಡಾಕ್ಟರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಈ ಗ್ರಂಥ ಪ್ರಕಟಣೆಗೆ ದಾನಕೊಟ್ಟದ್ದು ಸುತ್ತ್ಯ, ಅವರಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ.

ಗದಗ

–ಎಸ್. ವ್ಹಿ. ಕೂಗು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪಾದಕರಿಂದ

ವೇದಾಗಮಗಳು, ಉಪನಿಷತ್ತುಗಳು, ಅಷ್ಟಾದಶ ಪುರಾಣಗಳು ಹಾಗೂ ಷಡ್‌ದರ್ಶನಗಳು ನಮ್ಮ ಭಾರತೀಯ ಧರ್ಮ-ದರ್ಶನ ಸಂಸ್ಕೃತಿಯ ಆಕರ ಗ್ರಂಥಗಳಾಗಿವೆ. ಅವೆಲ್ಲವುಗಳ ಸಾರಸಂಗ್ರಹವನ್ನೇ ನಮ್ಮೀ ಸಿದ್ಧಾಂತ ಶಿಖಾಮಣಿಯು ಒಳಗೊಂಡಿದೆ. 'ರೇಣುಕಗೀತೆ'ಯೆಂದೂ ಕರೆಯಲ್ಪಡುವ ಈ ವೀರಶೈವ ದಾರ್ಶನಿಕ ಗ್ರಂಥವು ಮೋಕ್ಷಾಪೇಕ್ಷಿಗಳ, ಸಾಧಕ-ಸಿದ್ಧರ ಕೈಗನ್ನಡಿ ಎನಿಸಿದೆ. ಈ ಗ್ರಂಥದಲ್ಲಿ ಉಕ್ತವಾದ ನೂರೊಂದು ಸ್ಥಲಗಳು ಸಮಗ್ರ ವೀರಶೈವ ಸಿದ್ಧಾಂತವನ್ನು ಸಾರುತ್ತವೆ.

ಅಂಥ ಉತ್ಕೃಷ್ಟ ಗ್ರಂಥವು ಜನಸಾಮಾನ್ಯರಿಗೂ ತಿಳಿಯಬೇಕು ಎಂಬ ಸದುದ್ದೇಶ ದಿಂದ ವಿದ್ಯಾ ವಾಚಸ್ಪತಿಗಳಾದ ಪರಮಪೂಜ್ಯ ಶ್ರೀ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಕಳೆದ ಇಪ್ಪತ್ತು ವರುಷಗಳಿಂದ ದೇಶದಲ್ಲಿ ಕನ್ನಡ ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿ ಆಶೀರ್ವಚನ ನೀಡಿ, ಅನುಗ್ರಹಿಸುತ್ತ ಬಂದಿದ್ದಾರೆ ಅದೊಂದು ಮುಮುಕ್ಷುಗಳ ಸುದೈವವೇ ಸರಿ!

ಶ್ರೀ ಕಾಶೀ ಜಗದ್ಗುರುಗಳವರ ವಿದ್ವತ್‌ಪೂರ್ಣ ಅಸ್ಖಲಿತ ವಾಣಿಗೆ ಮಾರು ಹೋದವರಲ್ಲಿ ನಾನು ಒಬ್ಬ ಎಂದು ಹೇಳಲು ಹೆಮ್ಮೆಯೆನಿಸುತ್ತದೆ. ಅಂತೆಯೇ ಅವರ ಅನುಗ್ರಹಾದೇಶದಿಂದ ನಾನು ಅವರ ಆಶೀರ್ವಚನಗಳನ್ನು ಸಂಕಲಿಸಿ, ಸಂಪಾದಕನಾಗಿ ಕಾರ್ಯ ನಿರ್ವಹಿಸಿ, ಈ ಕೃತಿಯನ್ನು ನಾಡಿನ ಮಹಾಜನತೆಯ ಮುಂದಿಡುತ್ತಿದ್ದೇನೆ. ಕಳೆದ ವರುಷ ಗದಗ-ಬೆಟಗೇರಿ ನಗರದಲ್ಲಿಯೇ ಬಿಡುಗಡೆಯಾದಂತೆ ಇದೀಗ ಆಷಾಢ ಮಾಸದ ಗುರುಪೂರ್ಣಿಮೆಯ ನಿಮಿತ್ತ ನಡೆದ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮದ ಸಂದರ್ಭದಲ್ಲಿ ಮತ್ತೊಂದು ಗ್ರಂಥ ಬಿಡುಗಡೆಯಾಗುತ್ತಿರುವುದು ಅತೀವ ಸಂತಸದ ಸಂಗತಿಯಾಗಿದೆ. ಇನ್ನುಳಿದ ಗ್ರಂಥಗಳೂ ಇಷ್ಟರಲ್ಲಿಯೇ ಸಿದ್ಧವಾಗಲಿವೆ ಎಂದೂ ತಿಳಿಸಬಯಸುವೆ.

ಇಂದು ಪರಮಪೂಜ್ಯ ಶ್ರೀ ಮದ್ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ೧೦೦೮ ಶ್ರೀಶೈಲ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರಿಂದ ಬಿಡುಗಡೆ ಆಗಲಿರುವ ಈ ಎರಡೂ ಗ್ರಂಥಗಳ ಸಂಪಾದಕ ನಾಗಿ ಕಾರ್ಯನಿರ್ವಹಿಸುವ ಭಾಗ್ಯವನ್ನು ಕರುಣಿಸಿದ ಶ್ರೀ ಕಾಶೀ ಜಗದ್ಗುರುಗಳನ್ನು ಮೊದಲ್ಗೊಂಡು ಉಭಯ-ಸನ್ನಿಧಿಯವರ ಶ್ರೀಪಾದಂಗಳಿಗೆ ಶಿರಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಆಧ್ಯಾತ್ಮಜೀವಿಗಳು ಅತ್ಯವಶ್ಯವಾಗಿ ಅಧ್ಯಯನ ಮಾಡಲೇಬೇಕಾದ ಈ ಕೃತಿಯು ಇನ್ನುಳಿದ ಕೃತಿಗಳಂತೆ ಜನಪ್ರಿಯವಾಗುವುದೆಂದು ಭಾವಿಸಿ, ತ್ವರಿತ ಮುದ್ರಣಾಲಯ ದವರಿಗೂ ಸಹಕರಿಸಿದ ಸರ್ವರಿಗೂ ಶುಭವನ್ನು ಹಾರೈಸುತ್ತೇವೆ.

ಬಬಲೇಶ್ವರ — ಇತಿ ಶಿವಂ ಭೂಯಾತ್

೩-೮-೯೯ — ಡಾ. ಮಹಾದೇವ ಶಿವಾಚಾರ್ಯ ಸ್ವಾಮಿಗಳು, ಹಿರೇಮಠ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಕಾಶಕರ ನುಡಿ

ಶ್ರೀಮತ್ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೧೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನ ಪ್ರಭೆ (ಕಿರಣ ೫೪–೬೨) ಎಂಬ ಗ್ರಂಥ ಪುಷ್ಪವನ್ನು ಆತ್ಮೀಯ ಓದುಗರ ಕೈಗೆ ಕೊಡುವದರ ಮೂಲಕ ನಮಗೆ ಅತೀವ ಆನಂದ ಮತ್ತು ಅಭಿಮಾನ ವೆನಿಸುತ್ತದೆ. ಈ ಮೊದಲಿನ ಕಿರಣಗಳು ಅತ್ಯಂತ ಜನಪ್ರಿಯ ವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಪೂಜ್ಯ ಜಗದ್ಗುರುಗಳವರು ಧರ್ಮ ಪ್ರಚಾರ–ಪ್ರಸಾರಾರ್ಥವಾಗಿ ದೇಶದ ಉದ್ದಗಲಕ್ಕೂ ಸಂಚರಿಸುತ್ತಿದ್ದರೂ, ಅದರಲ್ಲಿಯೇ ಬಿಡುವು ಮಾಡಿಕೊಂಡು ಕನ್ನಡನಾಡಿನ ಆಧ್ಯಾತ್ಮದ ಹಸಿವುಳ್ಳ ಮಹಾಜನತೆಯ ಕಲ್ಯಾಣಕ್ಕೋಸುಗ ಶ್ರೀ ಸಿದ್ಧಾಂತ ಶಿಖಾಮಣಿಯ ತಾತ್ಪರ್ಯವನ್ನು ಅನೇಕ ಯುಕ್ತಿ ಪ್ರಮಾಣ ದೃಷ್ಟಾಂತಗಳೊಂದಿಗೆ ತಮ್ಮ ಆಶೀರ್ವಚನ ರೂಪದಲ್ಲಿ ಅನುಗ್ರಹಿಸುತ್ತಿದ್ದಾರೆ. ಅಂಥ ಆಶೀರ್ವಚನಗಳನ್ನು ಸಂಗ್ರಹಿಸಿ ಸಂಪಾದಿಸುವ ಕಾರ್ಯವನ್ನು ''ಶಕ್ತಿ ವಿಶಿಷ್ಟಾದ್ವೈತ ವೇದಾಂತಾಚಾರ್ಯ'' ಶ್ರೀ ಷ. ಬ್ರ. ಡಾ. ಮಹಾದೇವ ಶಿವಾಚಾರ್ಯ ಸ್ವಾಮಿಗಳು ಹಿರೇಮಠ ಬಬಲೇಶ್ವರ ಅವರು ಬಹು ಶ್ರದ್ಧೆಯಿಂದ ಮಾಡಿದ್ದಾರೆ. ತಮ್ಮ ಮಠದ ಕಾರ್ಯಕಲಾಪಗಳಿದ್ದರೂ, ಮಹಾ ಸನ್ನಿಧಿಯವರ ಆದೇಶದ ಮೇರೆಗೆ ಅವುಗಳೆಲ್ಲವನ್ನು ಬದಿಗಿರಿಸಿ ಬಬಲೇಶ್ವರದ ಸ್ವಾಮಿಗಳು ಈ ಗ್ರಂಥವನ್ನು ಸಂಪಾದಿಸಿ ಕೊಟ್ಟಿದ್ದಾರೆ. ಪ್ರಕಾಶನದ ಪರವಾಗಿ ಅವರಿಗೆ ಅನಂತ ಕೃತಜ್ಞತಾ ಪೂರ್ವಕ ನಮನಗಳು.

ಈ ಕೃತಿಯು ಪ್ರಕಟವಾಗಿ ತಮ್ಮ ಕೈ ಸೇರಲು ಧನಸಹಾಯವಿತ್ತು ಸೇವೆ ಸಲ್ಲಿಸಿದವರು ಗದಗಿನ ಶ್ರೀ ಫಕೀರಪ್ಪ ತೋಟಪ್ಪ ಗಡ್ಡಿ ಹಾಗೂ ಶ್ರೀಮತಿ ನೀಲಮ್ಮ ಫಕೀರಪ್ಪ ಗಡ್ಡಿ ಅವರೆಂಬುದು ಸ್ಮರಣೀಯವಾಗಿದೆ ಅವರಿಗೆ ಜಗದ್ಗುರು ಮಹಾಸನ್ನಿಧಿಯವರು ಆಯುರಾರೋಗ್ಯಭಾಗ್ಯ ಕೊಟ್ಟು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ. ಈ ಪುಸ್ತಕದ ಕರಡು ಪ್ರತಿಗಳನ್ನು ತಿದ್ದುವಲ್ಲಿ ರಾಣೇಬೆನ್ನೂರಿನ ವಿಶ್ರಾಂತ ಪ್ರಾಧ್ಯಾಪಕರಾದ ಶ್ರೀ ಅ. ಸಿ. ಹಿರೇಮಠ ಮತ್ತು ಗದುಗಿನ ನಿವೃತ್ತ ಶಿಕ್ಷಕರಾದ ಶ್ರೀ ಕರಬಸಯ್ಯ ವೀರಯ್ಯ ಬಾಳಿಕಾಯಿ ಅವರು ಸಹಕರಿಸಿದ್ದು ಅವರಿಗೂ ನಮ್ಮ ತುಂಬು ಹೃದಯದ ವಂದನೆಗಳು. ಅಲ್ಪ ವೇಳೆಯಲ್ಲಿ ಅಂದವಾಗಿ ಮುದ್ರಿಸಿದ ಗದುಗಿನ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೂ, ಸುಂದರ ಮುಖ ಪುಟವುಳ್ಳ ರಕ್ಷಾ ಕವಚವನ್ನು ಮುದ್ರಿಸಿದ ಬೆಂಗಳೂರಿನ ಲಕ್ಷ್ಮೀ ಮುದ್ರಣಾಲಯದವರಿಗೂ ನಮ್ಮ ನೆನಕೆಗಳು ಸಲ್ಲುತ್ತವೆ. ಈ ಕೃತಿ ಪ್ರಕಟಣಾ ಕಾರ್ಯದಲ್ಲಿ ಭಾಗಿಗಳಾದ ಗದುಗಿನ ಶ್ರೀ ವೇ. ಬೆಟ್ಟದಯ್ಯ ಹಿರೇಮಠ ಮತ್ತು ಶ್ರೀ ವಿಶ್ವನಾಥ ಅಬ್ಬಿಗೇರಿ ಹಾಗೂ ಅವರ ಸ್ನೇಹಿತರಿಗೂ ಅನಂತ ಕೃತಜ್ಞತೆಗಳು.

ಈ ಗ್ರಂಥವನ್ನು ಶ್ರೀಗುರು ಅಮರೇಶ್ವರ ಪ್ರಕಾಶನದಿಂದ ಪ್ರಕಟಪಡಿಸಲು ಅಪ್ಪಣೆ ಕೊಡಿಸಿದ ಶ್ರೀಮತ್ ಕಾಶೀ ಜಗದ್ಗುರು ಮಹಾಸನ್ನಿಧಿಗೆ ಅನಂತ ಕೋಟಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಣಾಮ ಸಲ್ಲಿಸುತ್ತೇವೆ. ಆಷಾಢ ಮಾಸದ ಗುರು ಪೌರ್ಣಿಮೆ ನಿಮಿತ್ತವಾಗಿ ಗದಗ–ಬೆಟಗೇರಿ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿರುವ ಕೃಷಿಕ ಕ್ಷೇಮಾಭಿವೃದ್ಧಿ ಕೇಂದ್ರದಲ್ಲಿ ಶ್ರೀ ಕಾಶೀ ಜಗದ್ಗುರುಗಳವರ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮವು (೧೫–೭–೯೯ ರಿಂದ ೩–೮–೯೯ ರವರೆಗೆ) ನಡೆದುದು ಅವಿಸ್ಮರಣೀಯ ಘಟನೆಯಾಗಿದೆ. ಅದರ ಮಂಗಲೋತ್ಸವ ಮಂಗಳವಾರದಂದು ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ೧೦೦೮ ಶ್ರೀಶೈಲ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು ಈ ಗ್ರಂಥವನ್ನು ತಮ್ಮ ಪ್ರಸಾದ ಹಸ್ತದಿಂದ ಬಿಡುಗಡೆ ಮಾಡಿ ವಾಚಕ ಲೋಕಕ್ಕೆ ಅನುಗ್ರಹಿಸಿದ್ದಾರೆ. ಆ ಮಹಾಸನ್ನಿಧಿಯವರ ಹಾಗೂ ಸಾನ್ನಿಧ್ಯ ವಹಿಸಿದ ಶ್ರೀ ಕಾಶೀ ಜಗದ್ಗುರುಗಳವರ ಶ್ರೀಪಾದಂಗಳಿಗೆ ಶಿರಸಾಷ್ಟಾಂಗ ಪ್ರಣಾಮಗಳು. ಈ ಕಾರ್ಯಕ್ಕೆ ಸಹಕರಿಸಿದ ಗದಗ–ಬೆಟಗೇರಿ ನಗರದ ಶ್ರೀ ಕಾಶೀ ಜಗದ್ಗುರುಗಳವರ ಆಧ್ಯಾತ್ಮಿಕ ವೇದಿಕೆ, ಶ್ರೀ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರ ಟ್ರಸ್ಟ, ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘ ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಸಮಸ್ತ ಪದಾಧಿಕಾರಿಗಳಿಗೆ ನಾವು ಋಣಿಯಾಗಿದ್ದೇವೆ.

ಜ್ಞಾನ ಪಿಪಾಸುಗಳು ಈ ಗ್ರಂಥವನ್ನು ಶ್ರದ್ಧಾ ಭಕ್ತಿಯಿಂದ ಅಧ್ಯಯನ ಮಾಡಿ ತಮ್ಮ ಅರಿವಿನ ಆಯಾಮವನ್ನು ಹೆಚ್ಚಿಸಿಕೊಳ್ಳುವದರೊಂದಿಗೆ ತಮ್ಮ ಮೆಚ್ಚುಗೆಗೆ ಪಾತ್ರವಾದ ಇಂಥ ಪುಸ್ತಕಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡುವಿರೆಂದು ನಂಬಿರುತ್ತೇನೆ.

ಇತಿ ಶಿವಮ್

ತಮ್ಮ

ಅಮರೇಶ್ವರ ಮಠ, ಗುಳೇದಗುಡ್ಡ — ಶ್ರೀ ಬಸಯ್ಯ ಸ್ವಾಮಿ

೩–೮–೧೯೯೯ — ವ್ಯವಸ್ಥಾಪಕರು, ಅಮರೇಶ್ವರ ಪ್ರಕಾಶನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿವಿಡಿ

೧.	ಕ್ರಿಯಾಗಮಸ್ಥಲ–೧	೧
೨.	ಕ್ರಿಯಾಗಮಸ್ಥಲ–೨	೮
೩.	ಭಾವಾಗಮಸ್ಥಲ–೧	೧೪
೪.	ಭಾವಾಗಮಸ್ಥಲ–೨	೨೦
೫.	ಜ್ಞಾನಾಗಮಸ್ಥಲ–೧	೨೬
೬.	ಜ್ಞಾನಾಗಮಸ್ಥಲ–೨	೩೪
೭.	ಸಕಾಯಸ್ಥಲ	೪೨
೮.	ಅಕಾಯಸ್ಥಲ–೧	೪೮
೯.	ಅಕಾಯಸ್ಥಲ–೨	೫೩
೧೦.	ಪರಕಾಯಸ್ಥಲ–೧	೬೧
೧೧.	ಪರಕಾಯಸ್ಥಲ–೨	೬೬
೧೨.	ಧರ್ಮಾಚಾರಸ್ಥಲ–೧	೭೪
೧೩.	ಧರ್ಮಾಚಾರಸ್ಥಲ–೨	೮೩
೧೪.	ಧರ್ಮಾಚಾರಸ್ಥಲ–೩	೮೮
೧೫.	ಧರ್ಮಾಚಾರಸ್ಥಲ–೪	೯೬
೧೬.	ಧರ್ಮಾಚಾರಸ್ಥಲ–೫	೧೦೪
೧೭.	ಧರ್ಮಾಚಾರಸ್ಥಲ–೬	೧೧೦
೧೮.	ಭಾವಾಚಾರಸ್ಥಲ–೧	೧೧೭
೧೯.	ಭಾವಾಚಾರಸ್ಥಲ–೨	೧೨೮
೨೦.	ಜ್ಞಾನಾಚಾರಸ್ಥಲ	೧೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೬ನೆಯ ಪರಿಚ್ಛೇದವು

(ಲಿಂಗಸ್ಥಲಗಳು)

ಆಶೀರ್ವಚನ - ೧

ಕ್ರಿಯಾಗಮಸ್ಥಲ-೧

ವಿಶ್ವೇಶಲಿಂಗ ಸಂಭೂತಂ ವಿಶ್ವ ವಿದ್ಯಾವಿಬೋಧಕಮ್।
ವಿಶ್ವವಂದ್ಯಂ ಸದಾ ವಂದೇ ವಿಶ್ವಾರಾಧ್ಯಂ ಜಗದ್ಗುರಮ್॥

ಕಾಶೀ ಜ್ಞಾನಸಿಂಹಾಸನದ ಆದಿಜಗದ್ಗುರು ವಿಶ್ವಾರಾಧ್ಯರನ್ನೇ ಮೊದಲುಗೊಂಡು ವಿಶ್ವೇಶ್ವರ ಶಿವಾಚಾರ್ಯ ಪರ್ಯಂತವಾದ ಗುರುಪಂಪರೆಗೆ ಅನಂತ ಪ್ರಣಾಮಗಳನ್ನು ಸಮರ್ಪಿಸಿ ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಆಯೋಜಿತ ವಾದ ಇಂದಿನ ಧರ್ಮಸಭೆಯಲ್ಲಿ ಉಪಸ್ಥಿತರಿರುವ ಕಾಶೀ ವೀರಶೈವ ವಿದ್ವತ್ ಸಂಘದ ಸಮಸ್ತವಿದ್ಯಾರ್ಥಿಗಳೇ! ಹಾಗೂ ಯಾತ್ರಾರ್ಥವಾಗಿ ಬಂದಿರುವ ಭಕ್ತಮುಮುಕ್ಷುಗಳೇ!

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯಮಹರ್ಷಿಯನ್ನು ನಿಮಿತ್ತಮಾಡಿಕೊಂಡು ಜಗತ್ತಿನ ಸಮಸ್ತ ಮಾನವರನ್ನು ಕುರಿತು ಉಪದೇಶ ಮಾಡಿದ ದಿವ್ಯಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿಯು. ಈ ಗ್ರಂಥರತ್ನದ ಲಿಂಗಷಟ್‌ಸ್ಥಲದಲ್ಲಿ ಬರುವ ಮಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಇಂದಿನಿಂದ ಆಶೀರ್ವಚನವನ್ನು ಪ್ರಾರಂಭಿಸುತ್ತಿದ್ದೇವೆ. ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಯು ಶ್ರೀ ಜಗದ್ಗುರು ರೇಣುಕ ಭಗವತ್ಪಾದರನ್ನು ಉದ್ದೇಶಿಸಿ–

ಕಲಾನಾಂ ನವಕಂ ಪ್ರೋಕ್ತಂ ಭಕ್ತಸ್ಥಲ ಸಮಾಶ್ರಯಮ್।
ಮಾಹೇಶ್ವರ ಸ್ಥಲೇ ಸಿದ್ಧಂ ಸ್ಥಲಭೇಧಂ ವದಸ್ವ ಮೇ॥

(ಸಿ.ಶಿ. ೧೬–೧)

ಈ ರೀತಿಯಾಗಿ ಪ್ರಶ್ನೆ ಮಾಡುತ್ತಾನೆ. ತಾತ್ಪರ್ಯವೇನೆಂದರೆ– ಈ ಪೂರ್ವದ ಭಕ್ತಸ್ಥಲದಲ್ಲಿ ದೀಕ್ಷಾಗುರುಸ್ಥಲವನ್ನೇ ಮೊದಲು ಮಾಡಿಕೊಂಡು ಪರಸ್ಥಲ ಪರ್ಯಂತ ವಾದ ಒಂಭತ್ತು ಅವಾಂತರ ಸ್ಥಲಗಳ ಬಗ್ಗೆ ತಾವು ಅಪ್ಪಣೆಕೊಡಿಸಿದ್ದೀರಿ. ಆದರೆ ಮುಂದಿನದಾದ ಮಾಹೇಶ್ವರ ಸ್ಥಲದಲ್ಲಿ ಎಷ್ಟು ಅವಾಂತರ ಸ್ಥಲಗಳಿವೆ ? ಅವುಗಳ ಹೆಸರುಗಳೇನು ? ಎಂಬುದರ ಬಗ್ಗೆ ಅಪ್ಪಣೆಕೊಡಿಸಬೇಕು.

ಅಗಸ್ತ್ಯಮಹರ್ಷಿಯ ಈ ಪ್ರಶ್ನೆಗೆ ಉತ್ತರ ರೂಪವಾಗಿ ಪೂಜ್ಯಪಾದರು–

ಮಾಹೇಶ್ವರ ಸ್ಥಲೇ ಸಂತಿ ಸ್ಥಲಾನಿ ನವ ತಾಪಸ।
ಕ್ರಿಯಾಗಮ ಸ್ಥಲಂ ಪೂರ್ವಂ ತತೋ ಭಾವಾಗಮಸ್ಥಲಮ್॥
ಜ್ಞಾನಾಗಮ ಸ್ಥಲಂ ಚಾಥ ಸಕಾಯ ಸ್ಥಲಮೀರಿತಮ್।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತೋಽ ಕಾಯಸ್ಥಲಂ ಪ್ರೋಕ್ತಂ ಪರಕಾಯಸ್ಥಲಂ ತತಃ॥
ಧರ್ಮಾಚಾರ ಸ್ಥಲಂ ಚಾಥ ಭಾವಾಚಾರ ಸ್ಥಲಂ ತತಃ॥
ಜ್ಞಾನಾಚಾರ ಸ್ಥಲಂ ಜೋತಿ ಕ್ರಮಾದೇಷಾಂ ಭಿದೋಚ್ಯತೇ॥

(ಸಿ.ಶಿ. ೧೬, ೨–೪)

ಹೀಗೆ ಅಪ್ಪಣೆ ಕೊಡಿಸಿದ್ದಾರೆ. ಅವರ ಅಪ್ಪಣೆ ಪ್ರಕಾರ ಲಿಂಗ ಷಟ್‌ಸ್ಥಲಾಂತರ್ಗತವಾದ ಈ ಮಾಹೇಶ್ವರ ಸ್ಥಲದಲ್ಲಿಯೂ ಕ್ರಿಯಾಗಮ ಸ್ಥಲ, ಭಾವಾಗಮ ಸ್ಥಲ, ಜ್ಞಾನಾಗಮ ಸ್ಥಲ, ಸಕಾಯ ಸ್ಥಲ, ಅಕಾಯ ಸ್ಥಲ, ಪರಕಾಯ ಸ್ಥಲ, ಧರ್ಮಾಚಾರ ಸ್ಥಲ, ಭಾವಾಚಾರ ಸ್ಥಲ ಮತ್ತು ಜ್ಞಾನಾಚಾರ ಸ್ಥಲವೆಂಬುದಾಗಿ ಒಂಭತ್ತು ಅವಾಂತರ ಸ್ಥಲಗಳಿರುತ್ತವೆ. ಕ್ರಮವಾಗಿ ಇವುಗಳ ಲಕ್ಷಣ ಹಾಗೂ ಸ್ವರೂಪದ ಬಗ್ಗೆ ವಿವರಿಸಲಾಗುವುದು. ಇವುಗಳಲ್ಲಿ ಮೊದಲನೆಯದಾದ ಸ್ಥಲವೇ ಕ್ರಿಯಾಗಮ ಸ್ಥಲವು. ಇಲ್ಲಿ ಕ್ರಿಯಾ ಎಂದರೆ ಪೂಜಾ ರೂಪವಾದ ಕರ್ಮವು, ಆಗಮವೆಂದರೆ ಅದರ ವಿಧಿವಿಧಾನವನ್ನು ಪ್ರತಿಪಾದಿಸುವ ಶಾಸ್ತ್ರವು, ಅಂದಹಾಗೆ ಪೂಜಾ ವಿಷಯಕವಾದ ವಿಧಿಯನ್ನು ಪ್ರತಿಪಾದಿಸುವ ಸ್ಥಲವೇ ಕ್ರಿಯಾಗಮ ಸ್ಥಲವು ಇದನ್ನೇ ಪೂಜ್ಯಪಾದರು.

ಶಿವೋಹಿ ಪರಮಃ ಸಾಕ್ಷಾತ್ ಪೂಜಾ ತಸ್ಯಕ್ರಿಯೋಚ್ಯತೇ।
ತತ್ಪರಾ ಆಗಮಾ ಯಸ್ಮಾತ್ ತದುಕ್ತೋಽ ಯಂ ಕ್ರಿಯಾಗಮಃ॥

(ಸಿ.ಶಿ. ೧೬–೫)

ಹೀಗೆ ಅಪ್ಪಣೆ ಕೊಡಿಸಿದ್ದಾರೆ. ಈ ಪೂರ್ವದಲ್ಲಿ ಹೇಳಿದ ಪರಸ್ಥಲದ ಶಿವಯೋಗಿಯೂ ಸಾಕ್ಷಾತ್ ಶಿವರೂಪನೇ ಆಗಿರುತ್ತಾನೆ. ಆ ಶಿವಯೋಗಿಯಿಂದ ಮಾಡಲ್ಪಡುವ ಇಷ್ಟಲಿಂಗಾದಿ ಪೂಜೆಯೇ ಕ್ರಿಯೆಯೆಂದು ಕರೆಯಿಸಿಕೊಳ್ಳುತ್ತದೆ.

ಅಂತಪ್ಪ ಕ್ರಿಯೆಯು ಲೋಕದ ಜನರಿಗೆ ಅನುಸರಣೀಯವಾಗಿರುತ್ತದೆ. ಈ ಕ್ರಿಯೆಯ ಬಗ್ಗೆ ತಿಳಿಸುವ ಶಾಸ್ತ್ರಕ್ಕೆ ಆಗಮವೆನ್ನುವರು. ಈ ಸ್ಥಲದಲ್ಲಿ ಕ್ರಿಯೆಯ ಬಗ್ಗೆ ಪ್ರತಿಪಾದಿಸಲ್ಪಟ್ಟಿರೋಣದರಿಂದ ಇದಕ್ಕೆ ಕ್ರಿಯಾಗಮ ಸ್ಥಲವೆಂದು ಕರೆದಿದ್ದಾರೆ. ಅಂದರೆ ಜೀವನ್ಮುಕ್ತನಾದ ಶಿವಯೋಗಿಯಿಂದ ಆಚರಿಸಲ್ಪಡುವ ಇಷ್ಟಲಿಂಗ ಪೂಜಾದಿ ವಿಷಯವನ್ನು ತಿಳಿಯಪಡಿಸುವ ಸ್ಥಲವೇ ಕ್ರಿಯಾಗಮ ಸ್ಥಲವೆಂದು ತಿಳಿದುಕೊಳ್ಳಬೇಕು.

ವೀರಶೈವ ಸಿದ್ಧಾಂತದಲ್ಲಿ ಕೇವಲ ಜ್ಞಾನವೊಂದಕ್ಕೇನೇ ಪ್ರಾಧಾನ್ಯತೆಯನ್ನು ಕೊಡದೆ ಅದರ ಜೊತೆಗೆ ಇಷ್ಟಲಿಂಗ ಪೂಜಾದಿ ರೂಪವಾದ ಕ್ರಿಯೆಗೂ ಸಹ ಪ್ರಾಧಾನ್ಯತೆಯನ್ನು ಕೊಡಲಾಗಿದೆ. ಅಂದರೆ ಮುಕ್ತಿಗಾಗಿ ಜ್ಞಾನ ಕರ್ಮಗಳ ಸಮ ಸಮುಚ್ಚಯ ಸಿದ್ಧಾಂತವನ್ನು ಸ್ವೀಕರಿಸಲಾಗಿದೆ. ಆದ್ದರಿಂದ ಜೀವನ್ಮುಕ್ತನಾದ ಶಿವಯೋಗಿಯೂ ಸಹ ತನ್ನ ಆಯುಷ್ಯವಿರುವವರೆಗೆ ಇಷ್ಟಲಿಂಗ ಪೂಜಾದಿ ಸತ್ಕರ್ಮಗಳನ್ನು ಮಾಡುತ್ತಲೇ ಇರಬೇಕು. ಏಕೆಂದರೆ ಜಗತ್ತಿನಲ್ಲಿರುವ ಅದೆಷ್ಟೋ ಸಾಮಾನ್ಯ ಜೀವಿಗಳು ದೊಡ್ಡವರ ಆಚರಣೆಯನ್ನು ಅನುಕರಿಸಲು ಪ್ರಯತ್ನಿಸುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು ವೇಳೆ ಜ್ಞಾನಿಗಳಾದವರೂ ಸತ್ಕ್ರಿಯಾ ವಿಮುಖರಾದರೆ ಸಾಮಾನ್ಯ ಜನತೆಯೂ ಸಹ ಸತ್ಕರ್ಮ ಹೀನರಾಗಿ ದುರ್ಮಾರ್ಗಿಗಳಾಗುವ ಸಂಭವವಿರುತ್ತದೆ. ಅಂತೆಯೇ ಲೋಕಕಲ್ಯಾಣಕ್ಕಾಗಿ ಮತ್ತು ಲೋಕಸಂಗ್ರಹಕ್ಕಾಗಿ ಜ್ಞಾನಿಗಳೂ ಸಹ ಶಾಸ್ತ್ರೋಕ್ತಗಳಾದ ಕರ್ಮಗಳನ್ನು ಆಚರಿಸುತ್ತಿರಬೇಕೆಂಬುದು ವೀರಶೈವ ಆಚಾರ್ಯರ ಅಭಿಪ್ರಾಯವಾಗಿದೆ. ಅಂತೆಯೇ ಈ ಕ್ರಿಯಾಗಮ ಸ್ಥಲದಲ್ಲಿ ಜೀವನ್ಮುಕ್ತರಾದ ಶಿವಯೋಗಿಯಿಂದ ಆಚರಿಸಲ್ಪಡುವ ಕ್ರಿಯೆಗಳ ಬಗ್ಗೆ ಪ್ರತಿಪಾದಿಸಲಾಗಿದೆ.

ಪೂಜ್ಯ ಪಾದರು ಆ ಪೂಜಾಕ್ರಿಯೆಯ ಮಹತ್ತ್ವವನ್ನು ವಿವರಿಸುತ್ತ–

ಪ್ರಕಾಶತೆ ಯಥಾ ನಾಗ್ನಿರರಣ್ಯಾಂ ಮಥನಂ ವಿನಾ।
ಕ್ರಿಯಾಂ ವಿನಾ ತಥಾಂ ತಸ್ಥೋ ನ ಪ್ರಕಾಶೋ ಭವೇಚ್ಛಿವ ಃ॥

(ಸಿ.ಶಿ. ೧೬–೬)

ಈ ಪ್ರಕಾರವಾಗಿ ಉಪದೇಶಿಸಿದ್ದಾರೆ. ತಾತ್ಪರ್ಯವೇನೆಂದರೆ ಅರಣಿ ಮಂಥನವನ್ನು ಮಾಡದೆ ಅಗ್ನಿಯು ಪ್ರಕಟವಾಗದಿರುವಂತೆ ಶಾಸ್ತ್ರೋಕ್ತವಾದ ಶಿವಪೂಜಾದಿ ಕ್ರಿಯೆಗಳನ್ನು ಮಾಡದೆ ತನ್ನೊಳಗಿನ ಶಿವನ ಪ್ರಾಕಟ್ಯತೆಯು ಆಗುವದಿಲ್ಲ. ಪ್ರಾಚೀನ ಕಾಲದಲ್ಲಿ ಯಜ್ಞಕ್ಕಾಗಿ ಅಗ್ನಿಯನ್ನು ಉತ್ಪನ್ನ ಮಾಡಬೇಕಾದರೆ ಅರಣಿ ಮಂಥನವನ್ನು ಮಾಡುತ್ತಿದ್ದರು. ಎರಡು ಶಮೀಕಟ್ಟಿಗೆಗಳನ್ನು ಅರ್ಥಾತ್ ಎರಡು ಬನ್ನಿಯ ಕಟ್ಟಿಗೆಗಳನ್ನು ಒಂದಕ್ಕೊಂದು ಮಸೆಯುವ ಕ್ರಿಯೆಗೆ ಅರಣಿ ಮಂಥನವೆನ್ನುವರು. ಹಿಂದಿನ ಕಾಲದಲ್ಲಿ ಇಷ್ಟೊಂದು ಪರಿಶ್ರಮಿಸಿ ಅಗ್ನಿಯನ್ನು ಪ್ರಕಟಿಸಬೇಕಾಗುತ್ತಿತ್ತು, ಇಂದಿನ ವಿಜ್ಞಾನ ಯುಗದಲ್ಲಿ ಕಡ್ಡಿಯ ಡಬ್ಬಿ, ಲೈಟರ್ ಮುಂತಾದ ಅಲ್ಪಾಯಾಸದ ಅಗ್ನಿ ಉತ್ಪಾದಕ ಸಾಮಗ್ರಿಗಳು ಲಭ್ಯವಾಗುತ್ತಿವೆ.

ಅಗ್ನಿ ತತ್ತ್ವವು ವ್ಯಾಪಕವಾಗಿ ಸರ್ವತ್ರ ವಿದ್ಯಮಾನವಾಗಿದ್ದರೂ ಅದು ಪ್ರಕಟವಾಗಬೇಕಾದರೆ ಎರಡು ವಸ್ತುಗಳ ಘರ್ಷಣೆರೂಪೀಕ್ರಿಯೆಯು ಅವಶ್ಯವಾಗಿ ಬೇಕೇಬೇಕು. ಇದೇ ಪ್ರಕಾರವಾಗಿ ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ಹಾಗೂ ವಿಶ್ವದ ತುಂಬೆಲ್ಲ ಪರಮಾತ್ಮನ ನಿತ್ಯನಿವಾಸವಿದ್ದರೂ ಆತನ ಪ್ರಾಕಟ್ಯತೆಯು ಪೂಜಾರೂಪೀ ಕ್ರಿಯೆಯನ್ನು ಮಾಡದೆ ಸಂಭವಿಸಲಾರದು. ಅಂತೆಯೇ ಜ್ಞಾನದಷ್ಟೇ ಕ್ರಿಯೆಯೂ ಸಹ ಮಹತ್ತ್ವವನ್ನು ಪಡೆದಿರುವದಾಗಿದೆ. ಇಷ್ಟಲಿಂಗ ಪೂಜಾರೂಪವಾದ ಬಾಹ್ಯ ಕ್ರಿಯೆಯು ಅಂತರ್ಲಿಂಗದ ಚಿಂತನೆಗೆ ಸಹಾಯಕವಾಗುತ್ತದೆ. ಹೊರಗಿನ ಈ ಕ್ರಿಯೆಯು ಒಳಗಿನ ಅಂತಃಕರಣವನ್ನು ಪರಿಪಕ್ವಗೊಳಿಸುತ್ತದೆ. ಅಂತಃಕರಣವು ಪರಿಶುದ್ಧವಾದಾಗ ಅದರಿಂದಲೇ ಪ್ರಾಣಲಿಂಗ ಹಾಗೂ ಭಾವಲಿಂಗಗಳ ಅನುಸಂಧಾನವು ಸಂಭವಿಸುತ್ತದೆ. ಆದ್ದರಿಂದ ಸಾಧಕನ ಅಂತರ್ಮುಖ ಪ್ರವೃತ್ತಿಗೆ ಬಾಹ್ಯದ ಪೂಜಾರೂಪೀ ಕ್ರಿಯೆಯು ಸಹಾಯಕವಾಗಿದೆಯೆಂಬುದಾಗಿ ತಿಳಿದುಕೊಳ್ಳಬೇಕು.

ಈ ಇಷ್ಟಲಿಂಗ ಪೂಜಾರೂಪವಾದ ಬಾಹ್ಯಕ್ರಿಯೆಯನ್ನು ಹೇಗೆ ಆಚರಿಸಬೇಕು?

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬ ಪ್ರಶ್ನೆಯು ಉದ್ಭವಿಸಿದಾಗ ಪೂಜ್ಯಪಾದರು—

ನ ಯಥಾ ವಿಧಿಲೋಪಃ ಸ್ಯಾದ್ಯಥ ದೇವಃ ಪ್ರಸೀದತಿ
ಯಥಾಗಮಃ ಪ್ರಮಾಣಂ ಸ್ಯಾತ್ತಥಾಕರ್ಮ ಸಮಾಚರೇತ್॥

(ಸಿ.ಶಿ.೧೬–೭)

ಹೀಗೆ ಅಪ್ಪಣೆಕೊಡಿಸಿದ್ದಾರೆ. ಶಿವನಿಂದ ಉಪದೇಶಿಸಲ್ಪಟ್ಟ ಶಿವಾಗಮಗಳಲ್ಲಿ ಶಿವಾರ್ಚನೆಯನ್ನು ಹೀಗೆ ಆಚರಿಸಬೇಕೆಂಬುದಾಗಿ ಉಪದೇಶಿಸಲಾಗಿದೆ. ಅಲ್ಲಿಹೇಳಿದ ವಿಧಿ–ವಿಧಾನಗಳಿಗೆ ಲೋಪ ಬರದಂತೆ ಆಚರಿಸಬೇಕು. ಅಂದರೇನೇ ಶಿವನು ಪ್ರಸನ್ನನಾಗುವನು. ಇಲ್ಲವಾದರೆ ಶಿವನ ಅವಕೃಪೆಗೆ ಪಾತ್ರನಾಗಬೇಕಾಗುತ್ತದೆ. ಆದ ಕಾರಣ ತಾನು ಜೀವನ್ಮುಕ್ತನಾದರೂ ಆಗಮೋಕ್ತವಾದ ಪ್ರಮಾಣವನ್ನು ಅನುಸರಿಸಿ ಶಿವಪೂಜಾಕರ್ಮವನ್ನು ಆಚರಿಸಬೇಕು.

ಪೂಜಾವಿಧಾನವನ್ನು ಮಾಡುವಾಗ ಯೋಗ್ಯವಾದ ರೀತಿ ನೀತಿಗಳನ್ನು ಅನುಸರಿಸಿಯೇ ಮಾಡಬೇಕು. ಮನಸ್ಸಿಗೆ ಬಂದಂತೆ ಹೇಗೋ ಮಾಡಿ ಮುಗಿಸುವ ಗೊಡವೆಗೆ ಹೋಗಬಾರದು. ಹಾಗೇನಾದರೂ ಮಾಡಿದ್ದಾದರೆ ಆ ಮಾಡಿದ ಕರ್ಮವು ಬಲಹೀನವಾಗುತ್ತದೆ. ಅಡಿಗೆಯನ್ನು ಮಾಡುವಾಗ ಪಾತ್ರೆಯಲ್ಲಿ ಯಾವ ಯಾವ ಪದಾರ್ಥಗಳನ್ನು ಯಾವಾಗ ಯಾವಾಗ ಹಾಕಬೇಕು ಎನ್ನುವದರ ಒಂದು ಪದ್ಧತಿಯಿರುತ್ತದೆ. ಆ ಪದ್ಧತಿಗನುಸಾರವಾಗಿ ಮಾಡಿದಾಗ ಸ್ವಾದಿಷ್ಟವಾದ ಭೋಜನವು ತಯಾರಾಗುವದಲ್ಲದೆ ಉಂಡವನಿಗೆ ಸಂತೃಪ್ತಿಯು ಸಹ ಆಗುವದು. ಇದಕ್ಕೆ ವಿಪರೀತವಾಗಿ ಮೊದಲು ಹಾಕುವ ಪದಾರ್ಥವನ್ನು ಕೊನೆಗೆ, ಕೊನೆಗೆ ಹಾಕಬೇಕಾದ ವಸ್ತುವನ್ನು ಮೊದಲು ಹಾಕಿದರೆ ಅಡಿಗೆಯ ರಚನೆಯು ಕೆಟ್ಟು ಅದು ಗ್ರಾಹ್ಯವಾಗುವದಿಲ್ಲ, ಕೊನೆಗೆ ಅದನ್ನು ಯಾರೂ ತಿನ್ನದೆ ಹಾಗೆಯೇ ಚೆಲ್ಲಿಬಿಡುವಂತಹ ಪ್ರಸಂಗವು ಹೇಗೆ ಬರುವದೋ ಅದರಂತೆ ಪೂಜಾವಿಧಿಯನ್ನು ತಪ್ಪಿದ ಪೂಜೆಯೂ ಸಹ ನಿಷ್ಪ್ರಯೋಜಕ ವಾಗುವದೆಂಬುದಾಗಿ ತಿಳಿಯಬೇಕು.

ವೀರಶೈವ ಶಿವಪೂಜಾವಿಧಿಯಲ್ಲಿ ಎರಡು ವಿಧವಾದ ಪದ್ಧತಿಯು ಪ್ರತಿಪಾದಿಸಲ್ಪಟ್ಟಿದೆ. ಒಂದು ಸಂಕ್ಷಿಪ್ತ ಶಿವಪೂಜಾ ವಿಧಿಯಾದರೆ ಇನ್ನೊಂದು ವೈದಿಕ ಶಿವಪೂಜಾ ವಿಧಿಯು. ಯಾರಿಗೆ ವೇಳೆಯ ಅಭಾವವಿದೆಯೋ ಅವರು ಕೊನೆಯ ಪಕ್ಷ ಸಂಕ್ಷಿಪ್ತ ಶಿವಪೂಜಾ ವಿಧಿಯಲ್ಲಿ ಹೇಳಲ್ಪಟ್ಟ ವಿಧಿವಿಧಾನದಂತೆ ಪೂಜೆಯನ್ನು ಮಾಡಬೇಕು. ಇನ್ನು ಯಾರಿಗೆ ಸಮಯವು ಸಾಕಷ್ಟು ಇದೆಯೋ ಅವರು ವೈದಿಕ ಶಿವಪೂಜಾವಿಧಿಯಲ್ಲಿ ಹೇಳಿದ ವಿಧಿವಿಧಾನಗಳಂತೆ ಪೂಜೆಯನ್ನಾಚರಿಸಿ ಮನಸ್ಸಿನ ಸಂತೃಪ್ತಿಯನ್ನು ಮಾಡಿಕೊಳ್ಳಬೇಕು. ಶಿವಾಗಮಗಳಲ್ಲಿ ಪಂಚೋಪಚಾರ, ಅಷ್ಟೋಪಚಾರ, ಷೋಡಶೋಪಚಾರ ಹಾಗೂ ರಾಜೋಪಚಾರವೆಂಬುದಾಗಿಯೂ ಉಪಚಾರದ ವಿಧಿಯನ್ನು ನಾಲ್ಕು ಪ್ರಕಾರವಾಗಿ ಹೇಳಿದ್ದನ್ನು ಸಹ ಕಾಣಬಹುದು. ಈ ವಿಧಿಗಳಲ್ಲಿ ಯಾವುದು ಯಾರಿಗೆ ಅನುಕೂಲವೋ ಆ ವಿಧಿಯನ್ನು ಅವರವರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಚರಿಸಬೇಕು. ಒಟ್ಟಿನಲ್ಲಿ ವಿಧಿವಿರಹಿತವಾದ ಪೂಜೆಯನ್ನು ಯಾರೂ ಮಾಡಬಾರದು.

ಈ ವಿಧಿವಿಧಾನಗಳ ಜೊತೆಗೆ ಭಾವನೆಯೂ ಸಹ ಅವಶ್ಯವಾದುದು. ನಾವು ಅನೇಕ ಉಪಚಾರಗಳಿಂದ ಪೂಜೆ ಮಾಡುತ್ತಿದ್ದರೂ ಆ ದೇವರಲ್ಲಿ ಭಕ್ತಿಭಾವನೆಗಳೇ ಇರದೆ ಹೋದರೆ ದೇವರು ಪ್ರಸನ್ನವಾಗುವದಿಲ್ಲ, ಆದ್ದರಿಂದ ಆತನ ಪ್ರಸನ್ನತೆಯನ್ನು ಪ್ರಾಪ್ತಿ ಮಾಡಿಕೊಡುವ ಭಾವನೆಯೂ, ಸಹ ಇಲ್ಲಿ ಬೇಕೆಂಬುದಾಗಿ ತಿಳಿದುಕೊಳ್ಳಬೇಕು. ಹಾಗಾದರೆ ಭಾವನೆಯೊಂದಿದ್ದರೆ ಸಾಕಲ್ಲ! ಈ ಉಪಚಾರಗಳ ಗೊಡವೆ ಏಕೆ? ಎಂಬ ಪ್ರಶ್ನೆಯೂ ಸಹ ಉದ್ಭವಿಸಬಹುದು. ಈ ಉಪಚಾರಗಳು ನಮ್ಮ ಭಾವನೆಯನ್ನು ಭಗವಂತನಿಗೆ ಬಹಳ ಹೊತ್ತಿನವರೆಗೆ ಹಿಡಿದಿಡಲು ಸಹಾಯಕವಾಗಿರುತ್ತವೆ. ಆದ್ದರಿಂದ ಭಾವನೆಯೊಂದಿದ್ದರೆ ಸಾಲದು ಉಪಚಾರಗಳೂ ಸಹ ಬೇಕೆಬೇಕು. ಮನೆಗೆ ಬಂದ ಅತಿಥಿಯನ್ನು ಗೌರವದಿಂದ ಬರಮಾಡಿಕೊಂಡು ಆಸನದ ಮೇಲೆ ಕೂಡ್ರಿಸಿ ಅವನಿಗೆ ಯಾವುದೇ ಉಪಚಾರವನ್ನು ಮಾಡದೆ ಕೇವಲ ಭಾವನಾತ್ಮಕವಾಗಿ ನಾವು ನಿಮ್ಮನ್ನು ಬಹಳ ಪ್ರೀತಿಸುತ್ತೇವೆ. ನಿಮ್ಮನ್ನು ನೋಡಿ ನಮ್ಮ ಹೊಟ್ಟೆ ತುಂಬಿ ಹೋಗಿದೆ. ಮುಂತಾದ ಪ್ರೀತಿಯ ಮಾತುಗಳನ್ನು ಮಾತಾಡಿದ ಮಾತ್ರಕ್ಕೆ ಅತಿಥಿಗೆ ಸಂತೋಷವಾಗುವದಿಲ್ಲ. ಅವನಿಗೆ ನಿಮ್ಮ ಭಾವನೆಯ ಜೊತೆಗೆ ಉಪಚಾರವೂ ಸಹ ಹೇಗೆ ಬೇಕಾಗುವದೋ ಹಾಗೆ ಶಿವನಿಗೂ ಸಹ ಭಾವನೆಯೊಂದಿಗೆ ಉಪಚಾರಗಳೂ ಸಹ ಅವಶ್ಯವಾಗಿ ಬೇಕೇಬೇಕು. ಆದರೆ ಇಲ್ಲಿರುವ ಸ್ವಲ್ಪು ವ್ಯತ್ಯಾಸವೇನೆಂದರೆ ಅತಿಥಿಯಾದವನು ತನಗೆ ದೊರೆತ ಉಪಚಾರದ ಸಾಮಗ್ರಿಗಳನ್ನು ತಾನೇ ಉಪಯೋಗಿಸುತ್ತಾನೆ. ಆದರೆ ಶಿವನಿಗೆ ಅರ್ಪಿಸಿದ ಯಾವ ಉಪಚಾರದ ವಸ್ತುಗಳನ್ನೂ ಶಿವನು ಉಪಭೋಗಿಸದೆ ಅವುಗಳನ್ನು ನಿರ್ಮಾಲ್ಯವನ್ನಾಗಿಸಿ ಅಥವಾ ಪ್ರಸಾದವನ್ನಾಗಿಸಿ ತನ್ನನ್ನು ಪೂಜಿಸಿದವರಿಗೇನೇ ಮರಳಿ ದಯಪಾಲಿಸುತ್ತಾನೆ. ಹೀಗೆ ಶಿವ ಸಮರ್ಪಿತವಾಗಿ ಬಂದ ಆ ಪ್ರಸಾದವು ಮನಸ್ಸಿನ ಪ್ರಸನ್ನತೆಗೆ ಕಾರಣೀಭೂತವಾಗೋಣದರಿಂದ ನಾವು ಸಮರ್ಪಿಸಿದ ಉಪಚಾರಗಳ ಆವಶ್ಯಕತೆಯು ಸ್ವತಃ ಶಿವನಿಗೆ ಇರದೇ ಇದ್ದರೂ ಶಿವಪೂಜಕನಿಗೆ ಅವು ಪರಮಾವಶ್ಯಕವಾದವುಗಳು. ಆದ್ದರಿಂದ ಶಿವಪೂಜೆಯಲ್ಲಿ ಉಪಚಾರಗಳ ಬಳಕೆಯನ್ನು ಸ್ವಶಕ್ತ್ಯಾನುಸಾರವಾಗಿ ಪ್ರತಿಯೊಬ್ಬರು ಮಾಡಬೇಕು. ಹೀಗೆ ವಿಧಿಲೋಪವಾಗದಂತೆ ಆಗಮ ಪ್ರಮಾಣವನ್ನನುಸರಿಸಿ ಶಿವನು ಪ್ರಸನ್ನನಾಗುವ ಹಾಗೆ ಶಿವಪೂಜಾ ಕರ್ಮವನ್ನು ಮಾಡಬೇಕೆಂಬುದಾಗಿ ಪೂಜ್ಯರು ಆದೇಶಿಸಿದ್ದಾರೆ.

ಈ ಶಿವಪೂಜಾ ರೂಪವಾದ ಕರ್ಮವನ್ನು ಏಕೆ ತಾನೆ ಮಾಡಬೇಕು? ಎಂಬ ಪ್ರಶ್ನೆಯುದ್ಭವಿಸಿದಾಗ ಪೂಜ್ಯಪಾದರು ಪುನಃ–

ವಿಧಿಃ ಶಿವನಿಯೋಗೋಽಯಂ ತಸ್ಮಾದ್ ವಿಹಿತಕರ್ಮಣಿ।
ಶಿವಾರಾಧನಬುದ್ಧ್ಯೈವನಿರತಃ ಸ್ಯಾದ್ ವಿಚಕ್ಷಣಃ

(ಸಿ.ಶಿ. ೧೬–೮)

ಈ ತೆರನಾಗಿ ಉಪದೇಶಿಸಿದ್ದಾರೆ. ಶಾಸ್ತ್ರವಿಹಿತಗಳಾದ ಕರ್ಮಗಳ ಬಗ್ಗೆ ಹೇಳಲ್ಪಟ್ಟ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಧಿವಿಧಾನವು ಶಿವನ ಆಜ್ಞಾರೂಪವಾದುದು. ಆದ್ದರಿಂದ ಬುದ್ಧಿವಂತನಾದವನು ಶಿವನನ್ನು ಆರಾಧಿಸುವ ಬುದ್ಧಿಯಿಂದಲೇ ಆ ಕರ್ಮಗಳಲ್ಲಿ ಆಸಕ್ತನಾಗಬೇಕು. ಒಂದು ವೇಳೆ ಶಾಸ್ತ್ರೋಕ್ತವಿಧಿಯಂತೆ ಕರ್ಮಗಳನ್ನು ಆಚರಿಸದೇ ಹೋದರೆ ಶಿವಾಜ್ಞೆಯನ್ನು ಉಲ್ಲಂಘನೆ ಮಾಡಿದ ಅಪರಾಧದಿಂದಾಗಿ ಆತನು ನರಕಭಾಜನನಾಗುತ್ತಾನೆ. ಆದ ಕಾರಣ ಶಿವಾಜ್ಞೆಯನ್ನು ಪರಿಪಾಲಿಸುವ ದೃಷ್ಟಿಯಿಂದ ಶಾಸ್ತ್ರವಿಹಿತ ಕರ್ಮಗಳನ್ನು ಅವಶ್ಯವಾಗಿ ಮಾಡಬೇಕು.

ವಿಹಿತಕರ್ಮಗಳ ಬಗ್ಗೆ ಶಿವನ ವಿಧಿಯಾಜ್ಞೆ ಇರುವಂತೆ ನಿಷಿದ್ಧಕರ್ಮಗಳ ಬಗ್ಗೆ ನಿಷೇಧಾಜ್ಞೆಯೂ ಸಹ ಇರುತ್ತದೆ. ಕಾರಣ ''ಮಾ ಹಿಂಸ್ಯಾತ್ ಸರ್ವಾ ಭೂತಾನಿ, ನ ಕಲಂಜಂ ಭಕ್ಷಯೇತ್, ನ ಸುರಾಂ ಪಿಬೇತ್, ಸ್ವಾಧ್ಯಾಯಾನ್ಮಾ ಪ್ರಮದಃ ಅಂದರೆ ಪ್ರಾಣಿ ಹಿಂಸೆಯನ್ನು ಮಾಡಬೇಡ, ಮಾಂಸವನ್ನು ಭಕ್ಷಿಸಬೇಡ; ಮದ್ಯಪಾನವನ್ನು ಮಾಡಬೇಡ. ಮತ್ತು ಸ್ವಾಧ್ಯಾಯವನ್ನು ತಪ್ಪಿಸಬೇಡ, ಮುಂತಾದ ವೇದದಲಿ ಬರುವ ಈ ಮಂತ್ರಗಳು ಶಿವನ ನಿಷೇಧಾಜ್ಞೆಗಳಿದ್ದಂತೆ, ಇವುಗಳ ಉಲ್ಲಂಘನೆಯೂ ಸಹ ಶಿವನ ಅವಕೃಪೆಗೆ ಕಾರಣೀಭೂತವಾಗುತ್ತದೆ.

ಶ್ರೀಮನ್ನಿಜಗುಣ ಶಿವಯೋಗಿಗಳೂ ಸಹ.........

ದುರಿತಕರ್ಮವನೊಲ್ಲದಿರು। ಪುಣ್ಯವನೆ ಮಾಡು।
ಹರನಡಿವಿಡಿ। ಶಾಂತರೊಡನಾಡು।
ಕರುಣವಿರಲಿ ಜೀವರೊಳು। ನೀತಿವಿದನಾಗು।
ಪೊರೆ ಪೊರ್ದಿದರನೆಂದು ಬೆಸಸುವ ॥
ನಿಂದಿಸಿ ನುಡಿಯದಿರಾರನು। ಮನಸಿಗೆ ಬಂದಂತೆ
ನಡೆಯದಿರಿಹದಲ್ಲಿ। ಕುಂದವಡೆಯದಿರು।
ಕಾಮಾದಿಗಳನು ಜಯಿಸೆಂದು
ಕೈವಿಡಿದನುಗ್ರಹಿಸುವ ॥

ತಮ್ಮ ''ಕೈವಲ್ಯ ಪದ್ಧತಿ''ಯ ಈ ಮೇಲಿನ ಪದ್ಯಗಳಲ್ಲಿ ಶಿವನ ವಿಧಿನಿಷೇಧಾಜ್ಞೆಗಳೆರಡನ್ನೂ ಕ್ರೋಢೀಕರಿಸಿ ಉಪದೇಶಿಸಿದ್ದಾರೆ. ಇದೇ ಪ್ರಕಾರ–

ಕಳಬೇಡ ಕೊಲಬೇಡ; ಹುಸಿಯ ನುಡಿಯಲು ಬೇಡ ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ ;
ತನ್ನ ಬಣ್ಣಿಸಬೇಡ, ಇದಿರಹಳಿಯಲು ಬೇಡ ;
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬ ತಮ್ಮ ಈ ವಚನದಲ್ಲಿ ಶ್ರೀಬಸವಣ್ಣನವರು ಶಿವನ ನಿಷೇಧಾಜ್ಞೆಗಳನ್ನೇ ಸಂಗ್ರಹಿಸಿ ಉಪದೇಶಿಸಿದ್ದನ್ನು ಕಾಣುತ್ತೇವೆ.

ಆದ ಕಾರಣ ವಿಹಿತ ಕರ್ಮಗಳನ್ನು ಮಾಡು ಎಂಬ ವಿಧಿಯನ್ನೇ ಆಗಲಿ, ನಿಷಿದ್ಧಕರ್ಮಗಳನ್ನು ಮಾಡಬೇಡೆನ್ನುವ ನಿಷೇಧಾಜ್ಞೆಯನ್ನೇ ಆಗಲಿ ಪ್ರತಿಯೊಬ್ಬರು ಪಾಲಿಸಲೇಬೇಕು. ಅಂದಾಗಲೇನೇ ಸರ್ವರ ಜೀವನವು ಸುಖಮಯವಾಗುವದು. ಇಲ್ಲವಾದರೆ ಶಿವಾಜ್ಞೆಯ ಉಲ್ಲಂಘನೆಯ ದೋಷದಿಂದಾಗಿ ಅನಂತ ದುಃಖವನ್ನು ಅನುಭವಿಸಬೇಕಾಗುವದು. ಆದ್ದರಿಂದ ಶಿವಪೂಜಾರೂಪವಾದ ವಿಹಿತಕರ್ಮವು ಶಿವನ ವಿಧಿಮುಖ ಆದೇಶವಾದ್ದರಿಂದ ಪ್ರತಿಯೊಬ್ಬರು ಶಿವನಲ್ಲಿ ಹಾಗೂ ಶಿವನ ಆದೇಶದಲ್ಲಿ ಶ್ರದ್ಧೆಯುಳ್ಳವರಾಗಿ ಅದನ್ನು ನಿಷ್ಠೆಯಿಂದ ಪರಿಪಾಲಿಸಬೇಕೆಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ॥೨೮ ಜುಲೈ ೧೯೯೩
(ಜ್ಞಾನಮಂದಿರ, ಜಂಗಮವಾಡಿಮಠ, ವಾರಾಣಸಿ.)

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕ್ರಿಯಾಗಮಸ್ಥಲ-೨

ಜಿಜ್ಞಾಸುಗಳಾದ ಸದ್ಭಕ್ತರೇ !

ಕಾಶೀ ಮಹಾಕ್ಷೇತ್ರದಲ್ಲಿ ಸಾಗಿಬಂದಿರುವ ಶ್ರೀ ಮಹಾಸನ್ನಿಧಿಯ ಶಿವಪೂಜಾನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಶೀರ್ವಚನಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಶ್ರೀಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವರನ್ನು ಕುರಿತು ಉಪದೇಶ ಮಾಡಿದ ದಿವ್ಯಗ್ರಂಥವೇ ಶ್ರೀಸಿದ್ಧಾಂತ ಶಿಖಾಮಣಿಯು, ಈ ಗ್ರಂಥರತ್ನದ ಲಿಂಗಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ನೀವೆಲ್ಲ ಆಶೀರ್ವಚನವನ್ನು ಆಲಿಸುತ್ತಿದ್ದೀರಿ. ಈ ಸಲದ ಪ್ರಥಮ ಅವಾಂತರಸ್ಥಲವಾದ ಕ್ರಿಯಾಗಮಸ್ಥಲದ ಬಗ್ಗೆ ನಿನ್ನೆಯ ದಿನ ಕೆಲವು ಮಹತ್ತ್ವಪೂರ್ಣಗಳಾದ ವಿಷಯಗಳನ್ನು ಕುರಿತು ಶ್ರವಣ ಮಾಡಿದ್ದೀರಿ. ಇಂದು ಅದೇ ಸ್ಥಲದ ಅವಶಿಷ್ಟ ವಿಷಯಗಳ ಬಗ್ಗೆ ಪರ್ಯಾಲೋಚಿಸೋಣ.

ಇಷ್ಟಲಿಂಗ ಪೂಜೆಯು ವೀರಶೈವರ ಮುಖ್ಯವಾದ ಕ್ರಿಯೆಯು, ಎಂಬುದರ ಬಗ್ಗೆ ಈಗಾಗಲೇ ನೀವು ತಿಳಿದವರಾಗಿದ್ದೀರಿ. ಇನ್ನು ಆ ಶಿವಪೂಜೆಯನ್ನು ಹೇಗೆ ಮಾಡಬೇಕು? ಹಾಗೂ ಅದನ್ನು ಮಾಡುವ ವಿಧಾನವನ್ನು ಯಾರಿಂದ ತಿಳಿದುಕೊಳ್ಳಬೇಕು? ಎಂಬ ಪ್ರಶ್ನೆಯು ಉದ್ಭವಿಸಿದಾಗ—

ಪೂಜ್ಯಪಾದರು—

ಗುರೋರಾದೇಶಮಾಸಾದ್ಯ ಪೂಜಯೇತ್ ಪರಮೇಶ್ವರಮ್ ।
ಪೂಜಿತೆ ಪರಮೇಶಾನಿ ಪೂಜಿತಾಃ ಸರ್ವದೇವತಾಃ ॥

(ಸಿ.ಶಿ. ೧೬–೯)

ಈ ವಿಧವಾಗಿ ಅಪ್ಪಣೆಕೊಡಿಸಿದ್ದಾರೆ. ತಾನು ಮಾಡಬೇಕಾದ ಪೂಜೆಯ ವಿಧಿವಿಧಾನವನ್ನು ತನ್ನ ಗುರುವಿನಿಂದ ತಿಳಿದುಕೊಳ್ಳಬೇಕು. ಆತನಿಂದ ತಿಳಿದೇನೇ ಇಷ್ಟಲಿಂಗವನ್ನು ಪೂಜಿಸಬೇಕು. ಈ ಲಿಂಗ ಪೂಜೆಯೊಂದನ್ನು ಮಾಡಿದರೆ ಎಲ್ಲ ದೇವತೆಗಳ ಪೂಜೆಯನ್ನು ಮಾಡಿದಂತೆಯೇ ಎಂಬುದು ಪೂಜ್ಯರ ಆದೇಶದ ತಾತ್ಪರ್ಯವಾಗಿದೆ.

ವೀರಶೈವ ಸಿದ್ಧಾಂತದಲ್ಲಿ ಸದ್ಗುರುಗಳು ಶಿಷ್ಯನಿಗೆ ದೀಕ್ಷಾ ಸಂಸ್ಕಾರವನ್ನು ಕೊಟ್ಟು ಅವನ ವಾಮಹಸ್ತ ಪೀಠದಲ್ಲಿ ಇಷ್ಟಲಿಂಗವನ್ನಿರಿಸಿ ಮಹಾಮಂತ್ರವನ್ನು ಉಪದೇಶಿಸುತ್ತಾರೆ. ಇಷ್ಟು ಸಂಸ್ಕಾರವನ್ನು ಹೊಂದಿದ ಮೇಲೆಯೇ ಶಿವಪೂಜೆಯ ಅಧಿಕಾರವು ಶಿಷ್ಯನಿಗೆ ಪ್ರಾಪ್ತವಾಗುತ್ತದೆ. ಹೀಗೆ ಗುರುದೀಕ್ಷಾ, ದೀಕ್ಷಿತನಾದ ಶಿಷ್ಯನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಪೂಜಾ ವಿಧಿವಿಧಾನಗಳನ್ನು ಸಹ ತನ್ನ ಗುರುಮುಖದಿಂದಲೇ ಕೇಳಿ ತಿಳಿದುಕೊಳ್ಳಬೇಕು. ಶಿವಪೂಜಾ ಸಂಬಂಧವಾದ ಗ್ರಂಥಗಳು ಬೇರೆ ಬೇರೆಯವರಿಂದ ಸಂಪಾದಿಸಲ್ಪಟ್ಟಿರೋಣದರಿಂದ ಎಲ್ಲ ಪುಸ್ತಕಗಳಲ್ಲಿ ಒಂದೇ ಪದ್ಧತಿಯಿರದೆ ಕೆಲವೊಂದು ವ್ಯತ್ಯಾಸಗಳು ಕಂಡುಬರುತ್ತಿರುತ್ತವೆ. ಇಂಥ ಪ್ರಸಂಗದಲ್ಲಿ ಗ್ರಂಥ ಗ್ರಂಥಗಳ ವಿಚಾರವನ್ನು ತಿಳಿದು ಭ್ರಮಿತನಾಗುವದಕ್ಕಿಂತ ಗುರುವಿನ ಆದೇಶದಂತೆ ನಡೆಯುವದೇ ಹೆಚ್ಚು ಸೂಕ್ತವಾದದ್ದು. ಗುರುವಿನ ನಿರ್ಣಯವೇ ಕೊನೆಯ ನಿರ್ಣಯವಾದ್ದರಿಂದ ಅವರ ನಿರ್ಣಯಾನುಸಾರವಾಗಿಯೇ ಇಷ್ಟಲಿಂಗ ಪೂಜೆಯನ್ನು ಮಾಡಬೇಕೆಂಬುದಾಗಿ ಪೂಜ್ಯಪಾದರು ಅಪ್ಪಣೆಕೊಡಿಸಿದ್ದಾರೆ.

ಈ ಜಗತ್ತಿನಲ್ಲಿ ಅನೇಕ ದೇವತೆಗಳಿರುವಾಗ ಬೇರೆ ಬೇರೆ ಪ್ರಸಂಗಗಳಲ್ಲಿ ಬೇರೆ ಬೇರೆ ದೇವರ ಪೂಜಾದಿಗಳನ್ನು ಮಾಡುವ ಪದ್ಧತಿಯು ರೂಢಿಯಲ್ಲಿರುವಾಗ ಎಲ್ಲಾ ದೇವರನ್ನು ಬಿಟ್ಟು ಕೇವಲ ಇಷ್ಟಲಿಂಗ ಪೂಜೆಯೊಂದನ್ನೇ ಅದು ಹೇಗೆ ತಾನೆ ಮಾಡಲಾದೀತು? ಎಂಬ ಶಂಕೆಗೆ ಸಮಾಧಾನವಾಗಿ ಪೂಜ್ಯಪಾದರು–''ಪೂಜಿತೇ ಪರಮೇಶಾನಿ ಪೂಜಿತಾಃ ಸರ್ವದೇವತಾಃ'' ಎಂಬುದಾಗಿ ಅಪ್ಪಣೆ ಕೊಡಿಸಿದ್ದಾರೆ. ಶಿವನೊಬ್ಬನನ್ನು ಪೂಜಿಸಿದರೆ ಎಲ್ಲ ದೇವರನ್ನೂ ಪೂಜಿಸಿದಂತೆಯೇ ಏಕೆಂದರೆ ಶಿವನು ದೇವಾನುದೇವನಾಗಿರುವದರಿಂದ ಎಲ್ಲ ದೇವರುಗಳು ಅವನಲ್ಲಿಯೇ ಸಮಾವೇಶ ಗೊಂಡಿರುತ್ತಾರೆ. ಇನ್ನು ಎಲ್ಲ ದೇವತೆಗಳು ಶಿವನನ್ನೇ ಪೂಜಿಸುತ್ತಿರುವಾಗ ಸಾಕ್ಷಾತ್ ಆ ಶಿವನನ್ನೇ ಪೂಜಿಸಿದ ಬಳಿಕ ಬೇರೆ ದೇವರ ಪೂಜೆಯ ಅವಶ್ಯಕತೆಯೇ ಅಲ್ಲಿ ಉಳಿಯುವದಿಲ್ಲ. ''ಲಿಂಗ ಮಧ್ಯೆ ಜಗತ್ಸರ್ವಮ್'' ಎಂಬ ಉಕ್ತಿಗನುಸಾರವಾಗಿ ಸಚರಾಚರ ಪ್ರಪಂಚವೆಲ್ಲವೂ ಅರ್ಥಾತ್ ಚತುರ್ದಶಭುವನ ಬ್ರಹ್ಮಾಂಡಗಳೆಲ್ಲವೂ ಲಿಂಗದಲ್ಲಿಯೇ ಅಡಕವಾಗಿರೋಣದರಿಂದ ಅದೊಂದರ ಪೂಜೆಯನ್ನು ಮಾಡಿದಾಗ ಎಲ್ಲ ದೇವರ ಪೂಜೆಯು ಅದರಲ್ಲಿಯೇ ಅಂತರ್ಹಿತವಾಗುತ್ತದೆ ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಪೂಜ್ಯಪಾದರು ಗುರುವಿನ ಮಾರ್ಗದರ್ಶನದಂತೆ ಲಿಂಗ ಪೂಜೆಯೊಂದನ್ನೇ ಮಾಡಬೇಕೆಂಬುದಾಗಿ ಅಪ್ಪಣೆಕೊಡಿಸಿದ್ದಾರೆ.

ಈ ಇಷ್ಟಲಿಂಗ ಪೂಜೆಯ ಫಲವಾವುದು? ಎಂಬ ಜಿಜ್ಞಾಸೆಯುಂಟಾದಾಗ ಅದಕ್ಕೆ ಸಮಾಧಾನರೂಪವಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು–

ಸದಾ ಶಿವಾರ್ಚನೋಪಾಯ ಸಾಮಗ್ರೀವ್ಯಗ್ರಮಾನಸಃ।
ಶಿವಯೋಗರತೋ ಯೋಗೀ ಮುಚ್ಯತೆ ನಾತ್ರಸಂಶಯಃ॥

(ಸಿ.ಶಿ. ೧೬–೧೦)

ಈ ತೆರನಾಗಿ ಆದೇಶಿಸಿದ್ದಾರೆ. ಯಾವಾಗಲೂ ಶಿವಲಿಂಗಪೂಜೆಯ ಸಾಧನ ಸಾಮಗ್ರಿಗಳನ್ನು ಸಂಪಾದಿಸುವದರಲ್ಲಿಯೇ ದತ್ತ ಚಿತ್ತನಾದ ಶಿವಯೋಗಿಯು ತಾನು ಮಾಡಿದ ಆ ಶಿವಪೂಜೆಯ ಫಲದಿಂದಾಗಿ ಸಾಂಸಾರಿಕ ಮಲ–ಮಾಯಾದಿ ಪಾಶದಿಂದ ಮುಕ್ತನಾಗುತ್ತಾನೆ. ಇದರಲ್ಲಿ ಯಾವ ಸಂದೇಹವೂ ಇಲ್ಲವೆಂಬುದು ಪೂಜ್ಯರ ಆಶಯವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಪೂಜೆಯೂ ಸಹ ಶಿವಯೋಗವೇ. ಶಿವಯೋಗವೆಂದರೆ ಶಿವನೊಂದಿಗೆ ಸಂಬಂಧವನ್ನು ಸ್ಥಾಪಿಸುವದೆಂದರ್ಥ. ಇಷ್ಟಲಿಂಗವನ್ನು ಹಸ್ತಪೀಠದಲ್ಲಿ ಇರಿಸಿಕೊಂಡು ಅದನ್ನು ಏಕಾಗ್ರವಾದ ಮನಸ್ಸಿನಿಂದ ಪೂಜಿಸುವದು ಮತ್ತು ಈ ಶಿವಪೂಜೆಗೆ ಬೇಕಾಗುವ ಸಾಮಗ್ರಿಗಳನ್ನು ಸಂಪಾದನೆ ಮಾಡುವದು ಮುಂತಾದ ಸಂದರ್ಭಗಳಲ್ಲಿ ಮನಸ್ಸು ಸದಾ ಶಿವಧ್ಯಾನದಲ್ಲಿಯೇ ಲೀನವಾಗಿರುತ್ತದೆ. ಆದ್ದರಿಂದ ಇದೆಲ್ಲವೂ ಶಿವಯೋಗವೆಂದೇ ಭಾವಿಸಬೇಕು. ಹೀಗೆ ಶಿವಪೂಜೆಯಲ್ಲಿ ಹಾಗೂ ಶಿವಪೂಜಾ ಸಾಮಗ್ರಿಗಳನ್ನು ಸಂಪಾದಿಸುವದರಲ್ಲಿ ಆಸಕ್ತವಾದ ಮನಸ್ಸುಳ್ಳವನು ಆ ಪುಣ್ಯದ ಪ್ರಭಾವದಿಂದ ಮುಕ್ತನಾಗುತ್ತಾನೆ. ಅರ್ಥಾತ್ ಶಿವಸ್ವರೂಪನೇ ಆಗುತ್ತಾನೆ. ಇದುವೇ ಶಿವಪೂಜೆಯ ಮುಖ್ಯವಾದ ಫಲವು.

''ಜ್ಞಾನಾದೇವತು ಕೈವಲ್ಯಂ ಋತೇ ಜ್ಞಾನಾನ್ನ ಮುಕ್ತಿ:''. ಎಂಬ ಶೃತಿಯಲ್ಲಿ ಮೋಕ್ಷಕ್ಕೆ ಜ್ಞಾನವೇ ಕಾರಣವೆಂಬುದಾಗಿ ಪ್ರತಿಪಾದಿತವಾಗಿರುವಾಗ ಶಿವಪೂಜಾ ಕರ್ಮದಿಂದ ಅದು ಹೇಗೆ ತಾನೆ ಮುಕ್ತಿಯು ಲಭಿಸಬಲ್ಲದು ? ಎಂಬ ಜಿಜ್ಞಾಸೆಯುಂಟಾದಾಗ ಕೇವಲ ಜ್ಞಾನವಾಗಲೀ ಕೇವಲ ಕರ್ಮವಾಗಲೀ ಮುಕ್ತಿಗೆ ಸಾಧನವಾಗಿರದೆ ಜ್ಞಾನಕರ್ಮಗಳೆರಡೂ ಸಾಧನೆಗಳಾಗಿವೆ ಎಂಬ ವಿಷಯವನ್ನು ಪ್ರತಿಪಾದಿಸಲೋಸುಗ ಪೂಜ್ಯಪಾದರು ಪುನಃ –

ಅಂಧಪಂಗುವದನ್ಯೋನ್ಯಸಾಪೇಕ್ಷೆ ಜ್ಞಾನಕರ್ಮಣಿ ।
ಫಲೋತ್ಪತ್ತೌ ವಿರಕ್ತಸ್ಯ ತಸ್ಮಾತ್ ತದ್ವಯಮಾಚರೇತ್॥

(ಸಿ.ಶಿ. ೧೬–೧೧)

ಹೀಗೆ ಉಪದೇಶಿಸಿದ್ದಾರೆ. ಕುರುಡ ಹಾಗೂ ಕುಂಟ ಇವರೀರ್ವರೂ ಪರಸ್ಪರ ಸಹಕಾರವನ್ನು ಪಡೆದಾಗ ಯಾವದೊಂದು ವಿಪತ್ತಿನಿಂದ ಪಾರಾಗಿ ಗಂತವ್ಯವನ್ನು ತಲುಪುವಂತೆ ಮುಕ್ತಿಗೆ ಜ್ಞಾನಕರ್ಮಗಳೆರಡೂ ಸಾಪೇಕ್ಷಗಳಾಗಿರುತ್ತವೆ. ಆದಕಾರಣ ವೈರಾಗ್ಯ ಸಂಪನ್ನನೂ ಪರಾಪರ ಮುಕ್ತಿರೂಪವಾದ ಫಲವನ್ನು ಪಡೆಯಲೋಸುಗ ಜ್ಞಾನಕರ್ಮಗಳೆರಡನ್ನೂ ಆಚರಿಸಬೇಕು ಎಂಬುದು ಪೂಜ್ಯರ ಆಶಯವಾಗಿದೆ.

ವೀರಶೈವ ಆಚಾರ್ಯರು ಮುಕ್ತಿಗೆ ಜ್ಞಾನ ಕರ್ಮಗಳೆರಡನ್ನೂ ಕಾರಣಗಳನ್ನಾಗಿ ಒಪ್ಪಿದ್ದಾರೆ. ಅಂತೆಯೇ ಇಲ್ಲಿ ಅಂಧ–ಪಂಗುನ್ಯಾಯವನ್ನು ಸ್ವೀಕರಿಸಲಾಗಿದೆ. 'ಶಿವರಹಸ್ಯ' ಎಂಬ ಗ್ರಂಥದಲ್ಲಿ–

ನ ಕ್ರಿಯಾ ರಹಿತಂ ಜ್ಞಾನಂ ನ ಜ್ಞಾನ ರಹಿತಾಕ್ರಿಯಾ ।
ಅಪಶ್ಯನ್ನಂಧಕೋ ದಗ್ಧೋsಗಚ್ಛನ್ ಪಂಗುಶ್ಚ ದಹ್ಯತೆ॥

ಹೀಗೆ ಆ ಅಂಧ–ಪಂಗುನ್ಯಾಯವು ವಿವರಿಸಲ್ಪಟ್ಟಿದೆ. ತಾತ್ಪರ್ಯವೇನೆಂದರೆ ಕುರುಡ ಹಾಗೂ ಕುಂಟರೀರ್ವರು ಒಂದು ಅಡವಿಯಲ್ಲಿ ವಾಸವಾಗಿರುತ್ತಿದ್ದರು. ಆದರೆ ಇಬ್ಬರೂ ಸ್ವತಂತ್ರವಾಗಿದ್ದು ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದರು. ಇಬ್ಬರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೂಡಿಕೊಂಡು ಒಂದು ಕೆಲಸವನ್ನು ಮಾಡುವ ಪ್ರಸಂಗವು ಅವರಿಗೆ ಬಂದಿರಲಿಲ್ಲ. ಒಂದಾನೊಂದು ದಿವಸ ಆ ಅಡವಿಗೆ ಬೆಂಕಿ ಹತ್ತಿ ಎಲ್ಲೆಡೆಗೆ ಧಗಧಗಿಸಿ ಉರಿಯ ತೊಡಗಿತು. ಈ ದೃಶ್ಯವನ್ನು ಕಣ್ಣಿದ್ದರೂ ಹೆಳವನಾದ ಆ ವ್ಯಕ್ತಿಯು ನೋಡಿದನು. ಆಗ ತನ್ನ ಸಮೀಪದಲ್ಲಿರುವ ಕಾಲುಳ್ಳ ಕುರುಡನನ್ನು ಉದ್ದೇಶಿಸಿ ಹೇಳಿದ್ದೇನೆಂದರೆ ಸದ್ಯಃ ನಾವೀರ್ವರೂ ಪ್ರಾಣಾಪಾಯದ ವಿಪತ್ತಿನಲ್ಲಿ ಸಿಲುಕಿಕೊಂಡಿದ್ದೇವೆ. ನಾವೀರ್ವರೂ ಒಬ್ಬೊಬ್ಬರಾಗಿ ಈ ವಿಪತ್ತಿನಿಂದ ಪಾರಾಗಲು ಸಾಧ್ಯವಾಗುವದಿಲ್ಲ. ನಾವೀರ್ವರೂ ಪರಸ್ಪರ ಸಹಕಾರವನ್ನು ಪಡೆದಾಗ ಸುರಕ್ಷಿತವಾಗಿ ಇಬ್ಬರೂ ಈ ವಿಪತ್ತಿನಿಂದ ಪಾರಾಗಬಹುದು. ಕುಂಟನ ಈ ಮಾತನ್ನು ಕೇಳಿದ ಕುರುಡನಿಗೆ ಇವನು ಹೇಳುವದು ಸರಿಯೆನಿಸಿತು. ಆಗ ಈರ್ವರು ಪರಸ್ಪರ ಸಮೀಪಕ್ಕೆ ಬಂದು ಕುರುಡನು ಕುಂಟನನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡನು. ಮೇಲೆ ಕುಳಿತುಕೊಂಡು ಹೆಳವನು ತನ್ನ ಕಣ್ಣಿನಿಂದ ನೋಡುತ್ತ ಬೆಂಕಿಯಿಲ್ಲದ ದಿಕ್ಕಿನೆಡೆಗೆ, ಹೀಗೆ ನಡೆ ಹೀಗೆ ನಡೆ ಎಂದು ಮಾರ್ಗದರ್ಶನ ಮಾಡಿದಂತೆ ಇವನನ್ನು ಹೊತ್ತುಕೊಂಡು ಕುರುಡನು ಇವನ ನಿರ್ದೇಶದಂತೆ ಮುನ್ನಡೆಯುತ್ತ ಈರ್ವರೂ ಕೂಡಿ ಆ ದಾವಾನಲದಿಂದ ಪಾರಾಗಿ ಸುರಕ್ಷಿತ ಸ್ಥಾನವನ್ನು ತಲುಪಿದರು. ಒಂದು ವೇಳೆ ಹೀಗೆ ಮಾಡದೆ ಹೋಗಿದ್ದರೆ ಕಣ್ಣುಕಾಣದ ಕುರುಡನು ಸುಟ್ಟುಕೊಂಡು ಸಾಯುತ್ತಿದ್ದನಲ್ಲದೆ ಕಂಡರೂ ಓಡಿಹೋಗುವ ಸಾಮರ್ಥ್ಯವಿಲ್ಲದ ಹೇಳುವನೂ ಸಹ ದಹಿಸಿಹೋಗುತ್ತಿದ್ದನು. ಆದರೆ ಪರಸ್ಪರ ಸಹಕಾರದಿಂದ ಇಬ್ಬರೂ ಸುರಕ್ಷಿತವಾಗಿ ಬದುಕಿಕೊಂಡರು. ಇದುವೇ ಅಂಧ-ಪಂಗುನ್ಯಾಯವು.

ಈ ನ್ಯಾಯದಂತೆ ಕೇವಲ ಕರ್ಮದಿಂದಾಗಲೀ ಅಥವಾ ಕೇವಲ ಜ್ಞಾನದಿಂದಾಗಲೀ ಮುಕ್ತಿಯು ಲಭಿಸಲಾರದು. ಕರ್ಮವು ಕುರುಡನಿದ್ದಂತೆ ಜ್ಞಾನವು ಕುಂಟನಿದ್ದಂತೆ. ಅವರೀರ್ವರೂ ಪರಸ್ಪರ ಸಹಕಾರವನ್ನು ಹೊಂದಿದಂತೆ ಶಿವಯೋಗ ಸಾಧಕನು ಜ್ಞಾನಕರ್ಮಗಳೆರಡನ್ನೂ ಆಚರಿಸಿದಾಗ ಮುಕ್ತಿಯೆಂಬ ಫಲವನ್ನು ಪಡೆದುಕೊಳ್ಳುತ್ತಾನೆ. ಆದ್ದರಿಂದ ಮುಕ್ತಿಗೆ ಇವೆರಡೂ ಪರಸ್ಪರ ಸಾಪೇಕ್ಷವೆಂಬುದಾಗಿ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು.

ಜ್ಞಾನಸಿದ್ಧಿಯನ್ನು ಪಡೆದ ಜ್ಞಾನಿಗೆ ಕರ್ಮದ ಪ್ರಯೋಜನವಾದರೂ ಏನು ? ಎಂಬ ಪ್ರಶ್ನೆಯು ಉದ್ಭವಿಸಿದಾಗ ಪೂಜ್ಯಪಾದರು-

ಜ್ಞಾನೇ ಸಿದ್ಧೇऽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ ।
ಫಲಾಭಿಸಂಧಿರಹಿತಂ ತಸ್ಮಾತ್ ಕರ್ಮ ನ ಸಂತ್ಯಜೇತ್ ॥

(ಸಿ.ಶಿ. ೧೬-೧೨)

ಈ ರೀತಿಯಾಗಿ ಪ್ರತಿಪಾದಿಸಿದ್ದಾರೆ. ಜ್ಞಾನ ಪ್ರಾಪ್ತಿಯಾದರೂ ಸಹ ಜ್ಞಾನಿಯಾದವನು ಕರ್ಮವನ್ನು ಮಾಡಲೇಬೇಕು. ತಮ್ಮ ತಮ್ಮ ಆಶ್ರಮೋಚಿತಗಳಾದ ವಿಹಿತಕರ್ಮಗಳನ್ನು ಪರಿತ್ಯಾಗ ಮಾಡಿದರೆ ಆತನು ಪತಿತನಾಗುತ್ತಾನೆ. ಆದ್ದರಿಂದ ಕರ್ಮದ ಫಲದಲ್ಲಿ ಆಸಕ್ತಿಯನ್ನು ಹೊಂದದೆ ನಿಷ್ಕಾಮಬುದ್ಧಿಯಿಂದ ಕರ್ಮವನ್ನು ಮಾಡುತ್ತಲೇ ಇರಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನವಿಲ್ಲದ ಕರ್ಮ ಮತ್ತು ಕರ್ಮವಿಲ್ಲದ ಜ್ಞಾನ ಇವೆರಡೂ ಸಾಮರ್ಥ್ಯಹೀನ ಗಳಾಗಿರುತ್ತವೆ. ಆದರೆ ಇವೆರಡೂ ಸೇರಿದಾಗ ಅಲ್ಲಿ ಫಲವನ್ನು ಕೊಡುವ ಸಾಮರ್ಥ್ಯವು ಪ್ರಾಪ್ತವಾಗುತ್ತದೆ. ''ನಹ್ಯೇಕ ಪಕ್ಷೋ ವಿಹಗಃ ಪ್ರಯಾತಿ'' ಎಂಬ ಉಕ್ತಿಗನುಸಾರವಾಗಿ ಪಕ್ಷಿಯು ಆಕಾಶದಲ್ಲಿ ಸ್ವಚ್ಛಂದವಾಗಿ ಹಾರಾಡಬೇಕಾದರೆ ಅದಕ್ಕೆ ಎರಡು ರೆಕ್ಕೆಗಳು ಹೇಗೆ ಬೇಕಾಗುವುವೋ ಹಾಗೆ ಮುಕ್ತಿಯನ್ನು ಪಡೆಯಬೇಕಾದರೆ ಜ್ಞಾನಕರ್ಮಗಳೆರಡೂ ಅವಶ್ಯವಾಗಿ ಬೇಕೇಬೇಕು. ಕಾರಣ ಜ್ಞಾನಿಯಾದವನು ಸಹ ಇಷ್ಟಲಿಂಗ ಪೂಜಾರೂಪವಾದ ತನ್ನ ನಿತ್ಯ ಕರ್ಮವನ್ನು ಎಂದೂ ತ್ಯಜಿಸಕೂಡದು.

ಇನ್ನೂ ಕೊನೆಯದಾಗಿ ಈ ಕ್ರಿಯಾಗಮ ಸ್ಥಲವನ್ನು ಪೂರ್ಣಗೊಳಿಸುತ್ತ ಆಚಾರದ ಮಹತಿಯನ್ನು ಹಾಗೂ ಆಚಾರಯುಕ್ತವಾದ ಜ್ಞಾನವಿದ್ದಾಗಲೇನೇ ಶಿವನ ಕೃಪೆಯು ದೊರೆಯುವದೆಂಬ ವಿಷಯವನ್ನು ಪ್ರತಿಪಾದಿಸಲೋಸುಗ ಪೂಜ್ಯಪಾದರು–

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪ್ಯತೇ।
ಆಚಾರ ಹೀನ ಃ ಪುರುಷೋ ಲೋಕೇ ಭವತಿ ನಿಂದಿತಃ॥
ಜ್ಞಾನಾಚಾರಯುಕ್ತೇನ ಪ್ರಸೀದತಿ ಮಹೇಶ್ವರ ಃ।
ತಸ್ಮಾದಾಚಾರವಾನ್ ಜ್ಞಾನೀ ಭವೇದೇಹ ಪಾತನಮ್॥

(ಸಿ.ಶಿ. ೧೬,೧೩–೧೪)

ಈ ವಿಧವಾಗಿ ಉಪದೇಶಿಸಿದ್ದಾರೆ. ಆಚರಣೆಯು ಎಲ್ಲರಿಗೂ ಒಂದು ಆಭರಣವಿದ್ದಂತೆ ಉತ್ತಮ ಆಚರಣೆಯಿಲ್ಲದ ವ್ಯಕ್ತಿಯು ಈ ಜಗತ್ತಿನಲ್ಲಿ ನಿಂದೆಗೆ ಪಾತ್ರನಾಗುತ್ತಾನೆ. ಆಚಾರ ಯುಕ್ತವಾದ ಜ್ಞಾನವಿದ್ದರೆ, ಶಿವನು ಪ್ರಸನ್ನನಾಗುವನು ಆದ್ದರಿಂದ ಜ್ಞಾನಿಯಾದವನು ತನ್ನ ದೇಹಪಾತವಾಗುವವರೆಗೆ ಅರ್ಥಾತ್ ಮೃತ್ಯುಪರ್ಯಂತರವಾಗಿ ತನ್ನ ಉತ್ತಮ ಆಚರಣೆಯನ್ನು ಎಂದೂ ಬಿಡಕೂಡದೆಂಬುದೇ ಪೂಜ್ಯರ ಆಶಯವಾಗಿದೆ. ಜ್ಞಾನ ಮತ್ತು ಆಚರಣೆ ಇವೆರಡೂ ಪರಸ್ಪರ ಪೂರಕಗಳಾಗಿವೆ. ಜ್ಞಾನಕ್ಕೆ ಎಷ್ಟೊಂದು ಮಹತ್ವವಿದೆಯೋ ಅಷ್ಟೇ ಮಹತ್ವವು ಆಚಾರಣೆಗೂ ಇರುತ್ತದೆ. ಅಂತೆಯೇ ಪೂಜ್ಯಪಾದರು ಇಲ್ಲಿ ಆಚರಣೆಯನ್ನು ಆ ಭೂಷಣಕ್ಕೆ ಹೋಲಿಸಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯೂ ಅಲಂಕಾರ ಪ್ರಿಯನಾಗಿರುತ್ತಾನೆ. ತನ್ನ ಶರೀರವು ಸುಂದರವಾಗಿ ತೋರಬೇಕೆನ್ನುವ ಉದ್ದೇಶದಿಂದ ಬೆಲೆಬಾಳುವ ವಸ್ತ್ರ ಹಾಗೂ ಒಡವೆಗಳಿಂದ ಅದನ್ನು ಅಲಂಕರಿಸಲು ಪ್ರಯತ್ನಿಸುತ್ತಾನೆ. ಸ್ಥೂಲದೇಹವನ್ನು ನಾವು ಈ ಬಾಹ್ಯಗಳಾದ ವಸ್ತ್ರ ಆಭೂಷಣಾದಿಗಳಿಂದ ಅಲಂಕರಿಸಬಹುದು ಆದರೆ ಇದರೊಳಗಿರುವ ಸೂಕ್ಷ್ಮದೇಹವನ್ನು ಸುಂದರಗೊಳಿಸಲು ಇವು ಯಾವುಗಳೂ ಪ್ರಯೋಜನಕಾರಿಯಾಗಲಾರವು. ನಮ್ಮ ಶುದ್ಧವಾದ ನಡತೆಯೇ ಅರ್ಥಾತ್ ಆಚರಣೆಯೇ ಅರ್ಥಾತ್ ಆಭೂಷಣವು. ಅನಾಚಾರಿಯಾದ ಮನುಷ್ಯನು ಬಹಿರಂಗದಲ್ಲಿ ಅದೆಷ್ಟೇ ಬೆಲೆಬಾಳುವ ಆಭೂಷಣಗಳನ್ನು ಧರಿಸಿದ್ದರೂ, ಲೋಕದಲ್ಲಿ ಅವನಿಗೆ ಮನ್ನಣೆ ದೊರೆಯದು. ಶಿವನ ದೇಹದ ಮೇಲೆ ಒಂದೂ ಆಭರಣಗಳೇ ಇಲ್ಲ, ಇಷ್ಟೇ ಏಕೆ ಸರಿಯಾದ ವಸ್ತ್ರವೂ ಸಹ ಇಲ್ಲ. ಅಂತಲೇ ಅವನಿಗೆ ದಿಗಂಬರನೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರೆದಿದ್ದಾರೆ. ದಿಗಂಬರನಾಗಿದ್ದರೂ ಅವನಷ್ಟು ಸುಂದರರು ಜಗತ್ತಿನಲ್ಲಿ ಬೇರೊಬ್ಬರಿಲ್ಲ. ಅಂತೆಯೇ ಅವನೊಬ್ಬನನ್ನು ಕುರಿತು ಸತ್ಯಂ ಶಿವಂ ಸುಂದರಮ್ ಎಂದು ಕರೆಯಲಾಗಿದೆ.

ಶಿವನ ಭಾವನೆಗಳು ಸುಂದರಗಳು, ಲೋಕಕಲ್ಯಾಣಕಾರಿಗಳೂ ಆಗಿರೋಣದರಿಂದ ಅವನು ಸುಂದರವಾಗಿ ತೋರುವಂತೆ ವ್ಯಕ್ತಿಯು ಒಳ್ಳೆಯ ಆಚಾರಸಂಪನ್ನನಾದರೆ ಅದುವೇ ಅವನ ಅಂತರಂಗ ಸೌಂದರ್ಯವನ್ನು ವರ್ಧಿಸಲು ಕಾರಣವಾಗುತ್ತದೆ. ನಶ್ವರಗಳಾದ ವಸ್ತ್ರ-ಆಭೂಷಣಾದಿ ಅಲಂಕಾರಗಳನ್ನು ಸಂಪಾದಿಸುವದರಲ್ಲಿಯೇ ವ್ಯರ್ಥ ಜೀವನವನ್ನು ಕಳೆಯುವದಕ್ಕಿಂತ ಉತ್ತಮ ಆಚಾರ-ವಿಚಾರಗಳೆಂಬ ಅಲಂಕಾರಗಳನ್ನು ಹೊಂದಿ ತಾನು ಆಚಾರಸುಂದರನಾಗಲು ಪ್ರಯತ್ನಿಸಬೇಕೆಂಬುದಾಗಿ ಪೂಜ್ಯರು ಇಲ್ಲಿ ಆದೇಶಿಸಿದ್ದಾರೆ.

ಶುಷ್ಕವಾದ ಜ್ಞಾನವನ್ನು ಪಡೆದ ಮಾತ್ರಕ್ಕೆ ಶಿವನ ಕೃಪೆಯು ಪ್ರಾಪ್ತವಾಗಲಾರದು. ಅವನ ಕೃಪೆಯನ್ನು ಪಡೆಯಬೇಕಾದರೆ ಸದಾಚಾರಯುಕ್ತವಾದ ಜ್ಞಾನಯುಳ್ಳವನಾಗಿರಬೇಕು. ಹಾಗಾದರೆ ಈ ಸದಾಚಾರವನ್ನು ಎಷ್ಟು ದಿನ ಪರಿಪಾಲಿಸಬೇಕು? ಎಂಬ ಪ್ರಶ್ನೆಯುದ್ಭವಿಸಲು ಪ್ರಾಣವಿರುವವರೆಗೆ ಆಚಾರವನ್ನು ಬಿಡಕೂಡದೆಂಬುದಾಗಿ ಪೂಜ್ಯರ ಆದೇಶವಿರುತ್ತದೆ.

ಹೀಗೆ ಈ ಕ್ರಿಯಾಗಮ ಸ್ಥಲದಲ್ಲಿ ಕ್ರಿಯೆಯ ಮಹತ್ವವನ್ನು ವರ್ಣಿಸಲಾಗಿದೆ. ಇಷ್ಟಲಿಂಗ ಪೂಜೆಯು ವೀರಶೈವರ ಮುಖ್ಯಕ್ರಿಯೆಯಾಗಿರೋಣದರಿಂದ ಜ್ಞಾನವಾದರೂ ಸಹ ಇದನ್ನು ಆಮರಣಪರ್ಯಂತರವಾಗಿ ಪರಿಪಾಲಿಸಬೇಕು. ಅಂದಾಗಲೇನೇ ಶಿವನ ಪೂರ್ಣ ಕೃಪೆಯು ಪ್ರಾಪ್ತವಾಗುವದು. ಈ ಜ್ಞಾನ ಮತ್ತು ಆಚರಣೆಗಳು ಮುಕ್ತಿ ದೊರೆಯಲು ಸಮಾನ ಕಾರಣಗಳಾಗಿರುತ್ತವೆ. ಒಂದು ಪಕ್ಷಿಗೆ ಎರಡು ರೆಕ್ಕೆಗಳು ಬೇಕಾಗಿರುವಂತೆ ಒಂದು ರಥಕ್ಕೆ ಎರಡು ಗಾಲಿಗಳ ಅವಶ್ಯಕತೆ ಇರುವಂತೆ, ಮುಕ್ತಿಗೆ ಜ್ಞಾನ-ಕರ್ಮಗಳೆರಡೂ ಅವಶ್ಯಕವಾಗಿರುತ್ತವೆ. ಕಾರಣ ಪ್ರತಿಯೊಬ್ಬರೂ ಇವೆರಡಕ್ಕೂ ಸಮಾನ ಮಾನ್ಯತೆಯನ್ನು ಕೊಟ್ಟು ಅವೆರಡನ್ನೂ ಸಂಪಾದಿಸಿ ಮುಕ್ತಿಯನ್ನು ಪಡೆಯುವವರಾಗಿರೆಂಬುದಾಗಿ ಹರಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ.೨೯ ಜುಲೈ ೧೯೯೩
(ಜ್ಞಾನಮಂದಿರ ಜಂಗಮವಾಡಿಮಠ, ವಾರಾಣಸಿ.)

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವಚನ-೩

ಭಾವಾಗಮಸ್ಥಲ-೧

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ಯವಾಗಿ ಶ್ರೀಮಹಾ ಸನ್ನಿಧಿಯ ಶಿವಪೂಜಾನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ನೆರವೇರುತ್ತಲಿವೆ. ಕಾಶಿಯು ಇದೊಂದು ಪವಿತ್ರವಾದ ಕ್ಷೇತ್ರವು. ಸದ್ಯಃ ಪ್ರಾರಂಭವಾದ ಶ್ರಾವಣಮಾಸವೂ ಸಹ ಅತ್ಯಂತ ಪಾವನವಾದುದು. ಇದರ ಜೊತೆಗೆ ಈ ಧರ್ಮ ಸಭೆಯಲ್ಲಿ ಸಮ್ಮಿಲಿತರಾದ ನಿಮ್ಮೆಲ್ಲರ ಭಾವನೆಗಳೂ ಸಹ ಪಾವನಗಳೇ ಆಗಿವೆ. ಹೀಗೆ ಪವಿತ್ರ ಕ್ಷೇತ್ರ, ಪವಿತ್ರಮಾಸ, ಭಕ್ತರ ಪವಿತ್ರಭಾವನೆಗಳೆಂಬ ತ್ರಿವೇಣಿ ಸಂಗಮವೇ ಇಲ್ಲಿ ಕೂಡಿದಂತಾಗಿದೆ. ನಮ್ಮ ದೃಷ್ಟಿಯಲ್ಲಿ ಇದುವೇ ಸರ್ವಶ್ರೇಷ್ಠವಾದ ಪ್ರಯಾಗವು. ಇಂಥ ಈ ಪ್ರಯಾಗದಲ್ಲಿ ಸಿದ್ಧಾಂತ ಶಿಖಾಮಣಿಯ ಲಿಂಗ ಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನವನ್ನು ಆಲಿಸುತ್ತಿದ್ದೀರಿ. ನಿನ್ನೆಯ ದಿನ ಕ್ರಿಯಾಗಮ ಸ್ಥಲದ ಬಗ್ಗೆ ಸವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. ಇಂದು ಕ್ರಮ ಪ್ರಾಪ್ತವಾದ ಭಾವಾಗಮಸ್ಥಲದ ಬಗ್ಗೆ ವಿವರವಾಗಿ ವಿಶ್ಲೇಷಿಸೋಣ.

ಈ ಪೂರ್ವದಲ್ಲಿ ಹೇಳಲ್ಪಟ್ಟ ಕ್ರಿಯಾಗಮ ಸ್ಥಲದ ಸಾಧಕನ ಮನಸ್ಸಿನಲ್ಲಿ ಬರುವ ಭಾವನೆಗಳ ಬಗ್ಗೆ ಪ್ರತಿಪಾದಿಸುವ ಸ್ಥಲವೇ ಭಾವಾಗಮ ಸ್ಥಲವು. ''ಭಾವೋ ಮಾನಸ ಚೇಷ್ಟಾತ್ಮಾ ಪರಿಪೂರ್ಣಃ ಶಿವಾತ್ಮಕ :'' ಎಂಬ ಪೂಜ್ಯಪಾದರ ಆದೇಶದ ಮೇರೆಗೆ ಸಂಪೂರ್ಣ ಶಿವಮಯವಾದ ಮನೋವೃತ್ತಿಗೇನೇ ಭಾವ ಅಥವಾ ಭಾವನೆ ಎಂಬುದಾಗಿ ಕರೆಯುತ್ತಾರೆ. ಯಾವುದೇ ಕ್ರಿಯೆಯನ್ನು ಮಾಡಬೇಕಾದರೆ ಅದರ ಜೊತೆಗೆ ಭಾವನೆಯೂ ಸಹ ಬೇಕಾಗುತ್ತದೆ. ಅಂತೆಯೇ 'ಕ್ರಿಯಾಗಮಸ್ಥಲ' ಮುಗಿದೊಡನೆ ಪೂಜ್ಯರು ಭಾವಾಗಮ ಸ್ಥಲವನ್ನು ಪ್ರಾರಂಭಿಸಿದ್ದಾರೆ. ಈ ಸ್ಥಲದ ಬಗ್ಗೆ ಅಪ್ಪಣೆಕೊಡಿಸುತ್ತಾ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು –

ಭಾವಚಿಹ್ನಾನಿ ವಿದುಷ್ಟೋ ಯಾನಿಸಂತಿ ವಿರಾಗಿಣಃ।
ತಾನಿ ಭಾವಾಗಮತ್ವೇನ ವರ್ತಂತೆ ಸರ್ವದೇಹಿನಾಮ್ ॥

(ಸಿ.ಶಿ. ೧೭–೧೫)

ಹೀಗೆ ಉಪದೇಶಿಸಿದ್ದಾರೆ. ಈ ಪೂರ್ವದಲ್ಲಿ ಹೇಳಿದ ನಿಷ್ಕಾಮ ಕರ್ಮಿಯಾದ ಶಿವಯೋಗಿಯ ಮನಸ್ಸಿನಲ್ಲಿ ಯಾವ ಭಾವನೆಗಳು ಉದಯಿಸುತ್ತವೆಯೋ ಆ ಭಾವನೆಗಳು ಉಳಿದ ಸಾಮಾನ್ಯ ಜನರಿಗೂ ಸಹ ಅನುಕರಣೀಯಗಳಾಗಿರುತ್ತವೆ. ಅಂತೆಯೇ ಆ ಶಿವಯೋಗಿಯ ಭಾವನೆಗಳನ್ನು ಕುರಿತು ಉಪದೇಶಿಸಲ್ಪಡುವ ಈ ಸ್ಥಲಕ್ಕೆ ಭಾವಾಗಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಥಲವೆಂದು ಕರೆಯಲಾಗಿದೆ. ''ಯಂ ಯಥೋಪಾಸತೇ ತದೇವ ಭವತಿ'' ಎಂಬ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹಾಗೂ ''ಶಿವಭಾವಮನುಸಂಧಾನಾಚ್ಛಿವೋ ಭಾವೇ ಪ್ರಕಾಶಿತೆ'' ಎಂಬ 'ಯೋಗಜ ಆಗಮ'ದ ಈ ಮಂತ್ರದಲ್ಲಿ ಭಾವನೆಯ ಬಗ್ಗೆ ಪ್ರತಿಪಾದಿಸಲಾಗಿದೆ. ಯಾರು ಯಾವುದನ್ನು ಹೇಗೆ ಉಪಾಸನೆ ಗೈಯ್ಯುತ್ತಾರೆಯೋ ಅವರು ಅದೇ ಆಗುತ್ತಾರೆ, ಶಿವನನ್ನು ಭಾವನಾಪೂರ್ವಕವಾಗಿ ಸದಾ ಚಿಂತನೆಗೆಯ್ಯುತ್ತಿದ್ದರೆ ಆತನು ನಮ್ಮ ಭಾವನೆಯಲ್ಲಿ ಪ್ರಕಟವಾಗುವನು. ಹೀಗೆ ಉಪನಿಷತ್ ಹಾಗೂ ಆಗಮಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಇದನ್ನು ಆಧಾರವಾಗಿಟ್ಟುಕೊಂಡೇ ಪೂಜ್ಯಪಾದರು ಈ ಭಾವಾಗಮಸ್ಥಲವನ್ನು ಪ್ರಾರಂಭಿಸಿದ್ದಾರೆ. ಈ ಸ್ಥಲದ ವಿಷಯ ವಸ್ತುವನ್ನೇ ಸ್ಪಷ್ಟಪಡಿಸಲೋಸುಗ ಪೂಜ್ಯರು ಪುನಃ –

ಶಿವೋऽಹಮಿತಿ ಭಾವೋऽಪಿ ಶಿವತಾಪತ್ತಿಕಾರಣಮ್ ।
ನ ಜ್ಞಾನಮಾತ್ರಂ ನಾಚಾರೋ ಭಾವಯುಕ್ತಃ ಶಿವೋ ಭವೇತ್ ॥

(ಸಿ. ಶಿ. ೧೬–೧೬)

ಈ ವಿಧವಾಗಿ ಆದೇಶಿಸಿದ್ದಾರೆ. ಶಿವಯೋಗಿಯ ಮನಸ್ಸಿನಲ್ಲಿ ನಿರಂತರವಾಗಿ 'ಶಿವೋऽಹಂ' ಅರ್ಥಾತ್ ನಾನು ಶಿವನಿದ್ದೇನೆ ಎಂಬ ಭಾವನೆಯು ಉದಿಸುತ್ತಿದ್ದರೆ ಅದರಿಂದಲೇ ತನ್ನಲ್ಲಿ ಶಿವತ್ವವು ಪ್ರಾಪ್ತವಾಗುವುದು. ಈ ಭಾವನೆಯ ಹೊರತಾಗಿ ಕೇವಲ ಶುಷ್ಕವಾದ ಶಿವಜ್ಞಾನದಿಂದಾಗಲೀ ಅಥವಾ ಕೇವಲ ಸದಾಚಾರದಿಂದಲೇ ಶಿವತ್ವವು ಪ್ರಾಪ್ತಿಯಾಗುವದಿಲ್ಲ. ಆದ್ದರಿಂದಲೇ ಶಿವತ್ವವನ್ನು ಪಡೆಯಲು ಶಿವಯೋಗಿಯು ಶಿವಭಾವನೆಯಿಂದ ಯುಕ್ತನಾಗಿರಬೇಕು.

ಶಿವತ್ತ್ವವನ್ನು ಪಡೆಯುವದು ಸರ್ವಜೀವರ ಜೀವನದ ಪರಮ ಧ್ಯೇಯವಾಗಿದೆ. ಸಂಸಾರದಲ್ಲಿಯ ಎಲ್ಲ ಭೋಗೋಪಭೋಗಗಳನ್ನು ಅನುಭವಿಸಿ ಇದೆಲ್ಲವೂ ನಿಸ್ಸಾರವೆಂಬುದಾಗಿ ತಿಳಿದುಬಂದಾಗ ಜೀವಿಯು ಶಿವನ ಕಡೆಗೆ ಸಮ್ಮುಖನಾಗುತ್ತಾನೆ. ಆಗ ಶಿವಧ್ಯಾನಾದಿಗಳನ್ನು ಮಾಡಿ ಶಿವತ್ತ್ವವನ್ನು ಪಡೆಯುವ ಉದ್ದೇಶದಿಂದ ಗುರುಸಾನಿಧ್ಯಕ್ಕೆ ಹೋಗಿ ಪ್ರಾರ್ಥಿಸಿಕೊಂಡಾಗ ಗುರುವರ್ಯರು ಇವನಲ್ಲಿಯ ಸಂಸಾರವಿಮುಖತೆಯನ್ನು ಕಂಡು ಜ್ಞಾನಕ್ಕೆ ಯೋಗ್ಯನೆಂಬುದಾಗಿ ತಿಳಿದು ತತ್ತ್ವಮಸಿ ಎಂಬ ಮಹಾವಾಕ್ಯವನ್ನು ಉಪದೇಶಿಸುತ್ತಾರೆ. ಅಂದರೆ ನಿನ್ನಾತ್ಮವೇ ಪರಮಾತ್ಮಸ್ವರೂಪವಾಗಿದೆ. ಅದುವೇ ಪರಮಾನಂದ ರೂಪವಾದುದು ಮುಂತಾಗಿ ಉಪದೇಶಮಾಡಲು ಶಿಷ್ಯನ ಮನಸ್ಸಿನಲ್ಲಿ 'ಶಿವೋऽಹಂ' ನಾನು ಶಿವನಿದ್ದೇನೆ. ಎಂಬ ಭಾವನಾತ್ಮಕವಾದ ವೃತ್ತಿಯು ಉತ್ಪನ್ನವಾಗುವದು. ಈ ಭಾವನೆಯನ್ನೇ ನಿರಂತರವಾಗಿ ಅನುಸಂಧಾನಮಾಡಿದಾಗ ಆತನು ಶಿವರೂಪನೇ ಆಗುತ್ತಾನೆ. ಈ ಭಾವನೆಯನ್ನು ಹೊರತುಪಡಿಸಿ ಕೇವಲ ಶಿವಜ್ಞಾನ ಹಾಗೂ ಕೇವಲ ಶಿವಪೂಜಾ ರೂಪವಾದ ಕರ್ಮವು ಈ ಶಿವತ್ತ್ವಪ್ರಾಪ್ತಿಗೆ ಸಾಧನಗಳಾಗಲಾರವು. ಅಂತೆಯೇ ಈ ಶಿವೋऽಹಂ ಭಾವನೆಯಿಂದ ಯುಕ್ತನಾಗಿರಬೇಕೆಂಬುದಾಗಿ ಪೂಜ್ಯರು ಆದೇಶವಿತ್ತಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನು ಜ್ಞಾನ ಹಾಗೂ ಭಾವನೆಗಳಲ್ಲಿ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತ ಪೂಜ್ಯರು ಪುನಃ–

ಜ್ಞಾನಂ ವಸ್ತುಪರಿಚ್ಛೇದೋ ಧ್ಯಾನಂ ತದ್ಭಾವಕಾರಣಮ್ ।
ತಸ್ಮಾದ್ ಜ್ಞಾತೇ ಮಹಾದೇವೇ ಧ್ಯಾನಯುಕ್ತೋ ಭವೇತ್ ಸುಧೀಃ ॥

(ಸಿ.ಶಿ. ೧೬–೧೭)

ಈ ತೆರನಾಗಿ ಉಪದೇಶಿಸಿದ್ದಾರೆ. ಜ್ಞಾನವು ವಸ್ತುವಿನ ಸ್ವರೂಪವನ್ನು ತಿಳಿಸಿಕೊಡತ್ತದೆ. ಆದರೆ ಧ್ಯಾನವು ಅರ್ಥಾತ್ ಭಾವನೆಯು ತದಾಕಾರ ಚಿಂತನೆಯನ್ನು ಮಾಡಲು ಸಹಾಯಕವಾಗುತ್ತದೆ. ಪರಮಾತ್ಮನು ಸಚ್ಚಿದಾನಂದ ರೂಪನಾಗಿದ್ದಾನೆ ಎಂಬ ಬೋಧೆಯನ್ನು ಕೇಳಿದಾಗ ಪರಮಾತ್ಮನ ಆ ಸ್ವರೂಪದ ಬಗ್ಗೆ ಜ್ಞಾನವುಂಟಾಗುತ್ತದೆ. ಅವನ ಆ ಸ್ವರೂಪ ಜ್ಞಾನಮಾತ್ರದಿಂದ ನಮಗೆ ಅದಾವ ವಿಶೇಷವಾದ ಆನಂದವು ಆಗುವುದಿಲ್ಲ. ಆದರೆ ಆ ಶಿವನನ್ನು ತನ್ನ ಅಂತರಾತ್ಮದೊಂದಿಗೆ ತಾದಾತ್ಮ್ಯಾನುಸಂಧಾನವನ್ನು ಮಾಡಿದಾಗ ಆ ವ್ಯಕ್ತಿಯ ಮನಸ್ಸಿನಲ್ಲಿ ಶಿವತ್ತ್ವ ಭಾವನೆಯು ಒಡಮೂಡಿ ಒಂದು ವಿಲಕ್ಷಣವಾದ ಆನಂದಾನುಭೂತಿಯು ಉಂಟಾಗುವದು.

ಒಂದು ಬೆಲೆಬಾಳುವ ಉಂಗುರವನ್ನು ಒಬ್ಬ ವ್ಯಕ್ತಿಯ ಮುಂದಿರಿಸಿ ಇಗೋ ನೋಡು ಈ ಉಂಗುರವು ಹೇಗೆ ಕಾಣುತ್ತಿದೆ ಎಂಬುದಾಗಿ ಕೇಳಲು ಆ ವ್ಯಕ್ತಿಯು ಅದನ್ನು ಕೈಯಲ್ಲಿ ತೆಗೆದುಕೊಂಡು, ಅತ್ತಿತ್ತ ಹೊರಳಿಸಿ ನೋಡಿ ಈ ವಜ್ರದ ಉಂಗುರವು ಬಹಳೇ ಸುಂದರವಾಗಿದೆ ಎಂಬುದಾಗಿ ತಾನು ತಟಸ್ಥನಾಗಿದ್ದು ತನಗುಂಟಾದ ಅದರ ಜ್ಞಾನವನ್ನು ವ್ಯಕ್ತಪಡಿಸುತ್ತಾನೆ. ಆದರೆ ಈ ಉಂಗುರವನ್ನು ನಿನಗಾಗಿಯೇ ತಂದಿದ್ದೇವೆ ಸ್ವೀಕರಿಸು ಎಂದು ಕೈಗಿತ್ತಾಗ ಆ ಉಂಗುರದೊಂದಿಗೆ ಸ್ವತ್ವರೂಪವಾದ ತಾದಾತ್ಮ್ಯಭಾವನೆಯನ್ನು ತಿಳಿದಾಗ ಅವನ ಮನಸ್ಸಿನಲ್ಲಿ ಒಂದು ವಿಲಕ್ಷಣವಾದ ಆನಂದಾನುಭೂತಿಯು ಉಂಟಾಗಿ ಒಂದು ಕ್ಷಣದಲ್ಲಿ ಅವನ ಮುಖವು ಕಮಲದಂತೆ ಅರಳಿ ಪ್ರಸನ್ನಮುದ್ರೆಯಲ್ಲಿ ಆತನು ಕಂಗೊಳಿಸಲಾರಂಭಿಸುತ್ತಾನೆ. ಪೂರ್ವದಲ್ಲಿ ಉಂಗುರದ ಬರೀ ಜ್ಞಾನಮಾತ್ರ ಆಗಿತ್ತು ಆಗ ಅವನ ಮುಖದಲ್ಲಿ ಅದಾವ ಆನಂದಸ್ಫೂರ್ತಿಯ ಚಿಹ್ನಗಳು ಕಂಡುಬರಲಿಲ್ಲ. ಆ ವಸ್ತುವು ತನ್ನದೆಂಬ ಭಾವನೆಯು ಮನಸ್ಸಿನಲ್ಲಿ ಒಡಮೂಡಿದೊಡನೆಯೇ ಎಷ್ಟೊಂದು ಬದಲಾವಣೆಯು ಆಯಿತು ನೋಡಿದಿರಾ? ಹೀಗೆಯೇ ಶಿವಜ್ಞಾನ ಹಾಗೂ ಶಿವಭಾವನೆಗಳಲ್ಲಿರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಶಿವಜ್ಞಾನವನ್ನು ಪಡೆದ ನಂತರ ಶಿವಭಾವನೆಯಿಂದ ಯುಕ್ತವಾದಾಗಲೇ ಅವನಿಗೆ ತೃಪ್ತಿ–ಸಂತೃಪ್ತಿಗಳು ಉಂಟಾಗುವವು.

''ಆತ್ಮಾವಾ ಅರೆ ದೃಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿದಿಧ್ಯಾಸಿತವ್ಯಃ'' ಎಂಬ ಉಪನಿಷದ್ವಾಕ್ಯದಲ್ಲಿ ದರ್ಶನಿಷೇಯವಾದ ಆತ್ಮವನ್ನು ಸಾಕ್ಷಾತ್ಕರಿಸಿಗೊಳ್ಳಬೇಕಾದರೆ ಶ್ರವಣ, ಮನನ ಹಾಗೂ ನಿದಿಧ್ಯಾಸನಗಳನ್ನು ಮಾಡಬೇಕೆಂಬುದಾಗಿ ತಿಳಿಸಲಾಗಿದೆ. ಇಲ್ಲಿ ಶ್ರವಣದಿಂದ ಆತ್ಮಜ್ಞಾನವು ಉಂಟಾಗುತ್ತದೆ. ಆದರೆ ಕೇವಲ ಶುಷ್ಕಜ್ಞಾನದಿಂದ ಆನಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಪ್ತಿಯಾಗುವದಿಲ್ಲವೆಂತಲೇ ಮುಂದಿನ ಮನನ ಹಾಗೂ ನಿದಿಧ್ಯಾಸಗಳನ್ನು ಉಪದೇಶಿಸಲಾಗಿದೆ. ಎಲ್ಲಿಯವರೆಗೆ ಆತ್ಮಾಕಾರದ ಅಖಂಡ ವೃತ್ತಿಯು ಪ್ರಾದುರ್ಭವಿಸುವದಿಲ್ಲವೋ ಅಲ್ಲಿಯವರೆಗೆ ಆತ್ಮಾನಂದದ ಅನುಭೂತಿಯು ಉಂಟಾಗುವದಿಲ್ಲ. ಆದಕಾರಣ ಆತ್ಮಜ್ಞಾನವಾದ ಬಳಿಕ ಮನೋವೃತ್ತಿಯನ್ನು ತದಾಕಾರಗೊಳಿಸುವದಕ್ಕಾಗಿ ಮನನ ಹಾಗೂ ನಿದಿಧ್ಯಾಸಗಳ ಸಹಾಯತೆಯನ್ನು ಪಡೆಯಬೇಕಾಗುವದು. ಇವುಗಳು ಮನಸ್ಸಿನಲ್ಲಿ ಬರುವ ಅನ್ಯಾಕಾರ ವೃತ್ತಿಗಳನ್ನು ದೂರಮಾಡಿ ಆತ್ಮಾಕಾರ ವೃತ್ತಿಯನ್ನು ಅಖಂಡವಾಗಿ ಇರಿಸುತ್ತವೆ. ಯಾರೊಬ್ಬರು ಆತ್ಮ– ಪರಮಾತ್ಮರ ಚಿಂತನೆಯಲ್ಲಿ ಕುಳಿತಾಗ ಅನ್ಯಾನ್ಯ ವಿಷಯಗಳು ಚಿತ್ತದಲ್ಲಿ ಸೇರಿ ಆ ಚಿಂತನೆಗೆ ವಿಘ್ನವನ್ನುಂಟು ಮಾಡುತ್ತಿರುತ್ತವೆ. ಆದರೂ ಧೀರನಾದ ಶಿವಯೋಗಿಯು ಆ ವೃತ್ತಿಗಳನ್ನು ಪುನಃ ಪುನಃ ಬದಿಗಿರಿಸುತ್ತ ತನ್ನ ಪೂರ್ವದ ವೃತ್ತಿಯನ್ನು ಅಖಂಡವಾಗಿಡಲು ಪ್ರಯತ್ನಿಸುತ್ತಿರುತ್ತಾನೆ. ಹೀಗೆ ತನಗಾದ ಜ್ಞಾನವು ಬಲಗೊಳ್ಳುವವರೆಗೆ ಅನ್ಯಾಕಾರವೃತ್ತಿಯನ್ನು ತಡೆಯುವ ಜ್ಞಾನರೂಪವಾದ ನಿದಿಧ್ಯಾಸನವನ್ನು ಮಾಡಬೇಕಾಗುವದು. ತದಾಕಾರಾತ್ಮಕವಾದ ಧ್ಯಾನದಲ್ಲಿ ಮಗ್ನವಾಗಿರುವಾಗಲೂ ಸಾಂಸಾರಿಕ ವೃತ್ತಿಗಳು ಮನಸ್ಸಿನಲ್ಲಿ ಸೇರಿ ಒಮ್ಮೊಮ್ಮೆ ದುಃಖವನ್ನುಂಟು ಮಾಡುತ್ತಿರುತ್ತವೆ.

ಮಹಾಭಾರತದಲ್ಲಿ ಈ ಸಂದರ್ಭವಾದ ಒಂದು ಮಾರ್ಮಿಕವಾದ ಕಥೆಯುಂಟು. ಪಾಂಡವರು ವನವಾಸದಲ್ಲಿರುವಾಗ ಯಾವದೊಂದು ಕಾರ್ಯನಿಮಿತ್ತವಾಗಿ ಅರ್ಜುನನು ಹಿಮಾಲಯಕ್ಕೆ ಹೋಗಿದ್ದನು. ಅವನು ಹೋದ ಎರಡು ಮೂರು ದಿನಗಳ ನಂತರ 'ಬೃಹದಶ್ವಾ' ಎಂಬ ಮಹರ್ಷಿಯು ಪಾಂಡವರ ಕುಟೀರಕ್ಕೆ ದಯಮಾಡಿಸುತ್ತಾನೆ. ಆಗ ಯುಧಿಷ್ಠಿರ ಮುಂತಾದವರು ಆ ಋಷಿಯನ್ನು ಆದರದಿಂದ ಬರಮಾಡಿಕೊಂಡು ಯಥೋಚಿತವಾದ ಆಸನದ ಮೇಲೆ ಕೂಡ್ರಿಸಿ ಫಲಹಾರಾದಿಗಳನ್ನು ಮಾಡಿಸಿದರು. ಮಹರ್ಷಿಯು ಬಹುದೂರದಿಂದ ಬರಿಗಾಲಿನಿಂದ ಪ್ರಯಾಣಮಾಡಿ ಬಂದದ್ದನ್ನು ತಿಳಿದ ಯುಧಿಷ್ಠಿರನು ಆತನ ಪಾದ ಸೇವೆಯನ್ನು ಮಾಡತೊಡಗಿದನು. ಕೆಲವು ಸಮಯದ ನಂತರ ಯುಧಿಷ್ಠಿರನ ಕಣ್ಣುಗಳಿಂದ ಅಕಸ್ಮಾತ್ ಕಣ್ಣೀರು ಹೊರಚಿಮ್ಮಿ ಋಷಿಯ ಪಾದಗಳ ಮೇಲೆ ಬಿದ್ದವು. ಆಗ ಇದನ್ನು ಗಮನಿಸಿದ ಋಷಿಯು ಇದೇನು ಅತಿಥಿಸೇವೆಯನ್ನು ಮಾಡುತ್ತ ಆನಂದಹೊಂದುವ ಬದಲಾಗಿ ಈತನು ದುಃಖಿಸುತ್ತಿದ್ದಾನಲ್ಲ ? ಈ ದುಃಖದ ಕಾರಣವೇನಿರಬಹುದು ಎಂದು ಮನಸ್ಸಿನಲ್ಲಿ ವಿಚಾರಿಸುತ್ತ ಎದ್ದು ಕುಳಿತು ಯುಧಿಷ್ಠಿರನ ಬೆನ್ನ ಮೇಲೆ ಕೈಯ್ಯಾಡಿಸುತ್ತ ಎಲೈ ಯುಧಿಷ್ಠಿರನೇ! ಜ್ಞಾನಿಯಾದ ನಿನಗೆ ಕಣ್ಣಲ್ಲಿ ಕಂಬನಿಗಳೇಕೆ? ಎಂಬುದಾಗಿ ವಿಚಾರಿಸಿದನು. ಆಗ ಯುಧಿಷ್ಠಿರನು ''ಮಹರ್ಷಿಗಳೇ ಇಂದು ಪ್ರಾತಃಕಾಲ ನನ್ನ ಪ್ರೀತಿಯ ತಮ್ಮನಾದ ಅರ್ಜುನನು ಹಿಮಾಲಯದ ಕಡೆಗೆ ಹೋಗಿ ಇಂದಿಗೆ ಮೂರುದಿನಗಳಾದವು ಆದಕಾರಣ ಮನಸ್ಸಿನಲ್ಲಿ ಅವನ ಸ್ಮರಣೆಯುಂಟಾಗಿ ಆತನು ಏಕೆ ತಾನೆ ಬರಲಿಲ್ಲ? ಅವನಿಗೆ ಏನಾದರೂ ಆಪತ್ತು ಬಂದೊದಗಿದೆಯೋ ಏನೋ ಎಂಬ ಕಳವಳದಿಂದ ಈ ಕಣ್ಣೀರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಂದಿದೆ. ಆದ್ದರಿಂದ ಕ್ಷಮಿಸಿ'' ಎಂಬುದಾಗಿ ವಿನಂತಿಸಿಕೊಂಡನು ಯುಧಿಷ್ಠಿರನ ಈ ಮಾತನ್ನು ಕೇಳಿದ ಮಹರ್ಷಿಗಳು ''ಎಲೈ ಧರ್ಮರಾಜನೇ ! ಸಂಸಾರದ ಸ್ಮರಣೆಯು ಮನುಷ್ಯನಿಗೆ ಸದಾ ದುಃಖವನ್ನೇ ತಂದೊಡ್ಡುತ್ತದೆ. ಅಳಿಸುವದು ಸಂಸಾರದ ಸ್ವಭಾವವಾಗಿದೆ. ಮನಸ್ಸಿನಲ್ಲಿ ಸಾಂಸಾರಿಕ ಭಾವನೆಯು ಬಂದಿತೆಂದರೆ ಅವನು ಅಳದೇಯಿರಲು ಸಾಧ್ಯವಾಗುವದಿಲ್ಲ. ಇಲ್ಲಿದ್ದೂ ಅಳಬಾರದೆಂಬ ಇಚ್ಛೆಯಿದ್ದರೆ ಈ ಸಂಸಾರವನ್ನು ನಿನ್ನ ಭಾವನೆಯಲ್ಲಿಪ್ರವೇಶಮಾಡಗೊಡಬೇಡ. ನೀನು ಸಂಸಾರದಲ್ಲಿದ್ದರೂ ನಿನ್ನಲ್ಲಿ ಸಂಸಾರ ಪ್ರವೇಶಿಸದಿರಲಿ , ಅಂದಾಗಲೇನೇ ನೀನು ಸುಖಿಯಾಗಲು ಸಾಧ್ಯ''. ಆಗ ಯುಧಿಷ್ಠಿರನು ''ಹೇ ಮಹರ್ಷಿಗಳೇ ಸಂಸಾರವು ನಮ್ಮ ಮನಸ್ಸಿನಲ್ಲಿ ಪ್ರವೇಶಿಸಿ ಅದು ದುಃಖ ಕೊಡದ ಹಾಗೆ ಮಾಡಬೇಕಾದರೆ ಏನು ಮಾಡಬೇಕು ?'' ಆಗ ಮಹರ್ಷಿಗಳು ಪರಮಾತ್ಮನ ಧ್ಯಾನದ ಹೊರತಾಗಿ ಇದಕ್ಕೆ ಬೇರೊಂದು ಉಪಾಯವಿಲ್ಲ. ಕಾರಣ ಸದಾ ಶಿವಧ್ಯಾನದಲ್ಲಿದ್ದು ಸುಖಿಯಾಗು'' ಎಂಬುದಾಗಿ ಆಶೀರ್ವದಿಸಿದರಂತೆ.

ಹೀಗೆ ಶಿವಧ್ಯಾನವು ಶಿವತ್ತ್ವವನ್ನು ತಂದುಕೊಟ್ಟು ಅಶಿವವಾದ ಸಂಸಾರವು ಮನಸ್ಸಿನಲ್ಲಿ ಪ್ರವೇಶಿಸದಂತೆ ತಡೆ ಹಿಡಿಯುತ್ತದೆ. ಆದಕಾರಣ ಶಿವಜ್ಞಾನ ಸಂಪನ್ನನಾದರೂ ಶಿವಧ್ಯಾನವನ್ನು ಮಾಡುತ್ತಲೇ ಇರಬೇಕು. ಈ ಶಿವಧ್ಯಾನವೇ ಈ ಭಾವಾಗಮಸ್ಥಲದಲ್ಲಿ ಶಿವಭಾವನೆ ಎಂಬುದಾಗಿ ಕರೆಯಲ್ಪಟ್ಟಿದೆ. ಆದ ಕಾರಣ ಪ್ರತಿಯೊಬ್ಬರು ಶಿವಭಾವನೆಯುಳ್ಳವರಾಗಿರಬೇಕೆಂಬುದೇ ಪೂಜ್ಯಪಾದರ ಉಪದೇಶದ ಆಶಯವಾಗಿದೆ.

ಶಿವಭಾವನೆಯನ್ನು ಯಾವ ತೆರನಾಗಿ ಮಾಡಬೇಕು? ಎಂಬ ಪ್ರಶ್ನೆಯುದ್ಭವಿಸಿದಾಗ ಪೂಜ್ಯಪಾದರು ಆದರ ವಿಧಾನವನ್ನು ತಿಳಿಸುತ್ತ ಪುನಃ –

ಅಂತರ್ಬಹಿಶ್ಚ ಸರ್ವತ್ರ ಪರಿಪೂರ್ಣಂ ಮಹೇಶ್ವರಮ್ ।
ಭಾವಯೇತ್ ಪರಮಾನಂದಲಬ್ಧಯೆ ಪಂಡಿತೋತ್ತಮಃ ॥

(ಸಿ. ಶಿ. ೧೬–೧೮)

ಈ ರೀತಿಯಾಗಿ ಉಪದೇಶಿಸಿದ್ದಾರೆ. ಪಂಡಿತ ಶ್ರೇಷ್ಠನು ಪರಮಾನಂದದ ಪ್ರಾಪ್ತಿಗಾಗಿ ಪಿಂಡಾಂಡ–ಬ್ರಹ್ಮಾಂಡಗಳಲ್ಲೆಲ್ಲ ಒಳಹೊರಗು ಮಹೇಶ್ವರನು ಪರಿಪೂರ್ಣನಾಗಿದ್ದಾನೆ. ಎಂಬುದಾಗಿ ಭಾವಿಸಬೇಕು ಎಂಬುದು ಪೂಜ್ಯರ ಆಶಯವಾಗಿದೆ.

ಪರಮಾನಂದವು ಪರಬ್ರಹ್ಮದ ಸ್ವರೂಪವಾಗಿದೆ. ಅದನ್ನು ಪಡೆಯುವ ಅಭಿಲಾಷೆಯು ಎಲ್ಲರಿಗಿರುತ್ತದೆ. ಆದರೂ ಜೀವಿಗಳು ಅಖಂಡವಾದ ಆನಂದವನ್ನು ಪಡೆಯಲಸಮರ್ಥರಾಗಿ ವಿಷಯದಲ್ಲಿಯೇ ಆನಂದವನ್ನು ಕಂಡು ತೃಪ್ತರಾಗುತ್ತಾರೆ. ವಿಷಯವಾದರೂ ಸದಾ ಸರ್ವದಂ ಎಲ್ಲರಿಗೂ ಆನಂದವನ್ನು ಕೊಡಲು ಸಮರ್ಥವಾಗುವದಿಲ್ಲ. ಯಾರಿಗೆ ಅದು ಅನುಕೂಲವಾಗುವದೋ ಅವರಿಗೆ ಅದು ಪ್ರಿಯವಾಗಿ ತೋರಿದರೂ ಅದುವೇ ಪ್ರತಿಕೂಲವೆಂದಾಗ ಅಪ್ರಿಯವಾಗಿ ತೋರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದರೆ ಪರಬ್ರಹ್ಮದ ಪರಮಾನಂದವು ಸರ್ವರಿಗೂ ಸದಾ ಆನಂದವನ್ನೇ ಕೊಡುವಂಥ ದಾಗಿರುತ್ತದೆ. ಆದರೆ ಇದನ್ನು ಪಡೆಯಬೇಕಾದರೆ, ಸಂಸಾರದಿಂದ ವಿಮುಖನಾಗಿ ಜಗತ್ತಿನ ಒಳಹೊರಗೆಲ್ಲ ಪರಮಾತ್ಮನನ್ನು ಭಾವಿಸಿ ಸಮರಸ ಭಾವನೆಯಿಂದ ಅದನ್ನು ಅನುಸಂಧಾನ ಮಾಡಿದಾಗಲೇ ಆ ಪರಮಾನಂದವು ದೊರೆಯಲು ಸಾಧ್ಯವಾಗುತ್ತದೆ ಎಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

(ದಿ. ೩೦ ಜುಲೈ ೧೯೯೩)

(ಜ್ಞಾನಮಂದಿರ, ಜಂಗಮವಾಡಿ ಮಠ, ವಾರಾಣಸಿ)

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವಾಗಮಸ್ಥಲ-೨

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶಿ ಮಹಾಕ್ಷೇತ್ರದಲ್ಲಿ ಶ್ರೀಕಾಶೀಜಗದ್ಗುರುಗಳವರ ಶ್ರಾವಣಮಾಸದ ತಪೋನುಷ್ಠಾನ ಹಾಗೂ ಶ್ರೀಸಿದ್ಧಾಂತ ಶಿಖಾಮಣಿಯ ಆಶೀರ್ವಚನ ಕಾರ್ಯಕ್ರಮಗಳು ಅವ್ಯಾಹತವಾಗಿ ಸಾಗುತ್ತಲಿವೆ. ಶ್ರೀಜಗದ್ಗುರು ರೇಣುಕ ಭಗವತ್ಪಾದರು ಅಗಸ್ತ್ಯ ಮಹರ್ಷಿಯನ್ನೇ ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವರನ್ನು ಕುರಿತು ಉಪದೇಶಮಾಡಿದ ದಿವ್ಯ ಗ್ರಂಥವೇ ಶ್ರೀಸಿದ್ಧಾಂತ ಶಿಖಾಮಣಿಯು, ಈ ಗ್ರಂಥದ ಲಿಂಗಷಟ್‌ಸ್ಥಲಾಂತರ್ಗತವಾದ ಮಾಹೇಶ್ವರಸ್ಥಲದ ಅವಾಂತರಸ್ಥಲಗಳ ಬಗ್ಗೆ ನೀವೆಲ್ಲ ಆಶೀರ್ವಚನವನ್ನು ಆಲಿಸುತ್ತಿದ್ದೀರಿ. ನಿನ್ನೆಯ ದಿನ ಭಾವಾಗಮ ಸ್ಥಲದ ಬಗ್ಗೆ ಕೆಲವೊಂದು ವಿಚಾರಗಳನ್ನು ನಿಮಗೆಲ್ಲ ತಿಳಿಸಲಾಗಿದೆ. ಸದ್ಯಃ ಈ ಭಾವಾಗಮಸ್ಥಲದ ಅವಶಿಷ್ಟ ವಿಷಯಗಳ ಬಗ್ಗೆ ವಿವೇಚಿಸಲಾಗುವದು.

ಈ ಭಾವಾಗಮಸ್ಥಲದಲ್ಲಿ ಭಾವನೆಯ ಅವಶ್ಯಕತೆ ಹಾಗೂ ಅದರ ಮಹತ್ವವನ್ನು ಕುರಿತು ಪೂಜ್ಯಪಾದರು ಉಪದೇಶಿಸುತ್ತಿದ್ದಾರೆ. ಈ ಪೂರ್ವದಲ್ಲಿ ಪರಮಾತ್ಮನ ಬಗ್ಗೆ ಮನಸ್ಸಿನಲ್ಲಿ ಭಾವಿಸಬೇಕಾದಾಗ ಆತನನ್ನು ಸರ್ವತ್ರ ವ್ಯಾಪಕನನ್ನಾಗಿ ಭಾವಿಸುವದಾಗಿ ಉಪದೇಶಿಸಲಾಗಿದೆ. ಪರಮಾತ್ಮನು ಆಕಾಶದಂತೆ ವ್ಯಾಪಕನಾಗಿರೋಣದರಿಂದ ಅವನು ಒಳಗೂ ಹೊರಗೂ ಎಲ್ಲ ಕಡೆ ಇರುವದು ಸಾಧ್ಯವಾಗುತ್ತಿದೆ. ಇಂತಹ ವ್ಯಾಪಕನಾದ ಪರಮಾತ್ಮನನ್ನು ತನ್ನ ಆತ್ಮರೂಪವನ್ನಾಗಿ ಧ್ಯಾನ ಮಾಡಬೇಕು. ಅಂದಾಗಲೇನೇ ಪರಮಾನಂದದ ಪ್ರಾಪ್ತಿಯಾಗುವದು. ಪರಮಾನಂದ ಅಪೇಕ್ಷೆಯು ಎಲ್ಲರಿಗೂ ಇದ್ದರೂ ಯಾರು ಪೂರ್ವದಲ್ಲಿ ಹೇಳಿದಂತೆ ಭಾವನೆಯನ್ನು ದೃಢಪಡಿಸಿಕೊಳ್ಳುವರೋ ಅವರಿಗೇನೆ ಆ ಆನಂದದ ಪ್ರಾಪ್ತಿಯಾಗುವದು. ಕಾರಣ ಪ್ರತಿಯೊಬ್ಬರೂ ಈ ಭಾವನೆಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು.

ಶ್ರೀಜಗದ್ಗುರು ರೇಣುಕ ಭಗವತ್ಪಾದರು ಭಾವನೆಯಿಲ್ಲದೆ ಮಾಡಿದ ಕ್ರಿಯೆಗಳೆಲ್ಲ ವ್ಯರ್ಥವಾಗುತ್ತವೆ ಎಂಬುದನ್ನು ಪ್ರತಿಪಾದಿಸಲೋಸುಗ ಅನೇಕ ಉಪಮೆಗಳ ಮೂಲಕ ಈ ಮುಂದೆ ಪುನಃ–

> ಅರ್ಥಹೀನಾ ಯಥಾ ವಾಣೀ ಪತಿಹೀನಾ ಯಥಾ ಸತೀ ।
> ಶ್ರುತಿಹೀನಾ ಯಥಾ ಬುದ್ಧಿರ್ಭಾವಹೀನಾ ತಥಾ ಕ್ರಿಯಾ ॥

(ಸಿ.ಶಿ.೧೬–೧೯)

ಹೀಗೆ ವಿವರಿಸಿದ್ದಾರೆ. ಅರ್ಥವಿಲ್ಲದ ಶಬ್ದವು, ಪತಿಯನ್ನು ಕಳೆದುಕೊಂಡ ಸತಿಯು, ಶಾಸ್ತ್ರವನ್ನು ಅಭ್ಯಾಸ ಮಾಡದ ಬುದ್ಧಿಯು ಇವು ಹೇಗೆ ನಿಷ್ಪ್ರಯೋಜಕಗಳಾಗುವವೋ ಅದರಂತೆ ಭಾವನೆಯಿಲ್ಲದೆ ಮಾಡಿದ ಎಂತಪ್ಪ ಕ್ರಿಯೆಯೂ ಸಹ ನಿರರ್ಥಕವಾಗುತ್ತದೆ ಎಂಬುದು ಪೂಜ್ಯರ ಅಭೀಯಾಪ್ಸೆಯಾಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಶ್ಲೋಕದಲ್ಲಿ ಮೂರು ಉದಾಹರಣೆಗಳ ಮೂಲಕ ಪ್ರಸ್ತುತವಾದ ವಿಷಯವಸ್ತುವನ್ನು ಸಮರ್ಥಿಸಲಾಗಿದೆ. ಮೊದಲನೆಯ ಉದಾಹರಣೆಯೆಂದರೆ ಅರ್ಥಹೀನವಾದ ವಾಣಿಯು ನಾವು ಯಾವುದೇ ಶಬ್ದಪ್ರಯೋಗವನ್ನು ಮಾಡಿದಾಗ ಅದಕ್ಕೆ ಒಂದಿಲ್ಲೊಂದು ರೀತಿಯ ಅರ್ಥವಿರಬೇಕು. ಅಂದಾಗಲೇನೇ ಆ ವಾಗ್ ವ್ಯವಹಾರಕ್ಕೆ ಮಹತ್ತ್ವ ಬರುತ್ತದೆ. ಹುಚ್ಚನಾದ ವ್ಯಕ್ತಿಯ ಮುಖದಿಂದ ದಿನವಿಡೀ ಶಬ್ದಗಳು ಹೊರಡುತ್ತಿದ್ದರೂ ಅವುಗಳು ಅರ್ಥಹೀನಗಳಾಗಿರೋಣದರಿಂದ ಆ ಶಬ್ದಗಳ ಕಡೆಗೆ ಯಾರೂ ಗಮನಹರಿಸುವದಿಲ್ಲ. ಇದೇ ಪ್ರಕಾರವಾಗಿ ಇಲ್ಲಿ ಬಂದಿರುವ ಎರಡನೇ ಉದಾಹರಣೆಯೆಂದರೆ 'ಪತಿ ಹೀನಾ ಯಥಾ ಸತೀ' ಅಂದರೆ ಪತಿಯಿಲ್ಲದ ಸತಿಯು ಎಂದರ್ಥ. ಸತಿಯು ತನ್ನ ಪತಿಯು ಮಡಿದು ಹೋದಾಗ ಇಲ್ಲವೆ ತನ್ನನ್ನು ಸಂಪೂರ್ಣವಾಗಿ ತ್ಯಜಿಸಿದಾಗ ಅವಳು ಪತಿಹೀನಳೆಂದು ಕರೆಯಿಸಿಕೊಳ್ಳುತ್ತಾಳೆ. ಹೀಗೆ ಪತಿಯಿಲ್ಲದ ಸತಿಯ ಜೀವನವೆಂದರೆ ಅರ್ಧ ಭಗ್ನವಾದ ಜೀವನವಿದ್ದಂತೆ. ಒಂದು ಅಖಂಡವಾದ ವಸ್ತುವನ್ನು ಒಡೆದು ಎರಡು ಭಾಗಗಳನ್ನು ಮಾಡಿದಾಗ ಅವೆರಡೂ ನಿಷ್ಪ್ರಯೋಜಕಗಳಾಗುವಂತೆ ಪತಿಯಿಲ್ಲದ ಸತಿ, ಹಾಗೂ ಸತಿಯಿಲ್ಲದ ಪತಿಯ ಜೀವನವು ಇದೇ ತೆರನಾಗಿ ಆಗುತ್ತದೆ.

ಇದೇ ಪ್ರಕಾರವಾಗಿ ಇಲ್ಲಿ ಹೇಳಿರುವ ಇನ್ನೊಂದು ಉದಾಹರಣೆಯೆಂದರೆ ''ಶ್ರುತಿ ಹೀನಾ ಯಥಾ ಬುದ್ಧಿಃ'' ಅಂದರೆ ವೇದಾಧ್ಯಯನ ಸಂಸ್ಕಾರವಿಲ್ಲದ ಬುದ್ಧಿಯೆಂದರ್ಥ. ಭಗವಂತನು ಕೊಟ್ಟ ಬುದ್ಧಿಗೆ ಸ್ವಾಧ್ಯಾಯದ ಮೂಲಕ ದಿನಾಲೂ ಸಂಸ್ಕಾರವನ್ನು ಕೊಡುತ್ತಿರಬೇಕು. ಹಾಗೆ ಸಂಸ್ಕಾರವನ್ನು ಕೂಡದೇ ಹೋದರೆ ಆ ಬುದ್ಧಿಯು ಅಸಂಸ್ಕೃತವಾಗಿ ಅಧರ್ಮಮಾರ್ಗದತ್ತ ಹರಿದು ಹೋಗುವದು. ಮುಂದೆ ಆ ವ್ಯಕ್ತಿಯ ಜೀವನವೂ ಸಹ ಪತಿತವಾಗಿ ವ್ಯರ್ಥವಾಗುವದು. ಆದಕಾರಣ ನಮ್ಮ ಬುದ್ಧಿಯು ಸುಸಂಸ್ಕಾರದಿಂದ ಕೂಡಿದ್ದರೆ ನಮ್ಮ ಜೀವನವು ಸಫಲವಾಗುವುದು. ಇಲ್ಲವಾದರೆ ವ್ಯರ್ಥವೇ ಸರಿ. ಹೀಗೆ ಅರ್ಥವಿಲ್ಲದ ವಾಣಿ, ಪತಿಯಿಲ್ಲದ ಸತಿ ಮತ್ತು ವೇದಾಧ್ಯಯನ ಸಂಸ್ಕಾರವಿಲ್ಲದ ಬುದ್ಧಿಗಳು ನಿರರ್ಥಕವಾಗಿರುವಂತೆ ಭಾವನಾಶೂನ್ಯವಾದ ವ್ಯಕ್ತಿಯ ಕ್ರಿಯೆಯೂ ಸಹ ನಿರರ್ಥಕವೆಂದೇ ಭಾವಿಸಬೇಕು.

ಈ ಲೋಕದಲ್ಲಿ ಅನೇಕ ಜನರು ಕರ್ಮಗಳನ್ನು ಮಾಡಿಯೂ ಅವುಗಳ ಪ್ರಯೋಜನವನ್ನು ಪಡೆಯದಿರುವದಕ್ಕೆ ಅವರ ಭಾವಹೀನತೆಯೇ ಕಾರಣವು. ಅಂತೆಯೇ–

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ।
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ॥
ಮಾಡುವ ನೀಡುವ ನಿಜಗುಣವುಳ್ಳರೆ।
ಕೂಡಿಕೊಂಬ ನಮ್ಮ ಕೂಡಲಸಂಗಮದೇವ।

ಎಂಬ ಈ ವಚನದಲ್ಲಿ ಶ್ರೀಬಸವಣ್ಣನವರು ಏನೇ ಮಾಡಿದರೂ ಭಾವಪೂರ್ಣವಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಬೇಕೆಂಬುದಾಗಿ ಪ್ರತಿಪಾದಿಸಿದ್ದನ್ನು ಕಾಣುತ್ತೇವೆ. ನಾವು ಏನನ್ನು ಮಾಡುತ್ತೇವೆ ಎಂಬುವದು ಮುಖ್ಯವಲ್ಲ ಯಾವ ಭಾವನೆಯಿಂದ ಮಾಡುತ್ತೇವೆಯೆಂಬುದು ಬಹು ಮುಖ್ಯವಾದುದು. ಅನೇಕ ಜನರು ದಾನಾದಿಗಳನ್ನು ಮಾಡಿಯೂ ಪಾಪಭಾಜನ ರಾಗುತ್ತಾರೆ. ಕಾರಣ ಆ ಸಮಯದಲ್ಲಿ ಅವರಲ್ಲಿ ಉದಿಸಿರುವ ದುರ್ಭಾವನೆಯೆಂದೇ ತಿಳಿದುಕೊಳ್ಳಬೇಕು. ಭಾವನೆಯು ಚೆನ್ನಾಗಿ ಇದ್ದಾಗ ಮುಖದಿಂದ ಹೊರಡುವ ಭಾಷೆಯೂ ಸಹ ಮಧುರವೂ ಪ್ರಿಯಕರವೂ ಆಗಿರುತ್ತದೆ. ಭಾವ ಕೆಟ್ಟಿತೆಂದರೆ ಭಾಷೆಯೂ ಸಹ ಅಪ್ರಿಯ ಹಾಗೂ ಅಶ್ಲೀಲರೂಪವನ್ನು ತಾಳುತ್ತದೆ. ಮನೆಯ ಮುಂದೆ ಭಿಕ್ಷುಕನೋರ್ವನು ಭಿಕ್ಷೆಗೆ ಬಂದಾಗ ಅವನಿಗೆ ಅಸಹ್ಯ ಶಬ್ದಗಳನ್ನು ಪ್ರಯೋಗಿಸಿ ಅಪಮಾನಗೊಳಿಸಿ ತಿರಸ್ಕಾರಭಾವನೆಯಿಂದ ''ಇಗೋ ಇದನ್ನು ತೆಗೆದುಕೊಂಡು ಹಾಳಾಗಿ ಹೋಗು'' ಎಂಬುದಾಗಿ ಗೊಣಗುಡುತ್ತ ಅನ್ನದಾನಾದಿಗಳನ್ನು ಮಾಡಿದರೆ ಅದರಿಂದ ಪುಣ್ಯದ ಬದಲು ಪಾಪವೇ ಲಭಿಸುವುದು. ಅಂತೆಯೇ ಶಾಸ್ತ್ರಕಾರರು ''ದಾನಂ ಪ್ರಿಯಾ ವಾಕ್‌ಸಹಿತಮ್'' ಎಂಬುದಾಗಿ ಉಪದೇಶಿಸಿದ್ದಾರೆ. ತಾನು ದಾನ–ಧರ್ಮಾದಿಗಳನ್ನು ಮಾಡುವಾಗ ಪ್ರೀತಿಯ ಶಬ್ದಗಳನ್ನು ಪ್ರಯೋಗಿಸಿ ಆದರದಿಂದ ದಾನ ಮಾಡಬೇಕೆಂಬುದಾಗಿ ಹೇಳಲಾಗಿದೆ. ಹೀಗೆ ನಾವು ಮಾಡುವ ಪ್ರತಿಯೊಂದು ಕ್ರಿಯೆಯು ಭಾವಪೂರ್ಣವಾಗಿದ್ದಾಗಲೇ ಅದು ಒಳ್ಳೆಯ ಫಲವನ್ನು ಕೊಡುವದೆಂಬುದಾಗಿ ತಿಳಿದುಕೊಳ್ಳಬೇಕು. ಆದುದರಿಂದಲೇ ಪೂಜ್ಯರು ಕ್ರಿಯೆಗೆ ಭಾವನೆಯು ಬಹುಮುಖ್ಯವೆಂಬುದನ್ನು ಮೂರು ಉದಾಹರಣೆಗಳ ಮೂಲಕ ಸಮರ್ಥಿಸಿದ್ದನ್ನು ಇಲ್ಲಿ ಕಾಣುತ್ತೇವೆ.

ಶ್ರೀಜಗದ್ಗುರು ರೇಣುಕ ಭಗವತ್ಪಾದರು ಇನ್ನು ಮುಂದೆ ಭಾವಹೀನವಾದ ವ್ಯಕ್ತಿಯು ಶಿವನನ್ನು ಕಾಣಲು ಸಮರ್ಥನಾಗುವದಿಲ್ಲ ಎಂಬುದನ್ನು ಬೇರೊಂದು ಉದಾಹರಣೆಯ ಮೂಲಕ ಸಮರ್ಥಿಸಲೋಸುಗ ಪುನಃ–

ಚಕ್ಷುರ್ಹೀನೋ ಯಥಾ ರೂಪಂ ನ ಕಿಂಚಿದ್ವೀಕ್ಷಿತುಂಕ್ಷಮಃ।
ಭಾವಹೀನಸ್ತಥಾ ಯೋಗೀ ನ ಶಿವಂ ದ್ರಷ್ಟುಮೀಶ್ವರಃ॥

(ಸಿ.ಶಿ. ೧೬–೨೦)

ಈ ತೆರನಾಗಿ ಉಪದೇಶಿಸಿದ್ದಾರೆ. ಕಣ್ಣಿಲ್ಲದ ಮನುಷ್ಯನು ರೂಪವನ್ನು ನೋಡಲು ಅಸಮರ್ಥನಾಗಿರುವಂತೆ ಭಾವಹೀನನಾದ ಯೋಗಿಯು ಶಿವನನ್ನು ನೋಡಲು ಸಮರ್ಥನಾಗಲಾರನು ಎಂಬುದು ಪೂಜ್ಯರ ಆಶಯವಾಗಿದೆ.

ಇಲ್ಲಿ ಬಹುಸುಂದರವಾದ ಹಾಗೂ ಸಮರ್ಥವಾದ, ಉಪಮೆಯನ್ನು ಕೊಟ್ಟು ಪೂಜ್ಯರು ತಮ್ಮ ಆಶಯವನ್ನು ವ್ಯಕ್ತಗೊಳಿಸಿದ್ದಾರೆ. ಬಹಿರಂಗದ ವಸ್ತುಗಳನ್ನು ನೋಡಬೇಕಾದರೆ ಕಣ್ಣುಗಳು ಬೇಕೇ ಬೇಕು. ಅವಿಲ್ಲದೆ ಯಾರೂ ರೂಪವನ್ನು ನೋಡಲು ಸಮರ್ಥರಾಗರು. ಕುರುಡನಾದ ವ್ಯಕ್ತಿಯು ತನಗೆ ಏನು ಕಾಣದ ಕಾರಣದಿಂದಾಗಿ ಅನ್ಯರ ಹಸ್ತವನ್ನು ಹಿಡಿದುಕೊಂಡು ಅವರ ಹಿಂದೆ ಹಿಂದೆ ಹಿಂಬಾಲಿಸುತ್ತಿರುತ್ತಾನೆ. ಆತನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವತಂತ್ರವಾಗಿ ಹೋಗುವ ಬರುವ ಯೋಗ್ಯತೆಯನ್ನು ಕಳೆದುಕೊಂಡಿರುತ್ತಾನೆ. ಅದರಂತೆಯೇ ಭಾವಶೂನ್ಯನಾದ ಮನುಷ್ಯನು ಪರಮಾತ್ಮನನ್ನು ಸಾಕ್ಷಾತ್ಕರಿಸಿ ಕೊಳ್ಳಲಾರನು. ದೇವನನ್ನು ಕಾಣಲು ಭಾವಮಯ ದೃಷ್ಟಿಯ ಅವಶ್ಯಕತೆಯಿದೆ. ಅದಿಲ್ಲದೆ ಹೋದರೆ ಅವನಿಗೆ ಯಾವ ಅನುಭವವೂ ಆಗಲು ಸಾಧ್ಯವಾಗುವದಿಲ್ಲ. ಅಂತೆಯೇ ಪೂಜ್ಯರು 'ಭಾವನಾ ವಿಹಿತಂ ಕರ್ಮಪಾಪಾನಾದಪಿ ಪಾವನಮ್' ಎಂಬುದಾಗಿ ತಿಳಿಸಿ ಭಾವನೆಯಿಂದ ಮಾಡಿದ ಕರ್ಮವೇ ಪರಮಪಾವನ ವೆಂದು ಸಮರ್ಥಿಸಿದ್ದಾರೆ.

ಪರಮೇಶ್ವರನನ್ನು ಪೂಜಿಸಬೇಕಾದರೆ ಭಾವನೆಯೇ ಮುಖ್ಯ ಎಂಬುದನ್ನು ಪೂಜ್ಯಪಾದರು ಪುನಃ–

ಭಾವಶುದ್ಧೇನ ಮನಸಾ ಪೂಜಯೇತ್ ಪರಮೇಷ್ಠಿನಮ್ ।
ಭಾವಹೀನಾಂ ನ ಗೃಹ್ಣಾತಿ ಪೂಜಾಂ ಸುಮಹತೀಮಪಿ ॥

(ಸಿ. ಶಿ.೧೬–೨೧)

ಈ ವಿಧವಾಗಿ ಉಪದೇಶಿಸಿದ್ದಾರೆ. ಪರಮೇಶ್ವರನನ್ನು ಪೂಜಿಸುವಾಗ ಪರಿಶುದ್ಧವಾದ ಮನಸ್ಸನ್ನು ಹೊಂದಿರಬೇಕು ಅರ್ಥಾತ್ ಪರಿಶುದ್ಧವಾದ ಮನಸ್ಸಿನಿಂದಲೇ ಶಿವನನ್ನು ಪೂಜಿಸಬೇಕು. ಹಿಗೆ ಪರಿಶುದ್ಧ ಭಾವನೆಯಿಲ್ಲದ ಪೂಜೆಯು ಅದೆಷ್ಟೇ ದೊಡ್ಡದಿದ್ದರೂ ಶಿವನು ಆ ಪೂಜೆಯನ್ನು ಸ್ವೀಕರಿಸುವದಿಲ್ಲ ಎಂಬುದು ಪೂಜ್ಯರ ಅಭಿಪ್ರಾಯವಾಗಿದೆ.

ಸಾಮಾನ್ಯವಾಗಿ ಶಿವಪೂಜೆಯನ್ನು ಮಾಡಬೇಕಾದರೆ ಶುಚಿರ್ಭೂತನಾಗಿ ಮಾಡಬೇಕೆಂಬುದು ಒಂದು ಸಾಮಾನ್ಯವಾದ ನಿಯಮವು. ಮಂಗಲಸ್ನಾನವನ್ನುಮಾಡಿ ಶುಚಿಯಾದ ಬಟ್ಟೆಗಳನ್ನು ಧರಿಸಿಕೊಂಡು ಶುದ್ಧವಾಗುವದು ಬಹಿರಂಗ ಶುದ್ಧಿಯಾದರೆ ಮನಸ್ಸನ್ನು ಪವಿತ್ರವಾಗಿಟ್ಟುಕೊಳ್ಳುವದು. ಅಂತರಂಗದ ಶುದ್ಧಿಯೆಂದು ಕರೆಯಲ್ಪ ಡುವದು. ಶಿವಪೂಜೆಗೆ ಬಹಿರಂಗಶುದ್ಧಿಯಂತೂ ಬೇಕೇ ಬೇಕು. ಅದರ ಜೊತೆಗೆ ಅಂತರಂಗವೂ ಸಹ ಪರಿಶುದ್ಧವಾಗಿದ್ದರೆ ಆ ಪರಿಶುದ್ಧವಾದ ಅಂತಃಕರಣವುಳ್ಳವರ ಪೂಜಾಕೈಂಕರ್ಯವನ್ನು ಶಿವನು ಸ್ವೀಕರಿಸುತ್ತಾನೆ. ಹೀಗೆ ಭಾವಶುದ್ಧವಿಲ್ಲದ ವ್ಯಕ್ತಿಯು ಅದೆಷ್ಟೇ ಮಹಾಪೂಜೆಯನ್ನು ಮಾಡಿದರೂ ಅದನ್ನು ಶಿವನು ಸ್ವೀಕರಿಸಲಾರನು. ಶಿವನಿಗೆ ಬಹಿರಂಗದ ಆಡಂಬರ ಹಾಗೂ ಬಾಹ್ಯಶುದ್ಧಿಗಿಂತ ಅಂತರಂಗಶುದ್ಧಿಯು ಹೆಚ್ಚು ಪ್ರಿಯಕರವಾದುದು. ಪೂಜಾ ಸಮಯದಲ್ಲಿ ಶಿವನಿಗೆ ಅರ್ಪಿಸುತ್ತಿರುವ ಗಂಗಾಜಲ, ಪತ್ರಿಪುಷ್ಪಗಳು ಹಾಗೂ ಫಲ–ತಾಂಬೂಲಾದಿಗಳು ಅವನ ಸೃಷ್ಟಿಯಲ್ಲಿಯೇ ನಿರ್ಮಿತಗಳಾದ ಪದಾರ್ಥಗಳು. ಪೂಜಾ ಸಮಯದಲ್ಲಿ ಅವನ ಪದಾರ್ಥಗಳನ್ನೇ ಅವನಿಗರ್ಪಿಸುತ್ತಿರುತ್ತೇವೆ. ಅಲ್ಲಿನಮ್ಮದೆನ್ನುವದೇನೂ ಇರುವದಿಲ್ಲ. ಅಲ್ಲಿನಮ್ಮದಾದ ಪರಿಶುದ್ಧವಾದ ಭಾವನೆಯೊಂದನ್ನು ಆ ವಸ್ತುಗಳ ಜೊತೆಗೆ ಬೆರೆಸಿ ಸಮರ್ಪಿಸಿದಾಗ ಶಿವನು ಸಂತುಷ್ಟನಾಗಿ ಅನುಗ್ರಹಿಸುತ್ತಾನೆ. ಆದ್ದರಿಂದ ಶಿವನ ಬಾಹ್ಯಪೂಜೆಯಲ್ಲಿ ಶುದ್ಧವಾದ ಭಾವನೆಯು ಪರಮಾವಶ್ಯಕವೆಂಬುದು ತಿಳಿದು ಬರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜ್ಯಪಾದರು ಭಾವನೆಯ ಮಹತ್ತ್ವವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತ ಕೀಟ–ಭ್ರಮರನ್ಯಾಯವನ್ನು ಉದಾಹರಿಸುತ್ತ ಪುನಃ–

ನೈರಂತರ್ಯೇಣ ಸಂಪನ್ನೇಭಾವೇ ಧ್ಯಾತುಂ ಶಿವಂ ಪ್ರತಿ।
ತದ್ಭಾವೋ ಜಾಯತೇ ಯದ್ವತ್ ಕ್ರಿಯೇಃ ಕೀಟಸ್ಯ ಚಿಂತನಾತ್॥

(ಸಿ.ಶಿ. ೧೬–೨೨)

ಈ ರೀತಿಯಾಗಿ ಉಪದೇಶಿಸಿದ್ದಾರೆ. ಕ್ರಿಮಿಯು ನಿರಂತರವಾಗಿ ಭ್ರಮರದ ಚಿಂತನೆಯನ್ನು ಮಾಡುತ್ತ ಕೊನೆಗೆ ಭ್ರಮರವೇ ಆಗುವಂತೆ ಶಿವನನ್ನು ನಿರಂತರವಾಗಿ ಧ್ಯಾನಿಸುವ ಶಿವಯೋಗಿಯೂ ಸಹ ಶಿವಸ್ವರೂಪನೇ ಆಗುತ್ತಾನೆ ಎಂಬುವದು ಪೂಜ್ಯರ ಆಶಯವಾಗಿದೆ.

ಭಾವನೆಯಿಂದ ಏನೆಲ್ಲವೂ ಸಾಧ್ಯವೆಂಬುದಕ್ಕೆ ಪೂಜ್ಯಪಾದರು ಕೀಟ–ಭ್ರಮರದ ನ್ಯಾಯವನ್ನು ಉದಾಹರಿಸಿದ್ದಾರೆ. ಒಂದು ಸಾಮಾನ್ಯವಾದ ಕೀಟವು ಭ್ರಮರದ ಚಿಂತನೆಯನ್ನು ಮಾಡುತ್ತ ಮಾಡುತ್ತ ಕೊನೆಗೆ ಭ್ರಮರವೇ ಆಗುತ್ತದೆ. ಆ ಚಿಂತನೆಯ ಸಾಮರ್ಥ್ಯವು ಇದರ ದೇಹದ ರಚನೆಯನ್ನೇ ಪರಿವರ್ತಿಸಿ ಕೀಟರೂಪವನ್ನು ಕಳೆದು ಭ್ರಮರ ರೂಪವನ್ನು ತಂದುಕೊಡುತ್ತದೆ. ಇದೇ ಪ್ರಕಾರವಾಗಿ ಜೀವಾತ್ಮನು ನಿರಂತರವಾಗಿ ಪರಮಾತ್ಮನ ಚಿಂತನೆಯನ್ನು ಮಾಡುತ್ತಿದ್ದರೆ ಆ ಶಿವಚಿಂತನೆಯ ಸಾಮರ್ಥ್ಯದಿಂದ ಜೀವನೂ ಸಹ ಶಿವನೇ ಆಗುತ್ತಾನೆ. ಪ್ರಪಂಚದ ಚಿಂತೆಯನ್ನು ಮಾಡಿ ಚಿಂತಾರೂಪವಾದ ಚಿತಾಗ್ನಿಯಲ್ಲಿ ದಹಿಸಿ ಹೋಗುವದಕ್ಕಿಂತ ಶಿವಚಿಂತನೆಯನ್ನು ಮಾಡಿ ಶಿವಸ್ವರೂಪವನ್ನು ಪಡೆದು ಪರಮಾನಂದವನ್ನು ಹೊಂದುವದೇ ಜೀವನದ ಮುಖ್ಯ ಲಕ್ಷಣವಾಗಿರಬೇಕು.

ನಿಷ್ಕಲನೂ ನಿರಾಕಾರನೂ ಆದ ಪರಶಿವನನ್ನು ಚಿಂತಿಸುವ ಸಾಮರ್ಥ್ಯವಿರದಿದ್ದರೆ ಏನು ಮಾಡಬೇಕು? ಎಂಬ ಪ್ರಶ್ನೆ ಉದ್ಭವಿಸಿದಾಗ ಪೂಜ್ಯಪಾದರು ಆದಕ್ಕೆ ಸೂಕ್ತವಾದ ಪರಿಹಾರವನ್ನು ಹುಡುಕಿ ಪುನಃ–

ನಿಷ್ಕಲಂಕಂ ನಿರಾಕಾರಂ ಪರಬ್ರಹ್ಮಶಿವಾಭಿದಮ್।
ನಿರ್ಧ್ಯಾತುಮಸಮರ್ಥೋಽಪಿ ತದ್ವಿಭೂತಿಂ ವಿಭಾವಯೇತ್॥

(ಸಿ.ಶಿ. ೧೬–೨೩)

ಈ ವಿಧವಾಗಿ ಉಪದೇಶಿಸಿದ್ದಾರೆ. ಭಗವಂತನ ಚಿಂತನೆಯನ್ನು ಮಾಡುವದು ಯೋಗ್ಯವಾಗಿದ್ದರೂ ಅವನು ನಿಷ್ಕಲಂಕನೂ ಮತ್ತು ನಿರಾಕಾರನೂ ಆಗಿರುವದರಿಂದ ಅವನ ಧ್ಯಾನವನ್ನೂ ಮಾಡುವದು ಸಾಧ್ಯವಿಲ್ಲದೇಯಿದ್ದಾಗ ಅವನ ಐಶ್ವರ್ಯಗಳಾದ ಸರ್ವಜ್ಞತ್ವ, ನಿತ್ಯತೃಪ್ತತ್ವ ಮುಂತಾದ ಅವನ ಅಲೌಕಿಕ ಗುಣಗಳನ್ನು ಧ್ಯಾನಿಸಬೇಕು. ಎಂಬುದು ಆಚಾರ್ಯರ ಆಶಯವಾಗಿದೆ.

ಶಿವನು ನಿರ್ಗುಣ ನಿರಾಕಾರನಾಗಿರುವಂತೆ ಸಗುಣ–ಸಾಕಾರನೂ ಸಹ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗಿರುತ್ತಾನೆ. ಯಾರಿಗೆ ನಿಷ್ಕಲ ಸ್ವರೂಪದ ಧ್ಯಾನವನ್ನು ಮಾಡುವ ಸಾಮರ್ಥ್ಯವಿದೆಯೋ ಅವರು ನೇರವಾಗಿ ಆ ಸ್ವರೂಪದ ಚಿಂತನೆಯನ್ನು ಮಾಡುಬಹುದು. ಇನ್ನು ಯಾರಿಗೆ ಆ ಸೂಕ್ಷ್ಮ ಸ್ವರೂಪದ ಚಿಂತನೆಯನ್ನು ಮಾಡುವ ಸಾಮರ್ಥ್ಯವಿರುವದಿಲ್ಲವೋ ಅವರು ಶಿವನ ಐಶ್ವರ್ಯಯುಕ್ತವಾದ ಸಗುಣಸ್ವರೂಪವನ್ನು ಧ್ಯಾನಿಸಬಹುದು. ಅವನ ಐಶ್ವರ್ಯದ ಚಿಂತನೆಯೂ ಸಹ ಕೊನೆಗೆ ಶಿವಸ್ವರೂಪವನ್ನೇ ಪ್ರಾಪ್ತಿಮಾಡಿಕೊಡುವದು.

ಈ ಭಾವಾಗಮ ಸ್ಥಲದಲ್ಲಿ ಪೂಜ್ಯಪಾದರು ಭಾವನೆಯ ಲಕ್ಷಣ, ಅದರ ಮಹತ್ತ್ವ ಹಾಗೂ ಅದರ ಉಪಯೋಗಾದಿಗಳ ಬಗ್ಗೆ ಬಹು ವಿಸ್ತಾರವಾಗಿ ಪ್ರತಿಪಾದಿಸಿದ್ದನ್ನು ನೀವೆಲ್ಲ ಕೇಳಿದ್ದೀರಿ. ಯಾವದೇ ಕ್ರಿಯಾದಿಗಳನ್ನು ಮಾಡುವಾಗ ಅದರ ಜೊತೆಗೆ ಆ ವ್ಯಕ್ತಿಯ ಪರಿಶುದ್ಧವಾದ ಭಾವನೆಯು ಕೂಡಿಕೊಂಡರೆ ಅದು ಹೆಚ್ಚು ಹಾಗೂ ಶೀಘ್ರ ಫಲಕಾರಿಯಾಗುವದೆಂಬುದು ತಿಳಿದುಬಂದಿದೆ. ಕಾರಣ ಪ್ರತಿಯೊಬ್ಬರೂ ತಮ್ಮ ತಮ್ಮ ವ್ಯವಹಾರವನ್ನು ಭಾವಪೂರ್ಣವಾಗಿ ನೆರವೇರಿಸಬೇಕೆಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ॥೩೧ ಜುಲೈ ೯೫೩

(ಜ್ಞಾನಮಂದಿರ, ಜಂಗಮವಾಡಿಮಠ, ವಾರಾಣಾಸಿ.)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಾಗಮಸ್ಥಲ-೧

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಶ್ರೀಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಶ್ರೀಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಆಗಸ್ತ್ಯಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವರನ್ನು ಕುರಿತು ಉಪದೇಶ ಮಾಡಿದ ದಿವ್ಯ ಗ್ರಂಥವೇ ಶ್ರೀಸಿದ್ಧಾಂತ ಶಿಖಾಮಣಿಯು. ಈ ಗ್ರಂಥದ ಲಿಂಗಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನಗಳನ್ನು ನೀವೆಲ್ಲ ಆಲಿಸುತ್ತಿದ್ದೀರಿ. ನಿನ್ನೆಯ ದಿನ ಭಾವಾಗಮ ಸ್ಥಲದ ಬಗ್ಗೆ ನೀವೆಲ್ಲ ಸಾಕಷ್ಟು ತಿಳಿದುಕೊಂಡಿದ್ದೀರಿ ಸದ್ಯಃ ಕ್ರಮಪ್ರಾಪ್ತವಾದ ಜ್ಞಾನಾಗಮ ಸ್ಥಲದ ಬಗ್ಗೆ ವಿವೇಚಿಸೋಣ.

ಕರ್ಮ, ಭಾವ ಮತ್ತು ಜ್ಞಾನಗಳು ಭಗವತ್ ಪ್ರಾಪ್ತಿಯ ಮೂರು ಸಾಧನ ಗಳಾಗಿರುತ್ತವೆ. ಇವುಗಳಲ್ಲಿ ಭಾವನೆಯು ಉಭಯಾನ್ವಯೀಯಾಗಿರುವಂಥದ್ದು. ಅಂದರೆ ಕರ್ಮವನ್ನು ಮಾಡುವಾಗಲೂ ಭಾವನೆಯು ಬೇಕು ಹಾಗೂ ಜ್ಞಾನವನ್ನು ಸಂಪಾದಿಸುವಾಗಲೂ ಸಹ ಭಾವನೆಯು ಬೇಕೆ ಬೇಕು. ಈ ಭಾವನೆಯು ಕರ್ಮದೊಂದಿಗೆ ಕೂಡಿದಾಗ ಭಕ್ತಿ ಅಥವಾ ಶ್ರದ್ಧೆಯೆಂದು ಕರೆಯಿಸಿಗೊಂಡರೆ ಅದು ಜ್ಞಾನದ ಜೊತೆಗೆ ಕೂಡಿದಾಗ ನಿಧಿಧ್ಯಾಸನವೆಂದು ಕರೆಯಲ್ಪಡುವದು. ಹೀಗೆ ಕರ್ಮ–ಜ್ಞಾನಗಳೆರಡಕ್ಕೂ ಇದು ಬೇಕಾಗಿರೋಣದರಿಂದ ಪೂಜ್ಯಪಾದರು ಕ್ರಿಯಾಗಮ ಹಾಗೂ ಜ್ಞಾನಾಗಮ ಸ್ಥಲಗಳ ಮಧ್ಯದಲ್ಲಿ ಭಾವಾಗಮ ಸ್ಥಲವನ್ನು ಪ್ರತಿಪಾದಿಸಿದ್ದಾರೆ.

ಈ ಪೂರ್ವದಲ್ಲಿ ಪ್ರತಿಪಾದಿಸಲ್ಪಟ್ಟ ಭಾವಾಗಮಸ್ಥಲದ ಶಿವಯೋಗಿಯಲ್ಲಿ ಕಂಡುಬರುವ ಜ್ಞಾನದ ಲಕ್ಷಣಗಳನ್ನು ಪ್ರತಿಪಾದಿಸುವ ಸ್ಥಲವೇ ಜ್ಞಾನಾಗಮ ಸ್ಥಲವೆಂದು ತಿಳಿಸಲೋಸುಗ ಪೂಜ್ಯಪಾದರು ಜ್ಞಾನಾಗಮ ಥಲದ ಬಗೆಗೆ–

ಪರಸ್ಯ ಜ್ಞಾನಚಿಹ್ನಾನಿ ಯಾನಿ ಸಂತಿ ಶರೀರಣಾಮ್ ।
ತಾನಿ ಜ್ಞಾನಾಗಮತ್ವೇನ ಪ್ರವರ್ತಂತೇ ವಿಮುಕ್ತಯೇ ॥

(ಸಿ.ಶಿ. ೧೬–೨೪)

ಹೀಗೆ ವಿವರಿಸಿದ್ದಾರೆ. ಪೂರ್ವೋಕ್ತದ ಭಾವಾಗಮಸ್ಥಲದ ಶಿವಯೋಗಿಯಲ್ಲಿ ಕಂಡು ಬರುವ ಜ್ಞಾನದ ಚಿಹ್ನೆಗಳ ಬಗ್ಗೆ ಈ ಸ್ಥಲದಲ್ಲಿ ವಿಶೇಷವಾಗಿ ಪ್ರತಿಪಾದನೆ ಮಾಡಿರೋಣದರಿಂದ ಇದಕ್ಕೆ ಜ್ಞಾನಾಗಮಸ್ಥಲವೆನ್ನುವರು.

''ಯಥೇಹ ಕರ್ಮಚಿತೋ ಲೋಕ : ಕ್ಷೀಯತೇ ಏವಮೇವಾಮುತ್ರ ಪುಣ್ಯ ಚಿತೋ ಲೋಕಃ ಕ್ಷೀಯತೇ, ''ಜ್ಞಾತ್ವಾದೇವಂ ಮೃತ್ಯು ಪಾಶಾನ್ ಛಿನತ್ತಿ'' ಎಂಬ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೃತಿವಾಕ್ಯಾನುಸಾರವಾಗಿ ಕರ್ಮದಿಂದ ಸಂಪಾದಿಸಲ್ಪಟ್ಟಿದ್ದೆಲ್ಲವೂ ಕ್ಷಯಿಸಿ ಹೋಗುತ್ತದೆ. ಅದು ಇಹಲೋಕದ್ದೇ ಇರಬಹುದು ಅಥವಾ ಪರಲೋಕದ್ದೇ ಇರಬಹುದು. ಆದರೆ ಪರಮಾತ್ಮನನ್ನು ತಿಳಿದುಕೊಂಡಾಗ ಮೃತ್ಯುಪಾಶಗಳನ್ನು ಕತ್ತರಿಸಿ ಹಾಕಬಹುದು. ಇದರಿಂದ ಕರ್ಮಕ್ಕಿಂತಲೂ ಜ್ಞಾನವು ಶ್ರೇಷ್ಠವೆಂಬುದು ತಿಳಿದುಬರುತ್ತದೆ. ಆದ್ದರಿಂದ ಕೇವಲ ಕರ್ಮವಾಗಲಿ ಅಥವಾ ಕೇವಲ ಭಾವನೆಯಾಗಲಿ ಮನುಷ್ಯನಿಗೆ ಸದ್ಗತಿಯನ್ನು ಕೊಡಲು ಸಮರ್ಥಗಳಾಗಲಾರವು. ಆದ್ದರಿಂದ ಭಾವ ಹಾಗೂ ಕರ್ಮಗಳ ಜೊತೆಗೆ ಜ್ಞಾನವನ್ನೂ ಸಹ ಪಡೆಯುವದು ಅತ್ಯಾವಶ್ಯಕವಾದುದು ಎಂಬುದನ್ನು ಪ್ರತಿಪಾದಿಸಲೋಸುಗ ಪೂಜ್ಯಪಾದರು ಪುನಃ–

ಭಾವೇನ ಕಿಂ ಫಲಂ ಪುಂಸಾಂ ಕರ್ಮಣಾ ವಾ ಕಿಮಿಷ್ಯತೇ।
ಭಾವ ಕರ್ಮಸಮಾಯುಕ್ತಂ ಜ್ಞಾನಮೇವ ವಿಮುಕ್ತಿದಮ್ ॥
ಕೇವಲಂ ಕರ್ಮಮಾತ್ರೇಣ ಜನ್ಮಕೋಟಿ ಶತೈರಪಿ।
ನಾತ್ಮನಾಂ ಜಾಯತೇ ಯುಕ್ತಿರ್ಜ್ಞಾನಂ ಮುಕ್ತೇರ್ಹಿಕಾರಣಮ್॥
ಜ್ಞಾನ ಹೀನಂ ಸದಾಕರ್ಮ ಪುಂ ಸಾಂ ಸಂಸಾರಕಾರಣಮ್ ।
ತದೇವ ಜ್ಞಾನಯೋಗೇನ ಸಂಸಾರವಿನಿವರ್ತಕಮ್ ॥

(ಸಿ. ಶಿ.೧೬, ೨೫–೨೭)

ಈ ತೆರನಾಗಿ ಉಪದೇಶಿಸಿದ್ದಾರೆ. ತಾತ್ಪರ್ಯವೇನೆಂದರೆ ಕೇವಲ ಕರ್ಮದಿಂದ ಇಲ್ಲವೆ ಕೇವಲ ಭಾವನೆಯಿಂದ ಮುಕ್ತಿಯು ದೊರೆಯಲಾರದು. ಆದರೆ ಭಾವ–ಕರ್ಮಗಳಿಂದ ಕೂಡಿದ ಜ್ಞಾನವೇ ಮುಕ್ತಿಯನ್ನು ಕೊಡಲು ಸಮರ್ಥವಾಗುವದು.

ಕರ್ಮದಿಂದಲೇ ಮುಕ್ತಿಯನ್ನು ಪಡೆಯಲು ಪ್ರಯತ್ನಿಸಿ ಒಂದು ನೂರು ಕೋಟಿ ಜನ್ಮಗಳನ್ನು ಕಳೆದರೂ ಅದು ದೊರೆಯುವದಿಲ್ಲ. ಮುಕ್ತಿಗೆ ಅಮೋಘವಾದ ಸಾಧನವೆಂದರೆ ಜ್ಞಾನವೇ. ಜ್ಞಾನಹೀನನಾದ ವ್ಯಕ್ತಿಯು ಮಾಡಿದ ಕರ್ಮಗಳು ಅವನನ್ನು ಈ ಸಂಸಾರದಲ್ಲಿ ಕಟ್ಟಿಹಾಕುತ್ತವೆ. ಆದರೆ ಅವೇ ಕರ್ಮಗಳೇ ಜ್ಞಾನಿಯಿಂದ ಆಚರಿಸಲ್ಪಟ್ಟರೆ ಜ್ಞಾನದ ಸಂಬಂಧದಿಂದ ಅವುಗಳೇ ಮುಕ್ತಿಯ ಸಾಧನಗಳಾಗುತ್ತವೆ. ಕಾರಣ ಕೇವಲ ಕರ್ಮವನ್ನಾಗಲಿ ಕೇವಲ ಭಾವನೆಯನ್ನಾಗಲಿ ತಳೆಯದೆ ಭಾವ–ಕರ್ಮಗಳೆರಡನ್ನೂ ಕೂಡಿಸಿಗೊಂಡು ಜ್ಞಾನದ ಸಹಾಯದಿಂದ ಮುಕ್ತಿಯನ್ನು ಪಡೆಯಬೇಕೆಂಬುದಾಗಿ ಪೂಜ್ಯರು ಇಲ್ಲಿ ಆದೇಶಿಸಿದ್ದಾರೆ.

ಪೂಜ್ಯರ ಈ ಉಪದೇಶದಲ್ಲಿ ಜ್ಞಾನ, ಕರ್ಮ ಹಾಗೂ ಭಾವನೆಗಳ ಒಂದು ಸುಂದರವಾದ ತ್ರಿವೇಣಿಸಂಗಮವು ನಿರೂಪಿತವಾಗಿದೆ. ಈ ಸಂಗಮದಲ್ಲಿ ಮಿಂದವರೆಲ್ಲರೂ ಅವಶ್ಯವಾಗಿ ಮುಕ್ತರಾಗುತ್ತಾರೆ. ಭಾವವಿಲ್ಲದ ಕರ್ಮ ಹಾಗೂ ನಿದಿಧ್ಯಾಸನವಿಲ್ಲದ ಜ್ಞಾನ ಇವೆರಡೂ ನಿಷ್ಪ್ರಯೋಜಕಗಳಾಗಿರುತ್ತವೆ. ಈ ಕರ್ಮ–ಜ್ಞಾನಗಳೆರಡನ್ನೂ ಸಫಲಗೊಳಿಸುವಂಥದ್ದು ಭಾವನೆಯೆಂಬುದಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಳಿದುಕೊಳ್ಳಬೇಕು. ಹೀಗೆ ಕರ್ಮ, ಭಾವ ಮತ್ತು ಅಜ್ಞಾನಗಳು ಒಂದೆಡೆ ಸೇರಿದಾಗ ಮುಪ್ಪುರಿಯಾದ ಹಗ್ಗವು ಅತಿ ಸಬಲವಾಗಿರುವಂತೆ ಇವು ಮೂರು ಒಂದೆಡೆ ಸೇರಿ ಸಾಧಕನಿಗೆ ಮುಕ್ತಿಯನ್ನು ದೊರಕಿಸಿಕೊಡುವದರಲ್ಲಿ ಸಮರ್ಥಶಾಲಿಗಳಾಗುತ್ತವೆ.

ಇನ್ನು ಕೇವಲ ಕರ್ಮವಾದಿಯಾದವರು ಕರ್ಮವೊಂದರಿಂದಲೇ ನಾವು ಮುಕ್ತಿಯನ್ನು ಪಡೆಯಬಲ್ಲೆವು ಎಂಬ ಅಭಿಮಾನವನ್ನು ತಾಳಿದ್ದರೆ ಅದು ಅವರ ವ್ಯರ್ಥವಾದ ಅಭಿಮಾನವೆಂದೇ ಹೇಳಬಹುದು. ಏಕೆಂದರೆ ಕೇವಲ ಕರ್ಮವನ್ನೇ ಮಾಡುತ್ತ ನೂರು ಕೋಟಿ ಜನ್ಮಗಳನ್ನು ತಳೆದರೂ ಸಹ ಅದು ಪ್ರಯೋಜನಾ ಕಾರಿಯಾಗುವದಿಲ್ಲ, ಯಾಕೆಂದರೆ ಕರ್ಮಚಕ್ರವು ಬಹು ವಿಚಿತ್ರವಾದುದು. ಕರ್ಮಗಳು ಸಂಚಿತ, ಪ್ರಾರಬ್ಧ ಮತ್ತು ಆಗಾಮಿ ಎಂಬುದಾಗಿ ಮೂರು ಪ್ರಕಾರವಾಗಿರುತ್ತವೆ. ಈ ಮೂರು ಕರ್ಮಗಳು ಪರಸ್ಪರ ಸಂಬಂಧಿಯಾಗಿರುತ್ತವೆ. ಜನ್ಮ ಜನ್ಮಾಂತರಗಳಲ್ಲಿ ಸಂಗ್ರಹೀತವಾದ ಕರ್ಮಕ್ಕೆ ಸಂಚಿತ ಕರ್ಮಗಳೆನ್ನುವರು. ಸದ್ಯಃ ಸುಖದುಃಖಾದಿ ಫಲವನ್ನು ಕೊಡಲು ಪ್ರಾರಂಭವಾದ ಕರ್ಮಕ್ಕೆ ಪ್ರಾರಬ್ಧ ಕರ್ಮವೆನ್ನುವರು. ಇನ್ನು ಈ ಕರ್ಮಫಲವನ್ನು ಅನುಭವಿಸುತ್ತ ಮತ್ತೆ ಮಾಡಲ್ಪಡುವ ಕರ್ಮಗಳಿಗೆ ಆಗಾಮಿ ಕರ್ಮಗಳೆನ್ನುತ್ತಾರೆ.

ಜೀವಿಯು ತಾನು ಜನ್ಮ ಜನ್ಮಾಂತರದಲ್ಲಿ ಸಂಗ್ರಹಿಸಿದ ಸಂಚಿತಕರ್ಮದಲ್ಲಿ ಯಾವ ಕರ್ಮವು ಫಲವನ್ನು ಕೊಡಲು ಪಕ್ವಾವಸ್ಥೆಯನ್ನು ಹೊಂದಿರುತ್ತದೆಯೋ ಅದನ್ನು ತೆಗೆದುಕೊಂಡು ಇಹಲೋಕದಲ್ಲಿ ಜನ್ಮ ತಾಳುತ್ತದೆ. ಹೀಗೆ ಜನ್ಮತಾಳಿದ ಬಳಿಕ ತಾನು ತೆಗೆದುಕೊಂಡು ಬಂದ ಈ ಪಕ್ವವಾದ ಪ್ರಾರಬ್ಧ ಕರ್ಮವು ಮುಗಿಯುವವರೆಗೆ ಸುಖದುಃಖಗಳನ್ನು ಅನುಭವಿಸುತ್ತ ಪುನಃ ಪ್ರಾಕ್ತನ ಸಂಸ್ಕಾರಾನುಸಾರವಾಗಿ ಪುಣ್ಯ–ಪಾಪ ಕರ್ಮಗಳನ್ನು ಮಾಡುತ್ತಿರುತ್ತದೆ. ಹೀಗೆ ಮಾಡಿದ ಈ ಕರ್ಮಗಳೆಲ್ಲ ಪುನಃ ಸಂಚಿತದಲ್ಲಿ ಸೇರ್ಪಡೆಯಾಗುತ್ತವೆ. ಆ ಸಂಚಿತದಿಂದ ಪುನಃ ಪ್ರಾರಬ್ಧ ನಂತರ ಆಗಾಮೀ ಪುನಃ ಸಂಚಿತ ಹೀಗೆ ಇದೊಂದು ಕರ್ಮದ ಚಕ್ರವು ತಯಾರಾಗುತ್ತದೆ. ಇದು ಎಂದೂ ನಿಲ್ಲದ ಕರ್ಮಚಕ್ರವು, ಜೀವಾತ್ಮನು ಒಮ್ಮೆ ಈ ಚಕ್ರದಲ್ಲಿ ಸಿಲುಕಿಕೊಂಡನೆಂದರೆ ಹೊರಬರುವದು ಅಷ್ಟೊಂದು ಸುಲಭ ಸಾಧ್ಯವಾಗುವದಿಲ್ಲ, ಅಂತೆಯೇ "ಗಹನಾ ಕರ್ಮಣೋ ಗತಿಃ" ಎಂಬುದಾಗಿ ಶಾಸ್ತ್ರಗಳು ಪ್ರತಿಪಾದಿಸಿವೆ. ಹೀಗೆ ಕೇವಲ ಕರ್ಮವನ್ನು ಮಾಡುವವನು ಆ ಕರ್ಮಜಾಲದಲ್ಲಿಯೇ ಸಿಲುಕಿ ಹೋಗೋಣದರಿಂದ ಅವನು ಅದೆಷ್ಟು ಜನ್ಮಗಳನ್ನು ಪಡೆದು ಆ ಕರ್ಮಗಳನ್ನು ಉಪಭೋಗಿಸಿ ಮುಗಿಸಲು ಸಾಧ್ಯವಾಗುವದಿಲ್ಲ, ಏಕೆಂದರೆ ಒಂದು ಕರ್ಮದ ಫಲವನ್ನು ಅನುಭವಿಸುತ್ತಿರುವಾಗಲೇ ಮತ್ತೊಂದು ಹೊಸ ಕರ್ಮವು ತಯಾರಾಗುತ್ತಲಿರುತ್ತದೆ. ಅಂದಾಗ ಅದು ಮುಗಿಯುವದೆಂದು? ಈ ಕರ್ಮಜಾಲದಿಂದ ಮುಕ್ತನಾಗಬೇಕಾದರೆ ಸಂಚಿತ ಕರ್ಮವನ್ನೆಲ್ಲ ಮೊದಲು ನಷ್ಟಗೊಳಿಸಬೇಕು. ಆಗಾಮಿ ಕರ್ಮಗಳು ಆಗದಂತೆ ಎಚ್ಚರಿಕೆ ವಹಿಸಬೇಕು. ಇನ್ನು ಉಳಿದಿರುವ ಪ್ರಾರಬ್ಧ ಕರ್ಮವೊಂದನ್ನು ಅನುಭವಿಸಿ ಮುಗಿಸಿದರೆ ಆ ಜೀವನಿಗೆ ಮುಕ್ತಿಯು ದೊರೆಯುವದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಚಿತ ಕರ್ಮವನ್ನು ನಷ್ಟಗೊಳಿಸಲು ಜ್ಞಾನವೊಂದೇ ಪ್ರಬಲವಾದ ಸಾಧನವು. ಶಾಸ್ತ್ರದಲ್ಲಿ ಈ ಜ್ಞಾನಕ್ಕೆ ಅಗ್ನಿಯೆಂಬುದಾಗಿ ಸಂಬೋಧಿಸಿದ್ದಾರೆ. ''ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ'' ಎಂಬ ಈ ಗೀತೋಕ್ತಿಯಲ್ಲಿ ಭಗವಂತನು ಆತ್ಮಜ್ಞಾನಕ್ಕೆ ಅಗ್ನಿಯ ಹೋಲಿಕೆಯನ್ನು ಕೊಟ್ಟು ಅದು ಸಂಚಿತ ಕರ್ಮವನ್ನೆಲ್ಲ ಸುಟ್ಟು ಹಾಕುವದೆಂಬುದಾಗಿ ತಿಳಿಸಲಾಗಿದೆ. ಹೀಗೆ ಜ್ಞಾನಿಯಾದವನ ಸಂಚಿತ ಕರ್ಮಗಳು ನಷ್ಟವಾದ ಮೇಲೆ ಅವನು ತನ್ನನ್ನು ಅಕರ್ತಾ, ಅಭೋಕ್ತಾ ಎಂಬುದಾಗಿ ತಿಳಿದುಕೊಂಡಿರೋಣದರಿಂದ ಅವನಿಗೆ ಹೊಸದಾದ ಆಗಾಮಿಕರ್ಮಗಳು ಸಂಭವಿಸಲಾರವು. ಇನ್ನು ಉಳಿದಿರುವ ಕರ್ಮವೆಂದರೆ ಪ್ರಾರಬ್ಧವು ಒಂದೇ. ''ನಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ'' ಎಂಬ ಶಾಸ್ತ್ರೋಕ್ತಿಗನುಸಾರವಾಗಿ ಪ್ರಾರಬ್ಧಕರ್ಮವನ್ನು ಉಪಭೋಗಿಸಿಯೇ ಮುಗಿಸಬೇಕಾಗುವದು. ಈ ಕರ್ಮವು ಜ್ಞಾನಿ–ಅಜ್ಞಾನಿಗಳಿಬ್ಬರಿಗೂ ಸಮಾನವಾಗಿಯೇ ಇರುತ್ತದೆ. ಅಜ್ಞಾನಾದ ಜೀವಿಯು ಪ್ರಾರಬ್ಧಕರ್ಮದ ಸುಖ–ದುಃಖವನ್ನು ಅನುಭವಿಸುವಂತೆ ಜ್ಞಾನಿಯೂ ಸಹ ತನ್ನ ಪ್ರಾರಬ್ಧದ ಫಲವನ್ನು ಅನುಭವಿಸಲೇಬೇಕಾಗುತ್ತದೆ. ಅಂತೆಯೇ ಲೋಕದಲ್ಲಿ ಬಹು ದೊಡ್ಡ ದೊಡ್ಡ ಜ್ಞಾನೀಪುರುಷರೂ ಸಹ ಅನೇಕ ರೋಗರುಜಿನಗಳಿಂದ ಬಳಲಿ ದುಃಖವನ್ನು ಅನುಭವಿಸುವದನ್ನೂ ಸಹ ನೋಡುತ್ತೇವೆ. ಇನ್ನು ಕೆಲಜ್ಞಾನಿಗಳು ಆರೋಗ್ಯವಂತರಾಗಿ ಕೊನೆಯುಸಿರಿನವರೆಗೆ ಆನಂದವಾಗಿಯೇ ಇದ್ದು ದೇಹಬಿಡುವದನ್ನೂ ಸಹ ಕಾಣುತ್ತೇವೆ. ಯಾರು ರೋಗಾದಿಗಳಿಂದ ನರಳುತ್ತಿದ್ದಾರೆಯೋ ಅದು ಪ್ರಾರಬ್ಧದಲ್ಲಿಯ ಪಾಪದ ಫಲವೆಂಬುದಾಗಿ ಭಾವಿಸಬೇಕು. ಇನ್ನು ರೋಗರುಜಿನಗಳಿಲ್ಲದೆ ಆನಂದವಾಗಿ ಕಾಲಕಳೆಯುತ್ತಿದ್ದರೆ ಅದು ಅವರ ಪ್ರಾರಬ್ಧದೊಳಗಿನ ಪುಣ್ಯದ ಫಲವೆಂದು ತಿಳಿದುಕೊಳ್ಳಬೇಕು. ಹೀಗೆ ಯಾರ ಯಾರ ಕರ್ಮಗಳು ಹೇಗೆ ಹೇಗೆ ಇರುತ್ತವೆಯೋ ಆ ರೀತಿಯಾದ ಫಲವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಜ್ಞಾನಿಯು ಪ್ರಾರಬ್ಧಕರ್ಮವೊಂದನ್ನು ಅನುಭವಿಸಿ ಮುಗಿಸಿದ ಬಳಿಕ ಅವನಿಗೆ ಸಂಚಿತ ಮತ್ತು ಆಗಾಮಿಕರ್ಮಗಳೆರಡೂ ಇಲ್ಲದಾಗಿ ಹೋಗಿರೋಣದರಿಂದ ಅವನಿಗೆ ಪುನರ್ಜನ್ಮವು ದೊರೆಯಲಾರದು. ಅಂತೆಯೇ ಪೂಜ್ಯಪಾದರು ಕೇವಲ ಕರ್ಮವೊಂದರಿಂದ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲವೆಂಬುದಾಗಿ ತಿಳಿಯಪಡಿಸಿ ಜ್ಞಾನಹೀನವಾದ ಕರ್ಮವು ಸಂಸಾರಕ್ಕೆ ಕಾರಣವಾದರೂ ಅದುವೇ ಜ್ಞಾನದಿಂದ ಕೂಡಿಕೊಂಡಾಗ ಸಂಸಾರದಿಂದ ಮುಕ್ತಿಯನ್ನುವೊದಗಿಸಲು ಸಾಧನವಾಗುತ್ತದೆ ಎಂಬುದಾಗಿ ಆದೇಶಿಸಿದ್ದಾರೆ.

ಒಂದು ತುಂಬಿದ ನದಿಯಲ್ಲಿ ಬಹುಭಾರದ ಒಂದು ಕಬ್ಬಿಣ ಗುಂಡನ್ನು ತಲೆಯ ಮೇಲೆ ಹೊತ್ತುಜಿಗಿದರೆ ಅದು ಆತನನ್ನು ಮುಳುಗಿಸಿ ಕೊಂದು ಹಾಕುತ್ತದೆ, ಆದರೆ ಅದೇ ಗುಂಡನ್ನೇ ಕಾಯಿಸಿ ಬಡೆದು ತಗಡನ್ನಾಗಿ ಮಾಡಿ ಅದರಿಂದ ಒಂದು ನೌಕೆಯನ್ನು ತಯಾರಿಸಿ ಅದರಲ್ಲಿ ಕುಳಿತು ನದಿಯಲ್ಲಿ ಪ್ರಯಾಣಮಾಡಿದರೆ ಈ ದಡದಿಂದ ಆ ದಡವನ್ನು ಸುರಕ್ಷಿತವಾಗಿ ತಲುಪಬಹುದು. ಹೀಗೆ ಕೇವಲ ಕರ್ಮವನ್ನು ಮಾಡುವವನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸಾರದಲ್ಲಿ ಮುಳುಗಿ ಹೋದರೂ ಜ್ಞಾನಿಯಾಗಿ ಕರ್ಮವನ್ನು ಮಾಡಿದರೆ ಅವನು ಸಂಸಾರದಿಂದ ಪಾರಾಗಬಲ್ಲನು. ಅಜ್ಞನಾದ ಜೀವಿಯು ಕರ್ತೃತ್ವ ಭಾವನೆಯಿಂದ ಕೂಡಿಕೊಂಡಿರೋಣದರಿಂದ ಅವನು ಸಂಸಾರದಲ್ಲಿ ಬದ್ಧಿತನಾದರೂ ಜ್ಞಾನಿಯು ಅಕೃರ್ತೃತ್ವ ಭಾವನೆಯಿಂದ ಕರ್ಮಗಳನ್ನು ಮಾಡುತ್ತಿರುವದರಿಂದ ಇವನಿಗೆ ಯಾವದೇ ವಿಧವಾದ ಬಂಧನವಾಗುವದಿಲ್ಲವೆಂಬ ಭಾವನೆಯು, ಅಂತೆಯೇ ಭಗವದ್ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಆತ್ಮಜ್ಞಾನವನ್ನು ಮಾಡಿಕೊಟ್ಟು ಪುನಃ ಅವನನ್ನು ಕರ್ತವ್ಯಕರ್ಮದಲ್ಲಿ ತೊಡಗಿಸಿದ್ದನ್ನು ನಾವು ನೋಡುತ್ತೇವೆ. ಇದರಿಂದ ತಿಳಿದುಬರುವದೇನೆಂದರೆ ಕೇವಲ ಕರ್ಮವು ಬಂಧನಕಾರಿಯಾದರೆ ಅದುವೇ ಜ್ಞಾನದಿಂದ ಕೂಡಿಕೊಂಡಾಗ ಮುಕ್ತಿಯ ಸಾಧನವಾಗುತ್ತದೆ.

ಜ್ಞಾನಹೀನವಾದ ಕರ್ಮವು ಹೇಗೆ ಬಂಧನಕಾರಿಯಾಗುವದು? ಎಂಬ ವಿಷಯವನ್ನು ಸ್ಪಷ್ಟಪಡಿಸಲೋಸುಗ ಪೂಜ್ಯಪಾದರು ಪುನಃ–

ಫಲಂ ಕ್ರಿಯಾವತಾಂ ಪುಂಸಾಂ ಸ್ವರ್ಗಾದ್ಯಂ ನಶ್ವರಂ ಯತಃ।
ತಸ್ಮಾತ್ ಸ್ಥಾಯಿಫಲ ಪ್ರಾಪ್ತ್ಯೈ ಜ್ಞಾನಮೇವ ಸಮಭ್ಯಸೇತ್ ॥

(ಸಿ. ಶಿ. ೧೬–೨೮)

ಹೀಗೆ ವಿವರಿಸಿದ್ದಾರೆ. ಕೇವಲ ಕರ್ಮದ ಫಲವಾದ ಸ್ವರ್ಗಾದಿ ಲೋಕಗಳು ನಶ್ವರವಾದವುಗಳು. ಆದ್ದರಿಂದ ಶಾಶ್ವತವಾದ ಫಲವನ್ನು ಪಡೆಯುವದಕ್ಕೋಸ್ಕರ ಜ್ಞಾನವನ್ನೇ ಚೆನ್ನಾಗಿ ಅಭ್ಯಾಸ ಮಾಡಬೇಕು ಎಂಬುದು ಪೂಜ್ಯರ ಆಶಯವಾಗಿದೆ ಶಾಸ್ತ್ರದಲ್ಲಿ ಕರ್ಮಗಳು ಎರಡು ಪ್ರಕಾರವಾಗಿ ವಿಭಾಗಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಮೊದಲನೆಯದು 'ಪತಿಕರ್ಮವು' ಎರಡನೆಯದು 'ಪಶುಕರ್ಮವು' ಇಷ್ಟಲಿಂಗ ಪೂಜಾರೂಪವಾದ ಕರ್ಮವು ಪತಿಯಾದ ಪರಮಾತ್ಮನ ಪ್ರಾಪ್ತಿಗೆ ಸಹಾಯಕ ವಾಗಿರುವದರಿಂದ ಅದಕ್ಕೆ ಪತಿಕರ್ಮವೆಂದು ಕರೆದಿದ್ದಾರೆ. ಇನ್ನು ಸ್ವರ್ಗಾದಿಗಳಿಗೆ ಸಾಧನವಾದ ಯಜ್ಞಯಾಗಾದಿಗಳಿಗೆ ಪಶುಕರ್ಮವೆನ್ನುತ್ತಾರೆ. ಈ ಪಶು ಕರ್ಮಗಳನ್ನು ಮಾಡುವದರಿಂದ ಜೀವಾತ್ಮನು ಈ ಸಂಸಾರದಲ್ಲಿ ಪುನಃ ಪುನಃ ಬರುತ್ತಿರುತ್ತಾನೆ. ಇದರಿಂದ ಎಂದಿಗೂ ಪತಿಯಾದ ಪರಮಾತ್ಮನ ಪ್ರಾಪ್ತಿಯು ಉಂಟಾಗುವದಿಲ್ಲ ''ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ'', ಎಂಬ ಉಕ್ತಿಗನುಸಾರವಾಗಿ ಯಜ್ಞಾದಿ ಕರ್ಮಗಳ ಫಲವಾದ ಸ್ವರ್ಗಾದಿಗಳನ್ನು ಅನುಭವಿಸಿ ಆ ಪುಣ್ಯವು ತೀರಿದ ಬಳಿಕ ಪುನಃ ಜೀವಿಯು ಮರ್ತ್ಯಲೋಕಕ್ಕೆ ಬರುತ್ತಾನೆ. ಇಲ್ಲಿ ಪುನಃ ಆ ಕರ್ಮಗಳನ್ನೇ ಮಾಡಿ ಮತ್ತೆ ಸ್ವರ್ಗಾದಿಲೋಕಗಳಿಗೆ ಹೋಗುತ್ತಾನೆ. ಹೀಗೆ ಇವನ ಗಮನಾಗಮನ ಪರಂಪರೆಯು ಅಖಂಡವಾಗಿ ಸಾಗುತ್ತಲೇ ಇರುತ್ತದೆ. ಅದೆಷ್ಟು ಸಾರೆ ಕ್ಷಯ ಪತನಾದಿಗಳನ್ನು ಅನುಭವಿಸಿಯೂ ಅವುಗಳ ಬಗ್ಗೆ ನಿಸ್ಪೃಹ ಭಾವನೆಯು ಮೂಡುವದಿಲ್ಲ, ಅಂತೆಯೇ ಆ ವ್ಯಕ್ತಿಗೆ ಪಶುವೆಂತಲೂ ಅವನು ಮಾಡುವ ಆ ಕರ್ಮಗಳಿಗೆ ಪಶುಕರ್ಮವೆಂತಲೂ ಅವನು ಮಾಡುವ ಆ ಕರ್ಮಗಳಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಶುಕರ್ಮವೆಂತಲೂ ಕರೆಯುತ್ತಾರೆ. ಕಾಯಿಪಲ್ಲೆಯ ಮಾರುಕಟ್ಟೆಯಲ್ಲಿ ಕೆಲವೊಂದು ಪಶುಗಳು ದಿನಾಲೂ ಹೋಗಿ ಬಾಗವಾನರ ಬುಟ್ಟಿಯಲ್ಲಿ ಬಾಯಿ ಹಾಕಿ ಕಾಯಿಪಲ್ಲೆಯನ್ನು ತಿನ್ನುತ್ತಿರುತ್ತವೆ. ಆಗ ಬಾಗವಾನನು ಒಂದು ದೊಣ್ಣೆಯಿಂದ ಅದರ ಬೆನ್ನಿಗೆ ಚೆನ್ನಾಗಿ ಏಟು ಕೊಡುತ್ತಾನೆ. ಭಯಭೀತವಾದ ಆ ಪಶುವು ಮುಂದೆ ಹೋಗಿ ಮತ್ತೊಬ್ಬ ಬಾಗವಾನನ ಬುಟ್ಟಿಯಲ್ಲಿ ಬಾಯಿ ಹಾಕುತ್ತದೆ ಅಲ್ಲಿಯೂ ಅದಕ್ಕೆ ಮೊದಲಿನ ಗತಿಯೇ ಉಂಟಾಗುವದು, ಪಶುವಿನ ಈ ವ್ಯವಹಾರವು ಅದರ ದೈನಂದಿನ ದಿನಚರಿಯಾಗಿರುತ್ತದೆ. ಬಡಿಸಿಗೊಳ್ಳುವದನ್ನೂ ಬಿಡುವದಿಲ್ಲ ಮತ್ತು ಬುಟ್ಟಿಯಲ್ಲಿ ಬಾಯಿ ಹಾಕುವುದನ್ನು ಸಹ ಬಿಡುವದಿಲ್ಲ ಇಷ್ಟೊಂದು ಪೆಟ್ಟು ಬಿದ್ದರೂ ಬುಟ್ಟಿಯಲ್ಲಿ ಬಾಯಿ ಹಾಕಬಾರದೆಂಬ ತಿಳುವಳಿಕೆಯು ಅದಕ್ಕೆ ಬರದಿರಲು ಕಾರಣವೇನೆಂದರೆ ಅದು ಅಜ್ಞವಾದ ಪಶುವಾಗಿರುತ್ತದೆ. ಇದೇ ಪ್ರಕಾರವಾಗಿ ಯಜ್ಞ–ಯಾಗಾದಿಗಳನ್ನು ಮಾಡಿ ಸ್ವರ್ಗವನ್ನು ಪಡೆದು ಪುನಃ ಅದರಿಂದ ಕ್ಷಯ–ಪತನಾದಿಗಳನ್ನು ಅನುಭವಿಸಿದರೂ ಅದರಿಂದ ವಿಮುಖನಾಗದ ಮನುಷ್ಯನು ಪೂರ್ವೋಕ್ತವಾದ ಪಶುವಿಗೆ ಸಮಾನನಾಗಿರುತ್ತಾನೆ. ಅಂತೆಯೇ ಯಜ್ಞಾದಿಗಳಿಗೆ ಪಶುಕರ್ಮವೆಂದು ಕರೆದಿದ್ದಾರೆ.

ಇದೂ ಅಲ್ಲದೆ ಪ್ರತಿಯೊಬ್ಬ ಜೀವನು ಆಣವ ಮಾಯಾ ಮತ್ತುಕಾರ್ಮಿಕಗಳೆಂಬ ಮೂರು ವಿಧ ಪಾಶದಿಂದ ಬಂಧಿತನಾಗಿರುತ್ತಾನೆ. ಅಂತೆಯೇ ಇವನಿಗೆ ಪಶುವೆಂದು ಕರೆದಿದ್ದಾರೆ. ಆದೆಷ್ಟು ಸಾರೆ ಯಜ್ಞಯಾಗಾದಿಗಳನ್ನು ಮಾಡಿದರೂ ಈ ಪಾಶಗಳು ಕತ್ತರಿಸಿ ಹೋಗಲಾರವು. ಈ ಯಜ್ಞಾದಿಗಳಿಂದ ಭೋಗಪ್ರವೃತ್ತಿಯೇ ಹೆಚ್ಚು ಬೆಳೆಯುತ್ತ ಹೋಗುವದರಿಂದ ಇವುಗಳಿಗೆ ಪಶುಕರ್ಮವೆನ್ನುವದು ಸಾರ್ಥಕವೆಂಬುದಾಗಿ ತಿಳಿದುಬರುತ್ತದೆ.

ಮನುಷ್ಯನಲ್ಲಿರುವ ಭೋಗಲಾಲಸೆಯು ಬಹು ವಿಚಿತ್ರವಾದುದು. ಎಷ್ಟೇ ಭೋಗ ಭಾಗ್ಯಗಳು ದೊರೆತರೂ ಸಂತೃಪ್ತಿಯೆನ್ನುವದು ಆಗುವದಿಲ್ಲ. ಒಮ್ಮೆ ಒಬ್ಬ ರಾಜನ ದರ್ಬಾರದಲ್ಲಿ ಬಾಲಕವಿಯೋರ್ವನು ಬಂದು ತನ್ನ ಕವಿತಾಚಾತುರ್ಯದಿಂದ ರಾಜನ ಮನವನ್ನು ಸೂರೆಗೊಂಡನು. ಆಗ ರಾಜನು ಅತ್ಯಂತ ಸಂತುಷ್ಟನಾಗಿ ತನ್ನ ಮುಖ್ಯಮಂತ್ರಿಯನ್ನು ಕರೆದು ಆದೇಶಿಸಿದ್ದೇನೆಂದರೆ ''ಈ ಬಾಲ ಕವಿಯನ್ನು ನಮ್ಮ ಖಜಾನೆಗೆ ಕರೆದುಕೊಂಡು ಹೋಗಿ ಅಲ್ಲಿ ಇವನಿಗೆ ಏನು ಬೇಕೋ ಮತ್ತು ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಳ್ಳಲು ಸ್ವಾತಂತ್ರ್ಯವನ್ನು ಕೊಟ್ಟು ಬಿಡಿ. ಆದರೆ ಅವನಿಗೆ ಕೊಟ್ಟ ಈ ಸ್ವಾತಂತ್ರ್ಯವು ಒಂದು ತಾಸಿನವರೆಗೆ ಮಾತ್ರ ಇರತಕ್ಕದ್ದು. ಒಂದು ತಾಸು ವೇಳೆ ಮುಗಿದೊಡನೆ ಖಜಾನೆಯನ್ನು ಬಂದು ಮಾಡಬೇಕು.''

ರಾಜನ ಆದೇಶದಂತೆ ಮಂತ್ರಿಯು ಆ ಬಾಲ ಕವಿಯನ್ನು ಕರೆದುಕೊಂಡು ಖಜಾನೆಯಕಡೆಗೆ ಹೋಗಿ ಅದರ ಕೀಲಿಯನ್ನು ತೆರೆದು ಅವನನ್ನು ಒಳಗೆ ಬಿಟ್ಟನು. ಅಲ್ಲಿರುವ ಮುತ್ತು , ಮಾಣಿಕ್ಯ, ರತ್ನ, ವಜ್ರ, ವೈಢೂರ್ಯ ಬೆಳ್ಳಿ–ಬಂಗಾರಗಳ ರಾಶಿಯನ್ನು ನೋಡಿ ಬಾಲಕನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಈ ಸಾಮಾನುಗಳನ್ನು ಹೇಗೆ ಒಯ್ಯಬೇಕು? ಎಂದು ಆಲೋಚಿಸಿ ಮಂತ್ರಿಯನ್ನು ಕರೆದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೇಳಿದ್ದೇನೆಂದರೆ, ''ನಾನು ಮನೆಯಿಂದ ಬರುವಾಗ ಬರಿಗೈಯಿಂದ ಬಂದಿದ್ದೇನೆ ನನ್ನ ಹತ್ತಿರ ಈ ವಸ್ತುಗಳನ್ನು ಒಯ್ಯಲು ಯಾವ ಪಾತ್ರೆಯೂ ಇಲ್ಲ, ಕಾರಣ ನಿಮ್ಮಲ್ಲಿಯೇ ಇದ್ದ ಒಂದು ದೊಡ್ಡ ಪಾತ್ರೆಯನ್ನು ನನಗೆ ಕೊಡಿ'' ಆಗ ಮಂತ್ರಿಯು ಬಾಲಕನ ಇಚ್ಛೆಯಂತೆ ಒಂದು ದೊಡ್ಡ ತಾಮ್ರದ ಹಂಡೆಯನ್ನು ತಂದಿರಿಸಿದನು. ಬಾಲಕವಿಯು ಆ ಪಾತ್ರೆಯಲ್ಲಿ ಮೊದಲು ಮುತ್ತುಗಳನ್ನು ತುಂಬಿದನು, ಅದನ್ನು ತುಂಬಿದ ಬಳಿಕ ಪಕ್ಕದಲ್ಲಿರುವ ಮಾಣಿಕ್ಯದ ರಾಶಿಯನ್ನು ಕಂಡು ಅಯ್ಯೋ ಮಾಣಿಕ್ಯವನ್ನು ಬಿಟ್ಟು ಕೇವಲ ಮುತ್ತುಗಳನ್ನೇ ತುಂಬಿಕೊಂಡೆನಲ್ಲ ಎಂದು ಅಸಮಾಧಾನಪಟ್ಟು ಪಾತ್ರೆಯಲ್ಲಿಯ ಮುತ್ತುಗಳನ್ನೆಲ್ಲ ಸುರಿದು ಅದರಲ್ಲಿ ಮಾಣಿಕ್ಯಗಳನ್ನು ತುಂಬತೊಡಗಿದನು. ಸ್ವಲ್ಪ ಹೊತ್ತಿನಲ್ಲಿಯೇ ಪಾತ್ರೆಯು ತುಂಬಿತೇನೋ ನಿಜ ಈತನ ಮನಸ್ಸು ಮಾತ್ರ ತುಂಬದೇ ಹೋಯಿತು. ಮಾಣಿಕ್ಯದ ಪಕ್ಕದಲ್ಲಿರುವ ವಜ್ರದ ರಾಶಿಯನ್ನು ನೋಡಿ ಬೆಚ್ಚನೆ ಬೆರಗಾದ. 'ಅಯ್ಯೋ ನನ್ನ ಧಡ್ಡತನವೇ ! ಇದೇನು ಮಾಡಿದೆ. ಬೆಲೆಬಾಳುವ ವಜ್ರವನ್ನು ಬಿಟ್ಟು ಕೇವಲ ಮಾಣಿಕ್ಯವನ್ನೇ ತುಂಬಿದೆನಲ್ಲಾ !'' ಎಂದು ಪಶ್ಚಾತ್ತಾಪ ಪಟ್ಟು ಪಾತ್ರೆಯಿಂದ ಮಾಣಿಕ್ಯವೆಲ್ಲವನ್ನೂ ತೆಗೆದು ಆ ಪಾತ್ರೆಯನ್ನು ಪುನಃ ಖಾಲಿ ಮಾಡಿದನು. ಅದರಲ್ಲಿ ಪುನಃ ವಜ್ರದ ಹರಳುಗಳನ್ನು ತುಂಬಿದನು. ಅಲ್ಲಿರುವ ಒಂದಕ್ಕಿಂತಲೂ ಒಂದು ಹೆಚ್ಚು ಬೆಲೆಬಾಳುವ ಆಕರ್ಷಕ ವಸ್ತುಗಳಿಂದ ಆಕರ್ಷಿತ ಚಿತ್ತವುಳ್ಳ ಆತನು ಅಲ್ಲಿರುವ ಅಮೌಲ್ಯ ವಸ್ತುಗಳನ್ನು ಪಾತ್ರೆಯಲ್ಲಿ ತುಂಬುವ ಹಾಗೂ ಖಾಲಿಮಾಡುವ ಉದ್ಯೋಗದಲ್ಲಿ ಆಸಕ್ತನಾಗಿ ವೇಳೆಯ ಕಡೆಗೆ ಗಮನಹರಿಸಲಿಲ್ಲ. ಹೀಗೆ ಅಷ್ಟರಲ್ಲಿ ಒಂದು ಘಂಟೆಕಾಲ ಪೂರ್ಣವಾಗಿತ್ತು ಆಗ ಮಂತ್ರಿಯು ಬಂದು ''ಎಲೈ ಬಾಲಕನೇ ! ನಿನಗೆ ಕೊಟ್ಟ ಅವಧಿಯು ಮುಗಿದುಹೋಗಿದೆ. ನೀನು ಪಾತ್ರೆಯಲ್ಲಿ ಏನನ್ನು ತುಂಬಿದೆಯೋ ಅಷ್ಟನ್ನು ನಿನ್ನ ಮನೆಗೆ ಕಳಿಸುವ ವ್ಯವಸ್ಥೆಮಾಡುತ್ತೇವೆ ನೀನು ಹೊರಗೆ ಬಾ'' ಎಂಬುದಾಗಿ ಅವನನ್ನು ಕರೆದನು. ಬಾಲಕನು ಹೊರಬಂದಬಳಿಕ ಮಂತ್ರಿಯು ಒಳಹೋಗಿ ನೋಡಲು ಇವನಿಗೆ ಕೊಟ್ಟ ಆ ಪಾತ್ರೆಯು ಬರಿದಾಗಿತ್ತು, ಅದನ್ನು ನೋಡಿ ಆಶ್ಚರ್ಯಪಟ್ಟ ಮಂತ್ರಿಯು ಆ ಬಾಲಕನನ್ನುದ್ದೇಶಿಸಿ ''ಎಲೈ ಬಾಲಕನೇ ! ಈ ಪಾತ್ರೆಯಲ್ಲಿ ಏನನ್ನೂ ತುಂಬಿಲ್ಲವಲ್ಲ ? ಒಂದು ಘಂಟೆಯವರೆಗೆ ನೀನು ಏನು ಮಾಡಿದೆ ?'' ಎಂದು ಪ್ರಶ್ನಿಸಿದನು. ಆಗ ಬಾಲಕನು ತಾನು ಮಾಡಿದ ವ್ಯವಹಾರವನ್ನು ಹೇಳಲಾಗಿ ರಾಜ ಹಾಗೂ ಮಂತ್ರಿಗಳೀರ್ವರೂ ಗಹಗಹಿಸಿ ನಗ ತೊಡಗಿದರು. ಕೊನೆಗೆ ಬಾಲಕನನ್ನುದ್ದೇಶಿಸಿ ''ಎಲೈ ಬಾಲಕನೇ ! ನೀನು ನೋಡಲು ಇಷ್ಟೊಂದು ಚಿಕ್ಕವನಾಗಿರುವೆ ಆದರೆ ನಿನ್ನೊಳಗೆ ತುಂಬಿಕೊಂಡಿರುವ ಲೋಭವು ಬಹು ಭಯಾನಕವಾದುದು. ಇದರ ವಶೀಭೂತನಾದ ನೀನು ಏನೆಲ್ಲ ಪದಾರ್ಥಗಳು ಎದುರಿಗಿದ್ದರೂ ಏನನ್ನೂ ಒಯ್ಯದೆ ಬರಿಗೈಯ್ಯಿಯಿಂದ ಹೋಗುವಂತೆ ಮಾಡಿತು. ಈ ನಿನ್ನ ಲೋಭ. ಇನ್ನು ಮುಂದೆಯಾದರೂ ಈ ಭೋಗಲಾಲಸೆಯನ್ನು ಕಡಿಮೆಮಾಡಿಕೊಂಡು ಸುಖವಾಗಿರಲು ಪ್ರಯತ್ನಿಸು ಎಂಬುದಾಗಿ ರಾಜನು ಬಾಲಕನಿಗೆ ಬುದ್ಧಿವಾದವನ್ನು ಹೇಳಿ ಕಳಿಸಿದನು.

ಕೇಳಲು ಇದೊಂದು ಕಾಲ್ಪನಿಕ ಕಥೆಯಾಗಿದ್ದರೂ ಭೋಗಲಾಲಸೆಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಪರಿಣಾಮವನ್ನು ವ್ಯಕ್ತಗೊಳಿಸುವ ಇದೊಂದು ಪ್ರತಿಯೊಬ್ಬರ ಜೀವನದ ವಾಸ್ತವಿಕ ಕಥೆಯಾಗಿದೆ. ಮನುಷ್ಯನು ತನ್ನ ಹೃದಯವೆಂಬ ಪಾತ್ರೆಯಲ್ಲಿ ಜ್ಞಾನರತ್ನವನ್ನು ತುಂಬಿಕೊಂಡು ಶಾಶ್ವತ ಸುಖವನ್ನು ಹೊಂದುವದನ್ನು ಬಿಟ್ಟು, ವಿಷಯಾಸಕ್ತನಾಗಿ ಒಂದನ್ನು ಬಿಟ್ಟು, ಮತ್ತೊಂದನ್ನು ಹಿಡಿದು, ಅದನ್ನು ಬಿಟ್ಟು ಇನ್ನೊಂದನ್ನು ಹಿಡಿಯುವ ಈ ವ್ಯರ್ಥವ್ಯವಹಾರದಲ್ಲಿಯೇ ಕಾಲಕಳೆಯುತ್ತಿರುತ್ತಾನೆ ಅಂತೆಯೇ ಪೂಜ್ಯಪಾದರು ಜನನ–ಮರಣಕ್ಕೆ ಕಾರಣೀಭೂತಗಳಾದ ಯಜ್ಞಯಾಗಾದಿ ಪಶುಕರ್ಮಗಳನ್ನಾಚರಿಸಿ ನಶ್ವರವಾದ ಸ್ವರ್ಗಾದಿ ಸುಖವನ್ನು ಪಡೆಯುವದಕ್ಕಿಂತ ಆತ್ಮಜ್ಞಾನಾವನ್ನು ಪಡೆದು ಮೋಕ್ಷರೂಪವಾದ ಶಾಶ್ವತ ಫಲವನ್ನು ಪಡೆಯಬೇಕು. ಅದಕ್ಕಾಗಿ ಜ್ಞಾನಾಭ್ಯಾಸವನ್ನು ಮಾಡಬೇಕೆಂಬುದಾಗಿ ಅಪ್ಪಣೆಕೊಡಿಸಿದ್ದಾರೆ. ಆದ್ದರಿಂದ ಪೂಜ್ಯರ ಆದೇಶದ ಬಗ್ಗೆ ಸರಿಯಾಗಿ ವಿಚಾರಮಾಡಿ ಜ್ಞಾನಯುಕ್ತವಾದ ಪತಿಕರ್ಮವನ್ನಾಚರಿಸಿ ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳಲು ಪ್ರಯತ್ನಿಸಬೇಕೆಂಬುದಾಗಿ ಹಾರೈಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ ೧ ಆಗಷ್ಟ ೧೯೯೩

(ಜ್ಞಾನಮಂದಿರ, ಜಂಗಮವಾಡಿಮಠ, ವಾರಾಣಾಸಿ.)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾನಾಗಮಸ್ಥಲ-೨

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾ ಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಶ್ರೀಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವರನ್ನು ಕುರಿತು ಉಪದೇಶ ಮಾಡಿದ ದಿವ್ಯ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿಯು. ಈ ಗ್ರಂಥದ ಲಿಂಗಷಟ್ ಸ್ಥಲಾಂತ ರ್ಗತವಾದ ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನಗಳನ್ನು ಆಲಿಸುತ್ತ ಬಂದಿದ್ದೀರಿ. ನಿನ್ನೆಯ ದಿನ ಜ್ಞಾನಾಗಮ ಸ್ಥಲದ ಕೆಲವು ವಿಚಾರಗಳನ್ನು ಶ್ರವಣ ಮಾಡಿದ್ದೀರಿ. ಇಂದು ಅದೇ ಸ್ಥಲದ ಅವಿಶಿಷ್ಟ ಭಾಗವನ್ನೂ ಕುರಿತು ವಿವೇಚಿಸ ಲಾಗುವದು.

ಮನುಷ್ಯನ ಜೀವನದಲ್ಲಿ ಜ್ಞಾನವು ಪರಮಾವಶ್ಯಕವಾದುದು. ಲೌಕಿಕ ಜ್ಞಾನದಿಂದ ಜೀವಾತ್ಮನು ಜಗತ್ತಿನಲ್ಲಿ ಸುಖವನ್ನು ಅನುಭವಿಸಿದರೆ ಆಧ್ಯಾತ್ಮಿಕ ದಿವ್ಯಜ್ಞಾನದಿಂದ ಇವನಿಗೆ ಮುಕ್ತಿಯು ಪ್ರಾಪ್ತವಾಗುವದು. ಲೌಕಿಕ ಇಲ್ಲವೆ ಅಧ್ಯಾತ್ಮಿಕ ಜ್ಞಾನವಿಲ್ಲದವನು ''ಜ್ಞಾನೇನ ಹೀನಃ ಪಶುಭಿಃ ಸಮಾನಃ'' ಎಂಬ ಉಕ್ತಿಗನುಸಾರವಾಗಿ ಪಶುವಿಗೆ ಸಮಾನನಾಗಿರುತ್ತಾನೆ. ನೋಡಲಿಕ್ಕೆ ಶರೀರವು ಮನುಷ್ಯನದಾಗಿದ್ದರೂ, ಆತನು ಜ್ಞಾನಶೂನ್ಯವಾಗಿರೋಣದ ರಿಂದ ಅವನನ್ನು ಪಶುವಿನಲ್ಲಿಯೇ ಪರಿಗಣಿಸಲಾಗಿದೆ. ನಮ್ಮ ಜೀವನದಲ್ಲಿ ವ್ಯವಹಾರಕ್ಕೆ ಲೌಕಿಕ ಜ್ಞಾನವು ಎಷ್ಟು ಮಹತ್ವದ್ದೋ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಆತ್ಮಜ್ಞಾನಕ್ಕೆ ಬಹಳಷ್ಟು ಪ್ರಾಶಸ್ತ್ಯವಿದೆ. ಅಂತೆಯೇ ಪೂಜ್ಯಪಾದರು ಈ ಜ್ಞಾನಾಗಮಸ್ಥಲದಲ್ಲಿ ಆತ್ಮಜ್ಞಾನದ ಮಹತಿಯನ್ನು ಪ್ರತಿಪಾದಿಸುತ್ತ ಬಂದು ಆ ಜ್ಞಾನವನ್ನು ಹೇಗೆ ಪಡೆಯಬೇಕು ಎಂಬ ಪ್ರಶ್ನೆಯುದ್ಭವಿಸಿದಾಗ ಅದಕ್ಕೆ ಸಮಾಧಾನರೂಪವಾಗಿ ಪುನಃ-

ಶಾಸ್ತ್ರಾಭ್ಯಾಸಾದಿಯತ್ನೇನ ಸದ್ಗುರೋರುಪದೇಶತಃ।
ಜ್ಞಾನಮೇವ ಸಮಭ್ಯಸ್ಯೇತ್ ಕಿಮನ್ಯೇನ ಪ್ರಯೋಜನಮ್ ॥

(ಸಿ. ಶಿ. ೨೫-೨೨)

ಹೀಗೆ ತಿಳಿಯಪಡಿಸಿದ್ದಾರೆ. ಸದ್ಗುರುಗಳ ಅನುಗ್ರಹದಿಂದ ನಿಗಮಾಗಮಾಂತಗಳಾದ ವೀರಶೈವ ಶಾಸ್ತ್ರಗಳನ್ನು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಿ ಜ್ಞಾನವನ್ನು ಸಂಪಾದಿಸಬೇಕು. ಇದನ್ನು ಬಿಟ್ಟು ಬೇರೆ ಏನನ್ನೇ ಮಾಡಿದರೂ .ಅದೆಲ್ಲವೂ ಪ್ರಯೋಜನಹೀನವಾಗುತ್ತದೆ ಎಂಬುದು ಪೂಜ್ಯರ ಆಶಯವಾಗಿರುತ್ತದೆ.

ಜ್ಞಾನವು ಕೇವಲ ಬೇಕು ಬೇಕು ಎಂದು ಬಯಸಿದ ಮಾತ್ರಕ್ಕೆ ಸಿಗುವ ವಸ್ತುವಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದಕ್ಕಾಗಿ ಸದ್ಗುರುಗಳಿಗೆ ಶರಣಾಗತರಾಗಿ ಶಾಸ್ತ್ರಾಭ್ಯಾಸವನ್ನು ಮಾಡಬೇಕಾಗುವದು. ಶಾಸ್ತ್ರಗಳು ಅನೇಕಗಳಾಗಿರೋಣದರಿಂದ ಅವುಗಳ ತಾತ್ಪರ್ಯವನ್ನು ಗ್ರಹಿಸಬೇಕಾದರೆ ಸದ್ಗುರುವಿನ ಮಾರ್ಗದರ್ಶನವು ಬೇಕೇ ಬೇಕು. ಇಲ್ಲವಾದರೆ "ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣಕಾರಣಮ್" ಎಂಬ ಉಕ್ತಿಗನುಸಾರವಾಗಿ ಗುರುವಿಲ್ಲದೆ ಶಾಸ್ತ್ರಾಭ್ಯಾಸವನ್ನು ಮಾಡುವ ವ್ಯಕ್ತಿಯು ಶಬ್ದಜಾಲವೆಂಬ ಮಹಾರಣ್ಯದಲ್ಲಿ ಸಿಲುಕಿ ಚಿತ್ತಭ್ರಮೆಯನ್ನು ಮಾಡಿಕೊಳ್ಳುತ್ತಾನೆ. ಒಂದೊಂದು ಶಾಸ್ತ್ರವನ್ನು ಅಭ್ಯಾಸಮಾಡಲು ನಮಗೆ ದೊರೆತ ಆಯುಷ್ಯವೇ ಸಾಲುವದಿಲ್ಲ. ಅಂದಾಗ ಯಾವಾಗ ಏನನ್ನು ಅರಿದುಕೊಳ್ಳಬೇಕು ಎಂಬುದಕ್ಕೆ ಗುರುಗಳ ಮಾರ್ಗದರ್ಶನವು ಅವಶ್ಯವಾಗಿ ಬೇಕು.

ಆದ್ಯ ಶಂಕರಾಚಾರ್ಯರು ಒಮ್ಮೆ ಕಾಶಿಯ ಬೀದಿಗಳಲ್ಲಿ ಸಂಚರಿಸುವಾಗ ಒಂದು ಮನೆಯ ಕಿಡಿಕಿಯಿಂದ ವ್ಯಾಕರಣ ಸೂತ್ರವನ್ನು ಅಭ್ಯಾಸಮಾಡುವ ಒಬ್ಬ ವಯೋವೃದ್ಧನ ಧ್ವನಿಯು ಕೇಳಿಬಂದಿತು. ಆಗ ಶ್ರೀ ಶಂಕರಾಚಾರ್ಯರು ಆ ಧ್ವನಿಯ ಸುಳಿವನ್ನು ಹಿಡಿದು ಮನೆಯನ್ನು ಪ್ರವೇಶಿಸಿ ನೋಡಲಾಗಿ ತೊಂಭತ್ತು ವರ್ಷದ ಯಜಮಾನನೊಬ್ಬ "ಡುಕೃಞ್ಕರಣೆ" ಎಂಬ ಪಾಣಿನಿಯ ವ್ಯಾಕರಣ ಸೂತ್ರವನ್ನು ಕಂಠಪಾಠ ಮಾಡುತ್ತಿದ್ದನು. ಅವನ ಜರಾಜೀರ್ಣವಾದ ಶರೀರದ ಕಡೆಗೆ ನೋಡಿ ಶಂಕರರು ತಮ್ಮ ಮನಸ್ಸಿನಲ್ಲಿ ಯೋಚಿಸಿದ್ದೇನೆಂದರೆ– ಅಯ್ಯೋ ಪಾಪ ಮೃತ್ಯುವಿನ ದವಡೆಯಲ್ಲಿ ಕುಳಿತಿರುವ ಈ ಮುದುಕ ಮಹಾದೇವನನ್ನು ಕುರಿತು ಚಿಂತಿಸದೆ ವ್ಯಾಕರಣ ಸೂತ್ರವನ್ನು ಕಂಠಪಾಠಮಾಡುತ್ತಿದ್ದಾನೆ. ಬಾಲ್ಯಾವಸ್ಥೆಯಲ್ಲಿ ಮಾಡಬೇಕಾಗಿದ್ದ ಆ ಅಭ್ಯಾಸವನ್ನು ಈಗ ಮಾಡುತ್ತಲಿದ್ದಾನೆ. ಇದು ವ್ಯಾಕರಣವನ್ನು ಅಭ್ಯಾಸ ಮಾಡುವ ವಯಸ್ಸಲ್ಲ ಎಂದು ಯೋಚಿಸಿ ಅವನ ಬಳಿ ಸಾರಿ "ಹೇ ಯಜಮಾನ ! ನ ಹಿ ನ ಹಿ ರಕ್ಷತಿ ಡುಕೃಞ್ಕರಣೆ" ನಿನ್ನ ಅಂತಿಮ ಸಮಯದಲ್ಲಿ ನೀನು ಪಠಿಸುವ ಈ ವ್ಯಾಕರಣ ಸೂತ್ರವು ನಿನ್ನನ್ನು ರಕ್ಷಿಸುವದಿಲ್ಲ ಆದ್ದರಿಂದ ಹೇ ! ಮೂಢಮತಿಯೇ ನೀನು ಈಶ್ವರ ಭಜನೆಯನ್ನು ಮಾಡು ಅದರಿಂದಲೇ ನಿನ್ನ ಜೀವನವು ಕಲ್ಯಾಣವಾಗುವದು ಎಂಬುದಾಗಿ ಉಪದೇಶಿಸಿದರು.

ಹೀಗೆ ಯಾವಾಗ ಏನು ಮಾಡಬೇಕೆಂಬುದರ ಅರಿವು ಸರ್ವರಿಗೂ ಇರುವದಿಲ್ಲ. ಅಂತೆಯೇ ಯೋಗ್ಯ ಸದ್ಗುರುವಿನ ಮಾರ್ಗದರ್ಶನವು ನಿರಂತರವಾಗಿ ಬೇಕಾಗುತ್ತದೆ. ಪ್ರತಿದಿನ ಪೂಜಾ ಪಾಠಾದಿಗಳನ್ನು ಮಾಡುವಂತೆ ಶಾಸ್ತ್ರೀಯಗಳಾದ ಧರ್ಮಗ್ರಂಥಗಳ ಸ್ವಾಧ್ಯಾಯವನ್ನೂ ಸಹ ಮಾಡಬೇಕಾಗುವದು. ಸ್ವಾಧ್ಯಾಯವನ್ನು ಮಾಡದೇ ಹೋದರೆ ಅದೊಂದು ಬಹುದೊಡ್ಡ ಪ್ರಮಾದವನ್ನು ಎಸಗಿದಂತಾಗುವದು. ಕಾರಣ ಸ್ವಾಧ್ಯಾಯ ವಿಷಯದಲ್ಲಿ ಆಲಸ್ಯವನ್ನು ಮಾಡಕೂಡದು. ಪ್ರತಿದಿನ ಸ್ವಾಧ್ಯಾಯವನ್ನು ಮಾಡುತ್ತ ಹೋದರೆ ಜ್ಞಾನವು ಸುಲಭಸಾಧ್ಯವಾಗುವದು. ಸ್ವಾಧ್ಯಾಯದ ಬಲದಿಂದ ಮಂದಬುದ್ಧಿಯ ವ್ಯಕ್ತಿಯೂ ಸಹ ಸೂಕ್ಷ್ಮ ಬುದ್ಧಿಯುಳ್ಳವನಾಗುವನು. ಅಂತೆಯೇ ತುಳಸೀದಾಸರು–"ಕರತ ಕರತ ಅಭ್ಯಾಸ ಜಡಮತಿ ಹೋತ ಸುಜಾನ" ಎಂಬುದಾಗಿ ಹೇಳಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಸ್ತ್ರಗಳಲ್ಲಿ ವೇದಾಂತ ಮತ್ತು ಸಿದ್ಧಾಂತಗಳೆಂಬ ಎರಡು ಮುಖ್ಯವಾದ ಭಾಗಗಳಿವೆ. ವೇದಗಳ ಕೊನೆಯದಾದ ನಿರ್ಣಯಕ್ಕೆ ವೇದಾಂತವೆಂದು ಕರೆದರೆ ಶಿವಾಗಮಗಳ ಅಂತಿಮ ನಿರ್ಣಯಕ್ಕೆ ಸಿದ್ಧಾಂತವೆಂದು ಕರೆದಿದ್ದಾರೆ. ಇವುಗಳಲ್ಲಿ ಯಾರಿಗೆ ವೇದಾಂತದಲ್ಲಿ ನಿಷ್ಠೆ ಇದೆಯೋ ಅವರು ಅದನ್ನು ಅಭ್ಯಸಿಸಬೇಕು. ಇನ್ನು ಯಾರಿಗೆ ಸಿದ್ಧಾಂತದಲ್ಲಿ ಶ್ರದ್ಧೆಯಿದೆಯೋ ಅವರು ಆಗಮಗ್ರಂಥಗಳನ್ನು ಅಭ್ಯಾಸಗೈಯ್ಯಬೇಕು. ವೇದಾಂತವನ್ನೋದಿ ಯಾವದನ್ನು ತಿಳಿದುಕೊಳ್ಳಲಾಗುವದೋ ಸಿದ್ಧಾಂತವನ್ನೋದಿಯೂ ಸಹ ಅದನ್ನೇ ತಿಳಿದುಕೊಳ್ಳಲಾಗುವದು. ಆದರೆ ಒಂದೇ ಆದ ಆ ಪರವಸ್ತುವಿಗೆ ವೇದಾಂತಿಗಳು 'ಬ್ರಹ್ಮ'ವೆಂದು ಕರೆದರೆ ಸಿದ್ಧಾಂತಿಗಳು ಅದಕ್ಕೆ 'ಲಿಂಗ'ವೆಂದು ಕರೆಯುತ್ತಾರೆ. ವಾಸ್ತವಿಕವಾಗಿ ಈ ಬ್ರಹ್ಮ–ಲಿಂಗಗಳೆರಡೂ ಭಿನ್ನಗಳಲ್ಲ ಒಂದೇ ತತ್ತ್ವದ ಎರಡು ಪರ್ಯಾಯ ನಾಮಗಳೆಂದು ತಿಳಿದುಕೊಳ್ಳಬೇಕು.

ಆದ್ದರಿಂದ ಪ್ರತಿಯೊಬ್ಬರೂ ತತ್ತ್ವಜ್ಞಾನಕ್ಕಾಗಿ ಶಾಸ್ತ್ರಾಭ್ಯಾಸವನ್ನು ಮಾಡಬೇಕು. ಶಾಸ್ತ್ರಾಭ್ಯಾಸದಲ್ಲಿ ಪ್ರಯತ್ನ ಮಾಡಿಯೂ ತಲೆಗೆ ಅದರ ವಾಸ್ತವಿಕವಾದ ಅರ್ಥವು ತಿಳಿಯದೇ ಇದ್ದಾಗ ಸದ್ಗುರುಗಳಿಗೆ ಶರಣಾಗತನಾಗಬೇಕು. ತನ್ನ ಅಭ್ಯಾಸದ ಬಲದಿಂದ ತಿಳಿಯದೇ ಇರುವ ರಹಸ್ಯಾರ್ಥವು ಗುರುವಿನ ಉಪದೇಶದಿಂದ ಸಹಜವಾಗಿ ಬುದ್ಧಿಗೋಚರವಾಗುವದು. ಹೃದಯಗ್ರಂಥಿ ಹಾಗೂ ಶಾಸ್ತ್ರಗ್ರಂಥಿಗಳನ್ನು ಬಿಡಿಸುವ ಸಾಮರ್ಥ್ಯವು ಸದ್ಗುರುವಿಗೇನೇ ಇರುತ್ತದೆ. ತನ್ನ ಮನಸ್ಸಿನಲ್ಲಿ ಬಂದಿರುವ ಯಾವದೇ ಸಂಶಯವಿದ್ದರೂ ಗುರುಸಾನ್ನಿಧ್ಯದಲ್ಲಿ ಅದು ನಿರಸನ ಹೊಂದುವುದು.

ಸಕಲಶಾಸ್ತ್ರಗಳಲ್ಲಿ ಪಾರಂಗತನಾದ ಆಗಸ್ತ್ಯ ಮಹರ್ಷಿಯ ಮನಸ್ಸಿನಲ್ಲಿಯೂ ಸಹ ಸಂಶಯಗಳು ಉದ್ಭವಿಸಿದ್ದವು. ಜಗದ್ಗುರು ರೇಣುಕರ ಕೃಪೆಯಿಂದ ಆತನು ತನ್ನೆಲ್ಲ ಸಂದೇಹಗಳನ್ನು ದೂರ ಮಾಡಿಕೊಂಡು ತಾನು ಕೃತಕೃತ್ಯನಾದೆನೆಂದು ಉದ್ಗಾರವನ್ನು ತೆಗೆದು ತನ್ನ ಕೃತಜ್ಞತೆಯನ್ನು ಪೂಜ್ಯರಿಗೆ ಸಮರ್ಪಿಸಿದ್ದನ್ನು ಕೇಳುತ್ತೇವೆ. ಅಂದು ಅಗಸ್ತ್ಯನಿಗೆ ಉಪದೇಶ ಮಾಡಿದ ಆ ಉಪದೇಶವೇ ಇಂದು ಸಿದ್ಧಾಂತ ಶಿಖಾಮಣಿಯ ರೂಪದಲ್ಲಿ ಪ್ರತಿಯೊಬ್ಬರ ಹಸ್ತವನ್ನು ತಲುಪಿದೆ. ಇದು ಗುರುಕಾರುಣ್ಯದ ಶ್ರೇಷ್ಠವಾದ ಫಲವು. ಆದ್ದರಿಂದ ಪ್ರತಿಯೊಬ್ಬರು ಗುರುವಿನಲ್ಲಿ ಶ್ರದ್ಧೆಯುಳ್ಳವರಾಗಿ ಸ್ವಾಧ್ಯಾಯಾದಿಗಳನ್ನು ಮಾಡುತ್ತಿದ್ದರೆ, ಕೇವಲ ಸ್ವಾಧ್ಯಾಯದಿಂದ ಅರ್ಥವಾಗದೇ ಇದ್ದದ್ದು ಗುರುವಿನ ಕೃಪೆಯಿಂದ ಸುಲಭವಾಗುವದು. ಹೀಗೆ ಗುರುಕಾರುಣ್ಯ ಮತ್ತು ಸ್ವಪ್ರಯತ್ನ ಇವೆರಡರ ಮೂಲಕವಾಗಿ ಜ್ಞಾನವನ್ನು ಪಡೆದುಕೊಳ್ಳುವದೇ ಜೀವನದ ಪರಮಗುರಿಯಾಗಿರುತ್ತದೆ.

ನಾವು ಪಡೆದುಕೊಳ್ಳಬೇಕಾದ ಜ್ಞಾನದ ಸ್ವರೂಪವೇನು? ಮತ್ತು ಅದರ ಮಹತ್ತ್ವವೇನು? ಎಂಬುದನ್ನು ತಿಳಿಸಲೋಸುಗ ಪೂಜ್ಯಪಾದರು ಪುನಃ–

ಜ್ಞಾನಂ ಪರಶಿವಾದ್ವೈತ ಪರಿಪಾಕ ವಿನಿಶ್ಚಯಃ।
ಯೇನ ಸಂಸಾರ ಸಂಬಂಧವಿನಿ ವೃತ್ತಿರ್ಭವೇತ್ಸತಾಮ್॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಾತ್ಮಕಮಿದಂ ಸರ್ವಂ ಶಿವಾದನ್ಯಂ ನ ವಿದ್ಯತೇ ।
ಶಿವೋಽಹಮಿತಿ ಯಾ ಬುದ್ಧಿಸ್ತದೇವ ಜ್ಞಾನಮುತ್ತಮಮ್॥

(ಸಿ.ಶಿ.೧೬–೩೦–೩೩೧)

ಈ ವಿಧವಾಗಿ ಆದೇಶಿಸಿದ್ದಾರೆ. ಈ ಜಗತ್ತಿನಲ್ಲಿ ಪರಶಿವಬ್ರಹ್ಮಕ್ಕಿಂತಲೂ ಭಿನ್ನವಾದದ್ದು ಬೇರೊಂದಾವದೂ ಇಲ್ಲ ಎಂಬ ನಿಶ್ಚಯಕ್ಕೆನೇ ಇಲ್ಲಿ ಜ್ಞಾನವೆಂದು ಕರೆದಿದ್ದಾರೆ. ಈ ಜ್ಞಾನದಿಂದಲೇ ಸಂಸಾರದ ಬಂಧನದಿಂದ ನಿವೃತ್ತಿಯು ಲಭ್ಯವಾಗುತ್ತದೆ. ಈ ಜಗತ್ತೆಲ್ಲವೂ ಶಿವಸ್ವರೂಪವಾಗಿದೆ ಶಿವನಿಗಿಂತಲೂ ಭಿನ್ನವಾದದ್ದು ಬೇರೊಂದಿಲ್ಲ, ಇದೂ ಅಲ್ಲದೆ ನಾನೂ ಸಹ ಶಿವಸ್ವರೂಪನೇ ಆಗಿದ್ದೇನೆ. ಎಂಬ ತಿಳುವಳಿಕೆಯೇ ಉತ್ತಮವಾದ ಜ್ಞಾನವು ಎಂಬುದು ಪೂಜ್ಯಪಾದರ ಆಶಯವಾಗಿದೆ.

ಸಾಧಕನ ಲಕ್ಷ್ಯವು ಸಂಪೂರ್ಣವಾಗಿ ಶಿವನ ಕಡೆಯಿದ್ದಾಗ ಅವನ ಸಂಸಾರದ ಸಂಬಂಧಗಳೆಲ್ಲ ಕಳಚಿ ಹೋಗುತ್ತವೆ. ನಮ್ಮ ಚಿತ್ತವು ಎಲ್ಲಿರುತ್ತದೆಯೋ ಅಲ್ಲಿಯೇ ನಮ್ಮ ನಿಜವಾದ ವಾಸ್ತವ್ಯವು ಇರುತ್ತದೆ. ನಮ್ಮ ಶರೀರವು ಮನೆಯಲ್ಲಿದ್ದು ಚಿತ್ತವು ಬಜಾರದಲ್ಲಿದ್ದರೆ ನಾವು ಬಜಾರದಲ್ಲಿದ್ದಂತೆಯೇ. ಹಾಗೆಯೇ ನಾವು ಪ್ರಪಂಚದಲ್ಲಿದ್ದು ನಮ್ಮ ಮನಸ್ಸನ್ನು ಶಿವನ ಚಿಂತನೆಯಲ್ಲಿ ತೊಡಗಿಸಿದಾಗ ನಾವು ಶಿವರೂಪವಾಗುತ್ತೇವೆ. ಅಷ್ಟೇ ಅಲ್ಲ ಪ್ರಪಂಚವೆಲ್ಲವೂ ಶಿವಮಯವಾಗಿಯೇ ತೋರುತ್ತವೆ. ಆಗ ಪ್ರಪಂಚದೊಂದಿಗೆ ಇರುವ ಮೊದಲಿನ ಸಂಬಂಧಗಳೆಲ್ಲ ಇಲ್ಲದಾಗಿ ಹೋಗುತ್ತವೆ. ಹೀಗೆ ಈ ಶಿವಾದ್ವೈತಜ್ಞಾನದಿಂದ ಸಾಧಕನು ಮುಕ್ತಿಯನ್ನು ಪಡೆಯುತ್ತಾನೆ.

ಪ್ರಪಂಚದ ಸಂಬಂಧವನ್ನು ಏಕೆ ತಾನೆ ಕಡಿದುಕೊಳ್ಳಬೇಕು? ಎಂಬ ಪ್ರಶ್ನೆಯು ಉತ್ಪನ್ನವಾದಾಗ ಅದರ ಸಮಾಧಾನ ಏನೆಂದರೆ ಎಲ್ಲಿಯವರೆಗೆ ನಮ್ಮ ಮನಸ್ಸು ಪ್ರಪಂಚದೊಂದಿಗೆ ಸಂಬಂಧವಾಗಿರುತ್ತದೆಯೋ ಅಲ್ಲಿಯವರೆಗೆ ಪ್ರಾಪಂಚಿಕವಾದ ಕ್ಷಣಿಕವಾದ ಸುಖದ ಲಾಭವಾಬಹುದೇ ವಿನಃ ಅಖಂಡವಾದ ಪರಮಾನಂದದ ಪ್ರಾಪ್ತಿಯು ಆಗಲಾರದು. ಅಖಂಡವಾದ ಆನಂದವು ಯಾರಿಗೆ ತಾನೆ ಬೇಕಾಗಿಲ್ಲ? ಅರ್ಥಾತ್ ಎಲ್ಲರಿಗೂ ಬೇಕೇ ಬೇಕು. ಅಂದಾಗ ಪ್ರಪಂಚದ ಸಂಬಂಧವನ್ನು ಬಿಟ್ಟು ಪರಮಾತ್ಮನೊಂದಿಗೆ ಸಂಬಂಧವನ್ನು ಬೆಳೆಯಿಸಿಕೊಳ್ಳಬೇಕು. ಸಂಸಾರಿಕ ವಸ್ತು ಇಲ್ಲವೆ ವ್ಯಕ್ತಿಯ ಸಂಬಂಧವಾದರೆ ಒಂದು ಕ್ಷಣ ಕಾಲ ಸುಖ ದೊರೆತರೂ ಆ ವಸ್ತು ಇಲ್ಲವೆ ವ್ಯಕ್ತಿಯು ನಮ್ಮಿಂದ ದೂರವಾದಾಗ ದುಃಖವೇ ಪ್ರಾಪ್ತವಾಗುತ್ತದೆ. ಹೀಗೆ ಸಂಸಾರದಲ್ಲಿ ಸುಖವು ಸಾಸಿವೆಕಾಳಿನಷ್ಟಿದ್ದರೆ ದುಃಖವು ಸಾಗರದಷ್ಟಿರುತ್ತದೆ. ಪರಮಾತ್ಮನೊಂದಿಗೆ ಒಮ್ಮೆ ಮನಸ್ಸು ಸಮರಸವಾಯಿತೆಂದರೆ ಎಂದೂ ಅದರ ವಿಯೋಗವಾಗುವದಿಲ್ಲ, ಅಂತೆಯೇ ಅಖಂಡವಾದ ಆನಂದವು ನಿರಂತರವಾಗಿ ಪ್ರಾಪ್ತವಾಗುತ್ತಿರುತ್ತದೆ. ಆದ್ದರಿಂದಲೇ ಸಂಸಾರದ ಸಂಬಂಧವನ್ನು ಬಿಟ್ಟು ಪರಮಾತ್ಮನೊಂದಿಗೆ ಸಂಬಂಧವನ್ನು ಬೆಳೆಸಬೇಕೆಂಬುದಾಗಿ ಪೂಜ್ಯರು ಆದೇಶಿಸಿದ್ದಾರೆ.

ಈ ಪ್ರಪಂಚದಲ್ಲಿ ವಿಚಾರಣೀಯಗಳಾದ ವಸ್ತುಗಳೆಂದರೆ ಮೂರೇ ಮೂರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವ, ಜಗತ್ತು ಮತ್ತು ಈಶ್ವರ. ಇವು ನೋಡಲಿಕ್ಕೆ ಮೂರಾಗಿ ಕಂಡರೂ ಮೂರೂ ಒಂದೇ ಆಗಿರುತ್ತವೆ. ಶಿವನೋರ್ವನೆ ಜೀವ ಮತ್ತು ಜಗತ್ತಿನ ಸ್ವರೂಪವನ್ನು ತಾಳಿರುತ್ತಾನೆ. ಇದರ ರಹಸ್ಯವು ಯಾರಿಗೆ ತಿಳಿಯುವದೋ ಅವರು ಇದೆಲ್ಲವೂ ಶಿವರೂಪವಾಗಿದೆ. ಶಿವನಿಗಿಂತಲೂ ಭಿನ್ನವಾದುದು ಬೇರೊಂದಿಲ್ಲ, ಮತ್ತು ನಾನೂ ಸಹ ಶಿವಸ್ವರೂಪನೇ ಆಗಿದ್ದೇನೆ ಎಂಬುದಾಗಿ ಅನುಭವಾತ್ಮಕವಾದ ಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಇದುವೇ ಉತ್ತಮ ಜ್ಞಾನವು ಇದರಿಂದಲೇ ಜೀವಾತ್ಮನಿಗೆ ಮುಕ್ತಿಯು ಪ್ರಾಪ್ತವಾಗುವದು.

ಪೂಜ್ಯಪಾದರು ಈ ಜ್ಞಾನದ ಮಹತ್ತ್ವವನ್ನು ವಿವರಿಲೋಸುಗ ಪುನಃ—

ಅಂಧೋ ಯಥಾ ಪುರಸ್ಥಾನಿ ವಸ್ತುನಿ ಚ ನ ಪಶ್ಯತಿ।
ಜ್ಞಾನಹೀನಸ್ತಥಾ ದೇಹೀ ನಾತ್ಮಸ್ಥಂ ವೀಕ್ಷತೇ ಶಿವಮ್॥

(ಸಿ.ಶಿ. ೧೬–೩೯)

ಹೀಗೆ ಉಪದೇಶಿಸಿದ್ದಾರೆ. ಕುರುಡನಾದ ವ್ಯಕ್ತಿಯು ತನ್ನ ಎದುರಿಗಿರುವ ವಸ್ತುಗಳನ್ನು ನೋಡಲು ಅಸಮರ್ಥನಾಗಿರುವಂತೆ ಜ್ಞಾನಹೀನನಾದ ಜೀವಿಯು ಸಹ ತನ್ನೊಳಗಿರುವ ಪರಮಾತ್ಮನನ್ನು ನೋಡಲು ಸಮರ್ಥನಾಗಿರುವದಿಲ್ಲ, ಎಂಬುದು ಪೂಜ್ಯಪಾದರ ಆಶಯವಾಗಿದೆ.

ಜೀವ ಹಾಗೂ ಪರಮಾತ್ಮರು ವಸ್ತುತಃ ಭಿನ್ನರಲ್ಲ ಆದರೂ ಅಜ್ಞರಾದ ಜೀವಿಗಳು ಜೀವ ಈಶ್ವರರನ್ನು ಭಿನ್ನವಾಗಿ ತಿಳಿಯುವರಷ್ಟೇ ಅಲ್ಲ, ಒಬ್ಬನೇ ಆದ ಈಶ್ವರನನ್ನು ಅನೇಕ ನಾಮರೂಪಗಳಿಂದ ಪೂಜಿಸುವರು. ಇದೂ ಅಲ್ಲದೆ ತಮ್ಮ ತಮ್ಮ ದೇವರ ನಾಮರೂಪಗಳಲ್ಲಿ ಅಭಿಮಾನವನ್ನು ತಾಳಿ ಬೇರೊಬ್ಬ ದೇವರ ಭಕ್ತರೊಂದಿಗೆ ಕಲಹವನ್ನು ಮಾಡುತ್ತಿರುತ್ತಾರೆ.

ಒಂದು ಊರಿನಲ್ಲಿ ಊರಿನ ಪ್ರಮುಖರೆಲ್ಲ ಸೇರಿ ಒಂದು ಮಂದಿರವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ವಿಶ್ವಸ್ಥ ಮಂಡಳಿಯೊಂದನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮುಖಾಂತರ ಮಂದಿರ ನಿರ್ಮಾಣಕ್ಕಾಗಿ ಧನವನ್ನು ಸಂಗ್ರಹಿಸಿ ಬಹು ಸುಂದರವಾದ ಮಂದಿರವನ್ನು ನಿರ್ಮಾಣಗೊಳಿಸಿದರು. ಅದರ ಒಳ ಆವರಣವನ್ನು ಹಾಲುಗಲ್ಲಿನಿಂದ (ಸಂಗಮವರಿ) ಅಲಂಕರಿಸಿದರು. ಇನ್ನು ಇದರಲ್ಲಿ ಯಾವ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕು ಎಂಬ ವಿಚಾರಕ್ಕಾಗಿ ಊರಿನ ಭಕ್ತರೆಲ್ಲರನ್ನು ಕೂಡಿಸಿ ಸಮಾಲೋಚನಾ ಸಭೆಯನ್ನು ಕರೆದರು. ಸಭೆಯಲ್ಲಿ ಮುಖ್ಯಸ್ಥನು ಮೂರ್ತಿಯ ಬಗ್ಗೆ ಪ್ರಸ್ತಾಪ ಮಾಡಲಾಗಿ ಕೂಡಿದ ಜನರಲ್ಲಿ ಕೆಲವರು ಶಿವಲಿಂಗವನ್ನು ಪ್ರತಿಷ್ಠಾಪಿಸಬೇಕೆಂದು ಹೇಳಿದರೆ ಮತ್ತೆ ಕೆಲವರು ರಾಮ ವಿಗ್ರಹವನ್ನು ಪ್ರತಿಷ್ಠಾಪಿಸುವಂತೆ ಆಗ್ರಹಪಡಿಸಿದರು. ಮತ್ತೆ ಕೆಲವರು ಶ್ರೀಕೃಷ್ಣನ ಮೂರ್ತಿಯನ್ನು ಸ್ಥಾಪಿಸಬೇಕೆಂದು ಸಲಹೆ ಇತ್ತರು. ಎಲ್ಲರ ಮಾತನ್ನು ಕೇಳಿದ ನಂತರ ವಿಶ್ವಸ್ಥ ಮಂಡಳಿಯವರು ಒಂದು ಶಿವಲಿಂಗವನ್ನು ಸ್ಥಾಪಿಸುವದಾಗಿ ನಿರ್ಣಯಿಸಿ ಶುಭ ಮುಹೂರ್ತದಲ್ಲಿ ಶಿವಲಿಂಗದ ಪ್ರಾಣ ಪ್ರತಿಷ್ಠೆಯನ್ನು ಮಾಡಿಸಿದರು. ಆಗ ಆ ಮಂದಿರಕ್ಕೆ ಕೇವಲ ಶಿವಭಕ್ತರೇ ಬರತೊಡಗಿದರೇ ವಿನಃ ಬೇರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವರ ಭಕ್ತರು ಒಬ್ಬರೂ ಬರಲಿಲ್ಲ. ಕೆಲವು ದಿನಗಳ ನಂತರ ವಿಶ್ವಸ್ಥ ಮಂಡಳದವರು ಪುನಃ ತಮ್ಮೊಳಗಿನ ವಿಚಾರವಿನಿಮಯ ಮಾಡಿಕೊಂಡು ಆ ಶಿವಲಿಂಗವನ್ನು ವಿಸರ್ಜಿಸಿ ಮಂದಿರದಲ್ಲಿ ಶ್ರೀರಾಮನ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಅಂದಿನಿಂದ ಆ ಮಂದಿರಕ್ಕೆ ರಾಮಭಕ್ತರ ಆಗಮನವು ಅಧಿಕವಾಯಿತು. ಆದರೆ ಉಳಿದವರಾರೂ ಬರಲೇ ಇಲ್ಲ. ಆಗ ವಿಶ್ವಸ್ಥ ಮಂಡಳಿಯವರು ಪುನಃ ವಿಚಾರವಿನಿಮಯವನ್ನು ಮಾಡಿ ಆ ರಾಮ ಮೂರ್ತಿಯನ್ನು ವಿಸರ್ಜಿಸಿ ಬಾಲಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಆಗ ಆ ಮಂದಿರಕ್ಕೆ ಕೇವಲ ಕೃಷ್ಣಭಕ್ತರೇ ಬರತೊಡಗಿದರೇ, ವಿನಃ ಬೇರಾರೂ ಆ ಕಡೆಗೆ ಹಣಿಕಿ ಸಹ ಹಾಕಲಿಲ್ಲ. ಊರಿನ ಜನರ ಈ ವಿಚಿತ್ರವಾದ ವರ್ತನೆಯನ್ನು ಕಂಡು ಮಂದಿರದ ವಿಶ್ವಸ್ಥರೆಲ್ಲ ಬೇಸರಗೊಂಡರು. ಎಲ್ಲರೂ ಈ ಮಂದಿರಕ್ಕೆ ಬರಲೆಂಬ ಉದ್ದೇಶದಿಂದ ಇದನ್ನು ನಿರ್ಮಿಸಿದರೆ, ಕೆಲವರು ಬಂದರೆ ಬೇರೆ ಕೆಲವರು ಬರುತ್ತಿಲ್ಲ ಹಾಗಾದರೆ ಈ ಮಂದಿರಕ್ಕೆ ಎಲ್ಲರೂ ಬರುವ ಹಾಗೆ ಮಾಡಬೇಕಾದರೆ ಏನು ಮಾಡಬೇಕು ಎಂಬುದಾಗಿ ಆಲೋಚಿಸಿ ಕೊನೆಗೆ ಆ ಕೃಷ್ಣನ ವಿಗ್ರಹವನ್ನು ತೆಗೆದುಹಾಕಿ ಆ ಮಂದಿರವನ್ನು ಸುಂದರವಾದ ಹೋಟೆಲನ್ನಾಗಿ ಪರಿವರ್ತಿಸಿದರಂತೆ ಆಗ ಊರಿನ ಎಲ್ಲ ಕೋಮುಗಳ ಜನರು ಆ ಹೋಟಲಿನತ್ತ ತಂಡ ತಂಡವಾಗಿ ಬಂದು ಅಲ್ಲಿಯ ತಿಂಡಿ ತಿನಿಸುಗಳನ್ನು ತಿಂದು ಆನಂದ ಪಡತೊಡಗಿದರು.

ನೋಡಿದಿರಾ ಅಜ್ಞಜೀವಿಗಳ ಈ ಸ್ಥಿತಿಯನ್ನು ''ಏಕಂ ಸತ್ ವಿಪ್ರಾಃ ಬಹುಧಾ ವದಂತಿ'' ಅಂದರೆ ದೇವನೊಬ್ಬ ನಾಮ 'ಹಲವು' ಎಂಬುದಾಗಿ ವೇದ ಶಾಸ್ತ್ರಗಳು ಅನಾದಿಕಾಲದಿಂದ ಘೋಷಣೆಯನ್ನು ಮಾಡುತ್ತ ಬಂದಿದ್ದರೂ ಅಜ್ಞ ಜೀವಿಗಳ ಮನಸ್ಸಿನಲ್ಲಿ ಆ ಮಾತು ಇನ್ನೂ ಪ್ರವೇಶಿಸಿಯೇ ಇಲ್ಲ. ಜೀವಿ ಜೀವಿಗಳಂತೂ ಜಗಳಾಡುತ್ತಲೇ ಇರುತ್ತವೆ. ಅದರ ಜೊತೆಗೆ ಇವರು ದೇವರ ಹೆಸರಿನಲ್ಲಿಯೂ ಸಹ ಜಗಳ ಮಾಡುತ್ತಲಿದ್ದಾರೆ. ಅಂತೆಯೇ ಪೂಜ್ಯಪಾದರು ಈ ಅಜ್ಞರನ್ನು ಅಂಧರಿಗೆ ಹೋಲಿಸಿ ದ್ದನ್ನು ಕಾಣುತ್ತೇವೆ. ಅಂಧರು ಎದುರಿಗಿರುವ ವಸ್ತುವನ್ನು ಕಾಣದಿರುವಂತೆ ಅಜ್ಞನಾದವನು ಜಗತ್ತಿನ ಒಳಹೊರಗೆಲ್ಲ ತುಂಬಿಕೊಂಡಿರುವ ಪರಮಾತ್ಮನನ್ನು ಕಾಣಲು ಅಸಮರ್ಥನಾಗಿದ್ದಾನೆ. ದೇವರ ಯಥಾರ್ಥ ಜ್ಞಾನವಿಲ್ಲದ ಮೂಲಕ ದೇವರ ನಾಮರೂಪಗಳಲ್ಲಿ ಇವರು ಕಲಹವನ್ನು ಮಾಡುತ್ತಿರುತ್ತಾರೆ. ಜ್ಞಾನಿಯಾದ ವ್ಯಕ್ತಿಗೆ ಪರಮಾತ್ಮನ ಅನೇಕ ರೂಪಗಳಲ್ಲಿ ಒಂದೇ ಆದ ತತ್ತ್ವವು ಅನುಭವ ಗೋಚರ ವಾಗುತ್ತಿರುತ್ತದೆ.

ಶಿವದರ್ಶನದಿಂದ ಆಗುವ ಪ್ರಯೋಜನವೇನು? ಎಂಬ ವಿಷಯವನ್ನು ಕುರಿತು ಪೂಜ್ಯಪಾದರು ಪುನ :–

ಶಿವಸ್ಯದರ್ಶನಾತ್ ಪುಂಸಾಂ ಜನ್ಮರೋಗನಿವರ್ತನಮ್।
ಶಿವದರ್ಶನಮಪ್ಯಾಹುಃ ಸುಲಭಂ ಜ್ಞಾನಚಕ್ಷುಷಾಮ್॥

(ಸಿ.ಶಿ.೧೬–೩೩)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ತೆರನಾಗಿ ಉಪದೇಶಿಸಿದ್ದಾರೆ. ಶಿವಜ್ಞಾನದಿಂದ ಶಿವದರ್ಶನವು ಉಂಟಾಗುತ್ತದೆ. ಅದರಿಂದ ಜನ್ಮ–ಮರಣವೆಂಬ ರೋಗವು ನಿರ್ಮೂಲವಾಗುತ್ತದೆ. ಈ ಶಿವದರ್ಶನವು ಜ್ಞಾನಚಕ್ಷುಗಳಿಗೆ ಸಾಧ್ಯವೇ ವಿನಃ ಚರ್ಮಚಕ್ಷುಗಳಿಗೆ ಅದು ಅಸಾಧ್ಯವೇ ಸರಿ ಎಂಬುದು ಪೂಜ್ಯರ ಆಶಯವಾಗಿದೆ.

ಜನ್ಮ ಮತ್ತು ಮರಣಗಳು ಬಹು ದೊಡ್ಡದಾದ ರೋಗಗಳು. ಇವು ಜೀವಾತ್ಮನಿಗೆ ಸೃಷ್ಟಿಯ ಆರಂಭದಿಂದಲೇ ಪ್ರಾಪ್ತವಾಗಿವೆ. ಇವುಗಳಿಗೆ ಅಸಾಧ್ಯರೋಗವೆಂದು ಕರೆದಿದ್ದಾರೆ. ಜನ್ಮದ ನಂತರ ಮರಣ, ಮರಣದ ನಂತರ ಜನ್ಮ ಇದೊಂದು ಎಂದೂ ನಿಲ್ಲದಿರುವ ಭವಚಕ್ರವು. ಅಂತೆಯೇ ಪೂಜ್ಯಪಾದರು :–

ಜಾತಸ್ಯ ಹಿ ಧ್ರುವೋಮೃತ್ಯುಃ ಧ್ರುವಂಜನ್ಮಮೃತಸ್ಯಚ।
ಜಂತುರ್ಮರಣ ಜನ್ಮಾಭ್ಯಾಂ ಪರಿಭ್ರಮತಿ ಚಕ್ರವತ್ ॥

(ಸಿ.ಶಿ. ೫–೬೩)

ಹೀಗೆ ಅಪ್ಪಣೆ ಕೊಡಿಸಿದ್ದಾರೆ. ಈ ಚಕ್ರದಿಂದ ಅಥವಾ ಈ ಭವರೋಗದಿಂದ ಬಿಡುಗಡೆಯಾಗಬೇಕಾದರೆ ಭವರೋಗ ವೈದ್ಯನಾದ ಸದ್ಗುರುವಿಗೆ ಶರಣಾಗತನಾಗಿ ಅವನಿಂದ ಶಿವಾದ್ವೈತ ಜ್ಞಾನವನ್ನು ಪಡೆದು ಶಿವದರ್ಶನವನ್ನು ಮಾಡಿಕೊಳ್ಳಬೇಕು. ಶಿವ ದರ್ಶನವಾದಾಗಲೇನೇ ಈ ರೋಗವು ಸಂಪೂರ್ಣವಾಗಿ ಇಲ್ಲವಾಗುವದು.

ಜ್ಞಾನದ ಹೊರತಾಗಿ ಅಜ್ಞಾನವು ನಿವೃತ್ತಿಯಾಗದು ಎಂಬುದನ್ನು ದೃಷ್ಟಾಂತ ಮೂಲಕವಾಗಿ ಪ್ರತಿಪಾದಿಸಿ ಈ ಜ್ಞಾನಾಗಮ ಸ್ಥಲವನ್ನು ಪರಿಸಮಾಪ್ತಿಗೊಳಿಸಲೋಸುಗ ಪೂಜ್ಯಪಾದರು ಪುನಃ–

ದೀಪಂ ವಿನಾ ಯಥಾ ಗೇಹೇ ನಾಂಧಕಾರೋ ನಿವರ್ತತೇ।
ಜ್ಞಾನಂವಿನಾ ತಥಾ ಚಿತ್ತೇ ಮೋಹೋಽಪಿ ನ ನಿವರ್ತತೇ ॥

(ಸಿ.ಶಿ. ೧೬–೩೪)

ಈ ವಿಧವಾಗಿ ಉಪದೇಶಿಸಿದ್ದಾರೆ. ಮನೆಯೊಳಗಿನ ಕತ್ತಲೆಯು ದೀಪವಿಲ್ಲದೆ ನಿವೃತ್ತಿಯಾಗದಿರುವಂತೆ ಶಿವಾದ್ವೈತ ಜ್ಞಾನವಿಲ್ಲದೆ ಚಿತ್ತದೊಳಗಿನ ಮೋಹವು ನಿವೃತ್ತಿಯಾಗಲಾರದು ಎಂಬುದು ಪೂಜ್ಯರ ಆಶಯವಾಗಿದೆ.

ಕತ್ತಲೆಯು ಮನುಷ್ಯನಿಗೆ ಸಹನವಾಗುವದಿಲ್ಲ. ಸೂರ್ಯಾಸ್ತವಾದೊಡನೆ ಮನೆಯಲ್ಲಿ ದೀಪವನ್ನು ಹಚ್ಚಿ ಬೆಳಕನ್ನು ಮಾಡಿಕೊಳ್ಳುತ್ತಾನೆ. ವಿದ್ಯುದ್ದೀಪಗಳ ಬಳಕೆಯಾಗುತ್ತಿರುವ ಇಂದಿನ ವಿಜ್ಞಾನಯುಗದಲ್ಲಿ ವಿದ್ಯುತ್ಪ್ರವಾಹವು ನಿಂತುಹೋಗಿ ಮನೆಯಲ್ಲಿ ಕತ್ತಲೆಯು ಆವರಿಸಿದಾಗ ಮನೆಯೊಳಗಿನವರು ಸುಮ್ಮನೆ ಕೂಡ್ರುವದಿಲ್ಲ. ಆಗಿಂದಾಗಲೇ ಪರ್ಯಾಯ ವ್ಯವಸ್ಥೆಯನ್ನು ಮಾಡಿ ಎಣ್ಣೆಯ ದೀಪವನ್ನೋ ಮೇಣಬತ್ತಿಯ ದೀಪವನ್ನೋ ಇಲ್ಲವೆ ಗ್ಯಾಸನ್ನೋ ಹೊತ್ತಿಸಿ ಮನೆಯಲ್ಲಿ ಬೆಳಕನ್ನು ಮಾಡಿಕೊಳ್ಳುತ್ತಾರೆ. ಒಂದು ಆಶ್ಚರ್ಯವೆಂದರೆ ಹೊರಗಿನ ಈ ಕತ್ತಲೆಯನ್ನು ಒಂದು ಕ್ಷಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾತ್ರ ಸಹಿಸದ ವ್ಯಕ್ತಿಯು ಮನದೊಳಗಿನ ಮೋಹವೆಂಬ ಕತ್ತಲೆಯನ್ನು ಯುಗಯುಗಳಿಂದ ಸಂರಕ್ಷಿಸಿಕೊಂಡು ಬಂದಿದ್ದಾನೆ.

ಈ ಮೋಹಕತ್ತಲೆಯಿಂದಾಗಿಯೇ ಇವನಿಗೆ ಭವರೋಗವು ಅಂಟಿಕೊಂಡಿದೆ. ಇದರ ನಿವೃತ್ತಿಯಾಗಬೇಕಾದರೆ ಶಿವಾದ್ವೈತ ಜ್ಞಾನವೇ ಬೇಕು. ದೀಪವಿಲ್ಲದೆ ಹೊರಗಿನ ಕತ್ತಲೆಯು ಹರಿದುಹೋಗದಂತೆ ಶಿವಾದ್ವೈತ ಜ್ಞಾನವಿಲ್ಲದೆ ಈ ಚಿತ್ತದಲ್ಲಿಯ ಮೋಹವು ನಿವೃತ್ತಿಯಾಗುವದಿಲ್ಲ. ಯಾವ ಕ್ಷಣದಲ್ಲಿ ಆ ಜ್ಞಾನವು ಉದಿಸುವದೋ ಅದೇ ಕ್ಷಣದಲ್ಲಿ ಈ ಮೋಹವು ಹೇಳಹೆಸರಿಲ್ಲದಂತಾಗುತ್ತದೆ. ಮೋಹವು ಅದೆಷ್ಟೇ ದೀರ್ಘಕಾಲ ದಾಗಿದ್ದರೂ ಒಂದು ಕ್ಷಣಾರ್ಧದಲ್ಲಿ ಉದಿಸಿದ ಜ್ಞಾನವು ಅದನ್ನು ಇಲ್ಲದಾಗಿಸುತ್ತದೆ. ಏಕೆಂದರೆ ಜ್ಞಾನ ಮತ್ತು ಮೋಹಗಳಲ್ಲಿ ಬೆಳಕು ಮತ್ತು ಕತ್ತಲೆಗಳಲ್ಲಿ ''ಸಹ ಅನವಸ್ಥಾಯಿ ವಿರೋಧ'' ವಿರುತ್ತದೆ. ಅಂದರೆ ಅವೆರಡೂ ಕೂಡಿರಲು ಸಾಧ್ಯವಾಗುವದಿಲ್ಲ. ಕತ್ತಲೆಯು ಎಷ್ಟು ದಿನ ಹಳೆಯದಾಗಿದ್ದರೂ ಕ್ಷಣ ಕಾಲದಲ್ಲಿ ಉದಿಸಿದ ಚಿಕ್ಕದಾದ ಬೆಳಕಿನಿಂದ ಪಲಾಯನಗೊಳ್ಳುವದು. ಆದ್ದರಿಂದ ಸಣ್ಣದೀಪದಿಂದ ದೊಡ್ಡ ಕತ್ತಲೆಯು, ಸದ್ಯಃ ಉದಿತವಾದ ಜ್ಞಾನದಿಂದ ಅನಾದಿಮೋಹವು ಅದು ಹೇಗೆ ತಾನೆ ದೂರವಾಗಬಲ್ಲದು? ಎಂಬ ಪ್ರಶ್ನೆಗೆ ಇಲ್ಲಿ ಅವಕಾಶವೇ ಇಲ್ಲ. ಇದೇ ವಿಷಯವನ್ನೇ ಶ್ರೀಬಸವಣ್ಣನವರು ತಮ್ಮ–

ಕರಿಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ,
ಗಿರಿಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯ,
ತಮ್ಮಂಧ ಘನ ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ.
ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನ ಬಹುದೇ?
ಬಾರದಯ್ಯಾ ಕೂಡಲಸಂಗಮದೇವಾ,

ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ. ಹೀಗೆ ಅನಾದಿಮೋಹ ನಿವೃತ್ತಿಗೆ ಜ್ಞಾನವೇ ಅಮೋಘವಾದ ಉಪಾಯವಾದ ಕಾರಣ ಈ ಜ್ಞಾನಾಗಮ ಸ್ಥಲದಲ್ಲಿ ಶ್ರೀಜಗದ್ಗುರು ರೇಣುಕಭಗವತ್ಪಾದರು ಅನೇಕ ಯುಕ್ತಿ ಪ್ರಮಾಣ ಮತ್ತು ದೃಷ್ಟಾಂತಗಳ ಮೂಲಕ ವಾಗಿ ಜ್ಞಾನದ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ. ಪೂಜ್ಯರ ಆದೇಶದಂತೆ ಪ್ರತಿಯೊಬ್ಬರೂ ಆ ಶಿವಾದ್ವೈತ ಜ್ಞಾನವನ್ನು ಪಡೆದು ಮೋಹ ಮುಕ್ತರಾಗಿ ಸರ್ವವಿಧದ ದುಃಖಗಳಿಂದ ಬಿಡುಗಡೆಯಾಗಿ ಅಖಂಡವಾದ ಆನಂದವನ್ನು ಅನುಭವಿಸಿ ಸುಖಿಗಳಾಗಿರೆಂಬುದಾಗಿ ಹರಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ। ೨ ಆಗಸ್ಟ, ೧೯೯೩
(ಜ್ಞಾನಮಂದಿರ, ಜಂಗಮವಾಡಿಮಠ, ವಾರಾಣಾಸಿ.)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಕಾಯಸ್ಥಲ

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಶ್ರೀಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀಸಿದ್ಧಾಂತಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಶ್ರೀಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವಕುಲಕೋಟಿಯನ್ನು ಕುರಿತು ಉಪದೇಶ ಮಾಡಿದ ಅನುಪಮಗ್ರಂಥವೇ ಶ್ರೀಸಿದ್ಧಾಂತಶಿಖಾಮಣಿಯು; ಈ ಗ್ರಂಥದ ಲಿಂಗ ಷಟ್‌ಸ್ಥಲಾಂತರ್ಗತವಾದ ಮಾಹೇಶ್ವರಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನಗಳನ್ನು ಶ್ರವಣಮಾಡುತ್ತ ಬಂದಿದ್ದೀರಿ. ನಿನ್ನೆಯ ದಿನ ಜ್ಞಾನಾಗಮ ಸ್ಥಲದ ಅವಶಿಷ್ಟ ಭಾಗದ ಕೆಲವು ವಿಷಯಗಳನ್ನು ಕೂಲಂಕುಷವಾಗಿ ಕೇಳಿ ತಿಳಿದಿದ್ದೀರಿ. ಇಂದು ಕ್ರಮಪ್ರಾಪ್ತವಾದ ಸಕಾಯಸ್ಥಲದ ಬಗೆಗೆ ವಿವೇಚಿಸೋಣ.

ಮನುಷ್ಯ ಜನ್ಮದ ಸಾರ್ಥಕತೆಯಾಗಬೇಕಾದರೆ ಆತ್ಮಜ್ಞಾನವನ್ನು ಮಾಡಿಕೊಳ್ಳ ಬೇಕೆಂಬುದಾಗಿ ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಹೀಗೆ ಆತ್ಮಜ್ಞಾನವನ್ನು ಪಡೆದ ಬಳಿಕ ಈ ಶರೀರದ ಪ್ರಯೋಜನವೇನು? ಜ್ಞಾನವಾದ ಮೇಲೆ ಈ ದೇಹವನ್ನು ಸಂರಕ್ಷಿಸಬೇಕೋ ಅಥವಾ ತ್ಯಾಗಮಾಡಿ ಬಿಡಬೇಕೋ ಎಂಬ ಪ್ರಶ್ನೆಯುದ್ಭವಿಸಿದಾಗ ಜ್ಞಾನಿಯು ಸಹ ದೇಹವನ್ನು ಸಂರಕ್ಷಿಸಬೇಕು ಎಂಬ ವಿಷಯಗಳನ್ನು ಪ್ರತಿಪಾದಿಸುವ ಸ್ಥಲವೇ ಸಕಾಯಸ್ಥಲವು. ಈ ವಿಷಯವನ್ನು ಪ್ರಸ್ತಾಪಿಸಲೋಸುಗ ಪೂಜ್ಯಪಾದರು–

ಪರಸ್ಯ ಯಾ ತನುರ್ಜ್ಞೇಯಾಽ ದೇಹಕರ್ಮಾಭಿಮಾನಿನಃ ।
ತಯಾ ಸಕಾಯೋ ಲೋಕೋಽಯಂ ತದಾತ್ಮತ್ವನಿರೂಪಣಾತ್ ॥

(ಸಿ.ಶಿ.೧೬–೩೫)

ಈ ರೀತಿಯಾಗಿ ಉಪದೇಶಿಸಿದ್ದಾರೆ. ಪೂರ್ವದಲ್ಲಿ ಹೇಳಿದ ಜ್ಞಾನಾಗಮಸಂಪನ್ನನಾದ ಶಿವಯೋಗಿಯು ದೇಹವನ್ನು ಧರಿಸಿದವನಾಗಿದ್ದರೂ ನಾನು ಸ್ಥೂಲನು, ನಾನು ಮಾಡುವವನು ಎಂದು ಮೊದಲಾದ ದೇಹ ಹಾಗೂ ಅದರ ಕರ್ಮದ ಅಭಿಮಾನವನ್ನು ಸಾಮಾನ್ಯ ಜನರಂತೆ ಈತನು ಮಾಡಿಕೊಳ್ಳುವದಿಲ್ಲ. ಹೀಗೆ ದೇಹಾಭಿಮಾನವನ್ನು ಮಾಡಿಕೊಳ್ಳದಿದ್ದರೂ ದೇಹವನ್ನೂ ಧರಿಸಿರೋಣದರಿಂದ ಇವನು ಸಕಾಯನೆಂದೇ ಕರೆಯಲ್ಪಡುತ್ತಾನೆ.ಯೋಗಿಯ ಈ ದೇಹವು ಸಾಮಾನ್ಯಜನರಿಗೆ ಆತ್ಮದಷ್ಟೇ ಪೂಜ್ಯವಾಗಿರುತ್ತದೆ. ಎಂಬುದು ಪೂಜ್ಯರ ಅಭಿಪ್ರಾಯವಾಗಿದೆ.

ದೇಹಾಭಿಮಾನವಿಲ್ಲದೇ ಇರುವ ಶಿವಯೋಗಿಗೆ ಈ ಕಾಯದ ಅಪೇಕ್ಷೆಯಾದರೂ ಏಕೆ ? ಎಂಬ ಪ್ರಶ್ನೆಯುದ್ಭವಿಸಿದಾಗ ಪೂಜ್ಯಪಾದರು ಅದಕ್ಕೆ ಉತ್ತರ ರೂಪವಾಗಿ–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಯಂ ವಿನಾ ಸಮಸ್ತಾನಾಂ ನ ಕ್ರಿಯಾ ನ ಚ ಭಾವನಾ।
ನ ಜ್ಞಾನಂ ಯತ್ತತೋ ಯೋಗೀ ಕಾಯವಾನೇವ ಸಂಚರೇತ್ ॥

(ಸಿ.ಶಿ.೧೬-೩೬)

ಹೀಗೆ ಉಪದೇಶಿಸಿದ್ದಾರೆ. ಈ ಜಗತ್ತಿನಲ್ಲಿರುವ ಪ್ರತಿಯೊಬ್ಬರಿಗೂ ಕಾಯವು ಬೇಕೇ ಬೇಕು. ಅದಿಲ್ಲದಿದ್ದರೆ ಕ್ರಿಯೆಯಾಗಲಿ ಧ್ಯಾನವಾಗಲಿ ಮತ್ತು ಜ್ಞಾನವಾಗಲೀ ಇವು ಯಾವುಗಳೂ ಸಂಭವಿಸಲಾರವು. ಇವುಗಳಲ್ಲಿಯಾವದನ್ನೇ ಸಾಧಿಸಬೇಕಾದರೂ ಕಾಯವು ಬೇಕೇ ಬೇಕು. ಆದಕಾರಣ ಶಿವಯೋಗಿಗೂ ಸಹ ಶರೀರವು ಅವಶ್ಯವಾಗಿ ಬೇಕೆಂಬುದು ಪೂಜ್ಯರ ತಾತ್ಪರ್ಯವಾಗಿದೆ.

''ಶರೀರಮಾದ್ಯಂ ಖಲು ಧರ್ಮ ಸಾಧನಮ್'' ಎಂಬ ಈ ಕಾಲಿದಾಸೋಕ್ತಿಯಲ್ಲಿ ಶರೀರವು ಧರ್ಮ ಸಂಪಾದನೆಯ ಸಾಧನವಾಗಿರುತ್ತದೆ. ಆದ್ದರಿಂದ ಇದನ್ನು ರಕ್ಷಿಸಿಗೊಂಡು ಇದರಿಂದ ಲೌಕಿಕ ಹಾಗೂ ಪಾರಲೌಕಿಕ ಕಾರ್ಯಗಳನ್ನು ಸಾಧಿಸಬೇಕೆಂಬುದಾಗಿ ಉಪದೇಶಿಸಲಾಗಿದೆ. ಜ್ಞಾನದ ಪ್ರಾಪ್ತಿಯಾಗುವವರೆಗೆ ಶರೀರದ ಪ್ರಯೋಜನವು ನಮಗಾಗಿ ಇದ್ದರೆ ಜ್ಞಾನೋತ್ತರದಲ್ಲಿ ತಾನು ಜೀವನ್ಮುಕ್ತಿಯ ವಿಲಕ್ಷಣವಾದ ಆನಂದವನ್ನು ಅನುಭವಿಸಲು ತನಗೆ ಅನುಕೂಲವಾಗುವದರ ಜೊತೆಗೆ ಅನ್ಯರ ಉದ್ಧಾರಕ್ಕಾಗಿಯೂ ಅದು ಉಪಯೋಗವಾಗುವದು. ಜ್ಞಾನಿಯಾದ ವ್ಯಕ್ತಿಯು ತನ್ನ ಸನ್ನಿಧಿಗೆ ಬಂದ ಅನೇಕ ಜನರಿಗೆ ಮಾರ್ಗದರ್ಶನ ಮಾಡಿ ಅವರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಉಪದೇಶಿಸಿ ಕೊನೆಗೆ ಅವರನ್ನೂ ಸಹ ಜ್ಞಾನಿಗಳನ್ನಾಗಿ ಮಾಡುತ್ತಾನೆ. ಹೀಗೆ ಜ್ಞಾನಿಯ ಶರೀರವು ಹೆಚ್ಚು ಹೆಚ್ಚು ಪರೋಪಕಾರಕ್ಕಾಗಿ ಉಪಯೋಗವಾಗುತ್ತಿರುತ್ತದೆ. ಮಹರ್ಷಿ ವ್ಯಾಸನು ಸ್ಕಂದ ಪುರಾಣದ–

ಆಕಾಶಗಮನಾದೀನಿ ಸರ್ವಜ್ಞಾನಸಮೃದ್ಧಯಃ।
ಭವಂತ್ಯೇವ ಸ ಕಾಯಸ್ಯ ಶಿವಸಂಸಕ್ತಚೇತಸಃ॥

ಈ ಶ್ಲೋಕದಲ್ಲಿ ಜ್ಞಾನಿಯಾದ ಶಿವಯೋಗಿಯು ಕಾಯವಂತನಾಗಿದ್ದರೆ ಆಕಾಶ ಗಮನಾದಿ ಅಲೌಕಿಕ ಕ್ರಿಯೆಗಳನ್ನು ಮಾಡಬಹುದಲ್ಲದೆ ಸರ್ವಜ್ಞತ್ವಾದಿ ಸದ್ಗುಣಗಳ ಸಮೃದ್ಧಿಯನ್ನು ಅಭಿವ್ಯಕ್ತಗೊಳಿಸಲು ಸಹಾಯಕವಾಗುವದೆಂಬುದಾಗಿ ಅಭಿಪ್ರಾಯ ಪಟ್ಟಿದ್ದಾನೆ. ಆದ್ದರಿಂದ ಅಜ್ಞ ಜೀವಿಗಳಿಗೆ ಕಾಯವು ಬೇಕಾಗಿರುವಂತೆ ಜ್ಞಾನಿಗೂ ಸಹ ಅದು ಅವಶ್ಯಕವಾದುದು. ಲಿಂಗಪೂಜಾದಿ ಸತ್ಕರ್ಮಗಳನ್ನು ಮಾಡಲಿಕ್ಕೆ ಮತ್ತು ಧ್ಯಾನ–ಧಾರಣಾದಿಗಳನ್ನು ಅಭ್ಯಸಿಸಲಿಕ್ಕೆ ಮತ್ತು ಜ್ಞಾನವನ್ನು ಸಂಪಾದಿಸಲಿಕ್ಕೆ ಕಾಯವು ಅವಶ್ಯವಾಗಿರೋಣದರಿಂದ ಜ್ಞಾನಿಯೂ ಸಹ ಕಾಯವಂತನಾಗಿರ ಬೇಕೆಂಬುದೇ ಆಚಾರ್ಯರ ಆಶಯವಾಗಿದೆ.

ಶಿವಜ್ಞಾನ ಸಂಪನ್ನನಾದ ಶಿವಯೋಗಿಗೆ ಭೋಗಮೋಕ್ಷಾದಿ ಸ್ಥಲಗಳು ದೊರೆಯಬೇಕಾದರೆ ಕಾಯವೇ ಬೇಕೆನ್ನುವ ವಿಷಯವನ್ನು ಸ್ಪಷ್ಟಪಡಿಸಲೋಸುಗ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜ್ಯರು ಪುನಃ–

ಶಿವೈಕ ಜ್ಞಾನಯುಕ್ತಸ್ಯ ಯೋಗಿನೋಽ ಪಿ ಮಹಾತ್ಮನಃ।
ಕಾಯಯೋಗೇನ ಸಿದ್ಧ್ಯಂತಿ ಭೋಗಮೋಕ್ಷಾದಯಃ ಸದಾ॥

(ಸಿ.ಶಿ.೧೬–೩೭)

ಈ ವಿಧವಾಗಿ ಉಪದೇಶಿಸಿದ್ದಾರೆ. ಶಿವಾದ್ವೈತ ಜ್ಞಾನ ಸಂಪನ್ನನೂ ಯೋಗಿಯೂ ಮಹಾತ್ಮನೂ ಆದ ಆ ಜ್ಞಾನಿಗೆ ಕಾಯವಿದ್ದಾಗಲೇನೇ ಭೋಗ ಹಾಗೂ ಮೋಕ್ಷಗಳು ಸಿದ್ಧಿಸುವವು. ಆದ್ದರಿಂದ ಜ್ಞಾನಸಂಪನ್ನನಿಗೂ ಸಹ ದೇಹ ಸಂಬಂಧವು ಬೇಕೆ ಬೇಕೆಂಬುದೂ ಪೂಜ್ಯರ ಆಶಯವಾಗಿದೆ.

ಶಾಸ್ತ್ರದಲ್ಲಿ ಸ್ಥೂಲ ಶರೀರಕ್ಕೆ ಭೋಗಾಯಿತನವೆಂದು ಕರೆದಿದ್ದಾರೆ. ಅಂದರೆ ಸುಖದುಃಖಾದಿಗಳನ್ನು ಉಪಭೋಗಿಸಲು ಶರೀರವು ಮಾಧ್ಯಮವಾಗಿದೆ ಇದಿಲ್ಲದೆ ಸುಖದುಃಖಗಳ ಭೋಗವನ್ನು ಪಡೆಯಲು ಸಾಧ್ಯವಾಗುವದಿಲ್ಲ. ಇದೂ ಅಲ್ಲದೆ ಶಾಶ್ವತವಾದ ಜೀವನ್ಮುಕ್ತಿಯ ವಿಲಕ್ಷಣವಾದ ಆನಂದವನ್ನು ಅನುಭವಿಸಬೇಕಾದರೂ ಶರೀರವು ಅತ್ಯವಶ್ಯವು. ಜ್ಞಾನಿಯಾದವನು ತನ್ನ ಪ್ರಾರಬ್ಧಕರ್ಮವನ್ನು ಅನುಭವಿಸಲೇ ಬೇಕಾದ್ದರಿಂದ ಶರೀರವಿರದಿದ್ದರೆ ಅದು ಹೇಗೆ ಸಾಧ್ಯವಾಗಬಲ್ಲದು ? ಆದ್ದರಿಂದ ಪ್ರಾರಬ್ಧಕರ್ಮದ ಭೋಗ ಹಾಗೂ ಜೀವನ್ಮುಕ್ತಿಯ ವಿಲಕ್ಷಣವಾದ ಆನಂದ ಇವೆರಡನ್ನೂ ಅನುಭವಿಸಲು ಜ್ಞಾನಿಗೂ ಸಹ ಶರೀರವು ಬೇಕೆಂಬುದಾಗಿ ತಿಳಿಯಬೇಕು.

ಆತ್ಮತತ್ತ್ವವು ಪ್ರಕಟವಾಗಿ ತೋರಬೇಕಾದರೂ ಶರೀರವೇ ಬೇಕೆಂಬ ವಿಷಯವನ್ನು ಸ್ಪಷ್ಟಪಡಿಸಲೋಸುಗ ಪೂಜ್ಯರು ದೃಷ್ಟಾಂತ ಮೂಲಕ ಪುನಃ –

ಕಾಷ್ಠಂವಿನಾ ಯಥಾ ವಹ್ನಿರ್ಜಾಯತೇ ನ ಪ್ರಕಾಶವಾನ್।
ಮೂರ್ತಿಂ ವಿನಾ ತಥಾ ಯೋಗಿ ನಾತ್ಮತತ್ವಪ್ರಕಾಶವಾನ್॥
ಮೂರ್ತ್ಯಾತ್ಮನ್ಯೆವದೇವಸ್ಯ ಯಥಾ ಪೂಜ್ಯತ್ವ ಕಲ್ಪನಾ।
ತಥಾ ದೇಹಾತ್ಮನ್ಯೆವಾಸ್ಯ ಪೂಜ್ಯತ್ವಂ ಪರಯೋಗಿನಃ॥

(ಸಿ.ಶಿ.೧೬, ೩೮–೩೯)

ಈ ತೆರನಾಗಿ ಉಪದೇಶಿಸಿದ್ದಾರೆ. ವ್ಯಾಪಕವಾದ ಅಗ್ನಿಯು ಪ್ರಕಾಶಮಾನವಾಗಿ ತೋರಬೇಕಾದರೆ ಅದಕ್ಕೆ ಆಲಂಬನರೂಪವಾದ ಕಟ್ಟಿಗೆ ಮುಂತಾದ ಇಂಧನವು ಅವಶ್ಯವಾಗಿ ಬೇಕಾಗುವಂತೆ ಶಿವಯೋಗಿಯ ಶರೀರವಿಲ್ಲದೆ ಆತ್ಮವು ಪ್ರಕಾಶಮಾನವಾಗಿ ತೋರಲಾರದು. ತನ್ನ ಇಷ್ಟದೇವರ ಪೂಜೆಯನ್ನು ಮಾಡಬೇಕಾದರೆ ಆ ದೇವರ ವಿಗ್ರಹವು ಅವಶ್ಯವಾಗಿರುವಂತೆ ಪರಶಿವಯೋಗಿಯ ಪೂಜೆಯಾಗಬೇಕಾದರೂ ಅವನ ದೇಹವು ಸಹ ಬೇಕೆ ಬೇಕೆಂಬುದು ಪೂಜ್ಯರ ಆಶಯವಾಗಿದೆ.

ಕಟ್ಟಿಗೆ, ಗ್ಯಾಸು, ಕಲ್ಲಿದ್ದಲು, ಇದ್ದಿಲು, ಕುಳ್ಳು, ಡೀಜೇಲ್ ಮತ್ತು ಪೆಟ್ರೋಲು ಮುಂತಾದ ಇಂಧನಗಳ ಅವಲಂಬನವಿದ್ದಾಗ ಅಗ್ನಿಯು ಪ್ರಕಟವಾಗಿ ತೋರುವಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇಹವಿಲ್ಲದೆ ಆತ್ಮದ ಪ್ರಾಕಟ್ಯವೂ ಸಹ ಆಗುವದಿಲ್ಲ. ಇದೇ ಪ್ರಕಾರವಾಗಿ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ದೇವ ಹಾಗೂ ಗುರುಗಳ ಪೂಜೆಯು ವಿಧಿಸಲ್ಪಟ್ಟಿದೆ. ಹಿಂದೂ ಸಂಸ್ಕೃತಿಯಲ್ಲಿ ಅನೇಕ ದೇವೋಪಾಸನ ಪದ್ಧತಿಯು ರೂಢಿಯಲ್ಲಿದೆ. ಭಕ್ತಾದಿಗಳು ತಮ ತಮಗೆ ಅಭೀಷ್ಟವಾದ ದೇವರನ್ನು ಪೂಜಿಸಬೇಕಾದರೆ ಆಯಾ ದೇವರುಗಳ ವಿಗ್ರಹಗಳನ್ನು ನಿರ್ಮಿಸಿ ಪ್ರತಿಷ್ಠಾಪಿಸಿ ಪೂಜೆಮಾಡುವದನ್ನು ಲೋಕದಲ್ಲಿ ಕಾಣುತ್ತೇವೆ. ನಿರ್ಗುಣ ನಿರಾಕಾರನಾದ ದೇವರನ್ನು ಪೂಜಿಸುವದು ಸಾಧ್ಯವಾಗದ ಕಾರಣ ಅದಕ್ಕೊಂದು ಆಕಾರವನ್ನು ಕೊಟ್ಟು ಆ ಆಕಾರದ ಮೂರ್ತಿಯಲ್ಲಿ ಹೇಗೆ ದೇವರನ್ನು ಪೂಜೆಮಾಡಲಾಗುವದೋ ಅದರಂತೆ ''ಹ್ಯಾತ್ಮಜ್ಞ ಮರ್ಚಯೇತ್ ಭೂತಿಕಾಮಃ '' ಎಂಬ ಉಕ್ತಿಗನುಸಾರವಾಗಿ ಆತ್ಮಜ್ಞನಾದ ಸದ್ಗುರುವನ್ನು ಸಹ ಪೂಜೆಮಾಡಬೇಕಾಗುತ್ತದೆ. ಇಲ್ಲಿ ಗುರುವಿನ ಪೂಜೆಯೆಂದರೆ ಆತನ ಪಾದಪೂಜೆಯೇ ಪ್ರಮುಖವಾದುದು. ಆತನು ಶರೀರಧಾರಿಯಾಗಿದ್ದಾಗಲೇ ಪಾದ ಪೂಜೆಯು ಸಂಭವಿಸುವದು. ಹೀಗೆ ದೇವರ ಪೂಜೆಯನ್ನು ವಿಗ್ರಹದ ಮೂಲಕವಾಗಿ ಮಾಡುವಂತೆ ಸದ್ಗುರುವಿನ ಪೂಜೆಯನ್ನು ಆತನ ಶರೀರದ ಮುಖಾಂತರ ಮಾಡಲಾಗುವದು. ಆ ಸದ್ಗುರುವು ಶರೀರವನ್ನು ತ್ಯಾಗ ಮಾಡಿದಾಗಲೂ ಅವನ ಆ ಶರೀರಕ್ಕೆ ಆದರಪೂರ್ವಕವಾಗಿ ಕ್ರಿಯಾಸಮಾಧಿಯನ್ನು ನಿರ್ಮಿಸಿ ಅದನ್ನೂ ಸಹ ಪೂಜೆ ಮಾಡುವ ಪದ್ಧತಿಯು ಲೋಕದಲ್ಲಿ ಇದೆ.

ನಿಷ್ಕಲನಾದ ಶಿವನೂ ಸಹ ಸೃಷ್ಟ್ಯಾದಿ ಕ್ರಿಯೆಗಳನ್ನು ಮಾಡಲೋಸುಗ ಸಾಕಾರರೂಪವನ್ನು ತಾಳುತ್ತಾನೆಂಬ ವಿಷಯವನ್ನು ಪ್ರತಿಪಾದಿಸಲೋಸುಗ ಪೂಜ್ಯರು ಪುನಃ –

ನಿಷ್ಕಲೋಹಿ ಮಹಾದೇವಃ ಪರಿಪೂರ್ಣಃ ಸದಾಶಿವಃ।
ಜಗತ್ ಸೃಷ್ಟ್ಯಾದಿಸಂಸಿದ್ಧ್ಯೈಮೂರ್ತಿಮಾನೇವ ಭಾಸತೇ॥

(ಸಿ. ಶಿ. ೧೬–೪೦)

ಹೀಗೆ ಉಪದೇಶಿಸಿದ್ದಾರೆ. ನಿಷ್ಕಲನೂ ಪರಿಪೂರ್ಣನೂ ಸದಾ ಕಲ್ಯಾಣಕಾರನೂ ಆದ ಮಹಾದೇವನು ಜಗತ್ತಿನ ಸೃಷ್ಟಿ ಸ್ಥಿತಿ ಮತ್ತು ಸಂಹಾರ ಕಾರ್ಯವನ್ನು ಮಾಡಲೋಸುಗ ದಿವ್ಯ ದೇಹಗಳನ್ನು ಧರಿಸುತ್ತಾನೆ. ಸಾಕಾರವಾದ ದಿವ್ಯ ದೇಹವನ್ನು ಧರಿಸದೆ ಜಗತ್ತಿನ ಸೃಷ್ಟ್ಯಾದಿ ಕಾರ್ಯಗಳನ್ನು ಮಾಡಲಿಕ್ಕೆ ಬರುವದಿಲ್ಲೆಂಬುದು ಪೂಜ್ಯರ ಆಶಯವಾಗಿದೆ. ಆದ್ದರಿಂದ ಏನೇ ವ್ಯವಹಾರವನ್ನು ಯಾರೇ ಮಾಡಬೇಕಾದರೂ ಅವರಿಗೆ ಶರೀರವು ಅವಶ್ಯವಾಗಿ ಬೇಕೆಂಬುದು ತಿಳಿದುಬರುತ್ತದೆ.

ಬ್ರಹ್ಮಾದಿ ದೇವತೆಗಳು ಮತ್ತು ಮುಮುಕ್ಷುಗಳಾದ ಮುನಿಗಳೂ ಸಹ ತಮ್ಮ ತಮ್ಮ ವ್ಯವಹಾರ ನಿರ್ವಹಣೆಗೆ ಶರೀರವನ್ನು ಧರಿಸಿಗೊಂಡಿರುತ್ತಾರೆಂಬ ವಿಷಯವನ್ನು ಸ್ಪಷ್ಟಪಡಿಸಲೋಸುಗ ಪೂಜ್ಯರು ಪುನಃ –

ಬ್ರಹ್ಮಾದ್ಯಾ ದೇವತಾಃ ಸರ್ವಾ ಮುನಯೋಽಪಿ ಮುಮುಕ್ಷವಃ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಯವಂತೋ ಹಿ ಕುರ್ವಂತಿ ತಪಃ ಸರ್ವಾರ್ಥಸಾಧಕಮ್ ॥
ತಪೋ ಹಿ ಮೂಲಂ ಸರ್ವಾಸಾಂ ಸಿದ್ಧೀನಾಂ ಯಜ್ಜಗತ್ರಯೇ ।
ತಪಸ್ತತ್ಕಾಯ ಮೂಲಂ ಹಿ ತಸ್ಮಾತ್ಕಾಯಂ ನ ಸಂತ್ಯಜೇತ್ ॥
(ಸಿ. ಶಿ. ೧೬,೪೧–೪೨)

ಈ ತೆರನಾಗಿ ಉಪದೇಶಿಸಿದ್ದಾರೆ. ಬ್ರಹ್ಮ–ವಿಷ್ಣು ಮೊದಲಾದ ದೇವತೆಗಳು ಮತ್ತು ಮೋಕ್ಷಾಪೇಕ್ಷಿಗಳಾದ ಸಕಲ ಮಹರ್ಷಿಗಳು ತಮ್ಮ ತಮ್ಮ ಮನೋರಥದ ಪೂರ್ತಿಗಾಗಿ ಶರೀರಗಳನ್ನು ಧರಿಸಿಗೊಂಡು ತಪಸ್ಸನ್ನು ಮಾಡುತ್ತಿರುತ್ತಾರೆ. ಈ ಮೂರು ಲೋಕಗಳಲ್ಲಿ ಯಾವದೇ ಸಿದ್ಧಿಯನ್ನು ಪಡೆಯಬೇಕಾದರೂ ಅದಕ್ಕಾಗಿ ತಪಸ್ಸನ್ನು ಆಚರಿಸ ಬೇಕಾಗುವದು. ತಪಸ್ಸನ್ನಾಚರಿಸಬೇಕಾದರೆ ಕಾಯವು ಬೇಕೇ ಬೇಕು, ಅಂದಾಗ ಆ ಶರೀರದ ಬಗ್ಗೆ ವೈರಾಗ್ಯವನ್ನು ತಾಳಿ ಯಾರೂ ಇದನ್ನು ತ್ಯಾಗ ಮಾಡಲು ಪ್ರಯತ್ನ ಮಾಡಬಾರದೆಂಬುದಾಗಿ ಪೂಜ್ಯರ ಆಶಯವಾಗಿದೆ.

ಯೋಗ ಶಾಸ್ತ್ರದಲ್ಲಿ ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ಮತ್ತು ವಶಿತ್ವಗಳೆಂಬ ಅಷ್ಟ ಸಿದ್ಧಿಗಳು ವರ್ಣಿಸಲ್ಪಟ್ಟಿವೆ. ಇವುಗಳಲ್ಲಿ ಯಾವದೇ ಸಿದ್ಧಿಯನ್ನು ಪಡೆಯಬೇಕಾದರೆ ಕಠೋರವಾದ ತಪಶ್ಚರ್ಯವನ್ನು ಆಚರಿಸಬೇಕಾಗುವದು. ಈ ತಪಶ್ಚರ್ಯವನ್ನು ಆಚರಿಸಲಿಕ್ಕೆ ಶರೀರವು ಸಹಾಯಕವಾಗುತ್ತದೆ. ಶರೀರವೇ ಇಲ್ಲದೇ ಹೋದರೆ ತಪಶ್ಚರ್ಯವೂ ಇಲ್ಲ ಮತ್ತು ಸಿದ್ಧಿಗಳೂ ಸಹ ದೊರೆಯಲಾರವು. ಕಾಶಿಗೆ ಬಂದಿರುವ ನಿಮ್ಮೆಲ್ಲರಲ್ಲಿ ಅನೇಕ ಜನರು ತಪಸ್ಸನ್ನಾಚರಿಸಲೋಸುಗ ಕಾಶೀ ಕ್ಷೇತ್ರಕ್ಕೆ ಬಂದವರಾಗಿದ್ದೀರಿ, ನಿಮ್ಮ ಊರಿನಲ್ಲಿ ಮಾಡುವ ತಪಶ್ಚರ್ಯಕ್ಕಿಂತಲೂ ಈ ಸ್ಥಾನದಲ್ಲಿ ಮಾಡಿದ ತಪಶ್ಚರ್ಯಕ್ಕೆ ಒಂದು ನೂರು ಪಟ್ಟು ಹೆಚ್ಚು ಫಲವು ಪ್ರಾಪ್ತಿಯಾಗುತ್ತದೆ. ಏಕೆಂದರೆ ಈ ಸ್ಥಾನದಲ್ಲಿ ಅನಾದಿಕಾಲದಿಂದಲೂ ಆಚಾರ್ಯರು ಋಷಿಮುನಿಗಳು ತಪಶ್ಚರ್ಯವನ್ನು ಮಾಡಿ ಸ್ಥಾನವನ್ನು ಪಾವನಗೊಳಿಸಿದ್ದಾರೆ. ಆ ಪುಣ್ಯಪ್ರಭಾವದಿಂದ ಇಲ್ಲಿ ಚಿತ್ತವು ಹೆಚ್ಚು ಕಾಲದವರೆಗೆ ಏಕಾಗ್ರವಾಗಿರುತ್ತದೆ ಹಾಗೂ ಅತ್ಯಂತ ಸಾತ್ವಿಕವಾಗಿರುತ್ತದೆ. ಚಿತ್ತವು ಎಷ್ಟು ಏಕಾಗ್ರವಾಗುವದೋ ಅಷ್ಟು ಹೆಚ್ಚಿನ ಫಲವು ದೊರೆಯುವದು. ನಮ್ಮ ನಮ್ಮ ಊರುಗಳು ಹಾಗೂ ನಾವು ವಾಸಿಸುವ ಮನೆಗಳು ಭೋಗ ಭೂಮಿಗಳಾದ್ದರಿಂದ ಅಲ್ಲಿ ಅಷ್ಟೊಂದು ಚಿತ್ತ ಸ್ಥೈರ್ಯವು ಉಂಟಾಗುವದಿಲ್ಲ. ಅಂತೆಯೇ ಪುಣ್ಯಕ್ಷೇತ್ರದಲ್ಲಿ ಮಾಡಿದ ತಪಸ್ಸು ಹೆಚ್ಚಿನ ಫಲದಾಯಕವಾಗುತ್ತದೆಂಬುದಾಗಿ ತಿಳಿದುಕೊಳ್ಳಬೇಕು. ಹೀಗೆ ಸಿದ್ಧಿಗಳಿಗೆ ಮೂಲವಾದದ್ದು ತಪಶ್ಚರ್ಯವು ಮತ್ತು ಆ ತಪಸ್ಸಿಗೆ ಮೂಲ ಸಾಧನವಾದದ್ದು ಶರೀರವು ಆದ ಕಾರಣ ಸರ್ವಾರ್ಥ ಸಾಧನಿಭೂತವಾದ ಶರೀರವನ್ನು ಆರೋಗ್ಯ ವಂತವಾಗಿಟ್ಟುಕೊಂಡು ಸಕಾಯನೆನಿಸಿ ಪ್ರಾರಬ್ಧ ಕರ್ಮದ ಪರಿಸಮಾಪ್ತಿಯ ವರೆಗೆ ಅದನ್ನು ರಕ್ಷಿಸಿಗೊಂಡು ಲೋಕೋದ್ಧಾರಕ್ಕಾಗಿ ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕು. ದೇಹವು ಆತ್ಮವಲ್ಲವಾದರೂ ಆತ್ಮಜ್ಞಾನದ ಪ್ರಾಪ್ತಿಗಾಗಿ ಅದರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಶ್ಯಕತೆ ಇರುತ್ತದೆ. ಆತ್ಮಜ್ಞಾನದ ನಂತರ ಲೋಕಕಲ್ಯಾಣಕ್ಕಾಗಿ ಅದರ ಉಪಯೋಗವನ್ನು ಮಾಡುತ್ತ ಕಾಲ ಕಳೆಯಬೇಕೆಂಬುದೇ ಈ ಸಕಾಯ ಸ್ಥಲದ ಮುಖ್ಯ ರಹಸ್ಯವಾಗಿದೆ. ಕಾರಣ ನೀವೆಲ್ಲರೂ ಇದರ ಮರ್ಮವನ್ನು ತಿಳಿದು ಕಾಯದ ಸದುಪಯೋಗವನ್ನು ಮಾಡಿಕೊಳ್ಳಿರೆಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ. ೩ ಅಗಷ್ಟ ೧೯೯೩

(ಜ್ಞಾನಮಂದಿರ, ಜಂಗಮವಾಡಿಮಠ, ವಾರಾಣಸಿ.)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವಚನ-೮

ಅಕಾಯಸ್ಥಲ-೧

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಶ್ರೀಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಹೃದಯಂಗಮವಾಗಿ ಸಾಗುತ್ತಲಿವೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವಕುಲಕೋಟಿಯನ್ನು ಕುರಿತು ಉಪದೇಶ ಮಾಡಿದ ಅಪ್ರತಿಮ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿಯು. ಈ ಗ್ರಂಥದ ಲಿಂಗ ಷಟ್‌ಸ್ಥಲಾಂತರ್ಗತವಾದ ಮಾಹೇಶ್ವರಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನಗಳನ್ನು ಶ್ರವಣ ಮಾಡುತ್ತ ಬಂದಿದ್ದೀರಿ. ನಿನ್ನೆಯ ದಿನ ಸಕಾಯಸ್ಥಲದ ಬಗ್ಗೆ ಕೆಲವು ವಿಚಾರಗಳನ್ನು ಕೂಲಂಕುಷವಾಗಿ ಕೇಳಿ ತಿಳಿದಿದ್ದೀರಿ. ಇಂದು ಕ್ರಮಪ್ರಾಪ್ತವಾದ ಅಕಾಯಸ್ಥಲದ ಬಗೆಗೆ ಪರ್ಯಾಲೋಚಿಸೋಣ.

ಪೂರ್ವದಲ್ಲಿ ಹೇಳಿದ ಸಕಾಯಸ್ಥಲದ ಶಿವಯೋಗಿಯು ಯಾವಾಗ ದೇಹಾಭಿಮಾನಹೀನನಾಗುತ್ತಾನೆಯೋ ಅರ್ಥಾತ್ ದೇಹವಿದ್ದರೂ ದೇಹದ ಅಭಿಮಾನವನ್ನು ಸಂಪೂರ್ಣವಾಗಿ ಇಲ್ಲದಾಗಿಸಿಕೊಳ್ಳುತ್ತಾನೆಯೋ ಆಗ ಅವನಿಗೇನೇ ಅಕಾಯನೆಂಬುದಾಗಿ ಕರೆಯಲಾಗುತ್ತದೆ. ಅವನ ಸ್ವರೂಪವನ್ನು ಅಥವಾ ಅವನ ಅಕಾಯ ಸ್ಥಿತಿಯನ್ನು ಪ್ರತಿಪಾದಿಸುವ ಸ್ಥಲವೇ 'ಅಕಾಯ ಸ್ಥಲ'.

ಕಾಯಗಳು ಎಂಭತ್ತಾಲ್ಕು ಲಕ್ಷ ಪ್ರಕಾರದವುಗಳಾಗಿರುತ್ತವೆ. ಅವುಗಳಲ್ಲಿ ಮನುಷ್ಯ ಕಾಯವೇ ಶ್ರೇಷ್ಠದೆಂಬುದಾಗಿ ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಶ್ರೀಮದ್ ಭಾಗವತದ 'ಮಹತಾ ಪುಣ್ಯ ಪುಣ್ಯೇ ನ ಕ್ರೀತೇಽಯಂ ಕಾಯನೌಸ್ತ್ವಯಾ' ಎಂಬ ಉಕ್ತಿಗನು ಸಾರವಾಗಿ ಮನುಷ್ಯ ಶರೀರವೆಂದರೆ ಒಂದು ನೌಕೆಯಿದ್ದಂತೆ, ಜೀವಾತ್ಮನು ಬಹಳಷ್ಟು ಪುಣ್ಯವೆಂಬ ಧನವನ್ನು ಕೊಟ್ಟು ಅದನ್ನು ಕೊಂಡುಕೊಂಡಿದ್ದಾನೆ. ಸಂಸಾರವೆಂಬ ಸಾಗರದಿಂದ ದಾಟಲು ಇದು ಸಹಾಯಕವಾಗಿರುತ್ತದೆ. ಸಾಗರವನ್ನು ದಾಟಬೇಕಾದ ನೌಕೆಯು ಛಿದ್ರರಹಿತವಾಗಿರಬೇಕು. ಮನಸ್ಸಿನಲ್ಲಿ ರಾಗದ್ವೇಷಾದಿ ಭಾವನೆಗಳು ಉದಿಸಿದವೆಂದರೆ ಅವುಗಳೇ ಈ ನೌಕೆಗೆ ಬಿದ್ದ ಛಿದ್ರಗಳಿದ್ದಂತೆ, ನೌಕೆಗೆ ಬಿದ್ದ ಛಿದ್ರದಿಂದ ಸಮುದ್ರದ ಜಲವು ಒಳಸೇರುವಂತೆ ಈ ರಾಗದ್ವೇಷಗಳ ಮೂಲಕವಾಗಿ ಸಂಸಾರವು ಅಂತರಂಗವನ್ನು ಪ್ರವೇಶಿಸುವದು. ಆದ್ದರಿಂದ ಈ ನೌಕೆಗೆ ಛಿದ್ರ ಬೀಳದ ಹಾಗೆ ಕಾಳಜಿವಹಿಸಿ ಇದರಿಂದ ಸುರಕ್ಷಿತವಾಗಿ ಸಂಸಾರ ಸಾಗರವನ್ನು ದಾಟಿ ಮುಕ್ತಿಯನ್ನು ಪಡೆಯುವದು ಮನುಷ್ಯ ಜೀವನದ ಮುಖ್ಯ ಗುರಿಯಾಗಿದೆ.

ಜೀವಾತ್ಮನಿಗೆ ಈ ಮನುಷ್ಯದೇಹವೆಂಬ ನೌಕೆಯು ಅದೆಷ್ಟೋ ಸಾರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೊರಕಿದ್ದರೂ ಅದಕ್ಕೆ ಅನೇಕ ಛಿದ್ರಗಳನ್ನು ಹಾಕಿ ಈ ಜೀವಿಯು ಸಂಸಾರ ಸಾಗರದಲ್ಲಿ ಮುಳುಮುಳುಗಿ ಹೋಗಿದ್ದಾನೆ. ಇಲ್ಲಿಯವರೆಗೆ ಆಗಿದೆಲ್ಲ ಆಗಿಹೋಯಿತು. ಇನ್ನು ಮುಂದಾದರೂ ಇಂತಹ ಅನರ್ಥವಾಗದಂತೆ ಪ್ರತಿಯೊಬ್ಬರೂ ಕಾಳಜಿ ವಹಿಸಿ ಸದ್ಯಃ ದೊರೆತ ಈ ಮಾನವ ದೇಹದ ಸದುಪಯೋಗವನ್ನು ಮಾಡಿಕೊಳ್ಳಬೇಕು. ಶರೀರವಿಲ್ಲದೆ ಪೂಜಾದಿ ಕ್ರಿಯೆಗಳಾಗಲಿ, ಧ್ಯಾನಾದಿ ಭಾವನೆಗಳನ್ನಾಗಲಿ ಮಾಡಲು ಸಾಧ್ಯವಾಗುವ ದಿಲ್ಲ. ಅಷ್ಟೇ ಅಲ್ಲ ಶಿವಜ್ಞಾನವನ್ನೂ ಸಹ ಪಡೆಯಲು ಶಕ್ಯವಾಗುವದಿಲ್ಲ. ಆದ್ದರಿಂದಲೇ ಸಕಾಯ ಸ್ಥಲದಲ್ಲಿ ಶಿವಜ್ಞಾನಸಂಪನ್ನನಾದ ಶಿವಯೋಗಿಯೂ ಸಹ ಶರೀರವನ್ನು ಸುರಕ್ಷಿತವಾಗಿಟ್ಟುಕೊಂಡು ಅದರ ಸದುಪಯೋಗವನ್ನು ಪಡೆಯಬೇಕೆಂಬುದಾಗಿ ತಿಳುಹಿಸಲಾಗಿದೆ.

ಸದ್ಯಃ ಪೂಜ್ಯಪಾದರು ಕಾಯವಿದ್ದರೂ ಕಾಯದ ಅಭಿಮಾನಾದಿಗಳು ಇರಬಾರದೆನ್ನುವ ವಿಷಯವನ್ನು ನಿರೂಪಿಸಲೋಸುಗ ಈ ಅಕಾಯ ಸ್ಥಲದಲ್ಲಿ ಪುನಃ –

ಔಪಚಾರಿಕ ದೇಹಿತ್ವಾಜ್ಜಗದಾತ್ಮತ್ವ ಭಾವನಾತ್।
ಮಾಯಾ ಸಂಬಂಧರಾಹಿತ್ಯಾದ ಕಾಯೋ ಹಿ ಪರಃ ಸ್ಮೃತಃ॥

(ಸಿ. ಶಿ. ೧೬–೪೩)

ಈ ರೀತಿಯಾಗಿ ಉಪದೇಶಿಸಿದ್ದಾರೆ. ಇಲ್ಲಿ ಕಾಯವಿದ್ದರೂ ಅಕಾಯನಾಗಿರಬೇಕಾದರೆ ಬೇಕಾಗುವ ಮೂರು ಮಹತ್ತ್ವದ ಉಪದೇಶವನ್ನು ಇಲ್ಲಿ ಮಾಡಿದ್ದಾರೆ. ಇವುಗಳಲ್ಲಿ ಮೊದಲನೆಯದೇ 'ಔಪಚಾರಿಕ ದೇಹಿತ್ವಾತ್' ಎಂಬುದು . ನಾವು ಯಾವ ದೇಹದಲ್ಲಿ ವಾಸ ಮಾಡಿರುತ್ತೇವೆಯೋ ಅದರೊಂದಿಗೆ ನಮ್ಮ ಸಂಬಂಧವು ಔಪಚಾರಿಕ ವಾಗಿರಬೇಕು. ಅರ್ಥಾತ್ ತಾತ್ಕಾಲಿಕವಾಗಿರಬೇಕೇ ವಿನಃ ತಾದಾತ್ಮಿಕವಾಗಿರಬಾರದು. ಅತ್ಯಂತ ಅಪರಿಚಿತನಾದ ವ್ಯಕ್ತಿಯೂ ನಮಗೆ ಭೆಟ್ಟಿಯಾಗಿ ಏನನ್ನಾದರೂ ಕೇಳಿದರೆ ಅವನ ಜೊತೆಗೆ ನಾವು ತಾತ್ಕಾಲಿಕವಾದ ಔಪಚಾರಿಕ ಸಂಬಂಧದಿಂದ ವ್ಯವಹರಿಸುತ್ತೇವೆ. ಆದರೆ ಸುಪರಿಚಿತನೂ ರಕ್ತಸಂಬಂಧಿಯೂ ಆದ ವ್ಯಕ್ತಿಯೋರ್ವನು ಭೆಟ್ಟಿಯಾದಾಗ ಅವನೊಂದಿಗೆ ತಾದಾತ್ಮ್ಯಭಾವದಿಂದ ವ್ಯವಹರಿಸುತ್ತೇವೆ. ಎಲ್ಲಿ ತಾದಾತ್ಮ್ಯಭಾವನೆಯು ಉತ್ಪನ್ನವಾಗುವದೋ ಅಲ್ಲಿ ಅಭಿಮಾನಾದಿಗಳು ಉಂಟಾಗುತ್ತವೆ. ಅವುಗಳೇ ಮುಂದೆ ದುಃಖಕ್ಕೆ ಕಾರಣಗಳಾಗುವುವು. ಆದ್ದರಿಂದ ಅಕಾಯ ಸ್ಥಿತಿಯನ್ನು ಪಡೆಯಲು ಪ್ರಪಂಚದಲ್ಲಿ ಔಪಚಾರಿಕ ಸಂಬಂಧವು ಸಹಾಯಕವಾಗುವದು.

ಈ ತಾದಾತ್ಮ್ಯಭಾವನೆಯಿಂದಲೇ ಜೀವಾತ್ಮನು ದೇಹಾತ್ಮವಾದಿ, ಕಲತ್ರಾತ್ಮವಾದಿ, ಪುತ್ರಾತ್ಮವಾದಿ, ಗೇಹಾತ್ಮವಾದಿ, ಕ್ಷೇತ್ರಾತ್ಮವಾದಿ ಮತ್ತು ಪಶು– ಪಕ್ಷ್ಯಾತ್ಮವಾದಿಯಾಗಿ ಅನೇಕ ದುಃಖಗಳನ್ನು ಅನುಭವಿಸುತ್ತಾನೆ. ಇಲ್ಲಿ ದೇಹಾದಿಗಳೊಂದಿಗೆ ತಾದಾತ್ಮ್ಯ ಭಾವನೆಯನ್ನು ತಾಳಿರುವದಕ್ಕೇನೇ ದೇಹಾತ್ಮವಾದಿ ಮುಂತಾಗಿ ಹೇಳಲಾಗಿದೆ. ಇನ್ನು ತಾದಾತ್ಮ್ಯಭಾವನೆಯೆಂದರೆ ಶರೀರವೇ ತಾನೆಂದು, ಮಡದಿಯೇ ತಾನೆಂದು ಮಕ್ಕಳೇ ತಾನೆಂದು, ಮನಮತಗಳೇ ತಾನೆಂದು, ತಿಳಿದು ಅವುಗಳ ಜೊತೆಗೆ ಸಮರಸವಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯವಹರಿಸುವದು. ಈ ರೀತಿಯಾದ ವ್ಯವಹಾರವೇ ದುಃಖಕ್ಕೆ ಕಾರಣೀಭೂತವಾಗುವದು. ಆದ್ದರಿಂದ ಆಕಾಯಸ್ಥಿತಿಯನ್ನು ಪಡೆಯಲೋಸುಗ ಈ ತಾದಾತ್ಮ್ಯ ಸಂಬಂಧಗಳನ್ನು ತ್ಯಜಿಸಿ ಔಪಚಾರಿಕ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕು.

ಜಗದಾತ್ಮತ್ವ ಭಾವನೆಯೂ ಸಹ ಆಕಾಯ ಸ್ಥಿತಿಯನ್ನು ಪಡೆದುಕೊಳ್ಳಲು ಸಹಾಯಕವಾಗುವದು. ಜಗದಾತ್ಮತ್ವ ಭಾವನೆಯೆಂದರೆ ಸಂಪೂರ್ಣ ಜಗತ್ತನ್ನು ಶಿವಮಯವಾಗಿ ಭಾವಿಸುವದು. ಈ ಜಗತ್ತು ಶಿವಶಕ್ತಿಯರ ವಿಲಾಸವಾಗಿದೆ. ಪ್ರಪಂಚದ ಕಣ–ಕಣಗಳಲ್ಲೆಲ್ಲ ಅವರೇ ತುಂಬಿಕೊಂಡಿದ್ದಾರೆ. ಸಕ್ಕರೆಯಿಂದ ನಿರ್ಮಾಣಗೊಂಡ ಬೊಂಬೆಯು ಸಕ್ಕರೆಯೇ ಆಗಿರುವಂತೆ ಶಿವಶಕ್ತಿಯರಿಂದ ನಿರ್ಮಾಣಗೊಂಡ ಈ ವಿಶ್ವವು ಶಿವಶಕ್ತಿಯರ ಸ್ವರೂಪವೇ ಆಗಿರುತ್ತದೆ. ಈ ಪ್ರಕಾರವಾದ ತಿಳುವಳಿಕೆಯು ಯಾರಿಗೆ ಆಗುತ್ತದೆಯೋ ಅವನು ಸರ್ವತ್ರ ಸಮ್ಯದೃಷ್ಟಿಯುಳ್ಳವನಾಗಿರೋಣದರಿಂದ ಯಾವದೊಂದರಲ್ಲಿ ಆಸಕ್ತನಾಗುವದಿಲ್ಲ, ಸಕ್ಕರೆಯ ಗೊಂಬೆಗಳನ್ನು ಮಕ್ಕಳಿಗೆ ತಿನ್ನಲು ಕೊಡುವಾಗ ಮಕ್ಕಳು ಅವುಗಳೇ ಆಕಾರ ಪ್ರಕಾರಗಳಲ್ಲಿ ಆಸಕ್ತವಾಗಿ ಕಲಹವನ್ನು ಮಾಡುತ್ತಿರುತ್ತವೆ. ನನಗೆ ಕುದುರೆ ಬೇಕು, ಎಂದು ಮತ್ತೊಂದು ಮಗು ಅನ್ನುತ್ತಿದ್ದರೆ, 'ನನಗೆ' ತೇರುಬೇಕು, ಎಂದು ಮತ್ತೊಂದು ಮಗು ಅಳುತ್ತದೆ. ಮಕ್ಕಳ ದೃಷ್ಟಿಯಲ್ಲಿ ಅವು ಬೇರೆ ಬೇರೆಯಾಗಿ ಕಾಣುವದರಿಂದ ಅಲ್ಲಿ ಕಲಹವಿದೆ. ಆದರೆ ಮನೆಯ ಯಜಮಾನನ ದೃಷ್ಟಿಯಲ್ಲಿ ಎಲ್ಲವೂ ಸಕ್ಕರೆಯ ಗೊಂಬೆಗಳೇ. ಎಲ್ಲದರಲ್ಲಿ ಇರುವದು ಒಂದೇ ಮಾಧುರ್ಯವು. ಅದರಂತೆ ಜ್ಞಾನಿಯ ದೃಷ್ಟಿಯಲ್ಲಿ ಈ ಜಗತ್ತೆಲ್ಲವೂ ಶಿವಶಕ್ತಿಮಯವು. ಅವನಿಗೆ ಸರ್ವತ್ರ ಶಿವಶಕ್ತಿಯರೇ ಗೋಚರವಾಗುತ್ತಾರೆ. ಅಂದಾಗ ಒಂದರಲ್ಲಿ ಆಸಕ್ತಿ ಇನ್ನೊಂದರಲ್ಲಿ ಅನಾಸಕ್ತಿಯು ಅಲ್ಲಿ ಕಂಡುಬರುವದಿಲ್ಲ. ಆದ್ದರಿಂದ ಈ ಜಗದಾತ್ಮ ಭಾವನೆಯಿಂದ ಶಿವಯೋಗಿಯು ತನ್ನ ದೇಹದಲ್ಲಿಯೂ ಸಹ ಆಸಕ್ತನಾಗಿರಲಾರ ನಾದ್ದರಿಂದ ಇವನು ಆಕಾಯನೆನಿಸಿಗೊಳ್ಳುವನು. ಈ ರೀತಿಯಾಗಿ ಈ ಜಗದಾತ್ಮತ್ವ ಭಾವನೆಯೂ ಸಹ ಆಕಾಯ ಸ್ಥಿತಿಯನ್ನು ತಂದುಕೊಡಲು ಸಹಾಯಕವಾಗುತ್ತದೆ.

ಇನ್ನು ಅಕಾಯಸ್ಥಿತಿಗೆ ಮೂರನೆಯದಾದ ಕಾರಣವೇ ''ಮಾಯಾ ಸಂಬಂಧ ರಾಹಿತ್ಯವು''. ಮಾಯೆಯ ಸಂಬಂಧದಿಂದ ದೂರವಿರುವ ಶಿವಯೋಗಿಯು ಶರೀರದಲ್ಲಿದ್ದರೂ ಅಕಾಯನೆನಿಸಿಗೊಳ್ಳುವನು. ಅರ್ಥಾತ್ ಶರೀರದ ಯಾವದೇ ಗುಣಗಳು ಅವನ ಮೇಲೆ ಪರಿಣಾಮವನ್ನುಂಟು ಮಾಡಲಾರವು. ಮಾಯೆಯು ಯಾವಾಗ ಯಾವ ರೂಪದಿಂದ ಯಾರ ಮುಂದೆ ಬಂದು ಏನನ್ನು ಮಾಡುತ್ತದೆಯೋ ಅದನ್ನು ಹೇಳುವದು ಅಷ್ಟೊಂದು ಸುಲಭವಾದ ಮಾತಲ್ಲ. ಶಿವಭಕ್ತನಾದ ರಾವಣನು ಶಿವನ ಆತ್ಮಲಿಂಗದ ಪ್ರಾಪ್ತಿಗಾಗಿ ಅತ್ಯಂತ ಕಠೋರವಾದ ತಪಶ್ಚರ್ಯವನ್ನು ಮಾಡುತ್ತಿದ್ದನು. ಆಗ ಭಗವಂತನಾದ ವಿಷ್ಣು ತನ್ನ ಮಾಯಾಶಕ್ತಿಯನ್ನು ಅವನ ಮನಸ್ಸಿನಲ್ಲಿ ಸಂಚಾರಗೊಳಿಸಿದನು. ಆಗ ರಾವಣನು ತನ್ನ ತಪಸ್ಸಿನಿಂದ ಪ್ರಸನ್ನನಾದ ಶಿವನಿಂದ ಆತ್ಮಲಿಂಗ ವರದಾನವನ್ನು ಕೇಳುವದನ್ನು ಬಿಟ್ಟು ಅವನ ಅರ್ಧಾಂಗಿನಿಯಾದ ಪಾರ್ವತಿಯನ್ನೇ ಕೇಳಿದನಂತೆ. ಮನದಲ್ಲಿ ಮಾಯೆಯ ಪ್ರವೇಶವಾದೊಡನೆ ಮನುಷ್ಯನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS
JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi

ತನ್ನ ಜೀವನದ ಉದ್ದೇಶವನ್ನೇ ಮರೆತು ಮಾಯೆಯ ಮೋಹಪಾಶದಲ್ಲಿ ಸಿಲುಕಿಕೊಂಡು ಬಿಡುತ್ತಾನೆ. ಇಂತಹ ಮಾಯೆಯ ಪ್ರಭಾವದ ಕಥೆಗಳು ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. ಆದಕಾರಣ ಮಾಯಾಸಂಬಂಧರಹಿತನಾಗದೆ ಶಿವಯಯೋಗಿಗೆ ಅಕಾಯಸ್ಥಿತಿಯು ಪ್ರಾಪ್ತವಾಗದು.

ಶಿವಶರಣರಿಗೆಲ್ಲ ಅಕ್ಕನ ಸ್ಥಾನದಲ್ಲಿದ್ದ ಅಕ್ಕಮಹಾದೇವಿಯು ಮಲ್ಲಿಕಾರ್ಜುನನ ಸಾಕ್ಷಾತ್ಕಾರವನ್ನು ಮಾಡಿಕೊಂಡ ಬಳಿಕ ಆಕೆಯ ಮನಸ್ಸಿನಲ್ಲಿ ಶರೀರಭಾವನೆ ಇಲ್ಲದಾಗಿ ಹೋಗಿತ್ತು. ತನ್ನ ಪತಿಯಾದ ಕೌಶಿಕರಾಜನ ಕಾಮುಚೇಷ್ಟೆಯಿಂದ ತಿರಸ್ಕಾರ ಭಾವನೆಯನ್ನು ತಾಳಿದ ಅವಳು ರಾಜನನ್ನು ಹಾಗೂ ರಾಜನ ವೈಭವವನ್ನು ತ್ಯಜಿಸಿ ದಿಗಂಬರೆಯಾಗಿ ಅರಮನೆಯಿಂದ ಹೊರಬೀಳುತ್ತಾಳೆ. ಅದೇ ಅವಸ್ಥೆಯಲ್ಲಿ ಕಲ್ಯಾಣದ ಅನುಭವ ಮಂಟಪವನ್ನು ಪ್ರವೇಶಿಸಿದಾಗ ಪ್ರಭುದೇವರನ್ನೇ ಮೊದಲುಗೊಂಡು ಎಲ್ಲ ಶಿವಶರಣರು ಅವಳ ವಿದೇಹ ಸ್ಥಿತಿಯನ್ನು ಕಂಡು ನಿಬ್ಬೆರಗಾದರು. ಅಕ್ಕಮಹಾದೇವಿಯ ಮನಸ್ಸಿನಲ್ಲಿ ಸಾಂಸಾರಿಕ ಮೋಹ–ಮಾಯೆಗಳ ಸಂಬಂಧವಿಲ್ಲದ ಕಾರಣ ಅವಳಿಗೆ ಈ ಅಕಾಯ ಸ್ಥಿತಿಯು ಪ್ರಾಪ್ತವಾಯಿತೆಂದು ಅವಳ ಜೀವನದ ಈ ಘಟನೆಯಿಂದ ತಿಳಿದುಬರುತ್ತದೆ.

ಯಾರು ಕಾಯದ ಮೋಹವನ್ನು ಬಿಡುವರೋ ಅವರ ಆ ಕಾಯವು ಅವರ ದೃಷ್ಟಿಯಲ್ಲಿ ಅಕಾಯವಾಗಿದ್ದರೂ ಅದೊಂದು ಪ್ರಸಾದಕಾಯವೂ ಸಹ ಅಹುದು. ಯಾವದೊಂದು ಪದಾರ್ಥವನ್ನು ಸಮರ್ಪಿಸಿದಾಗ ಆ ಪದಾರ್ಥವು ಪ್ರಸಾದ ವೆಂಬುದಾಗಿ ಕರೆಯಲ್ಪಡುವದು. ಅದರಂತೆ ಯಾರು ತಮ್ಮ ಕಾಯವನ್ನು ಸಾಂಸಾರಿಕ ಸುಖಭೋಗಕ್ಕಾಗಿ ಬಳಸದೆ ದೇವರ ಧ್ಯಾನ, ದೇವರ ಪೂಜೆ ಮತ್ತು ದೇವರ ನಾಮ ಜಪ ಹಾಗೂ ಆತ್ಮಜ್ಞಾನದ ಪ್ರಾಪ್ತಿಗೆ ಉಪಯೋಗಿಸುತ್ತಾರೆಯೋ ಅವರ ಆ ಕಾಯವು ಪ್ರಸಾದಕಾಯವೆಂತಲೇ ಕರೆಸಿಗೊಳ್ಳುವದು. ಇಂತಹ ಪ್ರಸಾದಕಾಯವುಳ್ಳವನೂ ಸಹ ಅಕಾಯನೇ ಅಹುದು. ಈ ತೆರನಾದ ಅಕಾಯಸ್ಥಿತಿಯು ಪ್ರಾಪ್ತವಾದ ಶಿವಯೋಗಿಯ ಜೀವನವು ಲೋಕವಿಲಕ್ಷಣವಾಗಿರುತ್ತದೆ. ಹೀಗೆ ಪೂಜ್ಯಪಾದರ ಆದೇಶದ ಮೇರೆಗೆ ಔಪಚಾರಿಕ ದೇಹಿತ್ವ, ಜಗದಾತ್ಮತ್ವ ಭಾವನೆ ಮತ್ತು ಮಾಯಾ ಸಂಬಂಧರಾಹಿತ್ಯಗಳು ಅಕಾಯ ಸ್ಥಿತಿಯನ್ನು ತಂದುಕೊಡುವ ಸಾಧನೆಗಳೆಂಬುದಾಗಿ ತಿಳಿದುಕೊಳ್ಳಬೇಕು.

ಪೂರ್ವೋಕ್ತನಾದ ಶಿವಯೋಗಿಗೆ ದೇಹಾಭಿಮಾನವು ಇಲ್ಲದಿರೋಣದರಿಂದ ಅವನು ಅಕಾಯನೆಂದು ಕರೆಯಿಸಿಗೊಂಡರೂ ದೇಹಸಂಬಂಧವು ಮಾತ್ರ ಇದ್ದೇ ಇರುತ್ತದೆ ಎಂದ ಬಳಿಕ ಅದರಿಂದ ಉತ್ಪನ್ನವಾಗುವ ವಿಕಾರಗಳು ಅವನಲ್ಲಿ ಒಡಮೂಬಹುದಲ್ಲಾ? ಎಂಬ ಸಂಶಯವು ಉದ್ಭವಿಸಲು ಅದಕ್ಕೆ ಪರಿಹಾರರೂಪವಾಗಿ ಪೂಜ್ಯಪಾದರು ಪುನಃ–

ಪರಸ್ಯ ದೇಹಯೋಗೇಪಿ ನ ದೇಹಾಶ್ರಯ ವಿಕ್ರಿಯಾ।
ಶಿವಸ್ಯೇವ ಯತಸ್ತಸ್ಮಾದಕಾಯೋ ಯಂ ಪ್ರಕೀರ್ತಿತ॥

(ಸಿ.ಶಿ.೧೬–೪೪)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ವಿಧವಾಗಿ ಉಪದೇಶಿಸಿದ್ದಾರೆ. ಪರಶಿವನು ತನ್ನ ಲೀಲಾವಿನೋದಕ್ಕಾಗಿ ಅನೇಕ ದೇಹಗಳನ್ನು ಧರಿಸಿದ್ದರೂ ಆ ದೇಹಸಂಬಂಧವಾದ ಕಾಮಾದಿ ವಿಕಾರಗಳು ಅವನಿಗೆ ಹೇಗೆ ಇರುವದಿಲ್ಲವೋ ಅದರಂತೆಯೇ ಶಿವನಿಗೆ ಸಮಾನವಾದ ಶಿವಯೋಗಿಗೆ ಶರೀರ ಸಂಬಂಧವಿದ್ದರೂ ಆ ಶರೀರದ ಯಾವ ವಿಕಾರಗಳೂ ಇವನ ಮೇಲೆ ಯಾವದೇ ಪರಿಣಾಮವನ್ನು ಉಂಟುಮಾಡಲಾರವು ಎಂಬುದು ಪೂಜ್ಯಪಾದರ ಆಶಯವಾಗಿದೆ. ಹೀಗೆ ದೇಹಧಾರಿಯಾಗಿದ್ದರೂ ದೇಹದ ವಿಕಾರಗಳಿಂದ ಮುಕ್ತನಾಗಿರೋಣದರಿಂದ ಇವನಿಗೆ ಅಕಾಯನೆಂದೂ ಕರೆಯಲಾಗಿದೆ. ಈ ಅಕಾಯಸ್ಥಲದ ಇನ್ನೂ ಹೆಚ್ಚಿನ ವಿಚಾರಗಳನ್ನು ನಾಳೆಗೆ ಮಾಡೋಣವೆಂಬುದಾಗಿ ತಿಳಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ|| ಆಗಷ್ಟ ೧೯೯೩

(ಜ್ಞಾನಮಂದಿರ, ಜಂಗಮವಾಡಿಮಠ ವಾರಾಣಸಿ)

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಕಾಯಸ್ಥಲ-೨

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀಕಾಶೀಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಶ್ರೀಮಹಾ ಸನ್ನಿಧಿಯ ಶಿವಪೂಜಾ ತಪೋನುಷ್ಠಾನ ಹಾಗೂ ಶ್ರೀಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಉಳಿದ ಕ್ಷೇತ್ರದಲ್ಲಿ ನಡೆಯುವ ಧರ್ಮಸಭೆಗೂ ಹಾಗೂ ಈ ಮಹಾಕ್ಷೇತ್ರದಲ್ಲಿ ನಡೆಯುವ ಧರ್ಮಸಭೆಗೂ ಮಹದಂತರವುಂಟು. ಇಲ್ಲಿಯ ಜೀವಿಗಳಿಗೆ ಮಹಾಜ್ಞಾನವನ್ನು ಅನುಗ್ರಹಿಸುವದಕ್ಕಾಗಿ ಸಾಕ್ಷಾತ್ ವಿಶ್ವೇಶ್ವರನೇ ಇಲ್ಲಿ ನೆಲೆ ನಿಂತಿದ್ದಾನೆ. ಕಾಶಿಯಲ್ಲಿ ವಾಸ ಮಾಡುವವರಿಗೆ ಅನ್ನ ಹಾಗೂ ಜ್ಞಾನಗಳ ಕೊರತೆಯುಂಟಾಗುವದಿಲ್ಲ. ಈ ಕಾಶೀಕ್ಷೇತ್ರಕ್ಕೆ ತುಳಸೀದಾಸರು – ''ಜ್ಞಾನ–ಖಾನ–ಅಘಹಾನಿಕರ ಜಂಹಬಸ ಸಂಬುಭವಾನಿ'' ಈ ತಮ್ಮ ಉಕ್ತಿಯಲ್ಲಿ ಜ್ಞಾನದ ಕಣಿವೆಯೆಂದೂ ಸಂಬೋಧಿಸಿದ್ದಾರೆ. ಇಲ್ಲಿ ವಾಸಿಸುವ ಜೀವಿಗಳ ಪಾಪವನ್ನು ದೂರಗೊಳಿಸಲೋಸುಗ ಶಿವ ಹಾಗೂ ಪಾರ್ವತಿಯರು ಈ ಕ್ಷೇತ್ರದಲ್ಲಿ ನಿತ್ಯ ನಿವಾಸಗೈದಿದ್ದಾರೆ. ಭಗವಂತನಾದ ವಿಶ್ವೇಶ್ವರನು ಇಲ್ಲಿಯ ಜನರಿಗೆ ಜ್ಞಾನೋಪ ದೇಶವನ್ನು ಮಾಡಿದರೆ ಭಗವತಿಯಾದ ಅನ್ನಪೂರ್ಣೆಯು ಸರ್ವರಿಗೆ ಅನ್ನವನ್ನು ದಯಪಾಲಿಸುತ್ತಾಳೆ. ಜ್ಞಾನ ಸಂಪಾದನೆಯನ್ನು ಮಾಡಲಿಚ್ಛಿಸುವ ಸಾಧಕನಿಗೆ ಏನು ಬೇಕೋ ಅದೆಲ್ಲವೂ ಇಲ್ಲಿ ಸಿದ್ಧವಾಗಿರುತ್ತದೆ. ಕಾಶೀಮಹಾಕ್ಷೇತ್ರದಲ್ಲಿ ವಾಸ ಮಾಡುವ ಸಾಧಕನು ಶಿವ–ಪಾರ್ವತಿಯರ ಕೃಪೆಯಿಂದ ಸರ್ವಪಾಪಮುಕ್ತವಾಗಿ ಜ್ಞಾನವನ್ನು ಪಡೆದು ಕೊನೆಗೆ ಮೋಕ್ಷವನ್ನು ಹೊಂದುವನು.

ಮುಕ್ತಿದಾಯಕಗಳಾದ ಸಪ್ತಪುರಿಗಳಲ್ಲಿ ಕಾಶಿಯು ಸರ್ವೋತ್ಕೃಷ್ಟವಾದುದಾಗಿದೆ. ಉಳಿದ ಅಯೋಧ್ಯಾ, ಮಥುರಾ, ಮಾಯಾ (ಹರದ್ವಾರಾ) ಕಾಂಚೀ, ಅವಂತಿಕಾ, (ಉಜ್ಜೈನ್) ಹಾಗೂ ದ್ವಾರಕಾ ಎಂಬ ಆರು ಪುರಗಳಲ್ಲಿ ಅರ್ಥಾತ್ ತೀರ್ಥಕ್ಷೇತ್ರಗಳಲ್ಲಿ ಯಾವನು ತಪಸ್ಸನ್ನಾಚರಿಸುತ್ತ ಮರಣವನ್ನು ಹೊಂದುತ್ತಾನೋ ಅವನು ಅದರ ಪುಣ್ಯದ ಫಲವಾಗಿ ಕೊನೆಗೆ ಕಾಶಿಯಲ್ಲಿ ಜನ್ಮತಾಳುತ್ತಾನೆ. ಇಲ್ಲಿ ಮರಣ ಹೊಂದಿದ ಬಳಿಕ ಪುನಃ ಆತನಿಗೆ ಜನ್ಮವು ಪ್ರಾಪ್ತವಾಗುವದಿಲ್ಲ. ಅಂತೆಯೇ ''ಕಾಶ್ಯಾಂ ಮರಣಾನ್ಮುಕ್ತಿಃ'' ಎಂಬ ಉಕ್ತಿಯು ಪ್ರಸಿದ್ಧವಾಗಿದೆ. ''ಏಷಾಂ ಕ್ವಾಪಿ ಗತಿರ್ನಾಸ್ತಿ ತೇಷಾಂ ವಾರಾಣಸೀ ಗತಿಃ'' ಅಂದರೆ ಬೇರೆಲ್ಲೆಡೆಯೂ ಯಾರಿಗೆ ಸದ್ಗತಿಯು ದೊರೆಯುವದಿಲ್ಲವೋ ಅವರಿಗೆ ಕಾಶಿಯಲ್ಲಿ ಅದೂ ಅವಶ್ಯವಾಗಿ ದೊರೆಯುತ್ತದೆ. ಇದು ಕಾಶೀಕ್ಷೇತ್ರದ ಮಹತ್ವವಾಗಿದೆ.

ಇಂತಹ ಪವಿತ್ರವಾದ ಕಾಶೀಮಹಾಕ್ಷೇತ್ರದಲ್ಲಿ ನೀವೆಲ್ಲ ಶ್ರೀಸಿದ್ಧಾಂತ ಶಿಖಾಮಣಿಯ ಲಿಂಗಷಟ್‌ಸ್ಥಲಾಂತರ್ಗತ ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನಗಳನ್ನು ಆಲಿಸುತ್ತಿದ್ದೀರಿ. ನಿನ್ನೆಯ ದಿನ ಅಕಾಯಸ್ಥಲದ ಬಗ್ಗೆ ಕೆಲವೊಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯಗಳನ್ನು ಶ್ರವಣ ಮಾಡಿದ್ದೀರಿ. ಇಂದು ಅದೇ ಸ್ಥಲದ ಅವಶಿಷ್ಟ ಭಾಗವನ್ನು ಕುರಿತು ಆಲೋಚಿಸೋಣ.

ದೇಹವನ್ನು ಧರಿಸಿಗೊಂಡಿದ್ದರೂ ದೇಹದಲ್ಲಿ ಉಂಟಾಗುವ ಕಾಮಕ್ರೋಧಾದಿ ವಿಕಾರಗಳಿಂದ ಯಾವಾತನು ದೂರವಾಗಿರುವನೋ ಅವನೇ ಅಕಾಯನೆಂದೂ ಕರೆಯಿಸಿಗೊಳ್ಳುತ್ತಾನೆ. ಕಾಮಕ್ರೋಧಾದಿ ಷಡ್‌ರಿಪುಗಳು ಸಾಮಾನ್ಯವಾಗಿ ಎಲ್ಲರ ಶರೀರಗಳಿಂದ ಅಭಿವ್ಯಕ್ತವಾಗುವ ಸಹಜವಾದ ವಿಕಾರಗಳು. ಈ ವಿಕಾರಗಳಲ್ಲಿ ಅಪಾರವಾದ ಸಾಮರ್ಥ್ಯವಿರುತ್ತದೆ. ಅಂತೆಯೇ ''ಬಲವಾನ್ ಇಂದ್ರಿಯಾಗ್ರಾಮೋ ವಿದ್ವಾಂಸಮಪಿ ಕರ್ಷತಿ'' ಎಂಬುದಾಗಿ ಜ್ಞಾನಿಗಳು ಹೇಳಿದ್ದಾರೆ. ಯಾವ ಸಮಯದಲ್ಲಿ ಈ ಕಾಮಕ್ರೋಧಾದಿ ವೃತ್ತಿಗಳು ಜಾಗೃತವಾಗುವವೋ ಆಗ ಶರೀರದಲ್ಲಿಯ ಸಮಸ್ತವಾದ ಊರ್ಜಾಶಕ್ತಿಯು ಅವುಗಳ ರೂಪದಲ್ಲಿಯೇ ಪ್ರವಹಿಸಲು ಪ್ರಾರಂಭಿಸುತ್ತದೆ. ಅಂತೆಯೇ ಆ ಸಮಯದಲ್ಲಿ ಮನಸ್ಸಿನಲ್ಲಿ ಬೇರೊಂದು ವಿಚಾರವೇ ಬರುವದಿಲ್ಲ. ಹೀಗೆ ಅತೀವೇಗವಾಗಿ ಬಂದ ಈ ವಿಕಾರಗಳು ದೊಡ್ಡದೊಡ್ಡ ವಿವೇಕಿಗಳ ವಿವೇಕವನ್ನು ಸಹ ಹಾಳು ಮಾಡಿಬಿಡುತ್ತವೆ.

ಅತ್ಯಂತ ಪ್ರಾಚೀನ ಕಾಲದಲ್ಲಿ 'ಸೌಭರಿ' ಎಂಬ ಹೆಸರಿನ ಮಹರ್ಷಿಯು ಜಲಸ್ಥಂಬನ ವಿದ್ಯೆಯಲ್ಲಿ ಪರಿಣತನಾಗಿ ಸಮುದ್ರಜಲದಲ್ಲಿ ಕುಳಿತು ತಪಶ್ಚರ್ಯೆ ವನ್ನಾಚರಿಸುತ್ತಿದ್ದನು. ಒಂದು ದಿನ ಸಮಾಧಿಯಿಂದ ಎಚ್ಚರಾಗಿ ಕಣ್ಣು ತೆರೆದು ನೋಡುತ್ತಿರುವಾಗ ಒಂದು ಮೀನಮಿಥುನವು ಜಲದಲ್ಲಿ ಕಾಮಕ್ರೀಡೆಯಾಡುವದನ್ನು ನೋಡಿದನು. ಅದಷ್ಟು ನಿಮಿತ್ತದಿಂದಲೇ ಅತ್ಯಂತ ವಯೋವೃದ್ಧನಾದ ಆತನ ಮನಸ್ಸಿನಲ್ಲಿ ಕಾಮಾಕಾರ ವೃತ್ತಿಯು ಜಾಗೃತವಾಯಿತು. ಆಗ ತನ್ನ ಮನಸ್ಸಿನಲ್ಲಿಯೋಚಿಸಿದ್ದೇನೆಂದರೆ– ಈ ಕ್ಷುದ್ರವಾದ ಮೀನುಗಳು ಎಷ್ಟೊಂದು ಸರಸವಾಗಿ ಕ್ರೀಡಿಸುತ್ತಿವೆಯಲ್ಲ. ನಾನೋರ್ವನೆ ತಪಸ್ಸನ್ನು ಮಾಡುತ್ತ ವ್ಯರ್ಥವಾಗಿ ಕಾಲ ಕಳೆಯುತ್ತಲಿದ್ದೇನೆ. ಈ ಕಾಲಯಾಪನೆಯಿಂದ ಪ್ರಯೋಜನವೇನು? ನಾನು ವಿವಾಹ ಸಂಸ್ಕಾರವನ್ನು ಹೊಂದಿ ಈ ಕಾಮಸುಖವನ್ನು ಪಡೆಯಲೇಬೇಕು ಎಂಬುದಾಗಿ ನಿಶ್ಚಯಿಸಿ ಆ ಸಮುದ್ರದಿಂದ ಎದ್ದು ಹೊರಬಂದು ಅಂದು ಈ ದೇಶದ ರಾಜನಾಗಿದ್ದ ಮಾಂಧಾತಾ ಚಕ್ರವರ್ತಿಯ ಕಡೆಗೆ ಹೊರಟನು. ವೃದ್ಧಾವಸ್ಥೆಯ ಕಾರಣದಿಂದಾಗಿ ಶರೀರವು ಜೀರ್ಣ– ಶೀರ್ಣಾಣಾಗಿತ್ತು

ಕೇಶಗಳೆಲ್ಲ ಶುಭ್ರಗಳಾಗಿದ್ದವು ಶರೀರದ ಚರ್ಮವು ಸುಕ್ಕುಗಟ್ಟಿತ್ತು. ಬಾಯೊಳಗೆ ಒಂದೂ ಸಹ ಹಲ್ಲು ಇರಲಿಲ್ಲ. ಕೈಯೊಳಗೆ ಕೋಲು ಹಿಡಿದು ಸಾವಕಾಶವಾಗಿ ರಾಜನ ಅರಮನೆಯನ್ನು ತಲುಪಿದನು. ಈತನನ್ನು ನೋಡಿ ಮಾಂಧಾತಾ ಮಹಾರಾಜನು ಆದರದಿಂದ ಅರಮನೆಯಲ್ಲಿ ಬರಮಾಡಿಕೊಂಡು ಉನ್ನತಾಸನದ ಮೇಲೆ ಕೂಡ್ರಿಸಿ ಯಥೋಚಿತವಾದ ಸತ್ಕಾರವನ್ನು ಮಾಡಿದ ನಂತರ ಆಗಮನದ ಪ್ರಯೋಜದ ಬಗ್ಗೆ ಪ್ರಶ್ನಿಸಿದನು. ಆಗ ಮಹರ್ಷಿಯು '' ಎಲೈ! ಮಹಾರಾಜನೇ ನನಗೆ ವಿವಾಹವಾಗುವ ಬಯಕೆಯುಂಟಾಗಿದೆ. ನಿನಗೆ ಅನೇಕ ಕನ್ಯಾಮಣಿಗಳಿರುವದಾಗಿ ತಿಳಿದುಬಂದಿದೆ. ಅವರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೈಕಿ ಯಾರೊಬ್ಬಳನ್ನಾದರೂ ನನಗೆ ಕೊಟ್ಟು ವಿವಾಹ ಸಂಸ್ಕಾರವನ್ನು ನೆರವೇರಿಸು ಎಂದು ಕೇಳಿಕೊಂಡನು. ಆಗ ರಾಜನು ಆಶ್ಚರ್ಯಚಕಿತನಾಗಿ ''ಮಹರ್ಷಿಗಳೇ ತಮ್ಮ ಈ ದೇಹವು ವಿವಾಹ ಸಂಸ್ಕಾರಕ್ಕೆ ಯೋಗ್ಯವಾದುದಿಲ್ಲ. ನಿಮ್ಮ ಶರೀರವು ಅತ್ಯಂತ ಜೀರ್ಣ–ಶೀರ್ಣವಾಗಿದೆ ಇಂತಹ ಸ್ಥಿತಿಯಲ್ಲಿ ಅದು ಹೇಗೆ ತಾನೆ ವಿವಾಹವನ್ನು ಮಾಡಿಕೊಳ್ಳುತ್ತೀರಿ? ಎಂದು ಪ್ರಶ್ನಿಸಿದನು. ಆಗ ಮಹರ್ಷಿ ಗಳು ''ಎಲೈ ರಾಜನೇ! ನನ್ನ ದೇಹದ ಬಗ್ಗೆ ನೀನು ವಿಚಾರಿಸಬೇಡ ನಿನ್ನ ಮಕ್ಕಳನ್ನೆಲ್ಲ ಇಲ್ಲಿ ಕರೆಯಿಸು ಅವರಲ್ಲಿ ಒಬ್ಬಳನ್ನು ನಾನು ಆಯ್ಕೆ ಮಾಡುತ್ತೇನೆ. ಅವಳೊಂದಿಗೆ ನನ್ನ ಲಗ್ನ ಮಾಡಿಕೊಡು'' ಎಂದು ನುಡಿದರು. ಋಷಿಯ ಮಾತನ್ನು ತಿರಸ್ಕರಿಸುವದು ರಾಜನಿಗೆ ಅಸಾಧ್ಯವಾಗಿತ್ತು ಅಂತೆಯೇ ಅವನು ಮಹರ್ಷಿಯನ್ನು ಕುರಿತು ''ಹೇ ಋಷಿವರ್ಯನೇ! ನನಗೆ ೫೦ ಜನ ಕನ್ಯೆಯರಿದ್ದಾರೆ. ಅವರೆಲ್ಲರನ್ನು ತಮ್ಮೆದುರು ಕರೆಸುತ್ತೇನೆ. ಅವರಲ್ಲಿಯಾವಳು ನಿಮ್ಮನ್ನು ವರಿಸುವಳೋ ಅವಳೊಂದಿಗೆ ನಿಮ್ಮ ವಿವಾಹವನ್ನು ನೆರವೇರಿಸಿಕೊಡುವೆನು'' ಹೀಗೆ ನುಡಿದನು. ಆಗ ಮಹರ್ಷಿಯು ತಥಾಸ್ತು ಎಂಬುದಾಗಿ ಒಪ್ಪಿಗೆಯನ್ನಿತ್ತನು. ಕೆಲವೆ ಕ್ಷಣದಲ್ಲಿ ರಾಜನ ಕನ್ಯಾಮಣಿಗಳೆಲ್ಲ ಮಹರ್ಷಿಯ ಮುಂಭಾಗದಲ್ಲಿ ಬಂದು ನಿಂತರು. ಅವರೆಲ್ಲರೂ ಈತನ ಜರಾ ಜೀರ್ಣವಾದ ದೇಹವನ್ನು ಕಂಡು ಮನದೊಳಗೆ ಇವನೊಂದಿಗೆ ಅದು ಹೇಗೆ ತಾನೆ ಲಗ್ನಮಾಡಿಕೊಳ್ಳುವದು? ಎಂಬುದಾಗಿ ವಿಚಾರ ಮಾಡುತ್ತ ಕ್ಷಣ ಕಾಲ ಸರ್ವರೂ ಸ್ಥಬ್ಧರಾದರು. ಆ ರಾಜ ಕನ್ನಿಕೆಯರ ಮನೋಭಾವವನ್ನು ಅರಿತ ಮಹರ್ಷಿಯು ತತ್‌ಕ್ಷಣದಲ್ಲಿಯೇ ತನ್ನ ತಪೋಸಾಮರ್ಥ್ಯದಿಂದ ಇಪ್ಪತ್ತೈದು ವರ್ಷದ ನವತರುಣನಾಗಿ ಕಂಗೊಳಿಸತೊಡಗಿದನು. ಈತನ ಸ್ಫುರದ್ರೂಪದ ಮತ್ತು ತಾರುಣ್ಯಭರಿತವಾದ ದೇಹವನ್ನು ಕಂಡೊಡನೆ ರಾಜಕನ್ನಿಕೆಯರೆಲ್ಲರೂ ನಾ ಮುಂದೆ ನೀ ಮುಂದೆ ಎಂದು ಆ ಋಷಿಯೊಂದಿಗೆ ಲಗ್ನ ಮಾಡಿಕೊಳ್ಳಲು ಸಿದ್ಧರಾದರು. ಆಗ ರಾಜನು ಅನಿವಾರ್ಯವಾಗಿ ತನ್ನ ಐವತ್ತು ಜನ ಹೆಣ್ಣುಮಕ್ಕಳನ್ನು ಋಷಿಗೆ ಧಾರೆಯೆರೆದು ಲಗ್ನ ಮಾಡಿಕೊಟ್ಟನು. ನಂತರ ಆ ಸೌಭರಿ ಮಹರ್ಷಿಯು ಅನೇಕ ವರ್ಷಗಳವರೆಗೆ ತನ್ನ ಐವತ್ತು ಪತ್ನಿಯರೊಂದಿಗೆ ದಾಂಪತ್ಯ ಜೀವನವನ್ನು ಸಾಗಿಸಿ ಅನೇಕ ಮಕ್ಕಳನ್ನು ಸಹ ಪಡೆದವನಾದನು. ಇಷ್ಟೆಲ್ಲ ಭೋಗವನ್ನು ಭೋಗಿಸಿಯೂ ಸಹ ಅವನ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಕೊನೆಗೆ ಆ ಕಾಮಭಾವನೆಯ ಬಗ್ಗೆ ತಿರಸ್ಕಾರವುಂಟಾಗಿ ಎಲ್ಲರನ್ನೂ ತೊರೆದು ಪುನಃ ತಪಸ್ಸನ್ನಾಚರಿಸಲು ಸಮುದ್ರವನ್ನು ಸೇರಿದನು. ಹೀಗೆ ಈ ಕಾಮ–ಕ್ರೋಧಾದಿ ವೃತ್ತಿಗಳು ಯಾವಾಗ ಯಾರ ಮನಸ್ಸಿನಲ್ಲಿ ಉದ್ಭವಿಸಿ ಎಷ್ಟು ಅನರ್ಥವನ್ನು ಮಾಡುತ್ತವೆಯೋ ಹೇಳಲಿಕ್ಕಾಗುವದಿಲ್ಲ. ಆದ್ದರಿಂದ ಈ ವೃತ್ತಿಗಳು ಮನದಲ್ಲಿ ಮೂಡಿದಾಗ ಇವುಗಳ ಬಗ್ಗೆ ಸಾಧಕನು ಎಚ್ಚರವಾಗಿದ್ದರೆ ಮಾತ್ರ ಅವನು ಇವುಗಳಿಂದ ಪಾರಾಗಬಲ್ಲನು. ಇಲ್ಲವಾದರೆ ಇವನನ್ನು ಅವು ಬಲಾತ್ಕಾರವಾಗಿ ಎಳೆದುಕೊಂಡು ಹೋಗುತ್ತವೆ. ಅಂತೆಯೇ ಅಕಾಯಸ್ಥಲದ ಸಾಧಕನು ದೇಹದಲ್ಲಿ ಉಂಟಾಗುವ ಈ ಕಾಮಾದಿವಿಕಾರಗಳಿಂದ ಅಲಿಪ್ತನಾಗಿರುತ್ತಾನೆ. ಅಥವಾ ಇವುಗಳಿಂದ ಅಲಿಪ್ತನಾದಾಗಲೇ ಅವನಿಗೆ ಅಕಾಯಸ್ಥಿತಿಯು ಪ್ರಾಪ್ತವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಶಿವಯೋಗಿಯು ಅಕಾಯನಿದ್ದದ್ದೇ ನಿಜವಾಗಿದ್ದರೆ ಸಕಾಯನಂತೆ ಏಕೆ ತೋರುವನು? ಎಂಬ ಪ್ರಶ್ನೆ ಉದ್ಭವಿಸಿದಾಗ ಪೂಜ್ಯಪಾದರು ಅದಕ್ಕೆ ಸಮಾಧಾನ ವಾಗುವ ರೀತಿಯಲ್ಲಿ ಪುನಃ–

ಪರಲಿಂಗೇ ವಿಲೀನಸ್ಯ ಪರಮಾನಂದ ಚಿನ್ಮಯೇ।
ಕುತೋ ದೇಹೇನ ಸಂಬಂಧೋ ದೇಹಿವದ್ಭಾಸನಂ ಭ್ರಮಃ॥

(ಸಿ.ಶಿ ೧೬–೪೫)

ಈ ರೀತಿಯಾಗಿ ಉಪದೇಶಿಸಿದ್ದಾರೆ. ಪರಮಾನಂದ ಸ್ವರೂಪವು ಮತ್ತು ಚಿದ್ರೂಪವೂ ಆದ ಪರಶಿವಲಿಂಗದಲ್ಲಿ ವಿಲೀನವಾದ ಮನೋವೃತ್ತಿಯುಳ್ಳ ಶಿವಯೋಗಿಗೆ ದೇಹದ ಸಂಬಂಧವೇ ಇರುವದಿಲ್ಲ. ನೋಡುವವರಿಗೆ ಆವನು ಶರೀರಧಾರಿಯಂತೆ ಕಾಣುತ್ತಿರುವದು ನೋಡುವವರ ಭ್ರಮೆಯೇ ವಿನಃ ವಾಸ್ತವಿಕವಾದುದಲ್ಲ. ಹೀಗೆ ಆತನು ಅಕಾಯನಾಗಿದ್ದರೂ ಅನ್ಯರಿಗೆ ಸಕಾಯನಂತೆ ತೋರುತ್ತಿರುವದು ಭ್ರಮೆಯೆಂಬುದಾಗಿ ತಿಳಿದುಕೊಳ್ಳಬೇಕೆಂಬುದು ಪೂಜ್ಯರ ಆಶಯವಾಗಿದೆ.

ಮನಸ್ಸಿನ ಜೊತೆಗೆ ನಮ್ಮ ಸಂಬಂಧವು ಎಲ್ಲಿ ಇರುವದೋ ನಾವು ಅಲ್ಲಿಯೇ ಇರುತ್ತೇವೆ. ಹಾಗೆಯೇ ಈ ಶಿವಯೋಗಿಯ ಮನೋವೃತ್ತಿಯು ಪರಶಿವ ಲಿಂಗದಲ್ಲಿ ವಿಲೀನವಾಗಿರೋಣದರಿಂದ ದೇಹದ ಜೊತೆಗೆ ಅವನ ಮನೋವೃತ್ತಿಯ ಸಂಬಂಧವು ಇರುವದಿಲ್ಲ. ಆದ್ದರಿಂದ ಅವನು ದೇಹದಲ್ಲಿ ಇದ್ದರೂ ಸಹ ದೇಹಕ್ಕೆ ಸಂಬಂಧವಿರದ ಹಾಗೆ ಇರುತ್ತಾನೆ. ಕಮಲವು ಸದಾ ನೀರಿನಲ್ಲಿಯೇ ಇದ್ದರೂ ನೀರು ತನಗೆ ಸೋಂಕದಂತೆ ಇರುವ ಹಾಗೆ ಈ ಶಿವಯೋಗಿಯೂ ಸಹ, ಶರೀರದಲ್ಲಿದ್ದರೂ ಶರೀರಸಂಬಂಧವಿಲ್ಲದಂತೆ ಅಲಿಪ್ತನಾಗಿರುತ್ತಾನೆ. ಅಂತೆಯೇ ಕಾಮಧಾರಿಯಾಗಿಯೂ ಅವನು ಅಕಾಯನಾಗಿ ರುತ್ತಾನೆ. ಹೀಗಿದ್ದರೂ ಅಜ್ಞರಾದ ಜೀವಿಗಳು ಇವನನ್ನು ತಮ್ಮಂತೆ ದೇಹಧಾರಿಯನ್ನಾಗಿ ತಿಳಿದುಕೊಂಡಿರುತ್ತಾರೆ. ಅವರ ಈ ತಿಳುವಳಿಕೆಯು ಭ್ರಮಾತ್ಮಕವಾಗಿರುತ್ತದೆ. ಮನುಷ್ಯನ ಅಂತರಂಗ ಬಹಿರಂಗಗಳಲ್ಲಿ ಅಂತರಂಗವೇ ಮಹತ್ತ್ವಪೂರ್ಣವಾದುದು. ನಮ್ಮ ಶರೀರವು ಎಲ್ಲಿದೆ ಆದು ಅಷ್ಟೊಂದು ಮಹತ್ತ್ವದ್ದಲ್ಲ ಆದರೆ ನಮ್ಮ ಮನಸ್ಸು ಎಲ್ಲಿದೆಯೋ ಅದು ಬಹಳಷ್ಟು ಮಹತ್ತ್ವಪೂರ್ಣವಾದುದು. ಸದ್ಯಃ ನೀವುಗಳೆಲ್ಲ ಕಾಶೀ ಮಹಾಕ್ಷೇತ್ರದಲ್ಲಿ ಆಶೀರ್ವಚನವನ್ನು ಆಲಿಸುತ್ತ ಕುಳಿತಿದ್ದೀರೇನೋ ನಿಜ ಆದರೆ ನಿಮ್ಮಲ್ಲಿಯ ಎಷ್ಟೋ ಜನರು ನಿಮ್ಮ ನಿಮ್ಮ ಊರು ಹಾಗೂ ಮನೆಗಳ ಬಗ್ಗೆ ಚಿಂತಿಸುತ್ತಿರಬಹುದು. ಹಾಗೇನಾದರೂ ಯಾರದೇ ಮನಸ್ಸಿನಲ್ಲಿ ವಿಚಾರವು ಮೂಡಿ ಬಂದಿದ್ದರೆ ಅವರು ಕಾಶಿಯಲ್ಲಿ ಇದ್ದಂತೆ ತೋರುತ್ತಿದ್ದರೂ ಅವರ ನಿಜವಾದ ವಾಸ್ತವ್ಯವು ಅವರ ಮನೆಯಲ್ಲಿಯೇ ಇರುತ್ತದೆ. ಇನ್ನು ನಿಮ್ಮ ಮನೆಯಲ್ಲಿರುವ ಓರ್ವ ವ್ಯಕ್ತಿಯು ಮನೆಯಲ್ಲೇ ಕುಳಿತುಕೊಂಡು ನಮ್ಮವರು ಸದ್ಯಃ ಕಾಶೀಕ್ಷೇತ್ರದಲ್ಲಿ ಗಂಗೆಯಲ್ಲಿ ಸ್ನಾನ ಮಾಡುತ್ತಿರಬಹುದು. ವಿಶ್ವನಾಥನನ್ನು ಪೂಜಿಸುತ್ತಿರಬಹುದು. ಶ್ರೀಮಹಾಸನ್ನಿಧಿಯ ಪೂಜೆಯಲ್ಲಿ ಪಾಲುಗೊಳ್ಳುತ್ತಿರಬಹುದು'' ಮುಂತಾಗಿ ಮನದಲ್ಲಿ ವಿಚಾರಿಸುತ್ತಿದ್ದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಮನೆಯಲ್ಲಿದ್ದೂ ಸಹ ಕಾಶಿಯಲ್ಲಿದ್ದಂತೆಯೇ. ಆದಕಾರಣ ಪ್ರತಿಯೊಬ್ಬರೂ ತಮ್ಮ ಹೆಚ್ಚಿನ ಗಮನವನ್ನು ಸ್ಥೂಲಶರೀರದ ಕಡೆಗೆ ಹರಿಸದೆ ಸೂಕ್ಷ್ಮ ಶರೀರದತ್ತ ಗಮನವಿಡಬೇಕು. ಅಲ್ಲಿರುವ ಮನಸ್ಸು ಎಲ್ಲಿ ಇರುತ್ತದೆಯೋ ಮತ್ತು ಏನನ್ನು ಮಾಡುತ್ತಿರುತ್ತದೆಯೋ ನಾವು ಅಲ್ಲೇ ಇದ್ದು ಅದನ್ನೇ ಮಾಡುತ್ತೇವೆಂಬುದಾಗಿ ಭಾವಿಸಬೇಕು.

ಈರ್ವರು ಮಿತ್ರರು ದೇಶಪರ್ಯಟನೆಯನ್ನು ಮಾಡುತ್ತ ಕಾಶೀಕ್ಷೇತ್ರಕ್ಕೆ ಬಂದು ತಲುಪಿದರು. ಕಾಕತಾಲೀಯ ನ್ಯಾಯದಂತೆ ಅಂದು ಮಹಾಶಿವರಾತ್ರಿಯ ಪರ್ವಕಾಲವಿತ್ತು. ಅವರೀರ್ವರಲ್ಲಿ ಓರ್ವನು ಧಾರ್ಮಿಕಪ್ರವೃತ್ತಿಯವನಾಗಿದ್ದರೆ ಇನ್ನೋರ್ವನು ವಿಷಯಲಂಪಟನಾಗಿದ್ದನು. ಸಾಯಂಕಾಲದ ಸಮಯವಾಗುತ್ತಿರುವಾಗ ಧಾರ್ಮಿಕಭಾವನೆಯ ಮಿತ್ರನು ತನ್ನ ಗೆಳೆಯನನ್ನುದ್ದೇಶಿಸಿ ಯೋಗಾಯೋಗದಿಂದ ಮಹಾಶಿವರಾತ್ರಿಯ ದಿನದಂದು ನಮಗೆ ಕಾಶಿಯವಾಸವು ಪ್ರಾಪ್ತವಾಗಿದೆ. ಎಲ್ಲ ರಾತ್ರಿಗಳಿಗಿಂತಲೂ ಶಿವಪೂಜೆ–ಶಿವಧ್ಯಾನಾದಿಗಳಿಗೆ ಈ ರಾತ್ರಿಯು ಅತಿ ಮಹತ್ತ್ವದ್ದಾಗಿದೆ. ಕಾರಣ ವಿಶ್ವನಾಥನ ದೇವಸ್ಥಾನದಲ್ಲಿ ಕುಳಿತು ಪ್ರಹರ ಪ್ರಹರಕ್ಕೊಮ್ಮೆ ಅಭಿಷೇಕ ಮತ್ತು ಬಿಲ್ವಾರ್ಚನಾದಿಗಳನ್ನು ಮಾಡಿ ಇಂದಿನ ರಾತ್ರಿಯನ್ನು ಕಳೆಯೋಣ ಎಂದು ತಿಳಿಸಿದನು. ಆದರೆ ವಿಷಯಲಂಪಟನಾದ ಇವನ ಆ ಮಿತ್ರನಿಗೆ ಇವನ ಮಾತು ರುಚಿಸಲಿಲ್ಲ. ಆದಕಾರಣ ಅವನು ನನ್ನಿಂದ ಈ ಭಜನಾದಿಗಳಲ್ಲಿ ಭಾಗವಹಿಸಲು ನನ್ನ ಮನಸ್ಸು ಒಪ್ಪುತ್ತಲೇ ಇಲ್ಲ. ಕಾಶಿಯು ವಿಶ್ವನಾಥನಿಗಾಗಿ ಪ್ರಸಿದ್ಧವಿರುವಂತೆ ಇಲ್ಲಿಯ ವೇಶ್ಯಾವಾಟಿಕೆಯಿಂದಲೂ ಇದು ಖ್ಯಾತನಾಮವಾಗಿದೆ. ಕಾರಣ ಬೇಕಾದರೆ ನೀನೊಬ್ಬನೇ ವಿಶ್ವನಾಥನ ದೇವಸ್ಥಾನಕ್ಕೆ ಹೋಗು ನಾನೇನೂ ಅತ್ತ ಬರಲಾರೆ ಎಂದು ಹೇಳಿ ವೇಶ್ಯಾವಾಟಿಕೆಯನ್ನು ಪ್ರವೇಶಿಸಿದನು. ಇತ್ತ ದೇವಸ್ಥಾನವನ್ನು ಪ್ರವೇಶಿಸಿದ ಮಿತ್ರನು ; ಪೂಜೆ–ಭಜನೆ–ಶಿವನಾಮಜಪಾದಿಗಳಲ್ಲಿ ತೊಡಗಿದನು. ಆದರೂ ಸಹ ಅವನ ಮನಸ್ಸು ಮಾತ್ರ ವೇಶ್ಯಾವಾಟಿಕೆಯತ್ತ ಹರಿಯತೊಡಗಿತು. ಇನ್ನು ವೇಶ್ಯಾವಾಟಿಕೆಯಲ್ಲಿದ್ದ ಮಿತ್ರನು ಕಾಮಕೇಳಿಯಲ್ಲಿ ರತನಾಗಿದ್ದರೂ ಪಶ್ಚಾತ್ತಾಪದಿಂದ ಆತನ ಮನಸ್ಸು ದೇವಸ್ಥಾನದತ್ತ ಹರಿಯತೊಡಗಿತು. ಹೀಗೆ ಇವರೀರ್ವರೂ ಬೆಳಗಾಗುವವರೆಗೆ ತಮ್ಮ ತಮ್ಮ ಕ್ರಿಯೆಯಲ್ಲಿ ಮನಸ್ಸನ್ನು ತೊಡಗಿಸದೆ ಪರಸ್ಪರ ಅನ್ಯಕ್ರಿಯಾಸಕ್ತಚಿತ್ತವುಳ್ಳವರಾದರು. ಹೀಗಾಗಿ ದೇವಸ್ಥಾನದಲ್ಲಿದ್ದು ಓರ್ವನು ಪಾಪಭಾಜನನಾದರೆ ಮತ್ತೋರ್ವನು ವೇಶ್ಯಾವಾಟಿಕೆಯಲ್ಲಿದ್ದೂ ಪುಣ್ಯಭಾಜನನಾದನು. ಬಹಿರಂಗದೃಷ್ಟಿಯಲ್ಲಿ ಅವರವರ ವ್ಯವಹಾರವು ಏನೇ ಇದ್ದರೂ ಅಂತರಂಗವು ಅದಕ್ಕೆ ವಿಪರೀತವಾಗಿ ವರ್ತಿಸಿದಾಗ ವಿಪರೀತ ಫಲಗಳೇ ಪ್ರಾಪ್ತವಾಗುವವು. ಆದ್ದರಿಂದ ನಾವು ಎಲ್ಲಿದ್ದೇವೆ ಎಂಬುದಕ್ಕಿಂತಲೂ ನಮ್ಮ ಮನಸ್ಸು ಎಲ್ಲಿದೆ ಅನ್ನುವದು ಬಹುಮುಖ್ಯ ಎಂಬುದನ್ನು ಸರ್ವರೂ ತಿಳಿದುಕೊಳ್ಳಬೇಕು.

ಅಕಾಯ ಸ್ಥಲದ ಶಿವಯೋಗಿಯು ಕಾಯದಲ್ಲಿದ್ದರೂ ಆತನ ಚಿತ್ತವು ,ಮಾತ್ರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಶಿವ ಬ್ರಹ್ಮದಲ್ಲಿ ವಿಲೀನವಾಗಿರೋಣದರಿಂದ ಅವನು ವ್ಯಾವಹಾರಿಕವಾಗಿ ಕಾಯಧಾರಿಯಾಗಿದ್ದರೂ ವಾಸ್ತವಿಕವಾಗಿ ಆತನು ಅಕಾಯನೇ ಆಗಿರುತ್ತಾನೆ.

ಈ ಪೂರ್ವದಲ್ಲಿ ಹೇಳಿದಂತೆ ಈ ಶಿವಯೋಗಿಗೆ ವ್ಯಾವಹಾರಿಕವಾದ ದೇಹಸಂಬಂಧವಿದ್ದರೂ ಅವನಿಗೆ ಯಾವದೇ ಪ್ರಕಾರದ ಬಾಧೆಯುಂಟಾಗಲಾರದೆಂಬ ವಿಷಯವನ್ನು ಪ್ರತಿಪಾದಿಸಲೋಸುಗ ಪೂಜ್ಯಪಾದರು ಪುನಃ–

ದೇಹಾಭಿಮಾನಹೀನಸ್ಯ ಶಿವಭಾವೇಸ್ಥಿತಾತ್ಮನಃ।
ಜಗದೇತಚ್ಛರೀರಂ ಸ್ಯಾದ್ದೇಹೇನೈಕೇನ ಕಾ ವ್ಯಥಾ?॥

(ಸಿ.ಶಿ.೧೬–೪೬)

ಈ ವಿಧವಾಗಿ ಉಪದೇಶಿಸಿದ್ದಾರೆ. ದೇಹಾಭಿಮಾನಶೂನ್ಯನಾದ ಮತ್ತು ಶಿವೋಽಹಂ ಭಾವನೆಯಲ್ಲಿ ಸ್ಥಿತನಾದ ಶಿವಯೋಗಿಗೆ ಇಡೀ ವಿಶ್ವವೇ ತನ್ನ ಶರೀರವಾಗಿ ತೋರುತ್ತಿರುವಾಗ ಇದೊಂದು ದೇಹದಿಂದ ಆದಾವ ಹಾನಿಯೂ ಉಂಟಾಗಲಾರದು, ಎಂಬುದು ಪೂಜ್ಯರ ಆಶಯವಾಗಿದೆ.

ಶರೀರವು ನಾನಲ್ಲ ಮತ್ತು ಅದು ನನ್ನದೂ ಅಲ್ಲ ಎಂಬುದಾಗಿ ದೇಹಾಭಿಮಾನವನ್ನು ಪರಿತ್ಯಜಿಸಿ ಶಿವಭಾವನೆಯಲ್ಲಿ ತಲ್ಲೀನನಾದ ಶಿವಯೋಗಿಯ ಮಮಕಾರದ ಸಂಕುಚಿತ ಭಾವನೆಯು ತೊಲಗಿ ಅದು ವಿರಾಡ್ರೂಪವನ್ನು ತಾಳುತ್ತದೆ. ಶಾಸ್ತ್ರಕಾರರು ಮಮಕಾರದಿಂದ ಮುಕ್ತರಾಗಲು ಎರಡು ಮಾರ್ಗಗಳನ್ನು ಉಪದೇಶಿಸಿದ್ದಾರೆ. ಮೊದಲನೆಯದು ಸಂಪೂರ್ಣವಾಗಿ ಮಮತ್ವಭಾವನೆಯನ್ನು ತ್ಯಾಗ ಮಾಡುವದು. ಎರಡನೆಯದು ಸರ್ವವೆಲ್ಲವನ್ನೂ ತನ್ನದನ್ನಾಗಿ ಭಾವಿಸುವದು. ಯಾರ ಮಮತ್ವವು ವಿಶ್ವವ್ಯಾಪಿಯಾಗಿರುತ್ತದೆಯೋ ಅವರು ಈಶ್ವರಸ್ವರೂಪರೇ ಆಗುತ್ತಾರೆ. ಶಿವನಿಗೂ ಜೀವನಿಗೂ ಇರುವ ವ್ಯತ್ಯಾಸವೆಂದರೆ ಇಷ್ಟೇ. ಅಂದರೆ ತನ್ನದೇ ಆದ ಶರೀರ, ಮನೆ–ಮಠಾದಿಗಳ ಬಗ್ಗೆ ಮಮತ್ವಭಾವನೆಯನ್ನು ತಾಳುವವನು ಜೀವನೆಂದು ಕರೆಯಿಸಿಗೊಂಡರೆ ಸರ್ವವೆಲ್ಲವೂ ನನ್ನದೆಂಬ ಸಮಷ್ಟಿಭಾವನೆಯುಳ್ಳವನು ಪರಮಾತ್ಮನೆಂಬುದಾಗಿ ಕರೆಯಿಸಿಗೊಳ್ಳುತ್ತಾನೆ. ಈ ಪೂರ್ವದಲ್ಲಿ ಹೇಳಲ್ಪಟ್ಟ ಶಿವಯೋಗಿಯು ವ್ಯಷ್ಟಿ–ಅಭಿಮಾನ ಶೂನ್ಯನಾಗಿ ಶಿವನಂತೆ ಸಮಷ್ಟಿ ಅಭಿಮಾನವನ್ನು ತಾಳಿರೋಣದರಿಂದ ಇಡೀ ಜಗತ್ತೇ ಆತನ ಶರೀರವಾಗಿರೋಣದರಿಂದ ಅವನಿಗಿರುವ ಈ ದೇಹದಿಂದ ಯಾವ ಬಾಧೆಯೂ ಉಂಟಾಗುವದಿಲ್ಲ.

ಈ ಶಿವಯೋಗಿಯು ಶಿವನಂತೆ ಸರ್ವತಂತ್ರ ಸ್ವತಂತ್ರನಲ್ಲದಿರೋಣದರಿಂದ ಇವನಿಗೆ ಅದು ಹೇಗೆ ತಾನೆ ದುಃಖಾದಿಗಳು ಉಂಟಾಗುವದಿಲ್ಲ ? ಎಂಬ ಶಂಕೆಯುಂಟಾದಾಗ ಪೂಜ್ಯಪಾದರು ಪುನಃ–

ಶಿವಜ್ಞಾನೈಕನಿಷ್ಠಸ್ಯನಾಹಂಕಾರ ಭವಭ್ರಮಃ
ನ ಚೇಂದ್ರಿಯ ಭವಂ ದುಃಖಂತ್ಯಕ್ತ ದೇಹಾಭಿಮಾನಿನಃ॥

(ಸಿ.ಶಿ.೧೬–೪೭)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ಉಪದೇಶಿಸಿದ್ದಾರೆ. ಶಿವೋऽಹಂ ಭಾವನೆಯಲ್ಲಿ ಅತ್ಯಂತ ನಿಷ್ಠೆಯುಳ್ಳ ಶರೀರಾದಿಗಳ ಪರಿಚ್ಛಿನ್ನ ಅಹಂಕಾರದಿಂದ ದೂರನಾದ, ದೇಹಾಭಿಮಾನವನ್ನು ತ್ಯಜಿಸಿದ ಶಿವಯೋಗಿಗೆ ಇಂದ್ರಿಯಜನ್ಯವಾದ ಯಾವ ದುಃಖವೂ ಅವನಿಗೆ ಉಂಟಾಗಲಾರದೆಂಬುದು ಪೂಜ್ಯರ ಆಶಯವಾಗಿದೆ. (ಮಮಕಾರ)

ಜೀವಾತ್ಮನು ಅಹಂಕಾರ ಭಾವನೆಯಿಂದ ಕೂಡಿಕೊಂಡು ಇಂದ್ರಿಯಗಳೊಂದಿಗೆ ಯಾವಾಗ ವ್ಯವಹರಿಸುತ್ತಾನೆಯೋ ಆಗಲೇನೇ ದುಃಖದ ಭೋಗವು ಉಂಟಾಗುತ್ತದೆ. ಪ್ರತಿಯೊಂದು ವ್ಯವಹಾರದಲ್ಲಿ ನಾನೇ ಮಾಡಿದ್ದೇನೆ ನಾನೇ ಮಾಡಿದ್ದೇನೆ ಎಂಬ ಭಾವನೆಯು ಉಂಟಾಗುವದು ಸಹಜ. ಈ ಭಾವನೆಗೇನೇ ಅಹಂಕಾರವೆಂದು ಕರೆಯುತ್ತಾರೆ. ಜೀವಾತ್ಮನು ಏನೇ ಮಾಡಿದರೂ ಅವನಿಗೆ ಪರಮಾತ್ಮನು ಪ್ರೇರಕ ಶಕ್ತಿಯಾಗಿರುತ್ತಾನೆ. ಅಂತೆಯೇ ''ತೇನ ವಿನಾ ತೃಣಮಪಿ ನ ಚಲತಿ'' ಎಂಬುದಾಗಿ ಶಾಸ್ತ್ರಕಾರರು ಪ್ರತಿಪಾದಿಸಿದ್ದಾರೆ. ಹೀಗಿದ್ದರೂ ಮೂಢರಾದ ಜೀವಿಗಳು ತಮ್ಮ ಹಿಂದಿರುವ ಪ್ರೇರಕ ಶಕ್ತಿಯನ್ನು ಮರೆತು ತಾವೇ ಮಾಡಿದ್ದೇವೆಯೆಂಬ ದುರಭಿಮಾನವನ್ನು ತಾಳುತ್ತಾರೆ. ಈ ದುರಾಭಿಮಾನವೇ ಅವರ ದುಃಖಕ್ಕೆ ಕಾರಣವಾಗಿರುತ್ತದೆ. ಎಲ್ಲವೂ ಈಶ್ವರನ ಪ್ರೇರಣೆಯಿಂದ ನಡೆಯುತ್ತಿರುವಾಗ ಇದು ನನ್ನಿಂದಲೇ ಆಯಿತು ಎಂಬುದಾಗಿ ಅಭಿಮಾನಿಸುವದು ಹಾಸ್ಯಾಸ್ಪದವಾಗುವದು. ಓರ್ವ ವ್ಯಕ್ತಿಯು ಕುದುರೆಯಮೇಲೆ ಕುಳಿತುಕೊಂಡು ಪ್ರಯಾಣ ಮಾಡುತ್ತಿದ್ದನು. ಸ್ವಲ್ಪ ದೂರ ಹೋದ ಮೇಲೆ ಕುದುರೆಯ ಮೇಲಿಟ್ಟಿರುವ ಒಂದು ಭಾರವಾದ ಗಂಟನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡನಂತೆ. ದಾರಿಯಲ್ಲಿ ಹೋಗುವವರು ಇದೇನು ಕುದುರೆಯ ಮೇಲೆ ಕುಳಿತ ನೀನು ಈ ಗಂಟನ್ನು ಅದರ ಮೇಲೆಯೇ ಇಡದೆ ನಿನ್ನ ತಲೆಯ ಮೇಲೆ ಏಕೆ ಹೊತ್ತುಕೊಂಡಿರುವೆ ಎಂಬುದಾಗಿ ಪ್ರಶ್ನಿಸಲು ಆ ಕುದುರೆಸವಾರನು ಕುದುರೆಯ ಮೇಲೆ ಹೆಚ್ಚು ಭಾರವಾಗಬಾರದೆಂಬ ಉದ್ದೇಶದಿಂದ ಅದಕ್ಕೆ ಸಹಾಯಮಾಡುವದಕ್ಕಾಗಿ ಈ ಗಂಟನ್ನು ನಾನು ಹೊತ್ತು ಕೊಂಡಿದ್ದೇನೆಂದು ಉತ್ತರಿಸಿದನಂತೆ. ಅವನ ಆ ಉತ್ತರವನ್ನು ಕೇಳಿ ಎಲ್ಲರೂ ನಗಲಾರಂಭಿಸಿದರು. ಗಂಟನ್ನು ತಲೆಯ ಮೇಲೆ ಹೊತ್ತರೆ ಕುದುರೆಗೆ ಭಾರದಲ್ಲೇನೂ ಕಡಿಮೆಯಾಗಲಿಲ್ಲ. ಆದರೆ ಸವಾರನು ಅದನ್ನು ತನ್ನ ತಲೆಯ ಮೇಲೆ ಹೊತ್ತು ತನಗೆ ಭಾರಮಾಡಿಕೊಂಡನಷ್ಟೇ.

ಸಂಸಾರದಲ್ಲಿಯ ಜೀವಿಗಳು ಇದೇ ತೆರನಾಗಿ ವ್ಯರ್ಥ ಅಭಿಮಾನವನ್ನು ತಾಳಿಕೊಂಡು ದುಃಖಕ್ಕೀಡಾಗುತ್ತಿರುತ್ತಾರೆ. ಆದ್ದರಿಂದ ಜ್ಞಾನಿಗಳಾದವರು ಶಿವನಲ್ಲಿಯೇ ನಿಷ್ಠೆಯುಳ್ಳವರಾಗಿ ಈ ಅಹಂಕಾರ ಮಮಕಾರಗಳನ್ನು ತ್ಯಜಿಸಿರೋಣದರಿಂದ ಇವರಿಗೆ ಯಾವದೇ ಪ್ರಕಾರದ ದುಃಖಗಳು ಉಂಟಾಗುವದಿಲ್ಲ.

ಇನ್ನು ಕೊನೆಯದಾಗಿ ಪೂಜ್ಯ ಪಾದರು ಈ ಶಿವಯೋಗಿಗೆ ದೇಹಸಂಬಂಧವಿರುವ ದಿಲ್ಲವೆಂಬುದನ್ನು ಪ್ರತಿಪಾದಿಸಿ ಈ ಸ್ಥಲವನ್ನು ಪರಿಸಮಾಪ್ತಗೊಳಿಸಲೋಸುಗ ಪುನಃ –

CC0. In Public Domain. Jangamwadi Math Collection, Varanasi

ನ ಮನುಷ್ಯೋ ನ ದೇವೋಽಹಂ ನ ಯಕ್ಷೋ ನೈವರಾಕ್ಷಸಃ।
ಶಿವೋಽಹಮಿತಿಯೋಬುದ್ಧ್ಯಾತ್ತಸ್ಯ ಕಿಂ ದೇಹಕರ್ಮಣಾಂ॥

(ಸಿ.ಶಿ ೧೬–೪೪)

ಈ ತೆರನಾಗಿ ಉಪದೇಶಿಸಿದ್ದಾರೆ. ಆ ಆತ್ಮನು ಮನುಷ್ಯನಲ್ಲ ದೇವನಲ್ಲ ಮತ್ತು ಯಕ್ಷ–ರಾಕ್ಷಸನೂ ಅಲ್ಲ ಇವೆಲ್ಲ ಆತ್ಮನಿಗೆ ಪ್ರಾಪ್ತವಾದ ಶರೀರಗಳು, ಯಾವ ಶಿವಯೋಗಿಯು ಶಿವೋಽಹಂ ಭಾವನೆಯಲ್ಲಿ ನಿಷ್ಠನಾಗಿರುತ್ತಾನೆಯೋ ಅವನು ತನಗಿರುವ ದೇಹದ ಬಗ್ಗೆ ಅಭಿಮಾನವನ್ನು ತಾಳುವದಿಲ್ಲ, ಅಂತೆಯೇ ಅವನು ನಾನು ಮನುಷ್ಯನು, ನಾನು ದೇವನು ನಾನು ಯಕ್ಷನು ನಾನು ರಾಕ್ಷಸನು ಎಂಬುದಾಗಿ ಎಂದೂ ವ್ಯವಹರಿಸುವದಿಲ್ಲ, ಈತನ ಮನಸ್ಸಿನಲ್ಲಿ ಸದಾ ಶಿವೋಽಹಂ ಎಂದರೆ ನಾನು ಪರಶಿವ ಸ್ವರೂಪನೇ ಆಗಿದ್ದೇನೆ ಎಂಬ ಭಾವನೆಯೊಂದೇ ಇರುತ್ತದೆ. ಆದ್ದರಿಂದ ಶರೀರವಿದ್ದರೂ ಶರೀರದ ಅಭಿಮಾನವಿಲ್ಲದಿರೋಣದರಿಂದ ಶರೀರದ ಯಾವದೇ ಕ್ರಿಯೆಗಳ ವ್ಯವಹಾರದ ಪರಿಣಾಮವು ಇವನ ಮೇಲೆ ಉಂಟಾಗುವದಿಲ್ಲ, ಹೀಗೆ ಅಕಾಯ ಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಕಾಯವನ್ನು ಧರಿಸಿದ್ದರೂ ಅಕಾಯನಾಗಿ ಬದುಕುವ ಒಂದು ಕಲೆಯನ್ನು ಕಲಿಸಿಕೊಟ್ಟಿದ್ದಾರೆ. ಈ ಸ್ಥಲದ ರಹಸ್ಯಾರ್ಥವನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಕಾಯವಿದ್ದೂ ಅಕಾಯನಾಗಿ ಬಾಳುವೆ ಮಾಡಬಹುದು. ಇಂತಹ ಈ ಕಲೆಯು ನಿಮಗೆಲ್ಲ ಕರಗತವಾಗಲೆಂಬುದಾಗಿ ಹರಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ॥೫ ಅಗಷ್ಟ ೧೯೯೩

(ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ)

■■

Digitization by eGangotri and Sarayu Trust. Funding by MoE-IKS
CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವಚನ-೧೦

ಪರಕಾಯಸ್ಥಲ-೧

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶಿ ಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಶ್ರೀ ಮಹಾಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಅಸಾರವಾದ ಈ ಸಂಸಾರದಲ್ಲಿ ಜ್ಞಾನಿಗಳು ನಾಲ್ಕು ಸಾರಗಳನ್ನು ಕಂಡು ಹಿಡಿದಿದ್ದಾರೆ. ಅವು ಯಾವವೆಂದರೆ –

ಅಸಾರೇ ಖಲು ಸಂಸಾರೇ ಸಾರಮೇತತ್ ಚತುಷ್ಟಯಮ್ ।
ಕಾಶ್ಯಾಂ ವಾಸಃ ಸತಾಂ ಸಂಗಃ ಗಂಗಾಂಭಃ ಶಿವಪೂಜನಮ್ ॥

ಅಂದರೆ ಕಾಶಿಯಲ್ಲಿ ವಾಸಿಸುವದು, ಸಂತರೊಂದಿಗೆ ಸಹವಾಸ ಮಾಡುವದು, ಗಂಗಾನದಿಯಲ್ಲಿ ಸ್ನಾನಮಾಡುವದು ಮತ್ತು ಶಿವನನ್ನು ಪೂಜಿಸುವದು ಇವೇ ಆ ನಾಲ್ಕು ಸಾರಗಳು. ಅನೇಕ ಜನ್ಮಗಳ ಪುಣ್ಯದ ಫಲವಾಗಿ ಕಾಶಿಯ ವಾಸವು ಪ್ರಾಪ್ತವಾಗುವದು. ಇಲ್ಲಿ ನಿವಾಸದ ಭಾಗ್ಯದೊರೆತಾಗ ಪ್ರತಿದಿನ ಗಂಗಾ ಸ್ನಾನವನ್ನು ಮಾಡುತ್ತ ಶಿವನನ್ನು ಪೂಜಿಸುತ್ತ ಸಂತರ ಸಹವಾಸದಲ್ಲಿ ಕಾಲ ಕಳೆದರೆ ಅವನ ಜೀವನವೇ ಪಾವನವಾಗುವುದು.

ಕಾಶಿಯಲ್ಲಿ ವಾಸಿಸಬೇಕಾದರೆ ಕೆಲವೊಂದು ನಿಯಮಗಳನ್ನು ಅವಶ್ಯವಾಗಿ ಪರಿಪಾಲಿಸಬೇಕು. ಮೊದಲನೆಯದು ಸ್ವತಃ ಸಂಪಾದಿಸಿಯೇ ತನ್ನ ಉಪಜೀವನವನ್ನು ಸಾಗಿಸಬೇಕು. ಎರಡನೆಯದು ಅನಾವಶ್ಯವಾಗಿ ಬೇರೆಯವರ ಮೇಲೆ ಕ್ರೋಧವನ್ನು ತಾಳಕೂಡದು ಮತ್ತು ಮೂರನೆಯದು ಯಾರ ನಿಂದೆಯನ್ನೂ ಮಾಡದೇ ಇರುವದು. ಈ ಮೂರು ನಿಯಮಗಳನ್ನು ಚಾಚೂ ತಪ್ಪದೆ ಪರಿಪಾಲಿಸುತ್ತ ಒಂದು ವರ್ಷಕಾಲವನ್ನು ಕಾಶಿಯಲ್ಲಿ ಕಳೆದರೆ ಆ ವ್ಯಕ್ತಿಗೆ ಕೃತಯುಗದಲ್ಲಿ ಸಾವಿರ ವರ್ಷ ಪರ್ಯಂತರವಾಗಿ ಮಾಡಿದ ತಪಶ್ಚರ್ಯೆಯ ಫಲವು ಪ್ರಾಪ್ತವಾಗುವದು ಇಂತಹ ಪುಣ್ಯಪ್ರದವಾದ ಈ ಕಾಶೀ ಮಹಾಕ್ಷೇತ್ರದಲ್ಲಿನೀವುಗಳೆಲ್ಲಪ್ರತಿದಿನ ಗಂಗಾಸ್ನಾನ ವಿಶ್ವೇಶ್ವರನ ದರ್ಶನ ಮತ್ತು ಸಾಯಂಕಾಲದ ಧರ್ಮಸಭೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯ ಆಶೀರ್ವಚನಗಳನ್ನು ಆಲಿಸುವ ನಿಮ್ಮೆಲ್ಲರ ಜೀವನವು ಸಾರ್ಥಕವಾಗಿವೆ.

ಈ ಸುಸಂದರ್ಭದಲ್ಲಿ ಸಿದ್ಧಾಂತ ಶಿಖಾಮಣಿಯ ಲಿಂಗ ಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನಗಳನ್ನು ಆಲಿಸುತ್ತಿದ್ದೀರಿ. ನಿನ್ನೆಯ ದಿನ ಅಕಾಯಸ್ಥಲದ ಬಗ್ಗೆ ಸಾಕಷ್ಟು ಶ್ರವಣ ಮಾಡಿದ್ದೀರಿ. ಇಂದು ಕ್ರಮ ಪ್ರಾಪ್ತವಾದ 'ಪರಕಾಯ ಸ್ಥಲದ ಬಗ್ಗೆ ವಿವೇಚಿಸೋಣ' ''ಪರ ಃ ಕಾಯಃ ಯಸ್ಯ ಸಃ ಪರಕಾಯಃ '' ಅಂದರೆ ಯಾರ ಕಾಯವು ಪರಬ್ರಹ್ಮಸ್ವರೂಪವಾಗಿದೆಯೋ ಅವನಿಗೆ ಪರಕಾಯನೆನ್ನುವರು. ಯಾರು ಪರಶಿವ ಬ್ರಹ್ಮವನ್ನು ತನ್ನ ಆತ್ಮರೂಪವನ್ನಾಗಿ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆಯೋ ಅವರ ಕಾಯವೂ ಸಹ ಪರಬ್ರಹ್ಮಸ್ವರೂಪವೇ ಆಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಳಿದ ಶಾಸ್ತ್ರಾಚಾರ್ಯರೂ ಪರಬ್ರಹ್ಮಸ್ವರೂಪವನ್ನು ತಿಳಿದ ವ್ಯಕ್ತಿಯ ಆತ್ಮವು ಪರಶಿವಬ್ರಹ್ಮನೆಂಬುದಾಗಿ ಪ್ರತಿಪಾದಿಸಿದರೆ ವೀರಶೈವಾಚಾರ್ಯರು ಹಾಗೆ ತಿಳಿದವನ ಆತ್ಮವಷ್ಟೇ ಅಲ್ಲ ಅವನ ಶರೀರವೂ ಸಹ ಪರಬ್ರಹ್ಮಸ್ವರೂಪವಾಗಿರುತ್ತದೆ ಎಂಬುದಾಗಿ ಇಲ್ಲಿ ಪ್ರತಿಪಾದಿಸಿದ್ದಾರೆ. ಅದಕ್ಕೆ ಕಾರಣವೇನೆಂಬುದನ್ನು ಶ್ರೀ ಜಗದ್ಗುರು ರೇಣುಕಾ ಭಗವತ್ಪಾದರು ಇಲ್ಲಿ–

ವಶೀಕೃತತ್ವಾತ್ಪ್ರಕೃತೇ ರ್ಮಾಯಾ ಮಾರಾತಿ ವರ್ತನಾತ್।
ಪರಕಾಯೋಽಯ ಮಾಖ್ಯಾತಃ ಸತ್ಯ ಜ್ಞಾನ ಸುಖಾತ್ಮನಃ॥

(ಸಿ.ಶಿ ೧೬–೪೯)

ಹೀಗೆ ಉಪದೇಶಿಸಿದ್ದಾರೆ. ಪರಕಾಯಸ್ಥಿತಿಯನ್ನು ಪಡೆದ ಶಿವಯೋಗಿಯು ಪ್ರಕೃತಿಯನ್ನು ತನ್ನ ವಶದಲ್ಲಿ ಇಟ್ಟುಕೊಂಡಿರುತ್ತಾನೆ. ಅಜ್ಞ ಜೀವಿಗಳು ಪ್ರಕೃತಿಯ ಅಧೀನವಾಗಿ ವ್ಯವಹಾರಿಸುತ್ತಿದ್ದರೆ ಈತನು ಪ್ರಕೃತಿಯನ್ನೇ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾನೆ. ಸತ್ವ, ರಜ ಹಾಗೂ ತಮೋಗುಣಗಳ ಸಾಮ್ಯಾವಸ್ಥೆಗೆ ಪ್ರಕೃತಿಯೆಂದು ಕರೆದಿದ್ದಾರೆ. ಇದು ಯಾವಾಗ ವಿಷಮ ರೂಪವನ್ನು ತಾಳುತ್ತಿದೆಯೋ ಆಗ ಸೃಷ್ಟಿಕಾರ್ಯವು ಪ್ರಾರಂಭವಾಗುತ್ತದೆ. ಇದು ಪ್ರಕೃತಿಯ ಸಮಷ್ಟಿ ಸ್ವರೂಪವು ಇನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲಿರುವ, ಮನ–ಬುದ್ಧಿಗಳು ಅವನ ವ್ಯಷ್ಟಿ ಪ್ರಕೃತಿಗಳೆಂದು ತಿಳಿದುಕೊಳ್ಳಬೇಕು. ಪರಕಾಯ ಸ್ಥಿತಿಯನ್ನು ಪಡೆದ ಶಿವಯೋಗಿಯು ಮೂಲ ಪ್ರಕೃತಿಯನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತಾನೆಂದ ಬಳಿಕ ಅವನ ವ್ಯಷ್ಟಿ ಪ್ರಕೃತಿಗಳಾದ ಮನೋ ಬುದ್ಧಿಗಳು ಅವನ ಸ್ವಾಧೀನತೆಯಲ್ಲಿರುತ್ತವೆ ಎಂಬುದಾಗಿ ಬೇರೆ ಹೇಳಬೇಕಾಗಿಲ್ಲ.

ಈತನು ಪ್ರಕೃತಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುವದಷ್ಟೇ ಅಲ್ಲ ಮಾಯೆಯನ್ನೂ ಸಹ ಮೀರಿದವನಾಗಿರುತ್ತಾನೆ. ಅಂದರೆ ಮಾಯೆಯ ಆಚೆಗಿರುವ ಪರಶಿವಬ್ರಹ್ಮನನ್ನು ಅರಿತವನಾಗಿರುತ್ತಾನೆ. ಅಂತೆಯೇ ಈತನು ಸತ್ಯ ಸ್ವರೂಪನೂ, ಜ್ಞಾನ ಸ್ವರೂಪನೂ ಮತ್ತು ಆನಂದ ಸ್ವರೂಪನೂ ಆಗಿರುತ್ತಾನೆ. ಅಂತಲೇ ಈತನಿಗೆ ಪರಕಾಯನೆಂದು ಕರೆದಿದ್ದಾರೆ.

ಶರೀರವು ಸ್ವಭಾವತಃ ಅಪವಿತ್ರವೆಂಬುದಾಗಿ ಶಾಸ್ತ್ರಗಳು ಪ್ರತಿಪಾದಿಸುತ್ತವೆ ಆದರೂ ಯಾವ ಶರೀರವು ನಿರಂತರವಾಗಿ ಆತ್ಮ ಸಂಬಂಧಿಯಾಗಿರುತ್ತದೆಯೋ ಅರ್ಥಾತ್ ಆ ಶರೀರದಲ್ಲಿ ವಾಸಿಸುವ ಯೋಗಿಯು ಸದಾ ಪರಮಾತ್ಮ ಚಿಂತನೆಯಲ್ಲಿ ತಲ್ಲೀನಾಗಿರುವನೋ ಅವನ ಶರೀರವೂ ಸಹ ಆತ್ಮದಂತೆ ಪವಿತ್ರವಾಗಿರುತ್ತದೆ. ಅಂತೆಯೇ ನಮ್ಮ ದೇಶದಲ್ಲಿ ಆತ್ಮ ಜ್ಞಾನಿಗಳಾದ ಗುರುಗಳ ಹಾಗೂ ಸಂತರ ಶರೀರವನ್ನು ಸಹ ಪೂಜಿಸುವ ಪರಂಪರೆಯು ರೂಢಿಯಲ್ಲಿ ಬಂದಿದೆ. ಇಂಥವರ ಶರೀರಗಳು ಅಪವಿತ್ರವಾದವುಗಳನ್ನು ಪವಿತ್ರಗಳನ್ನಾಗಿ ಮಾಡಬಲ್ಲವು. ಧೂಳಿಯು ಸ್ವಭಾವತಃ ಅಶುದ್ಧ ಹಾಗೂ ಅಪವಿತ್ರವಾಗಿದ್ದರೂ ಅದುವೇ ಆತ್ಮಜ್ಞಾನಿಯ ಪಾದ ಸೋಂಕಲು ಪಾದ ಧೂಳಿಯೆಂಬ ಹೆಸರಿನಿಂದ ಪವಿತ್ರವಸ್ತುವಾಗಿ ಪರಿವರ್ತಿಸಲ್ಪಡುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಗುರುಪಾದ ಧೂಳಿಯು ಶಿಷ್ಯನ ಮನಸ್ಸಿನಲ್ಲಿಯ ರಜೋಗುಣವನ್ನು ಇಲ್ಲದಾಗಿಸಿ ಆತನನ್ನು ಸಾತ್ವಿಕನನ್ನಾಗಿ ಮಾಡುತ್ತದೆ. ಅಂತೆಯೇ ಹೊರಗಿನಿಂದ ಬಂದ ಧೂಳಮಿಶ್ರಿತವಾದ ಗುರುಪಾದವನ್ನು ತೊಳೆದು ಮನೆಗೆಲ್ಲ ಪ್ರೋಕ್ಷಿಸುವ ಒಂದು ಪ್ರಾಚೀನ ಪರಂಪರೆಯು ಇಂದಿಗೂ ರೂಢಿಯಲ್ಲಿದೆ. ಗುರುವಿನ ಪಾದಧೂಳಿಯ ಬಗ್ಗೆ ಪೂಜ್ಯಪಾದರು –

ಪಾದಾಗ್ರರೇಣವೋ ಯತ್ರ ಪತಂತಿ ಶಿವಯೋಗಿಣಾಮ್ ।
ತದೇವ ಸದನಂ ಪುಣ್ಯಂ ಪಾವನಂ ಗೃಹಮೇಧಿನಾಮ್ ॥

(ಸಿ.ಶಿ ೧೧–೪೨)

ಹೀಗೆ ವಿವರಿಸಿದ್ದಾರೆ. ಯಾವ ಗೃಹಸ್ಥನ ಮನೆಗೆ ಗುರುಗಳ ಪಾದ ಧೂಳಿಯು ಸೋಂಕುವದೋ ಆ ಮನೆಯು ಪಾವನೆಂಬುದು ಪೂಜ್ಯರ ಆಶಯವಾಗಿದೆ. ಅಂತೆಯೇ ಆತ್ಮಜ್ಞಾನಿಯ ಶರೀರವೂ ಸಹ ಪರಬ್ರಹ್ಮರೂಪವೆಂಬುದಾಗಿ ಈ ಪರಕಾಯಸ್ಥಲದಲ್ಲಿ ಪ್ರತಿಪಾದಿಸಲಾಗಿದೆ.

ಪೂರ್ವೋಕ್ತನಾದ ಶಿವಯೋಗಿಗೆ ಪರಕಾಯ ಸ್ವರೂಪವನ್ನು ಹೇಳಿದರೂ ಸಹ ಆತನಿಗೆ ಸ್ಥೂಲ ಶರೀರವು ಇರೋಣದರಿಂದ ಅದು ಹೇಗೆ ತಾನೆ ಪರಕಾಯತ್ವವು ಸಂಭವಿಸುವದು ? ಎಂಬ ಪ್ರಶ್ನೆ ಉದ್ಭವಿಸಿದಾಗ ಪೂಜ್ಯಪಾದರು ಅದಕ್ಕೆ ಸಮಾಧಾನ ರೂಪವಾಗಿ ಪುನಃ –

ಪರಬ್ರಹ್ಮವಪುರ್ಯಸ್ಯ ಪ್ರಬೋಧಾನಂದ ಭಾಸುರಮ್ ।
ಪ್ರಾಕೃತೇನ ಶರೀರೇಣ ಕಿಮೇತೇನಾಸ್ಯ ಜಾಯತೇ ॥

(ಸಿ.ಶಿ ೧೬–೫೦)

ಹೀಗೆ ನಿರೂಪಿಸಿದ್ದಾರೆ. ಸಚ್ಚಿದಾನಂದ ಸ್ವರೂಪವಾದ ಪರಶಿವ ಬ್ರಹ್ಮವೇ ಯಾರಿಗೆ ಶರೀರವಾಗಿದೆಯೋ ಅಂತಹ ಪರಕಾಯನಾದ ಶಿವಯೋಗಿಗೆ ಈ ಪ್ರಾಕೃತವಾದ ಸ್ಥೂಲ ಶರೀರದಿಂದ ಅದಾವ ಹಾನಿಯೂ ಉಂಟಾಗುವದಿಲ್ಲ ಎಂಬುದು ಪೂಜ್ಯರ ಆಶಯವಾಗಿದೆ. ಪರಶಿವ ಬ್ರಹ್ಮವೇ ತಾನೆಂದು ತಿಳಿದು ಶಿವಯೋಗಿಯ ಪ್ರಾಕೃತ ಶರೀರದಿಂದ ಅವನಿಗೆ ಯಾವ ಹಾನಿಯೂ ಇರುವದಿಲ್ಲ ಅಷ್ಟೇ ಅಲ್ಲ ಆ ಶರೀರದ ಸ್ಪರ್ಶದಿಂದ ಲೋಕದಲ್ಲಿ ಅಘಟಿತವಾದ ಘಟನೆಗಳೂ ಸಹ ಸಂಭವಿಸುವದನ್ನು ನೋಡುತ್ತೇವೆ. ಆತ್ಮಜ್ಞಾನಿಯಾದ ಜ್ಞಾನೇಶ್ವರನು ಇಲ್ಲಿ ಉಪದೇಶಿಸಲಾದ ಪರಕಾಯಸ್ಥಿತಿಯನ್ನು ಪಡೆದವನಾಗಿದ್ದನು. ಅಂತೆಯೇ ತನ್ನ ವರದ ಹಸ್ತವನ್ನು ಒಂದು ಕೋಣದ ತಲೆಯ ಮೇಲಿಟ್ಟಾಗ ಆ ಕೋಣವು ವೇದ ಮಂತ್ರವನ್ನು ಉಚ್ಚರಿಸಿತೆಂಬ ಕಥೆಯು ಸರ್ವಶ್ರುತವಾಗಿದೆ ಆದ್ದರಿಂದ ಆತ್ಮಜ್ಞಾನಿಗಳ ಹಸ್ತ ಪಾದ ಮತ್ತು ನೇತ್ರಾದಿಗಳಲ್ಲಿ ಅಪಾರವಾದ ಸಾಮರ್ಥ್ಯವಿರುತ್ತದೆ. ಅವುಗಳ ಸ್ಪರ್ಶವಾದೊಡನೆ ಇಂತಹ ಅಘಟಿತ ಘಟನೆಗಳು ಆಗಾಗ ಘಟಿಸುತ್ತಿರುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜ್ಯಪಾದರು ಈ ಪರಕಾಯ ಸ್ಥಲದ ಶಿವಯೋಗಿಯ ಬಗ್ಗೇನೇ ಪುನಃ ವಿವರಿಸುತ್ತ-

ಸಮ್ಯಗ್ ಜ್ಞಾನಾಗ್ನಿ ಸಂದಗ್ಧ ಜನ್ಮ ಬೀಜಕಳೇ ವರಃ।
ಶಿವತತ್ತ್ವಾವಲಂಬೀಯಃ ಪರಕಾಯಃ ಸ ಉಚ್ಯತೇ ॥

(ಸಿ.ಶಿ. ೧೬-೩೧)

ಹೀಗೆ ಉಪದೇಶಿಸಿದ್ದಾರೆ. ತನಗುಂಟಾದ ಶಿವಾದ್ವೈತಜ್ಞಾನವೆಂಬ ಅಗ್ನಿಯಿಂದ ಜನ್ಮಬೀಜವನ್ನು ಹುರಿದುಹಾಕಿದ ಮತ್ತು ಶಿವತತ್ತ್ವವನ್ನು ಅವಲಂಬಿಸಿರುವವನು ಯಾವನೋ ಅವನೇ ಪರಕಾಯನೆಂಬುದಾಗಿ ಕರೆಯಿಸಿಗೊಳ್ಳುತ್ತಾನೆ ಎಂಬುದು ಪೂಜ್ಯಪಾದರ ಅಭಿಪ್ರಾಯವಾಗಿದೆ. ರಾಗದ್ವೇಷಗಳು ಜನ್ಮದ ಬೀಜಗಳು. ಜೀವಾತ್ಮನು ಈ ಪ್ರಪಂಚದಲ್ಲಿ ಪುನಃ ಪುನಃ ಜನ್ಮ ತಾಳಲು ಕಾರಣಗಳಾದ ಬೀಜಗಳೆಂದರೆ ರಾಗ ದ್ವೇಷಗಳೇ. ಅಂತೆಯೇ ನಿಜಗುಣ ಶಿವಯೋಗಿಗಳು- ''ರಾಗದಿಂ ಬೇರಿನ್ನು ಭವ ಭವಬೀಜವುಂಟೇ?'' ಎಂಬುದಾಗಿ ಪ್ರಶ್ನಿಸಿ ರಾಗವೇ ಈ ಜನ್ಮಮರಣಾತ್ಮಕವಾಗದ ಈ ಭವಕ್ಕೆ ಬೀಜವೆಂಬುದಾಗಿ ಖಚಿತ ಪಡಿಸಿದ್ದಾರೆ. ರಾಗವೊಂದಿದ್ದರೆ ದ್ವೇಷವು ತಾನಾಗಿಯೇ ಬರುತ್ತದೆ. ಅವೆರಡೂ ದ್ವಂದ್ವಗಳು ಅಂದರೆ ಅವು ಒಂದನ್ನೊಂದು ಬಿಟ್ಟು ಇರುವದಿಲ್ಲ. ಈ ಸಂಸಾರದಲ್ಲಿಯ ಯಾವದೇ ವಸ್ತು ಇಲ್ಲವೆ ವ್ಯಕ್ತಿಯ ಮೇಲಿರುವ ರಾಗದ ಮೂಲಕವಾಗಿಯೇ ಜೀವಾತ್ಮನು ಈ ಜಗತ್ತಿನಲ್ಲಿ ಜನ್ಮ ತಾಳಿ ಬರುತ್ತಾನೆ. ಎಲ್ಲಿಯವರೆಗೆ ಮನಸ್ಸಿನಲ್ಲಿ ರಾಗವಿದೆಯೋ ಅಲ್ಲಿಯವರೆಗೆ ಈ ಜನ್ಮ ಮರಣಗಳು ತಪ್ಪಲಾರವು ಅಂತೆಯೇ ರಾಗಕ್ಕೆ ಭವದಬೀಜವೆಂದು ಬರೆದಿದ್ದಾರೆ. ಆತ್ಮಜ್ಞಾನಿಗಳು ತಮಗುಂಟಾದ ಆ ಜ್ಞಾನಾಗ್ನಿಯಿಂದ ಈ ರಾಗವೆಂಬ ಬೀಜವನ್ನು ಹುರಿದುಹಾಕುತ್ತಾರೆ. ಒಮ್ಮೆ ಬೀಜವು ಅಗ್ನಿಯಲ್ಲಿ ದಗ್ಧವಾಯಿತೆಂದರೆ ಅದು ಪುನಃ ಅಂಕುರಿಸದು. ಅದರಂತೆ ಜ್ಞಾನಾಗ್ನಿಯಿಂದ ಯಾರ ರಾಗವೆಂಬ ಬೀಜವು ಹುರಿದುಹೋಗಿರುವದೋ ಅವರಿಗೆ ಪುನರ್ಜನ್ಮ ಬರುವದಿಲ್ಲ. ಹೀಗೆ ಜನ್ಮ ಬೀಜವನ್ನು ದಗ್ಧಮಾಡಿಕೊಂಡ ಶಿವತತ್ತ್ವವನ್ನು ಅವಲಂಬಿಸಿರುವ ಶಿವಯೋಗಿಯೇ ಇಲ್ಲಿ ಪರಕಾಯನೆಂಬುದಾಗಿ ಕರೆಯಿಸಿಕೊಳ್ಳುತ್ತಾನೆ.

ಮನುಷ್ಯನ ಮನಸ್ಸಿಗೆ ಏನಾದರೊಂದು ಆಲಂಬನವು ಸದಾ ಬೇಕೇ ಬೇಕು. ಸಾಮಾನ್ಯವಾಗಿ ಎಲ್ಲರ ಮನಸ್ಸು ರಾಗದಿಂದ ಕೂಡಿಕೊಂಡಿದ್ದು ಶಬ್ದ-ಸ್ಪರ್ಶಾದಿ ವಿಷಯಗಳನ್ನು ಅವಲಂಬಿಸಿ ಅದರಲ್ಲಿಯೇ ಕ್ರೀಡಿಸುತ್ತಿರುತ್ತದೆ. ಹೀಗೆ ವಿಷಯಾಲಂಬನೆಯನ್ನು ಮಾಡಿರುವ ಆ ಮನಸ್ಸಿನಿಂದ ವಿಷಯಗಳನ್ನು ಬಿಡಿಸಬೇಕಾದರೆ ಅದಕ್ಕೆ ಶಿವತತ್ತ್ವದ ಆಲಂಬನೆಯನ್ನು ಕೊಡಬೇಕು. ಮಣ್ಣನ್ನು ತಿನ್ನುತ್ತಿರುವ ಮಗುವಿನ ಕೈಗೆ ಬೇರೊಂದು ಪದಾರ್ಥವನ್ನು ಕೊಡದೆ ಆ ಮಣ್ಣನ್ನು ಕಸಿದೊಗೆದರೆ ಮಗು ಅಳುವದಲ್ಲದೆ ಆನಂದಿಸದು. ಅದರಂತೆ ವಿಷಯಾಸಕ್ತವಾದ ಜೀವಿಯ ಕೈಯಿಂದ ವಿಷಯವನ್ನು ಬಿಡಿಸುವ ಪೂರ್ವದಲ್ಲಿ ಅದಕ್ಕೆ ಶಿವತತ್ತ್ವವನ್ನು ಸಂಬಂಧಗೊಳಿಸಿದಾಗ ಈ ಕ್ಷುದ್ರವಾದ ವಿಷಯಾದಿಗಳು ತನ್ನಿಂದ ತಾನೇ ಬಿಟ್ಟು ಹೋಗುತ್ತವೆ. ಹೀಗೆ ಸಮ್ಯಗ್ ಜ್ಞಾನಸಂಪನ್ನನೂ ರಾಗ-ದ್ವೇಷಾದಿ ರಹಿತನೂ ಮತ್ತು ಶಿವತತ್ತ್ವಾವಲಂಬಿಯೂ ಆದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಯೋಗಿಯೇ ಪರಕಾಯನೆನಿಸಿಗೊಳ್ಳುವನು. ಇಂತಹ ಜ್ಞಾನಿಯ ದರ್ಶನ ಹಾಗೂ ಸ್ಪರ್ಶನದಿಂದ ಸಾಮಾನ್ಯ ಜನರೂ ಸಹ ಉದ್ಧಾರವಾಗುವರು ಕಾರಣ ಇಂತಹ ಪರಕಾಯ ಶಿವಯೋಗಿಯ ಕೃಪೆಯು ನಿಮ್ಮೆಲ್ಲರಿಗೆ ಉಂಟಾಗಲೆಂಬುದಾಗಿ ಹರಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿ|೬ಅಗಷ್ಟ ೧೯೯೩

(ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ)

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಕಾಯಸ್ಥಲ-೨

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಶ್ರೀ ಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಭಾರತೀಯ ಸಾಹಿತ್ಯದಲ್ಲಿ ಮಹರ್ಷಿವ್ಯಾಸನನ್ನೇ ಮೊದಲು ಮಾಡಿಕೊಂಡು ಅನೇಕ ಜನ ಕವಿಗಳು ಕಾಶಿಯನ್ನು ಕುರಿತು ಹೃದಯಂಗಮವಾಗಿ ವರ್ಣಿಸಿದ್ದಾರೆ. ಬೃಹಜ್ಜಾಬಾಲೋಪ ನಿಷತ್ತಿನಲ್ಲಿ – 'ನವಖಂಡ ಪೃಥ್ವಿಯೊಳಗೆ ಕಾಶಿಯು ಸರ್ವಶ್ರೇಷ್ಠ ಕ್ಷೇತ್ರವೆಂಬುದಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಕಾಶೀ ನಗರವು ಶಿವನ ತ್ರಿಶೂಲದಮೇಲೆ ಪ್ರತಿಷ್ಠಾಪಿಸಲ್ಪಟ್ಟಿದೆ. ಶೂಲವೆಂದರೆ ದುಃಖ–ತಾಪವೆಂದರ್ಥ ಆಧ್ಯಾತ್ಮಿಕ–ಆದಿಭೌತಿಕ ಮತ್ತು ಆದಿದೈವಿಕ ಎಂಬ ಈ ತ್ರಿತಾಪಗಳೇ ಶಿವನ ಹಸ್ತದಲ್ಲಿರುವ ತ್ರಿಶೂಲದ ಸಂಕೇತಗಳಾಗಿವೆ. ತ್ರಿಶೂಲವು ಶಿವನ ಹಸ್ತದಲ್ಲಿ ರೋಣದಿಂದ ಅದು ಇವನ ಅಧೀನವಾದದ್ದು. ಅಂತೆಯೇ ತ್ರಿತಾಪಗಳು ಇವನ ಅಧೀನಗಳೇ ವಿನಃ ಇವನು ತ್ರಿತಾಪಗಳ ಅಧೀನನಲ್ಲ. ಈ ಕಾಶೀನಗರವು ತ್ರಿಶೂಲದ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿರೋಣದರಿಂದ ಇಲ್ಲಿ ವಾಸಿಸುವವರಿಗೆ ಈ ತ್ರಿತಾಪಗಳು ಕ್ಲೇಶವನ್ನುಂಟುಮಾಡಲಾರವು.

ಇಂತಹ ಈ ಕಾಶೀನಗರದ ಬಗ್ಗೆ ಓರ್ವ ಕವಿಯು –

ಮರಣಂ ಮಂಗಲಂ ಯತ್ರ ವಿಭೂತಿಶ್ಚ ವಿಭೂಷಣಮ್ ।
ಕೌಪೀನಂ ಯತ್ರ ಕೌಶೇಯಂ ಸಾ ಕಾಶೀ ಕಿಂ ನ ಸೇವ್ಯ ತೇ ॥

ಹೀಗೆ ವರ್ಣಿಸಿದ್ದಾನೆ. ತಾತ್ಪರ್ಯವೆನೆಂದರೆ– ಬೇರೆ ಊರುಗಳಲ್ಲಿ ಮರಣವಾರ್ತೆಯು ಅಮಂಗಲವೆಂಬುದಾಗಿ ಪರಿಗಣಿಸಲ್ಪಟ್ಟರೂ ಕಾಶಿಯಲ್ಲಿಯ ಮರಣವು ಮಂಗಲವೆಂದು ಕರೆಯಲಾಗಿದೆ. ಇಲ್ಲಿಯ ಮರಣದಿಂದ ಮೃತನಿಗೆ ಮುಕ್ತಿಯೇ ದೊರೆಯುವ ಕಾರಣದಿಂದಾಗಿ ಇಲ್ಲಿಯ ಮರಣಕ್ಕೆ ಮಂಗಲವೆಂಬುದಾಗಿ ಕರೆಯಲಾಗಿದೆ. ಶಿವನಿಗೆ ಅತ್ಯಂತ ಪ್ರಿಯವಾಗಿರುವಂಥ ವಿಭೂತಿಯನ್ನು ಮೈಗೆಲ್ಲ ಸ್ಥವರಿಗೊಂಡು ಹಣೆಯ ಮೇಲೆ ತ್ರಿಪುಂಡ್ರವನ್ನು ಧರಿಸಿದರೆ ಅದಕ್ಕಿಂತ ಶ್ರೇಷ್ಠವಾದ ಆಭೂಷಣವೇ ಬೇರೊಂದಿರುವದಿಲ್ಲ. ಬೆಳ್ಳಿ–ಬಂಗಾರದ ಆಭರಣಗಳಿಗಿಂತಲೂ ಭಸಿತ ರೂಪವಾದ ಆಭರಣಕ್ಕೆ ಈ ಕ್ಷೇತ್ರದಲ್ಲಿ ಹೆಚ್ಚಿನ ಪ್ರಾಶಸ್ತ್ಯವಿದೆ. ಯಾವುದೇ ಒಡವೆಗಳಿರದಿದ್ದರೂ ಹಣೆಯ ಮೇಲೆ ಧಾರಾಳವಾಗಿ ಭಸ್ಮಲೇಪವೊಂದಿದ್ದರೆ ಕಾಶಿಯ ಪ್ರಜೆಯು ಅವನಿಗೆ ಅತಿಯಾದ ಮನ್ನಣೆಯನ್ನು ಕೊಡುತ್ತದೆ. ಇನ್ನು ರೇಶಿಮೆಯ ವಸ್ತ್ರವನ್ನು ಧರಿಸುವ ಸಾಮಾರ್ಥ್ಯವಿರದಿದ್ದರೂ ಕೇವಲ ಕೌಪೀನವೊಂದನ್ನೂ ಧರಿಸಿಗೊಂಡಿದ್ದರೆ ಅವನಿಗೆ ಕೌಶೀಯ ವಸ್ತ್ರವನ್ನು ಧರಿಸಿದಷ್ಟು ಮನ್ನಣೆಯು ಕಾಶೀಶಹರದಲ್ಲಿ ದೊರೆಯುವದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂತಹ ಈ ದಿವ್ಯ ಕ್ಷೇತ್ರದಲ್ಲಿ ಯಾರು ತಾನೇ ಇರಲು ಬಯಸುವದಿಲ್ಲ? ಎಲ್ಲರೂ ಬಯಸುತ್ತಾರೆ ಎಂಬ ತಾತ್ಪರ್ಯವು.

ಇಂತಹ ಪರಮ ಮಂಗಲವಾದ ಕಾಶೀ ಕ್ಷೇತ್ರದಲ್ಲಿ ನಿವಾಸ ಮಾಡಿದ ನೀವೆಲ್ಲ ದಿನಾಲೂ ನಡೆಯುವ ಧರ್ಮ ಸಭೆಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯ ಲಿಂಗಷಟ್ ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದಲ್ಲಿಯ ಅವಾಂತರ ಸ್ಥಲಗಳ ಬಗ್ಗೆ ಆಶೀರ್ವಚನಗಳನ್ನು ಆಲಿಸುತ್ತಾ ಬಂದಿದ್ದೀರಿ. ನಿನ್ನೆಯ ದಿನ ಪರಕಾಯಸ್ಥಲದ ಬಗ್ಗೆ ಕೆಲವು ವಿಷಯಗಳನ್ನು ತಿಳಿದವರಾಗಿದ್ದೀರಿ ಇಂದು ಅದೇ ಸ್ಥಲದ ಅವಶಿಷ್ಟ ಭಾಗವನ್ನು ಕುರಿತು ವಿವೇಚಿಸಲಾಗುವದು.

ಪರ ಅಂದರೆ ಶ್ರೇಷ್ಠ, ಕಾಯವೆಂದರೆ ಶರೀರ ಹೀಗೆ ಅತಿ ಉತ್ಕೃಷ್ಟವಾದ ಪುಣ್ಯಮಯ ಶರೀರವೆಂದರ್ಥ. ಇಂತಹ ಶರೀರವು ಯಾರಿಗೆ ದೊರೆತಿರುವದೋ ಅವನೇ ಪರಕಾಯ ಶಿವಯೋಗಿಯು. ಇಂಥ ಶಿವಯೋಗಿಯ ಆ ಶರೀರವು ದೇವರಷ್ಟೇ ಪೂಜ್ಯವಾಗಿರುತ್ತದೆ. ಅಂತೆಯೇ ಓರ್ವ ಕನ್ನಡದ ಕವಿಯು "ಕಲ್ಲು ದೇವರಾದರೆ ಕಾಯದೇವರಾಗದೆ?" ಎಂಬುದಾಗಿ ಪ್ರಶ್ನಿಸಿದ್ದಾನೆ. ಕಲ್ಲಿನ ಮೂರ್ತಿಗಳನ್ನು ನಿರ್ಮಿಸಿ ಅದಕ್ಕೆ ಸದ್ಗುರುವು ಪ್ರಾಣಪ್ರತಿಷ್ಠಾಪನೆಯನ್ನು ಮಾಡಿದಾಗ ಅದು ದೇವರಾಗಿ ಪೂಜಿಸಲ್ಪಡುವದು. ಹೀಗೆ ಯಾರ ಅಮೃತಹಸ್ತಸ್ಪರ್ಶದಿಂದ ಶಿಲೆಯಲ್ಲಿ ಶಿವತ್ವವು ಪ್ರತಿಷ್ಠಾಪಿಸಲ್ಪಡುವದೋ ಆ ಕಾಯವು ಅದು ಹೇಗೆ ತಾನೆ ದೇವರಾಗಲಿಕ್ಕಿಲ್ಲ? ಅಂತೆಯೇ ಪೂಜ್ಯಪಾದರು–

ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾ ಮಾತ್ಮಮಾಯಯಾ।
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ॥

(ಸಿ.ಶಿ ೯–೫೩)

ಈ ತೆರನಾಗಿ ಅಪ್ಪಣೆಕೊಡಿಸಿದ್ದಾರೆ. ತಾತ್ಪರ್ಯವೇನೆಂದರೆ ಪರಮಾತ್ಮನು ಮಾಯಾಶಕ್ತಿ ವಿಶಿಷ್ಟನಾಗಿರುವದರಿಂದ ಅವನು ಯಾರಿಗೂ ಪ್ರತ್ಯಕ್ಷ ಗೋಚರನಾಗಲಾರನು. ಆದರೆ ಅವನೇ ಗುರುರೂಪದಲ್ಲಿ ಸರ್ವರಿಗೂ ಪ್ರತ್ಯಕ್ಷನಾಗಿದ್ದು ಎಲ್ಲರ ಭಕ್ತಿಯನ್ನು ಸ್ವೀಕರಿಸಿ ಅದಕ್ಕೆ ಉಚಿತವಾದ ಫಲವನ್ನು ದಯಪಾಲಿಸುತ್ತಿದ್ದಾನೆ. ಇಲ್ಲಿ ಕಾಯಧಾರಿಯಾದ ಸದ್ಗುರುವಿಗೆ ಪ್ರತ್ಯಕ್ಷನಾದ ಪರಮಾತ್ಮನೆಂಬುದಾಗಿ ಸಂಭೋದಿಸಿರೋಣದಿಂದ ಅವನ ಆ ಕಾಯವು ಸರ್ವೋತಷ್ಕವಾದುದೆಂಬುದು ಸ್ಪಷ್ಟವಾಗುತ್ತದೆ. ಇಂತಹ ಉತ್ಕೃಷ್ಟವಾದ ಕಾಯವುಳ್ಳವನೇ ಪರಕಾಯನು.

ಈ ಪರಕಾಯ ಶಿವಯೋಗಿಯ ಇಂದ್ರಿಯ ವ್ಯವಹಾರಗಳೆಲ್ಲ ಲಯವಾಗಿ ಹೋಗಿರುತ್ತವೆ ಎಂಬ ವಿಷಯವನ್ನು ಪ್ರಸ್ತುತಪಡಿಸಲೋಸುಗ ಪೂಜ್ಯಪಾದರು ಪುನಃ–

ಇಂದ್ರಿಯಾಣಿ ಮನೋವೃತ್ತಿ ವಾಸನಾಃ ಕರ್ಮಸಂಭವಾಃ।
ಯತ್ರ ಯಾಂತಿ ಲಯಂ ತೇನ ಸಕಾಯೋಽಯಂ ಪರಾತ್ಮನಾ॥

(ಸಿ.ಶಿ ೧೭–೫೭)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ವಿಧವಾಗಿ ಉಪದೇಶಿಸಿದ್ದಾರೆ. ಕರ್ಮಪಾಶ ಸಂಭೂತಗಳಾದ ಮನಸ್ಸಿನ ವಾಸನೆಗಳು ಹಾಗೂ ದಶೇಂದ್ರಿಗಳ ವ್ಯಾಪಾರಗಳು ಆ ಪರಶಿವ ಲಿಂಗದಲ್ಲಿಯೇ ಲಯವಾಗಿ ರೋಣದರಿಂದ ಆ ಶಿವಯೋಗಿಯ ಸಂಪೂರ್ಣವಾದ ಶರೀರವು ಪರಬ್ರಹ್ಮ ಸ್ವರೂಪವಾಗಿರುತ್ತದೆ. ಅಂತೆಯೇ ಅವನಿಗೆ ಪರಕಾಯನೆನ್ನುತ್ತಾರೆ. ಆದ್ದರಿಂದಲೇ ಇಂದ್ರಿಯ ವ್ಯವಹಾರಗಳಿಂದ ಅವನಿಗೆ ಯಾವುದೇ ಬಾಧೆಯುಂಟಾಗುವದಿಲ್ಲ ಎಂಬುದು ಪೂಜ್ಯರ ಅಭಿಪ್ರಾಯವಾಗಿದೆ.

ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಲ್ಲಿ ಪ್ರವೃತ್ತವಾಗಲು ಮನಸ್ಸಿನಲ್ಲಿರುವ ವಾಸನೆಗಳೇ ಮೂಲಕಾರಣಗಳು ಜೀವಾತ್ಮನು ಯಾವ ಯಾವ ಪದಾರ್ಥಗಳನ್ನು ಉಪಭೋಗಿಸುತ್ತಾನೆಯೋ ಅವೆಲ್ಲವುಗಳ ಸಂಸ್ಕಾರಗಳು ಮನಸ್ಸಿನಲ್ಲಿ ಉಳಿದು ಕೊಳ್ಳುತ್ತವೆ. ಆ ಸಂಸ್ಕಾರಗಳ ಬಲದಿಂದಲೇ ಪುನಃ ಆಯಾ ವಿಷಯಗಳನ್ನು ಅನುಭವಿಸುವ ಇಚ್ಛೆಯುಂಟಾಗುತ್ತದೆ. ಈ ಇಚ್ಛೆಯ ಉತ್ಪತ್ತಿಗೆ ಕಾರಣವಾದ ಆ ಸಂಸ್ಕಾರವೇ ಇಲ್ಲಿಯ 'ವಾಸನಾ' ಎಂಬುದಾಗಿ ಕರೆಯಲ್ಪಡುತ್ತದೆ, ಈ ವಾಸನೆಯ ಮುಖಾಂತರವಾಗಿಯೇ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳೆಲ್ಲಿ ಮತ್ತೆ ಮತ್ತೆ ಪ್ರವೃತ್ತವಾಗುತ್ತಿರುತ್ತವೆ. ಈ ಪರಕಾಯ ಸಂಪನ್ನನಾದ ಶಿವಯೋಗಿಯ ಎಲ್ಲ ಸಾಂಸಾರಿಕ ವಾಸನೆಗಳು ಆ ಪರಶಿವಲಿಂಗದಲ್ಲಿ ವಿಲಯವನ್ನು ಹೊಂದಿರುವದರಿಂದ ಅವನ ಇಂದ್ರಿಯಗಳು ವಿಷಯಾಭಿಮುಖವಾಗಿ ಪ್ರವೃತ್ತವಾಗಲಾರವು. ಹೀಗೆ ಈತನ ವಾಸನೆ ಹಾಗೂ ಇಂದ್ರಿಯಗಳೆಲ್ಲ ಭಗವದರ್ಪಿತವಾಗಿರೋಣದರಿಂದ ಇವನ ಶರೀರವು ಸಹ ಭಗವದ್ರೂಪವಾಗಿರುತ್ತದೆ ಎಂಬುದಾಗಿ ತಿಳಿದುಕೊಳ್ಳಬೇಕು.

ಈ ಪರಸ್ಥಲದ ಶಿವಯೋಗಿಯ ದೇಹವು ಅದು ಹೇಗೆ ತಾನೇ ಪರಬ್ರಹ್ಮಸ್ವರೂಪವಾಗಬಲ್ಲದು ? ಎಂಬ ಶಂಕೆಯನ್ನು ನಿರಸನಗೊಳಿಸಲೋಸುಗ ಪೂಜ್ಯಪಾದರು ಪುನಃ –

> ಪರಾಹಂತಾಮನುಪ್ರಾಪ್ಯ ಪಶ್ಯೇದ್ವಿಶ್ವಂ ಚಿದಾತ್ಮಕಮ್ ।
> ಸದೇಹೋಽತಿ ಭ್ರಮಸ್ತಸ್ಯ ನಿಶ್ಚಿತಾಹಿ ಶಿವಾತ್ಮತಾ ॥

(ಸಿ.ಶಿ ೧೭–೫೩)

ಈ ತೆರನಾಗಿ ವಿವರಿಸಿದ್ದಾರೆ. ಈ ಪರಕಾಯ ಶಿವಯೋಗಿಯು ಪರಾ–ಅಹಂತೆಯನ್ನು ಪಡೆದು ಇಡೀ ವಿಶ್ವವೆಲ್ಲವನ್ನು ಚಿನ್ಮಯವಾಗಿ ನೋಡುತ್ತಾನೆ. ಅಂತೆಯೇ ಅವನಿಗೆ ಶಿವಾತ್ಮತ್ವ ಭಾವನೆಯು ನಿಶ್ಚಿತವಾಗಿರುತ್ತದೆ. ಆದ್ದರಿಂದಲೇ ಅವನು ದೇಹ ಧಾರಿಯಾಗಿದ್ದಾನೆಂಬ ಭಾವನೆಯು ಭ್ರಮಾತ್ಮಕವಾದುದೆಂಬುದಾಗಿ ತಿಳಿದುಕೊಳ್ಳಬೇಕು ಎಂಬುದು ಪೂಜ್ಯರ ಆಶಯವಾಗಿದೆ.

ಅಹಂತಾ ಭಾವನೆಯು ಪರಾಹಂತಾ ಮತ್ತು ಅಪರಾಹಂತಾ ಎಂಬುದಾಗಿ ಎರಡು ಪ್ರಕಾರವಾಗಿರುತ್ತದೆ. ಸಮಷ್ಟಿ ಅಹಂಭಾವನೆಗೆ ಪರಾಹಂತಾ ಎಂದು ಕರೆದರೆ ವ್ಯಷ್ಟಿ ಅಹಂಭಾವನೆಗೆ ಅಪರಾಹಂತಾ ಎಂದು ಕರೆಯುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರ ಅಹಂಭಾವನೆಯು ಕೇವಲ ತನ್ನ ಶರೀರವನ್ನು ವ್ಯಾಪಿಸಿರುವದೋ ಅದುವೇ ಅಪರಾಅಹಂತೆಯು. ಇದು ಉಳ್ಳವನು ಅಜ್ಞಾನಿ ಜೀವನೆಂದು ಕರೆಯಲ್ಪಡುವನು. ಇನ್ನು ಯಾರ ಅಹಂಭಾವನೆಯು ಸಂಪೂರ್ಣ ವಿಶ್ವವನ್ನು ವ್ಯಾಪಿಸಿಕೊಂಡಿರುವದೋ ಅಂತಹ ಪರಾಹಂತೆಯುಳ್ಳವರು ಜ್ಞಾನಿ ಎಂಬುದಾಗಿ ಕರೆಯಲ್ಪಡುತ್ತಾರೆ. ಅವರೇ ವಿಶ್ವ ಕುಟುಂಬಿಗಳು. ಇವರ ಮನಸ್ಸಿನಲ್ಲಿ ಯಾವದೇ ಪ್ರಕಾರದ ಭೇದ ಭಾವವು ಇರುವದಿಲ್ಲ. ಇಂತಹ ಸ್ಥಿತಿಯನ್ನು ಪಡೆದ ಪರಕಾಯ ಶಿವಯೋಗಿಯು ಈ ಜಗತ್ತಿನಲ್ಲಿ ಎಲ್ಲರಿಗಿಂತಲೂ ದೊಡ್ಡವನಾಗಿ ತೋರುತ್ತಾನೆ. ಇವನೇ ಶ್ರೇಷ್ಠನಾದ ಸದ್ಗುರು ಇಂತಹ ಗುರುವನ್ನುದ್ದೇಶಿಸಿಯೇ ಶಿವನು– ''ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಮ್ '' ಎಂಬುದಾಗಿ ಆದೇಶಿಸಿದ್ದಾರೆ.

ಈತನ ದೃಷ್ಟಿಯು ಶಿವಮಯವಾಗಿರುತ್ತದೆ. ಅಂತೆಯೇ ಸರ್ವವೆಲ್ಲವನು ಚಿದಹಂಭಾವನೆಯಿಂದ ನೋಡುತ್ತ ಆನಂದ ತುಂದಿಲನಾಗಿರುತ್ತಾನೆ. ಇವನಿಗೆ ದುಃಖದ ಸ್ಪರ್ಶವೇ ಆಗುವದಿಲ್ಲ. ಯಾರ ಮನಸ್ಸಿನಲ್ಲಿ ಸದಾ ಪರಮಾತ್ಮ ಭಾವನೆಯಿರುತ್ತದೆಯೋ ಅವರು ಸದಾ ಸುಖಿಗಳಾಗಿರುತ್ತಾರೆ. ಇನ್ನು ಯಾರ ಮನಸ್ಸಿನಲ್ಲಿ ಪ್ರಾಪಂಚಿಕಭಾವನೆ ಉಂಟಾಗುತ್ತಿರುತ್ತದೆಯೋ ಅವರು ಸದಾ ದುಃಖಿಗಳೇ ಆಗಿರುತ್ತಾರೆ. ಸಂಸಾರವೇ ದುಃಖಮಯವಾಗಿರುವಾಗ ಅದರ ಚಿಂತೆಯನ್ನು ಮಾಡುವ ವ್ಯಕ್ತಿಗೆ ಅದು ಹೇಗೆ ತಾನೆ ಸುಖವು ದೊರಕೀತು ? ಇದೂ ಅಲ್ಲದೆ ಪ್ರಪಂಚದಲ್ಲಿಯ ಸುಖಗಳು ಅನೇಕಗಳಾಗಿದ್ದು ಅವು ಸಾತಿಶಯದಿಂದ ಕೂಡಿಕೊಂಡಿರುತ್ತವೆ. ಇನ್ನು ಈ ಪ್ರಪಂಚದ ಸುಖಗಳು ಎಲ್ಲವೂ ಎಲ್ಲರಿಗೆ ದೊರೆಯಲಾರವು. ಒಂದು ಪ್ರಾಪ್ತವಾಗಿದ್ದರೆ ಇನ್ನೊಂದರ ಅಭಾವವು ಸದಾ ಮನಸ್ಸನ್ನು ಕೊರೆಯುತ್ತಿರುತ್ತದೆ. ಎಂತಹ ಚಕ್ರವರ್ತಿಯಿದ್ದರೂ ಅವನ ಮನಸ್ಸಿನಲ್ಲಿ ಸಂಸಾರದ ಯಾವದೇ ಒಂದು ವಸ್ತುವಿನ ಕೊರಗು ಮರಗುಗಳು ಇದ್ದೇ ಇರುತ್ತವೆ.

ಓರ್ವ ವ್ಯಕ್ತಿಯು ಹಂಸತೂಲಿಕಾತಲ್ಪದ ಮೇಲೆ ಮಲಗಿಕೊಂಡು ಆನಂದಿಸುವಾಗ ಆ ಹಾಸಿಗೆಯ ಮೃದುಸ್ಪರ್ಶ ಸುಖವು ದೇಹದ ಒಂದು ಭಾಗಕ್ಕೆ ಮಾತ್ರ ಆಗುತ್ತಿರುತ್ತದೆ. ಇಡೀ ದೇಹಕ್ಕೆಲ್ಲ ಅದರ ಸ್ಪರ್ಶ ಸುಖವು ಏಕಕಾಲಕ್ಕೇನೇ ದೊರೆಯಬೇಕೆಂಬ ಉದ್ದೇಶದಿಂದ ಆತನು ಆ ಹಾಸಿಗೆಯಮೇಲೆ ಅತ್ತಿಂದಿತ್ತ ಇತ್ತಿಂದತ್ತ ಹೊರಳಾಡ ತೊಡಗಿದನು. ಅದೆಷ್ಟೇ ಹೊರಳಾಡಿದರೂ ಏಕಕಾಲದಲ್ಲಿ ಸಂಪೂರ್ಣ ಶರೀರಕ್ಕೆ ಅದರ ಸ್ಪರ್ಶಸುಖಾನುಭೂತಿ ಆಗಲೇ ಇಲ್ಲ. ದೇಹದ ಒಂದು ಮಗ್ಗಲು ಆ ಸುಖವನ್ನನುಭವಿಸುತ್ತಿದ್ದರೆ ಉಳಿದ ಮೂರು ಮಗ್ಗಲುಗಳು ಅದರಿಂದ ವಂಚಿತಗಳಾಗಿದ್ದವು. ಜಗತ್ತಿನಲ್ಲಿಯ ಸಂಸಾರಿಕ ಸುಖಗಳ ರೀತಿ–ನೀತಿಗಳೇ ಇಂತಹವು. ಆದ್ದರಿಂದ ಎಷ್ಟೇ ಪ್ರಯತ್ನ ಮಾಡಿದರೂ ಸಂಸಾರದ ಎಲ್ಲ ಸುಖಗಳು ಓರ್ವ ವ್ಯಕ್ತಿಗೆ ದೊರೆಯಲಾರವು ಆದ್ದರಿಂದ ರಂಕನನ್ನೇ ಮೊದಲು ಮಾಡಿಕೊಂಡು ಚಕ್ರವರ್ತಿಯವರೆಗಿರುವ ಪ್ರತಿಯೊಬ್ಬರ ಮನಸ್ಸಿನಲ್ಲಿ ಒಂದಿಲ್ಲೊಂದು ಪ್ರಕಾರದ ದುಃಖಗಳು ಇದ್ದೇ ಇರುತ್ತವೆ. ಆದರೆ ಈ ಸಾಂಸಾರಿಕ ಸುಖಗಳನ್ನು ತ್ಯಜಿಸಿ ಪರಮಾತ್ಮ ಸ್ವರೂಪವನ್ನು ಪಡೆದ ಪರಕಾಯದ ಶಿವಯೋಗಿಯು ಆ ಪರಾಹಂತ ಭಾವನೆಯಿಂದ ಸರ್ವವೆಲ್ಲವೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾನೆಂಬುದಾಗಿ ಅನುಭವಿಸುತ್ತ ಸದಾ ಆನಂದದಲ್ಲಿರುತ್ತಾನೆ. ಈ ಆನಂದವು ನಿರತಿಶಯವಾಗಿರೋಣದರಿಂದ ಇದನ್ನು ಪಡೆದ ಬಳಿಕ ಮತ್ತೆ ಬೇರೆಯಾವುದರ ಅಪೇಕ್ಷೆಯೇ ಮನಸ್ಸಿನಲ್ಲಿ ಬಾರದಿರೋಣದರಿಂದ ಈ ಶಿವಯೋಗಿಯು ಅಚ್ಚ ಸುಖಿಯಾಗಿರುತ್ತಾನೆ. ಈ ಸುಖವನ್ನೇ ಅಪೇಕ್ಷಿಸಿದ ನಿಜಗುಣ ಶಿವಯೋಗಿಗಳು– ''ಸುಖವೇ ! ನಿಜಸುಖವೇ !! ನೀನು ನಿಖಿಳವೆಂದೆನಿಸದೆ ಏಕಮುಖವಾಗಿ ತೋರು– ಎನ್ನೊಳು'', ಎಂದಿದ್ದಾರೆ ಕೇಳಿಕೊಂಡಿದ್ದಾರೆ ಅಂದರೆ ಆತ್ಮಸುಖವೇ ಸಂಸಾರದಲ್ಲಿ ಅನೇಕ ಮುಖವಾಗಿ ತೋರುತ್ತಿರುತ್ತದೆ. ಅಲ್ಲಿ ಅದು ಸಾತಿಶಯ ಸ್ವರೂಪವನ್ನು ತಾಳಿಕೊಂಡು ಯಾರ ಮನಸ್ಸಿಗೂ ಪರಿಪೂರ್ಣವಾದ ಸಮಾಧಾನವನ್ನು ಕೊಡುವದಿಲ್ಲ. ಆದರೆ ಅದುವೇ ಈ ಹೊರಗಿನ ಅನೇಕ ರೂಪಗಳನ್ನು ಬಿಟ್ಟು ಆತ್ಮಸುಖರೂಪವಾದ ಒಂದೇ ಮುಖದಿಂದ ತೋರಿದಾಗ ಅದು ನಿರತಿಶಯವಾಗಿರೋಣದರಿಂದ ಅದನ್ನು ಪಡೆದವರು ಪರಿಪೂರ್ಣ ಸುಖಿಗಳಾಗುತ್ತಾರೆ.

ಈ ಪರಕಾಯಸ್ಥಲದ ಶಿವಯೋಗಿಯು ತನಗುಂಟಾದ ಪರಾಹಂತಾ ಭಾವನೆಯಿಂದ ವಿಶ್ವವೆಲ್ಲವನ್ನು ಚಿದ್ರೂಪವಾಗಿ ಕಂಡು ಅದರಲ್ಲಿಯೇ ತನ್ನ ಚಿತ್ತವನ್ನು ವಿಲಯಗೊಳಿಸಿರೋಣದರಿಂದ ಸದಾ ಆನಂದಿತನಾಗಿಯೇ ಇರುತ್ತಾನೆ. ಎಲ್ಲರಂತೆ ಅವನಿಗೂ ಸ್ಥೂಲದೇಹವಿದ್ದರೂ ಅದರ ಅಭಿಮಾನವಿಲ್ಲದ ಕಾರಣ ಅದರ ಯಾವದೇ ವಿಕಾರಗಳಿಂದ ಇವನಲ್ಲಿ ವಿಕೃತಿಯುಂಟಾಗುವದಿಲ್ಲ.

ಈ ಪರಕಾಯ ಶಿವಯೋಗಿಯು ದೇಹಧಾರಿಯಾಗಿದ್ದರೂ ಸಹ ಅವನು ನಿರ್ದೇಹಿಯಾಗಿರುತ್ತಾನೆಂಬ ವಿಷಯವನ್ನು ಸ್ಪಷ್ಟಪಡಿಸಲೋಸುಗ ಪೂಜ್ಯಪಾದರು ಪುನಃ–

> ಸ್ವ ಸ್ವರೂಪಂ ಚಿದಾಕಾರಂ ಜ್ಯೋತಿ ಃ ಸಾಕ್ಷಾದ್ವಿಚಿಂತಯನ್ ।
> ದೇಹವಾನಪಿ ನಿರ್ದೇಹೋ ಜೀವನ್ಮುಕ್ತೋ ಹಿ ಸಾಧಕ ಃ॥

(ಸಿ.ಶಿ ೧೬–೫೪)

ಈ ರೀತಿಯಾಗಿ ವಿವರಿಸಿದ್ದಾರೆ. ಆತ್ಮವು ಚಿದ್ರೂಪವಾಗಿರುತ್ತದೆ. ಆ ಚಿದ್ರೂಪವಾದ ತನ್ನಾತ್ಮವನ್ನು ಸಾಕ್ಷಾತ್ಕರಿಸಿಗೊಂಡು ಸ್ವಸ್ವರೂಪದ ಚಿಂತನೆಯಲ್ಲಿರುವ ಸಾಧಕನು ದೇಹವನ್ನು ಧರಿಸಿಗೊಂಡಿದ್ದರೂ ನಿರ್ದೇಹಿಯಾಗಿರುತ್ತಾನೆ. ಅಂತಲೇ ಅವನು ಜೀವನ್ಮುಕ್ತನೂ ಸಹ ಆಗಿರುವನೆಂಬುದು ಪೂಜ್ಯಪಾದರ ಆಶಯವಾಗಿದೆ.

ಜ್ಯೋತಿಯು ಪ್ರಕಾಶಮಾನವಾಗಿರುವಂತೆ ಪ್ರತಿಯೊಬ್ಬರ ಆತ್ಮವೂ ಸಹ ಚಿಜ್ಜ್ಯೋತಿರೂಪವಾಗಿರುತ್ತದೆ. ದೀಪದಿಂದ ಹೊರಗಿನ ಕತ್ತಲೆಯು ಇಲ್ಲದಾಗಿ ಹೋಗುವಂತೆ ಈ ಆತ್ಮಜ್ಯೋತಿಯಿಂದ ಹೃದಯದಲ್ಲಿಯ ಅಜ್ಞಾನವೆಂಬ ಅಂಧಃಕಾರವು ನಿರ್ಮೂಲನಗೊಳ್ಳುವದು. ಇಂತಹ ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಿಗೊಂಡ ಸಾಧಕನು ಸದಾ ಅದರ ಚಿಂತನೆಯಲ್ಲಿಯೇ ತನ್ನ ಚಿತ್ತವನ್ನು ತೊಡಗಿಸುವನು. ಅವನ ಮನೋ ವೃತ್ತಿಯು ಬಹಿರ್ಗಾಮಿಯಾಗದಿರೋಣದರಿಂದ ಮತ್ತು ತನ್ನ ಸ್ಥೂಲದೇಹದ ಕಡೆಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆತನ ಲಕ್ಷ್ಯವಿಲ್ಲದಿರೋಣದರಿಂದ ಅವನು ದೇಹಿಯಾಗಿದ್ದರೂ ನಿರ್ದೇಹಿಯಂತೆ ವರ್ತಿಸುತ್ತಾನೆ. ಈ ನಿರ್ದೇಹಿ ಸ್ಥಿತಿಯೇ ಜೀವನ್ಮುಕ್ತಿಯ ಸ್ಥಿತಿಯು,

ಪೂರ್ವೋಕ್ತನಾದ ಶಿವಯೋಗಿಯ ಜೀವನ್ಮುಕ್ತಿಯ ಸ್ಥಿತಿಯನ್ನು ಮತ್ತಷ್ಟು ಸ್ಪಷ್ಟ ಪಡಿಸಲೋಸುಗ ಪೂಜ್ಯಪಾದರು ಪುನಃ –

ದೇಹಸ್ತಿಷ್ಠತುವಾಯಾತು ಯೋಗಿನಃ ಸ್ವಾತ್ಮಬೋಧಿನಃ।
ಜೀವನ್ಮುಕ್ತಿರ್ಭವೇತ್ ಸದ್ಯಶ್ಚಿದಾನಂದ ಪ್ರಕಾಶಿನೀ॥

(ಸಿ.ಶಿ. ೧೬–೫೫)

ಈ ತೆರನಾಗಿ ಉಪದೇಶಿಸಿದ್ದಾರೆ. ಸ್ವ ಸ್ವರೂಪ ಜ್ಞಾನ ಸಂಪನ್ನನಾದ ಶಿವಯೋಗಿಯ ಸ್ಥೂಲದೇಹವು ಅನೇಕ ಕಾಲದವರೆಗೆ ಇರಬಹುದು ಅಥವಾ ಇಲ್ಲದೇ ಇರಬಹುದು. ಆದರೂ ಸಹ ಅವನ ಸಚ್ಚಿದಾನಂದ ಸ್ವರೂಪವನ್ನು ಪ್ರಕಾಶಗೊಳಿಸುವ ಜೀವನ್ಮುಕ್ತಿರೂಪ ವಾದ ಅವಸ್ಥೆಯು ತತ್‌ಕ್ಷಣದಲ್ಲಿಯೇ ಪ್ರಾಪ್ತವಾಗುವದೆಂಬುದು ಪೂಜ್ಯರ ಆಶಯ ವಾಗಿದೆ.

ಈ ಪರಕಾಯ ಸ್ಥಲದ ಶಿವಯೋಗಿಯು ಸ್ವಾತ್ಮಬೋಧವನ್ನು ಪಡೆದು ಜೀವನ್ಮುಕ್ತಿಯ ವಿಲಕ್ಷಣವಾದ ಆನಂದವನ್ನು ತತ್‌ಕ್ಷಣದಲ್ಲಿಯೇ ಅನುಭವಿಸುತ್ತಿರುತ್ತಾನೆ. ಈ ಸ್ಥಿತಿಯನ್ನು ಪಡೆದ ನಂತರ ಆತನ ಶರೀರವು ಇದ್ದರೂ ಅಷ್ಟೇ ಇಲ್ಲದೇ ಇದ್ದರೂ ಅಷ್ಟೇ. ಆ ದೇಹದ ಪ್ರಯೋಜನೆಯು ಪ್ರಾಪ್ತವಾದ ಬಳಿಕ ಅದು ಇರಲೇಬೇಕೆನ್ನುವ ಕಟ್ಟು ಪಾಡುಗಳೇನಿಲ್ಲ. ಜ್ಞಾನಿಯೇ ಇರಲಿ ಅಜ್ಞಾನಿಯೇ ಇರಲಿ ಅವರವರ ಶರೀರಗಳು ಪ್ರಾರಬ್ಧಕರ್ಮದ ಅಧೀನವಾಗಿರುತ್ತವೆ. ಆ ಕರ್ಮವು ಅಧಿಕವಾಗಿದ್ದರೆ ಆ ದೇಹವು ಅಧಿಕ ಕಾಲದವರೆಗೆ ಇರಬಹುದು. ಆ ಕರ್ಮವು ಅಲ್ಪಕಾಲಿಕವಾಗಿದ್ದರೆ ಆ ದೇಹವು ಸಹ ಅಲ್ಪಕಾಲಿಕವಾಗಿಯೇ ಇರುತ್ತದೆ. ಆದ್ದರಿಂದ ಜ್ಞಾನಿಯಾದ ಬಳಿಕ ಇಷ್ಟುಕಾಲ ಬದುಕಬೇಕು. ಅಷ್ಟುಕಾಲ ಬದುಕಬೇಕೆನ್ನುವ ನಿಯಮವೇನ್ನಿಲ್ಲ. ಆದರೆ ಯೋಗ ಸಾಮರ್ಥ್ಯವನ್ನು ಹೊಂದಿದ ಜ್ಞಾನಿಗಳು ತಮ್ಮ ಯೋಗಬಲದಿಂದ ಜನಸಾಮಾನ್ಯರಿ ಗಿಂತಲೂ ಹೆಚ್ಚುಕಾಲ ಬದುಕಿದ ಘಟನೆಗಳನ್ನು ಅನೇಕ ಕಡೆ ಕೇಳುತ್ತೇವೆ. ಶ್ರೀ ಜಗದ್ಗುರು ರೇಣುಕರೇ ಪ್ರಚ್ಛನ್ನವಾಗಿ ಮತ್ತು ಪ್ರಕಟವಾಗಿ ಹದಿನಾಲ್ಕುನೂರು ವರ್ಷಗಳವರೆಗೆ ಲೀಲೆಯನ್ನು ಮಾಡಿದ್ದರೆಂಬುದು ಅವರ ಚರಿತ್ರೆಯಿಂದ ತಿಳಿದುಬರುತ್ತದೆ. ಇಂತಹ ಮಹಿಮಾನ್ವಿತರಾದ ಅನೇಕ ಮಹಾತ್ಮರು ನಮ್ಮ ದೇಶದಲ್ಲಿ ಆಗಿಹೋಗಿದ್ದಾರೆ. ಯೋಗಸಾಮರ್ಥ್ಯದಿಂದ ಅಧಿಕ ಕಾಲ ಬದುಕಿದ ಮಾತ್ರಕ್ಕೆ ಜೀವನ್ಮುಕ್ತಿಯ ಸ್ಥಿತಿಯಲ್ಲಿಯ ಹೆಚ್ಚೂ ಕಡಿಮೆಯಾಗುತ್ತದೆಂಬ ವಿಚಾರವಿರುವದಿಲ್ಲ. ಜ್ಞಾನದ ನಂತರ ಒಂದು ಕ್ಷಣವೇ ಬದುಕಿರಲಿ ಅಥವಾ ಸಾವಿರ ಸಾವಿರ ವರ್ಷಗಳ ವರೆಗೆ ಚಿರಂಜೀವಿಯಾಗಿರಲಿ ಆದರೂ ಅವರೀರ್ವರ ಜೀವನ್ಮುಕ್ತಿಯ ಆನಂದವು ಒಂದೇಯಾಗಿರುತ್ತದೆ. ಅದರಲ್ಲಿ ಯಾವುದೇ ವ್ಯತ್ಯಾಸವನ್ನು ಕಾಣಲಾಗುವದಿಲ್ಲ. ಆದ್ದರಿಂದ ಜ್ಞಾನಿಗಳು ಜ್ಞಾನಪ್ರಾಪ್ತವಾದನಂತರ ಶರೀರವನ್ನು ಹೆಚ್ಚು ಕಾಲ ಬದುಕಿಸಿಕೊಂಡಿರಬೇಕೆನ್ನುವ ವಿಚಾರಧಾರೆಗೆ ಒಳಗಾಗುವ ದಿಲ್ಲ ಆಂತೆಯೇ ಸುಜ್ಞಾನ ಸಂಪನ್ನಳಾದ ಅಕ್ಕಮಹಾದೇವಿಯು–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಯಕರ್ರನೆ ಕಂದಿದರೇನು?
ಕಾಯಮಿರ್ರನೆ ಮಿಂಚಿದರೇನು?
ಅಂತರಂಗ ಶುದ್ಧವಾದ ಬಳಿಕ ಕಾಯವೇನಾದಡೇನಯ್ಯಾ?
ಚೆನ್ನಮಲ್ಲಿಕಾರ್ಜುನನೊಲಿದ ಕಾಯವೇನಾದಡೆ ನಿಮಗೇನಯ್ಯಾ?

ಎಂಬುದಾಗಿ ಜ್ಞಾನ ಪ್ರಾಪ್ತಿಯ ನಂತರ ಶರೀರದ ಬಗ್ಗೆ ತನ್ನ ಯಾವುದೇ ಪ್ರಕಾರದ ಆಗ್ರಹವು ಇಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾಳೆ. ಮನುಷ್ಯ ಶರೀರದ ಪ್ರಯೋಜನವೆಂದರೆ ಆತ್ಮಜ್ಞಾನವನ್ನು ಪಡೆಯುವುದು. ಆ ಪ್ರಯೋಜನವನ್ನು ಪಡೆದ ನಂತರ ಜ್ಞಾನಿಗಳು ದೇಹದ ಬಗ್ಗೆ ಹೆಚ್ಚು ವಿಚಾರವನ್ನು ಮಾಡದೆ ಅದು ಪ್ರಾರಬ್ಧ ಕರ್ಮಾಧೀನವಾದುದೆಂಬುದನ್ನು ತಿಳಿದುಕೊಂಡು ಸುಮ್ಮನೆ ಇರುತ್ತಾರೆ. ಅದು ಹೆಚ್ಚು ಕಾಲ ಬದುಕಲಿ ಅಥವಾ ಬದುಕದೇ ಇರಲಿ ಅವರಿಗೆ ದೊರತ ಜೀವನ್ಮುಕ್ತಿಯ ಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ಆಗುವದಿಲ್ಲ ಎಂಬುದಾಗಿ ತಿಳಿದುಕೊಳ್ಳಬೇಕು.

ಸಂಸಾರದ ಪೀಡೆಯು ಆತ್ಮಜ್ಞಾನವಾಗುವವರೆಗೆ ಇರುತ್ತದೆಯೇ ವಿನಹ ಆಮೇಲೆ ಅದು ಇರಲಾರದೆಂಬ ವಿಷಯವನ್ನು ಪೂಜ್ಯಪಾದರು ದೃಷ್ಟಾಂತ ಮೂಲಕವಾಗಿ ಪುನಃ–

ಆತ್ಮಜ್ಞಾನಾವಸಾನಂ ಹಿ ಸಂಸಾರ ಪರಿಪೀಡನಮ್ ।
ಸೂರ್ಯೋದಯೇಪಿ ಕಿಂ ಲೋಕಸ್ತಿಮಿರೇಣೋಪರುಧ್ಯತೇ ॥

(ಸಿ.ಶಿ. ೧೬–೫೬)

ಈ ಪರಿಯಾಗಿ ಉಪದೇಶಿಸಿದ್ದಾರೆ. ಆತ್ಮಜ್ಞಾನವಾಗುವವರೆಗೆ ಸಂಸಾರಿಕ ದುಃಖಗಳು ಬೆಂಬತ್ತುತ್ತವೆ. ಸೂರ್ಯೋದಯವಾದೊಡನೆ ಕತ್ತಲೆಯು ಇಲ್ಲದಾಗಿ ಹೋಗುವಂತೆ, ಆತ್ಮ ಜ್ಞಾನವಾದೊಡನೆ ಎಲ್ಲ ದುಃಖಗಳು ನಿವೃತ್ತಗಳಾಗುತ್ತವೆ. ಎಂಬುದು ಪೂಜ್ಯರ ಅಭಿಪ್ರಾಯವಾಗಿದೆ.

ಅಜ್ಞಾನವೇ ಎಲ್ಲ ದುಃಖಗಳ ಬೀಜವು. ಅಜ್ಞಾನದಿಂದ ಭೇದ ಜ್ಞಾನವು ಆ ಬೇಧ ಜ್ಞಾನದಿಂದ ಅನುಕೂಲ–ಪ್ರತಿಕೂಲ ಜ್ಞಾನವು. ಅದರಿಂದ ರಾಗ–ದ್ವೇಷಾದಿಗಳು ಅವುಗಳಿಂದ ಅನುಕೂಲ ಪ್ರತಿಕೂಲವ್ಯವಹಾರವು ಆ ವ್ಯವಹಾರದಿಂದ ಪುಣ್ಯಪಾಪವು ಮತ್ತು ಕೊನೆಯದಾಗಿ ಆ ಪುಣ್ಯಪಾಪದಿಂದಲೇ ಜನ್ಮ–ಮರಣಗಳು ಉಂಟಾಗುತ್ತವೆ. ಈ ಜನ್ಮಮರಣಗಳೇ ದುಃಖ ರೂಪಗಳು. ಹೀಗೆ ಅಜ್ಞಾನವೊಂದಿದ್ದರೆ ಅದರ ಮುಂದಿನ ಪರಂಪರೆಯು ಬೆಳೆಯುತ್ತ ಬೆಳೆಯುತ್ತ ಹೋಗಿ ಕೊನೆಗೆ ಜೀವಾತ್ಮನು ದುಃಖಸಾಗರವನ್ನೇ ಸೇರುವನು. ಸಂಸಾರದಲ್ಲಿಯ ದುಃಖಗಳು ಒಂದೇ–ಎರಡೇ ಅವುಗಳನ್ನು ಅಂಕಿ–ಸಂಖ್ಯೆಗಳಿಂದ ಎಣಿಸಲು ಸಾಧ್ಯವಿಲ್ಲವೆಂದೇ ದುಃಖವನ್ನು ಸಾಗರಕ್ಕೆ ಹೋಲಿಸಿದ್ದಾರೆ. ಇಂತಹ ಸಾಗರದೋಪಾದಿಯಲ್ಲಿಯ ದುಃಖವನ್ನು ದೂರಮಾಡಿ ಕೊಳ್ಳಬೇಕಾದರೆ ಎಲ್ಲ ದುಃಖಗಳಿಗೆ ಮೂಲವಾಗಿರುವ ಅಜ್ಞಾನವೊಂದನ್ನು ಆತ್ಮ ಜ್ಞಾನದಿಂದ ಇಲ್ಲವಾಗಿಸಿ ಕೊಳ್ಳಬೇಕು. ಸೂರ್ಯೋದಯವಾಗಲು ಕತ್ತಲೆಯು ಅಡ್ಡಬಾರದಂತೆ ಆತ್ಮಜ್ಞಾನವಾಗಲು ಈ ಅಜ್ಞಾನವು ಹೇಳಹೆಸರಿಲ್ಲದಾಗಿ ಹೋಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ಇಂತಹ ಆತ್ಮಜ್ಞಾನವನ್ನು ಪಡೆಯಬೇಕೆಂಬುದಾಗಿ ಇಲ್ಲಿ ಪೂಜ್ಯರು ಉಪದೇಶಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಈ ಪರಕಾಯ ಸ್ಥಲವನ್ನು ಪರಿಸಮಾಪ್ತಿಗೊಳಿಸುತ್ತ ಕೊನೆಯದಾಗಿ ಪುನಃ:-

ದೇಹಾಭಿಮಾನನಿರ್ಮುಕ್ತಃ ಕಲಾತೀತ ಪದಾಶ್ರಯಃ।
ಕಥಂ ಯಾತಿ ಪರಿಚ್ಛೇದಂ ಶರೀರೇಷು ಮಹಾಬುಧಃ॥

(ಸಿ.ಶಿ. ೧೬-೫೭)

ಈ ರೀತಿಯಾಗಿ ಉಪದೇಶಿಸಿದ್ದಾರೆ. ಈ ಪರಕಾಯ ಸ್ಥಲದ ಶಿವಯೋಗಿಯು ದೇಹದ ಮೇಲಿನ ಅಭಿಮಾನವನ್ನು ತೊರೆದು ನಿವೃತ್ಯಾದಿ ಕಲೆಗಳಿಗೆ ಅತೀತನಾಗಿರುವ ಆ ಪರಶಿವ ಬ್ರಹ್ಮವನ್ನು ಆಶ್ರಯಿಸಿದಂತವನಾಗಿ ಪರಮಜ್ಞಾನಿಯಾದ ಅವನು ತನ್ನನ್ನು ಶರೀರ ಪರಿಮಿತನನ್ನಾಗಿ ಭಾವಿಸುವದಿಲ್ಲವೆಂಬುದು ಪೂಜ್ಯರ ಆಶಯವಾಗಿದೆ.

ಸ್ಥೂಲ ಶರೀರವು ಪಾಂಚ ಭೌತಿಕವಾದದ್ದು ಅಂದಾಗ ಇದು ಪಂಚಭೂತಗಳದ್ದೇ ವಿನಃ ನಮ್ಮದಲ್ಲವು ಎಂಬ ಜ್ಞಾನವು ಈ ಪರಕಾಯ ಸ್ಥಲದ ಶಿವಯೋಗಿಗೆ ಉಂಟಾಗಿ ರೋಣದರಿಂದ ಅವನಿಗೆ ದೇಹದ ಬಗ್ಗೆ ಮಮತ್ವಾಭಿಮಾನವು ಇರುವದಿಲ್ಲ. ತನ್ನದ್ದಲ್ಲದ್ದನ್ನು ತನ್ನದೆಂದು ಭಾವಿಸುವದೇ ಅಜ್ಞಾನವು. ಸಂಸಾರದಲ್ಲಿಯ ಜೀವಿಗಳು ಇಂತಹ ವ್ಯರ್ಥ ಅಭಿಮಾನದಿಂದಾಗಿಯೇ ವ್ಯರ್ಥವಾಗಿ ದುಃಖವನ್ನು ಅನುಭವಿಸು ತ್ತಿರುತ್ತಾರೆ. ಮಹಾಜ್ಞಾನ ಸಂಪನ್ನರಾದ ಶಿವಯೋಗಿಗಳು ಇಂತಹ ಅಭಿಮಾನದಿಂದ ಮುಕ್ತರಾಗಿ ಈ ಪ್ರಪಂಚಕ್ಕೆ ಕಾರಣೀಭೂತಗಳಾದ ನಿವೃತ್ತಿ ಪ್ರತಿಷ್ಠಾ, ವಿದ್ಯಾ, ಶಾಂತಿ ಮತ್ತು ಶಾಂತ್ಯಾತೀತಗಳೆಂಬ ಪಂಚಕಲೆಗಳಿಂದ ಅತೀತವಾಗಿರುವ ಪರಶಿವ ಬ್ರಹ್ಮವನ್ನು ಆಶ್ರಯಿಸಿರುತ್ತಾರೆ. ಅರ್ಥಾತ್ ತತ್‌ಸ್ವರೂಪರೇ ಆಗಿರುತ್ತಾರೆ. ಇಂತಹ ವ್ಯಾಪಕವಾದ ಸ್ವರೂಪವನ್ನು ಪಡೆದ ಬಳಿಕ ಅವರು ದೇಹದಲ್ಲಿ ಪರಿಚ್ಛಿನ್ನವಾಗಿರುವದು ಹೇಗೆ ಸಾಧ್ಯವಾಗಬಲ್ಲದು ? ಆದ್ದರಿಂದ ಅವರು ತೋರಿಕೆಗೆ ದೇಹದಲ್ಲಿ ಇದ್ದಂತೆ ತೋರಿದರೂ ಅವರು ದೇಹಾತೀತವಾದ ಅವಸ್ಥೆಯಲ್ಲಿ ಇರುತ್ತಾರೆ.

ಹೀಗೆ ಈ ಪರಕಾಯ ಸ್ಥಲದಲ್ಲಿ ಜೀವನ್ಮುಕ್ತನಾದ ಶಿವಯೋಗಿಯು ದೇಹ ದಲ್ಲಿದ್ದರೂ ದೇಹದ ಅಭಿಮಾನದಿಂದ ಹೇಗೆ ಮುಕ್ತನಾಗಿರುತ್ತಾನೆಂಬ ವಿಷಯವನ್ನು ಪೂಜ್ಯಪಾದರು ಬಹು ಹೃದಯಂಗಮವಾಗಿ ಇಲ್ಲಿ ಪ್ರತಿಪಾದಿಸಿದ್ದಾರೆ. ಶ್ರೋತೃಗಳಾದ ಸಮಸ್ತ ಸದ್ಭಕ್ತರೇ ಈ ಪರಕಾಯಸ್ಥಲದಲ್ಲಿ ಬಂದಿರುವ ಸರ್ವ ವಿಷಯಗಳನ್ನು ಶ್ರವಣಮಾಡಿದ್ದೀರೇನೋ ನಿಜ ಆದರೆ ಇದನ್ನು ಮನನಮಾಡಿಕೊಂಡು ಆ ಸ್ವರೂಪ ಸ್ಥಿತಿಯನ್ನು ಪಡೆಮುಕೊಳ್ಳುವ ಯೋಗ್ಯತೆಯು ನಿಮ್ಮೆಲ್ಲರಿಗೆ ಪ್ರಾಪ್ತವಾಗಲೆಂದು ಹರಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೭ ಅಗಷ್ಟ ೧೯೯೩
(ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮಾಚಾರಸ್ಥಲ-೧

ಜಿಜ್ಞಾಸುಗಳಾದ ಸದ್ಭಕ್ತರೇ,

ಶ್ರೀ ಕಾಶೀಮಹಾಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಶ್ರೀಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ಮಹರ್ಷಿ ವ್ಯಾಸನು ಕಾಶೀ ಖಂಡದಲ್ಲಿ ಕಾಶಿಯ ಮಹಾತ್ಮೆಯನ್ನು ಕುರಿತು ಬಹುವಾಗಿ ವರ್ಣಿಸಿದ್ದಾನೆ. ಅವನ ಹೇಳಿಕೆಯ ಪ್ರಕಾರ ಕಾಶಿಯಲ್ಲಿ ವಾಸಿಸುವದೆಂದರೆ ಈಶ್ವರನ ಗರ್ಭದಲ್ಲಿ ನಿವಾಸಗೈದಂತೆ ತಾಯಿಯ ಗರ್ಭದಲ್ಲಿರುವ ಶಿಶುವಿಗೆ ಎಲ್ಲ ಕಡೆಯಿಂದಲೂ ಸುರಕ್ಷತೆ ಇರುವಂತೆ, ಕಾಶಿಯಲ್ಲಿ ವಾಸಿಸುವ ಭಕ್ತರನ್ನು ಶಿವನು ಸರ್ವವಿಧದಿಂದಲೂ ಸಂರಕ್ಷಿಸುತ್ತಾನೆ. ಆತನು ಪುಣ್ಯಾತ್ಮನೇ ಇರಲಿ ಅಥವಾ ಪಾಪಿಯೇ ಇರಲಿ. ಸ್ತುತಿ–ಸ್ತೋತ್ರಾದಿಗಳನ್ನು ಮಾಡುವವನೇ ಆಗಿರಲಿ ಅಥವಾ ನಿಂದಕನೇ ಆಗಿರಲಿ ಇವರೆಲ್ಲರನ್ನೂ ಶಿವನು ಸಂರಕ್ಷಿಸುತ್ತಾನೆ. ಅಂತೆಯೇ ಕಾಶಿಯಲ್ಲಿ ವಾಸಗೈದ ಜೀವಿಗಳಿಗೆ ಯಾವ ಭಯವೂ ಇರುವದಿಲ್ಲ.

ಮೋಕ್ಷದಾಯಕವಾದ ಈ ನಗರದಲ್ಲಿ ಎಲ್ಲರಿಗೂ ಮರಣೋತ್ತರದಲ್ಲಿ ಮುಕ್ತಿಯ ದೊರತೇ ದೊರೆಯುತ್ತದೆ. ವ್ಯತ್ಯಾಸವಿಷ್ಟೇ ಅತಿಯಾದ ಪಾಪವನ್ನಾಚರಿಸಿದವನೂ ಆ ಪಾಪಕರ್ಮ ಮುಗಿಯುವವರೆಗೆ ಕಾಲಭೈರವನು ಕೊಡುವ ಯಾತನೆಯನ್ನನುಭವಿಸಿ ಕಾಲಾಂತರದಲ್ಲಿ ವಿಶ್ವೇಶ್ವರನ ಕೃಪೆಗೆ ಪಾತ್ರನಾಗಿ ಮುಕ್ತಿಯನ್ನು ಪಡೆದರೆ ತಪಸ್ವಿಯೂ ಪುಣ್ಯಾತ್ಮನೂ ಆದ ಜೀವಾತ್ಮನೂ ಶರೀರವನ್ನು ತ್ಯಜಿಸಿದೊಡನೆ ಸದ್ಯಃ ಕೈವಲ್ಯವನ್ನು ಪ್ರಾಪ್ತಮಾಡಿಕೊಳ್ಳುವನು. ಇಂತಹ ಪರಮಪಾವನವಾದ ಕಾಶೀಮಹಾಕ್ಷೇತ್ರದಲ್ಲಿ ನೀವುಗಳೆಲ್ಲ ವಾಸ್ತವ್ಯವನ್ನು ಮಾಡಿ ಪ್ರತಿದಿನ ಗಂಗಾಸ್ನಾನವನ್ನು ಗೈದು ಇಷ್ಟಲಿಂಗಾರ್ಚನೆಯಲ್ಲಿ ಪಾಲುಗೊಂಡು ಪುನಃ ಸಾಯಂಕಾಲ ನಡೆಯುವ ಧರ್ಮ ಸಭೆಯಲ್ಲಿ ಸಮ್ಮಿಲಿತರಾಗಿ ಆಧ್ಯಾತ್ಮಿಕ ಆಶೀರ್ವಚನಗಳನ್ನು ಆಲಿಸುತ್ತೀರೆಂದ ಬಳಿಕ ನೀವೆಲ್ಲರೂ ಧನ್ಯಾತ್ಮರೇ !

ಶ್ರೀ ಸಿದ್ಧಾಂತ ಶಿಖಾಮಣಿಯ ಲಿಂಗಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಅನೇಕ ದಿನಗಳಿಂದ ನೀವೆಲ್ಲ ಆಲಿಸುತ್ತ ಬಂದಿದ್ದೀರಿ. ನಿನ್ನೆಯ ದಿನ ಪರಕಾಯಸ್ಥಲದ ಬಗ್ಗೆ ಕೂಲಂಕಷವಾಗಿ ತಿಳಿದುಕೊಂಡಿದ್ದೀರಿ. ಇಂದು ಕ್ರಮ ಪ್ರಾಪ್ತವಾದ ಧರ್ಮಾಚಾರ ಸ್ಥಲದ ಬಗ್ಗೆ ವಿವೇಚಿಸೋಣ.

ಈ ಪೂರ್ವದಲ್ಲಿ ಪ್ರತಿಪಾದಿಸಲ್ಪಟ್ಟ ಪರಕಾಯ ಸಂಪನ್ನನಾದ ಶಿವಯೋಗಿಯ ಆಚಾರಕ್ಕೇನೇ ಧರ್ಮವೆಂದು ಕರೆಯುತ್ತಾರೆ. ಅವನ ಆ ಧರ್ಮಗಳು ಲೋಕದ ಜನರಿಗೆ ಅನುಕರಣೀಯಗಳಾಗಿರುತ್ತವೆ. ಆ ಅನುಕರಣೀಯಗಳಾದ ಧರ್ಮವನ್ನು ಪ್ರತಿಪಾದಿಸುವ ಸ್ಥಲವೇ ಧರ್ಮಾಚಾರಸ್ಥಲ ಅದನ್ನೇ ಪೂಜ್ಯಪಾದರು–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಸ್ಯೈವ ಪರಕಾಯಸ್ಯ ಸಮಾಚಾರೋ ಯ ಇಷ್ಯತೇ।
ಸಧರ್ಮಃ ಸರ್ವಲೋಕಾನಾಮುಪಕಾರಾಯ ಕಲ್ಪ್ಯತೇ॥
(ಸಿ. ಶಿ. ೧೬—೫೮)

ಹೀಗೆ ವಿವರಿಸಿದ್ದಾರೆ. ತಾತ್ಪರ್ಯವೇನೆಂದರೆ ಪರಕಾಯ ಶಿವಯೋಗಿಯ ವರ್ತನೆಯೇ ಧರ್ಮವು. ಅದು ಜಗತ್ತಿನ ಸರ್ವ ಜನರಿಗೆ ಉಪಕಾರವಾಗಿ ಸಂಭವಿಸುತ್ತದೆ. ಜಗತ್ತಿನಲ್ಲಿ ಯಾವಾಗಲೂ ದೊಡ್ಡವರ ಆಚರಣೆಯನ್ನು ನೋಡಿ ಸಣ್ಣವರು ಅದರ ಅನುಕರಣೆಯನ್ನು ಮಾಡುತ್ತಾರೆ. ನಾವು ಮಾಡುವ ಉಪದೇಶಕ್ಕಿಂತಲೂ ನಮ್ಮ ವರ್ತನೆಯೇ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಸಣ್ಣಮಕ್ಕಳಿಗೆ ಉಪದೇಶವು ಎಳ್ಳಷ್ಟೂ ತಿಳಿಯುವುದಿಲ್ಲ ಅವು ದೊಡ್ಡವರು ಮಾಡುವದನ್ನು ನೋಡಿ ತಾವು ಮಾಡಲು ಕಲಿಯುತ್ತವೆ. ಒಂದು ಸಣ್ಣ ಮಗುವನ್ನು ದೇವಸ್ಥಾನಕ್ಕೋ ಅಥವಾ ಗುರುಗಳ ಸಾನಿಧ್ಯಕ್ಕೋ ಕರೆದುಕೊಂಡು ಹೋದಮೇಲೆ ಅಲ್ಲಿ ಆ ಮಗುವಿಗೆ ದೇವರಿಗೆ ನಮಸ್ಕರಿಸು, ಗುರುಗಳಿಗೆ ನಮಸ್ಕಾರ ಮಾಡು ಎಂಬುದಾಗಿ ಅದೆಷ್ಟು ಸಲ ಹೇಳಿದರೂ ಅದಕ್ಕೆ ಅರ್ಥವಾಗುವದಿಲ್ಲ, ಆದರೆ ದೊಡ್ಡವನಾದ ಓರ್ವ ವ್ಯಕ್ತಿಯು ತಾನು ಸ್ವತಃ ನಮಸ್ಕಾರವನ್ನು ಮಾಡುತ್ತ ಹೀಗೆ ಮಾಡು ಎಂಬುದಾಗಿ ಆ ಮಗುವಿಗೆ ಹೇಳಲು ಅದು ತಕ್ಷಣದಲ್ಲಿಯೇ ನಮಸ್ಕಾರವನ್ನೂ ಮಾಡುತ್ತದೆ. ಇಲ್ಲಿ ಚಿಕ್ಕ ಮಗುವಿಗೆ ಉಪದೇಶಕ್ಕಿಂತಲೂ ಆಚರಣೆಯು ಹೆಚ್ಚು ಪರಿಣಾಮಕಾರಿಯಾಗುವದೆಂಬುದು ಪ್ರತ್ಯಕ್ಷವಾಗಿ ತಿಳಿದುಬರುತ್ತದೆ. ಆದ್ದರಿಂದ ಪರಕಾಯಸ್ಥಲದ ಶಿವಯೋಗಿಯ ಉತ್ತಮವಾದ ಆಚರಣೆಗಳೇ ಲೋಕದ ಜನರಿಗೆ ಧರ್ಮಾಚಾರವೆಂದು ಉಪದೇಶಿಸಲ್ಪಟ್ಟಿದೆ.

''ಸತ್ಯಂ ವದ, ಧರ್ಮಂ ಚರ'' ಎಂಬ ಈ ವೇದವಾಕ್ಯದಲ್ಲಿ ಧರ್ಮವನ್ನು ಆಚರಿಸಬೇಕೆಂಬುದಾಗಿ ಹೇಳಲಾಗಿದೆ. ಶಾಸ್ತ್ರಕಾರರು– ''ಯತೋಽಭ್ಯುದಯ ನಿಶ್ರೇಯಸ ಸಿದ್ಧಿಃ ಸ ಧರ್ಮಃ'' ಎಂಬುದಾಗಿ ಧರ್ಮದ ಲಕ್ಷಣವನ್ನು ಬರೆದಿದ್ದಾರೆ. ಯಾವ ಆಚರಣೆಯಿಂದ ಮನುಷ್ಯನಿಗೆ ಐಹಿಕ ಸುಖದ ಪ್ರಾಪ್ತಿ ಮತ್ತು ಕೊನೆಗೆ ಕೈವಲ್ಯವು ಲಭಿಸುವದೋ ಅದಕ್ಕೇನೇ ಧರ್ಮವೆಂದು ಕರೆದಿದ್ದಾರೆ. ಸಂಸಾರದಲ್ಲಿಯ ಎಲ್ಲ ಸುಖಗಳೂ ಹಾಗೂ ಸುಖದ ಸಾಧನಗಳು ತನಗೆ ದೊರೆಯಬೇಕೆಂಬ ಇಚ್ಛೆಯು ಎಲ್ಲರಿಗಿರುತ್ತದೆ. ಈ ಸುಖವನ್ನು ಉಪಭೋಗಿಸಿದ ನಂತರ ಒಂದಿಲ್ಲೊಂದು ದಿನ ಇದರ ಬಗ್ಗೆ ತಿರಸ್ಕಾರ ಭಾವನೆಯು ಒಡಮೂಡಿ ಮುಕ್ತಿಯನ್ನು ಪಡೆಯುವ ತೀವ್ರವಾದ ಇಚ್ಛೆಯು ಉತ್ಪನ್ನವಾಗುತ್ತದೆ. ಮನುಷ್ಯ ಜೀವನದ ಅಂತಿಮ ಇಚ್ಛೆಯು ಮೋಕ್ಷವೇ ಆಗಿರುತ್ತದೆ. ಹೀಗಿದ್ದರೂ ಶಿವನು ಸಂಸಾರದ ಜೀವಿಗಳಿಗೆ ಮೊಟ್ಟಮೊದಲು ಭೋಗವನ್ನು ಕೊಡುವ ಕಾರಣವೇನೆಂದರೆ ಅದರಿಂದ ಅವರು ಮುಕ್ತರಾಗಿ ಮುಕ್ತಿಯತ್ತ ಆಕರ್ಷಿತರಾಗಬೇಕೆಂಬುದೇ ಆಗಿದೆ. ಧರ್ಮಮಾರ್ಗದಲ್ಲಿ ನಡೆದುದಾದರೆ ಈ ಭೋಗ ಮೋಕ್ಷಗಳೆರಡೂ ಪ್ರಾಪ್ತವಾಗುವವು.

ಈ ಧರ್ಮಾಚರಣೆಯನ್ನು ಮಾಡುವ ಅಧಿಕಾರವು ಕೇವಲ ಮನುಷ್ಯನಿಗೆ ಮಾತ್ರ ಪ್ರಾಪ್ತವಾಗಿದೆ. ಉಳಿದೆಲ್ಲ ಜನ್ಮಗಳು ಕೇವಲ ಭೋಗಜನ್ಮಗಳು ಆದರೆ ಮನುಷ್ಯನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾತ್ರ ತಾನು ಮಾಡಿದ ಪ್ರಾಕ್ತನ ಕರ್ಮಗಳ ಫಲವನ್ನು ಅನುಭವಿಸುತ್ತ ಹೊಸ ಕರ್ಮಗಳನ್ನೂ ಸಹ ಮಾಡಬಲ್ಲನು. ಅಂತೆಯೇ ಇವನು ಕರ್ತಾ ಮತ್ತು ಭೋಕ್ತಾ ಇವೆರಡೂ ಆಗಿದ್ದಾನೆ. ಎಂಭತ್ನಾಲ್ಕು ಲಕ್ಷ ಪ್ರಕಾರದ ಜೀವರಾಶಿಗಳಲ್ಲಿ ಹಸ್ತವುಳ್ಳ ಜೀವಿಯೆಂದರೆ ಮನುಷ್ಯನೋರ್ವನೇ. ಉಳಿದೆಲ್ಲ ಪ್ರಾಣಿಗಳಿಗೆ ಕೇವಲ ಕಾಲುಗಳಿರುತ್ತವೆ. ಕೆಲವು ಜೀವಿಗಳಿಗೆ ಎರಡು ಕಾಲುಗಳಿದ್ದರೆ ಬೇರೆ ಜೀವಿಗಳಿಗೆ ನಾಲ್ಕು ಕಾಲುಗಳಿರುತ್ತವೆ. ಇನ್ನು ಕ್ರಿಮಿಕೀಟಾದಿಗಳಿಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕಾಲುಗಳಿರುವದನ್ನು ಕಾಣುತ್ತೇವೆ. ಕೆಲವು ಪ್ರಾಣಿಗಳು ತಮಗೆ ದೊರೆತ ಕಾಲುಗಳನ್ನು ಹಸ್ತರೂಪದಲ್ಲಿ ಉಪಯೋಗಮಾಡಿಕೊಳ್ಳುವದನ್ನು ಸರ್ವತ್ರ ನೋಡಬಹುದು. ಆದರೆ ಅವು ಕಾಲುಗಳೇ ವಿನಃ ಕೈಗಳಲ್ಲ.

ಇನ್ನು ಮಂಗದ ಬಗ್ಗೆ ವಿಚಾರ ಮಾಡುವದಾದರೆ ಅದು ನಡೆಯುವಾಗ ನಾಲ್ಕೂ ಕಾಲುಗಳಿಂದಲೇ ನಡೆಯುತ್ತಿರುತ್ತದೆ. ಯಾವದಾದರೊಂದು ಪದಾರ್ಥವನ್ನು ತಿನ್ನುವ ಪ್ರಸಂಗ ಬಂದಾಗ ತನ್ನ ಮುಂಗಾಲುಗಳನ್ನು ಹಸ್ತಗಳ ರೂಪದಲ್ಲಿ ಅದು ಬಳಸಿ ಕೊಳ್ಳುತ್ತದೆ. ಹಾಗೂ ಕೆಲವೊಂದು ಪ್ರಸಂಗದಲ್ಲಿ ತನ್ನ ಹಿಂದಿನ ಎರಡೂ ಕಾಲಗಳ ಮೇಲೆ ಎದ್ದು ನಿಂತು ಮನುಷ್ಯನಂತೆ ಓಡಲೂಬಹುದು. ಆದರೆ ಅದು ತಾತ್ಕಾಲಿಕ ಮಾತ್ರ ಕೊನೆಗೆ ಅದು ಸಹಜವಾಗಿ ನಡೆಯುವಾಗ ಪುನಃ ತನ್ನ ನಾಲ್ಕೂ ಕಾಲುಗಳನ್ನು ಬಳಸಿಕೊಳ್ಳುತ್ತದೆ. ಇದೆಲ್ಲವನ್ನು ಪರ್ಯಾಲೋಚಿಸಿದಾಗ ಹಸ್ತವುಳ್ಳ ಪ್ರಾಣಿಯೆಂದರೆ ಕೇವಲ ಮನುಷ್ಯನೋರ್ವನೇ ಇವನಿಗೆ ನಡೆದಾಡಲು ಎರಡು ಕಾಲುಗಳು ಹಾಗೂ ಕರ್ಮವನ್ನು ಮಾಡಲು ಎರಡು ಹಸ್ತಗಳು ಸ್ವತಂತ್ರಗಳಾಗಿರುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಈ ಮನುಷ್ಯನು ಹಸ್ತಗಳಿಂದ ಉದ್ಯೋಗಾದಿ ವ್ಯವಹಾರಗಳನ್ನು ಮಾಡುವಾಗ ತನ್ನ ಕಾಲುಗಳನ್ನು ಸಹಾಯಕವಾಗಿ ಬಳಸಿಕೊಳ್ಳುತ್ತಾನೆ. ಆದರೂ ಮುಖ್ಯ ವಾದ ಕರ್ತೃತ್ವವು ಹಸ್ತಗಳಿಗೇ ಪ್ರಾಪ್ತವಾಗಿರುತ್ತದೆ. ಅಂತೆಯೇ ಮನುಷ್ಯನೋರ್ವನೇ ಧರ್ಮಾಚಾರಣೆಗಳನ್ನು ಮಾಡುವ ಅಧಿಕಾರವನ್ನು ಹೊಂಧಿದ್ದಾನೆಂಬುದಾಗಿ ನಿಶ್ಚಯಿಸ ಲಾಗುತ್ತದೆ.

ಹೀಗೆ ಧರ್ಮಾಚಾರಣೆಯ ಅಧಿಕಾರವನ್ನು ಹೊಂದಿದ ಮನುಷ್ಯನೇ ಒಂದು ವೇಳೆ ಧರ್ಮಾಚರಣೆಯನ್ನು ಮಾಡದೇ ಹೋದರೆ ಅವನು ಪಶುಗಳಿಗೆ ಸಮಾನನಾಗುತ್ತಾನೆ. ಅಂತೆಯೇ ''ಧರ್ಮೇಣ ಹೀನಃ ಪಶುಭಿಃ ಸಮಾನಃ'' ಧರ್ಮಾಚರಣೆಯನ್ನು ಮಾಡದಿರುವ ಮನುಷ್ಯನು ಆಕಾರದಲ್ಲಿ ಮನುಷ್ಯನಂತೆ ತೋರುತ್ತಿದ್ದರೂ ಆತನನ್ನು ಪಶುವೆಂದೇ ಭಾವಿಸಬೇಕು. ಮನುಷ್ಯನು ಇಹಲೋಕ ಯಾತ್ರೆಯನ್ನು ಮುಗಿಸಿ ಪರಲೋಕಕ್ಕೆ ತೆರಳುವಾಗ ಅವನ ಜೊತೆಗೆ ಹೋಗುವಂಥಾದ್ದೆಂದರೆ ಅವನು ಸಂಪಾದಿಸಿದ ಧರ್ಮವೊಂದೇ ಅಂತೆಯೇ ಓರ್ವ ಸುಭಾಷಿತಕಾರನು–

ವಿದ್ಯಾಮಿತ್ರಂ ಪ್ರವಾಸೇಷು ಭಾರ್ಯಾಮಿತ್ರಂಗೃಹೇಷು ಚ ।
ವ್ಯಾಧಿತಸ್ಯೌಷಧಂ ಮಿತ್ರಂ ಧರ್ಮೋಮಿತ್ರಂಮರಿಷ್ಯತಃ ॥

ಹೀಗೆ ಹೇಳಿದ್ದಾನೆ ತಾತ್ಪರ್ಯವೇನೆಂದರೆ, ಪ್ರವಾಸವನ್ನು ಮಾಡುವಾಗ ವಿದ್ಯೆಯೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿತ್ರವು. ಮನೆಯಲ್ಲಿ ಹೆಂಡತಿಯೇ ಮಿತ್ರಳು. ರೋಗಿಯಾದವನಿಗೆ ಔಷಧವೇ ಮಿತ್ರವು. ಇನ್ನು ಸಾಯುತ್ತಿರುವವನಿಗೆ ಧರ್ಮವೇ ಮಿತ್ರವು. ಇಲ್ಲಿ ಅನೇಕ ಉದಾಹರಣೆಗಳ ಮೂಲಕವಾಗಿ ಪರಲೋಕಕ್ಕೆ ಹೋಗುವಾಗ ಧರ್ಮವೇ ನಮ್ಮ ಸಹಾಯಕವೆಂಬುದಾಗಿ ಸ್ಪಷ್ಟಪಡಿಸಲಾಗಿದೆ.

ಓರ್ವ ಮನುಷ್ಯನು ಪ್ರವಾಸವನ್ನು ಗೈಯುತ್ತಿರುವಾಗ ಈತನು ಸಿಪ್ರೈಗ್ಯೆಯ್ತ್ತಿರುವಾಗ ಕಳ್ಳಕಾಕರು ಇವನಲ್ಲಿಯ ವಸ್ತು ಒಡವೆಗಳನ್ನೆಲ್ಲ ಕದ್ದುಕೊಂಡು ಹೋಗಬಹುದು. ಆದರೆ ಇವನಲ್ಲಿರುವ ವಿದ್ಯೆಯನ್ನು ಆದಾರೂ ಕದಿಯಲಾರರು. ವಿದ್ಯಾ ಸಂಪನ್ನನಾದ ವ್ಯಕ್ತಿಯು ಪ್ರವಾಸದಲ್ಲಿ ಏನೆಲ್ಲವನ್ನು ಕಳೆದುಕೊಂಡರೂ ತನ್ನಲ್ಲಿರುವ ವಿದ್ಯೆಯ ಪ್ರಭಾವದಿಂದಾಗಿ ಎಲ್ಲಿಯಾದರೂ ಕೆಲಸ ಕಾರ್ಯಗಳನ್ನು ಮಾಡಿ ಪುನಃ ಧನವನ್ನು ಸಂಪಾದಿಸಿ ಕಳೆದ ವಸ್ತುಗಳನ್ನು ಪಡೆಯಬಹುದು. ಅಂತೆಯೇ ಪ್ರವಾಸಿಗನಿಗೆ ವಿದ್ಯೆಯೇ ಮಿತ್ರನೆಂಬುದಾಗಿ ಹೇಳಬಹುದು.

ಇನ್ನು ಗೃಹಸ್ಥಾಶ್ರಮದಲ್ಲಿರುವವನಿಗೆ ಮನೆಯಲ್ಲಿ ಧರ್ಮಪತ್ನಿಯೇ ಮಿತ್ರಳಾಗಿರುತ್ತಾಳೆ. ಯಾವುದೇ ಜಟಿಲ ಸಮಸ್ಯೆಯು ಬಂದೊದಗಿದಾಗ ಗಂಡನು ತನ್ನ ಹೆಂಡತಿಯೊಂದಿಗೆ ಆಪ್ತಾಲೋಚನೆಯನ್ನು ಮಾಡಿ ನಿರ್ಣಯವನ್ನು ತೆಗೆದುಕೊಳ್ಳುತ್ತಾನೆ. ಹೆಂಡತಿಯು ಕೇವಲ ಹೆಂಡತಿಯೇ ಆಗಿರುವದಿಲ್ಲ. ಬೇರೆ ಬೇರೆ ಪ್ರಸಂಗಗಳಲ್ಲಿ ಆಕೆಯು ಬೇರೆ ಬೇರೆ ರೂಪದಿಂದ ಗಂಡನಿಗೆ ಸಹಾಯಕಳಾಗಿರುತ್ತಾಳೆ. ಉಣಿಸುವಲ್ಲಿ ತಾಯಿಯಾಗಿ, ಗೂಢಾಲೋಚನೆಯಲ್ಲಿ ಮಂತ್ರಿಯಾಗಿ, ಮನೆಗೆಲಸಗಳಲ್ಲಿ ದಾಸಿಯಾಗಿ, ಸೌಂದರ್ಯದಲ್ಲಿ ಲಕ್ಷ್ಮಿಯಾಗಿ, ಶಯನದಲ್ಲಿ ರಂಭೆಯಾಗಿ, ತಾಳ್ಮೆಯಲ್ಲಿ ಭೂದೇವಿಯಾಗಿ ಹೀಗೆ ಆರು ವಿಧವಾಗಿ ಆಕೆಯು ಗಂಡನಿಗೆ ಸಹಕಾರಿಯಾಗಿರುತ್ತಾಳೆ. ಅಂತೆಯೇ ಇವಳು ಗಂಡನಿಗೆ ನಿಜವಾದ ಮಿತ್ರಳು.

ರೋಗಿಯಾದವನಿಗೆ ಔಷಧವೇ ಮಿತ್ರವು. ಯಾರಾದರೂ ಅಸ್ವಸ್ಥರಾಗಿ ಹಾಸಿಗೆಯನ್ನು ಹಿಡಿದಾಗ ಆ ವ್ಯಕ್ತಿಯ ಅನೇಕ ಜನ ಮಿತ್ರರು ಅವನನ್ನು ಮಾತನಾಡಿಸಲು ಬರುತ್ತಾರೆ. ಯಾರೇ ಬಂದು ಏನೇ ಮಾತನಾಡಿದರೂ ರೋಗವು ವಾಸಿಯಾಗುವುದಿಲ್ಲ. ಆದರೆ ರೋಗಿಯ ರೋಗವನ್ನು ಕಳೆದು ಪುನಃ ಅವನಿಗೆ ಆರೋಗ್ಯವನ್ನು ತಂದುಕೊಡುವಂಥಾದ್ದು ಔಷಧವೇ. ಅಂತೆಯೇ ಸುಭಾಷಿತಕಾರನು ರೋಗಿಯಾದವನಿಗೆ ಔಷಧವೇ ಮಿತ್ರವೆಂಬುದಾಗಿ ಹೇಳಿದ್ದಾನೆ.

ಇನ್ನು ಮರಣೋನ್ಮುಖನಾದ ವ್ಯಕ್ತಿಗೆ ಅವನು ಸಂಪಾದಿಸಿದ ಧರ್ಮವೇ ಅವನಿಗೆ ಮಿತ್ರವಾಗಿ ಸಹಾಯಕವಾಗುತ್ತದೆ. ಜೀವಾತ್ಮನು ಶರೀರವನ್ನು ಬಿಟ್ಟು ಹೋಗುವಾಗ ಅವನು ಬೆಳೆಸಿದ ಧನ–ಮನೆ–ವಸ್ತು–ವಾಹನ–ಮತ್ತು ಅವನ ಪರಿವಾರದವರು ಯಾರೂ ಅವನ ಜೊತೆಗೆ ಹೋಗಲಾರರು. ಇಷ್ಟೇ ಅಲ್ಲ ಅತ್ಯಂತ ಪ್ರೀತಿಯಿಂದ ಲಾಲನೆ–ಪಾಲನೆ ಮಾಡಿದ ದೇಹವೂ ಸಹ ಇಲ್ಲಿಯೇ ಮಣ್ಣಿನಲ್ಲಿ ಮಣ್ಣಾಗಿ ಹೋಗುವದು. ಅಂತೆಯೇ "ಧರ್ಮಾನುಗೋ ಗಚ್ಛತಿ ಜೀವ ಏಕಃ" ಎಂಬ ಸುಭಾಷಿತೋಕ್ತಿಗನುಸಾರವಾಗಿ ಇವನೊಂದಿಗೆ ಹೋಗುವಂಥಾದ್ದು ಧರ್ಮವೊಂದೇ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರಣವು ಶರೀರದ ಧರ್ಮವಾಗಿರೋಣದರಿಂದ ಯಾರೇ ಎಷ್ಟೇ ದಿವಸವಿದ್ದರೂ ಕೊನೆಗೊಂದು ದಿನ ಅವರು ಶರೀರವನ್ನು ಬಿಟ್ಟು ಹೋಗಲೇಬೇಕಾಗುವದು. ಹೀಗೆ ಎಲ್ಲವನ್ನೂ ತ್ಯಜಿಸಿ ಹೋಗುವಾಗ ನಮಗೆ ಸಹಾಯಕವಾಗುವಂಥಾದ್ದು ಕೇವಲ ಧರ್ಮವು ಮಾತ್ರ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಜೀವಿತಾವಧಿಯಲ್ಲಿ ಪುಣ್ಯಕಾರ್ಯಗಳನ್ನು ಮಾಡಿ ಧರ್ಮವನ್ನು ಸಂಪಾದಿಸಬೇಕು. ಈ ಧರ್ಮವೇ ಪರಲೋಕದಲ್ಲಿ ನಮಗೆ ಮಿತ್ರನಂತೆ ಸಹಾಯಕವಾಗುವದು.

ಇಹಲೋಕದಲ್ಲಿ ಒಂದು ದೇಶದ ವ್ಯಕ್ತಿಯು ಮತ್ತೊಂದು ದೇಶಕ್ಕೆ ಹೋಗುವ ಪ್ರಸಂಗ ಬಂದಾಗ ತನ್ನ ದೇಶದ ಧನವು ಬೇರೆ ದೇಶದಲ್ಲಿ ಚಲಾವಣೆಯಾಗುವದಿಲ್ಲ ವಾದ್ದರಿಂದ ವಿನಿಮಯ ಬ್ಯಾಂಕಿನಲ್ಲಿ ಈ ಹಣವನ್ನು ತುಂಬಿ ಅಲ್ಲಿ ಚಲಾವಣೆಯಾಗಲಿ ರುವ ಹಣವನ್ನು ತೆಗೆದುಕೊಂಡು ಹೋದಾಗ ಇವನ ಯಾತ್ರೆಯು ಸುಖಕರವಾಗುವದು. ಅದರಂತೆಯೇ ಈ ಲೋಕದ ಧನವು ಪರಲೋಕದಲ್ಲಿ ಚಲಾವಣೆಯಾಗುವದಿಲ್ಲವಷ್ಟೇ ! ಅಲ್ಲ, ಈ ಧನವನ್ನು ಪರಲೋಕಕ್ಕೆ ಒಯ್ಯಲೂ ಸಹ ಬರುವದಿಲ್ಲ. ಆದ್ದರಿಂದ ಇಲ್ಲಿಯ ಹಣವನ್ನು ವ್ಯಯಿಸಿ ಇಲ್ಲಿಯೇ ಸಣ್ಣದೊಡ್ಡ ಧರ್ಮಾನುಷ್ಠಾನಗಳನ್ನು ಮಾಡಿ-ಮಾಡಿಸಿ ಅದರಿಂದ ಪುಣ್ಯರೂಪವಾದ ಧನವನ್ನು ಸಂಗ್ರಹಿಸಿದ್ದರೇ ಮಾತ್ರ ಪರಲೋಕದಲ್ಲಿ ಸುಖವಾಗಿ ಕಾಲಕಳೆಯಬಹುದು. ಅದಿಲ್ಲದಿದ್ದರೆ ಹಣವಿಲ್ಲದ ವ್ಯಕ್ತಿಯು ಯಾತ್ರೆಗೆ ಹೋಗಿ ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸಿದಂತೆಯೇ ಇವನ ಜೀವನವಾಗುತ್ತದೆ. ಆದ್ದರಿಂದಲೇ ಪರಲೋಕಕ್ಕೆ ಹೋಗುವವನಿಗೆ ಧರ್ಮವೇ ಮಿತ್ರವೆಂಬುದಾಗಿ ಪ್ರತಿಪಾದಿಸಲಾಗಿದೆ.

ಧರ್ಮದ ಮರ್ಮವನ್ನರಿಯದ ಓರ್ವ ಕೃಪಣನು ಉಣ್ಣದೆ-ಉಡದೆ ಸಾಕಷ್ಟು ಧನವನ್ನು ಸಂಪಾದಿಸಿದನು. ಎಂತಹ ಕಠಿಣ ಪ್ರಸಂಗ ಬಂದರೂ ತನಗಾಗಿಯಾಗಲಿ ಮತ್ತು ಅನ್ಯರಿಗಾಗಿ ಆಗಲಿ ಆ ಧನದ ವಿನಿಯೋಗವನ್ನು ಮಾಡಿರಲಿಲ್ಲ. ಒಮ್ಮೆ ಅಸಾಧ್ಯವಾದ ರೋಗದಿಂದ ಬಳಲುತ್ತಿರುವಾಗ ವೈದ್ಯರೊಬ್ಬರು ಬಂದು ಅವನನ್ನು ಪರೀಕ್ಷಿಸಿ ನಿನಗಿರುವ ಈ ರೋಗವು ಉಲ್ಬಣಾವಸ್ಥೆಯಲ್ಲಿದೆ ಇದೇನು ವಾಸಿಯಾಗುವದಿಲ್ಲ. ನಿನ್ನ ಆಯುಷ್ಯವೂ ಸಹ ಮುಗಿಯುತ್ತ ಬಂದಿದೆ. ನೀನು ಉಳಿದರೆ ಇನ್ನು ಒಂದೆರಡು ದಿನ ಮಾತ್ರ ಉಳಿಯಬಹುದು ಎಂಬುದಾಗಿ ಹೇಳಿ ಹೊರಟುಹೋದರು. ಆಗ ಮರಣದಿಂದ ಭಯಭೀತನಾದ ಈತನು ನನ್ನಲ್ಲಿರುವ ಈ ಧನವನ್ನು ಯಾರಿಗೂ ಕೊಡದೆ ಇದನ್ನು ಜೊತೆಗೆ ತೆಗೆದುಕೊಂಡು ಹೋಗಲೇಬೇಕೆಂಬುದಾಗಿ ಮನದಲ್ಲಿ ವಿಚಾರಿಸಿ ತನ್ನಲ್ಲಿರುವ ಬೆಳ್ಳಿಯ ನಾಣ್ಯಗಳನ್ನು ಬಂಗಾರದ ನಾಣ್ಯಗಳನ್ನಾಗಿ ಪರಿವರ್ತಿಸಿಕೊಂಡನು. ಮರು ದಿನ ಅರ್ಧ ಡಜನ್ ಬಾಳೆಯಹಣ್ಣನ್ನು ಖರೀದಿಸಿ ತಂದು ಆ ಹಣ್ಣುಗಳನ್ನು ಸಣ್ಣ ಸಣ್ಣ ತುಕುಡಿಗಳನ್ನಾಗಿ ಮಾಡಿ ಪ್ರತಿಯೊಂದು ಹಣ್ಣಿನ ತುಕಡಿಯಲ್ಲಿ ಒಂದೊಂದು ಬಂಗಾರದ ನಾಣ್ಯವನ್ನು ಹುದುಗಿಸಿ ನುಂಗಿಬಿಟ್ಟನು. ನಾಣ್ಯ ಹಾಗೂ ಹಣ್ಣುಗಳಿಂದ ಹೊಟ್ಟೆ ತುಂಬಿಹೋಯಿತು. ಆಗ ಅವನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಕಷ್ಟಪಟ್ಟು ಸಂಗ್ರಹಿಸಿದ ಈ ಸಂಪತ್ತನ್ನು ನನ್ನ ಜೊತೆಗೇನೆ ಒಯ್ಯುತ್ತಿದ್ದೇನೆ. ಇನ್ನೇನು ಮರಣ ಬಂದರೂ ಸರಿಯೇ ಎಂಬುದಾಗಿ ತನ್ನೊಳಗೆ ಉಬ್ಬಿ ಉಬ್ಬಿ ಸಂತೋಷಪಡುತ್ತ ಸತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೋದನು. ನೋಡಿದಿರಾ ಧರ್ಮಸಂಸ್ಕಾರಹೀನನಾದ ವ್ಯಕ್ತಿಯ ಈ ಹೀನ ಜೀವನವನ್ನು! ಯಾವದನ್ನು ಪರಲೋಕಕ್ಕೆ ತೆಗೆದುಕೊಂಡು ಹೋಗಬೇಕಾಗಿತ್ತೋ ಅತಂಹ ಧರ್ಮವನ್ನು ಸಂಪಾದಿಸದೆ ಕೇವಲ ಇಹಲೋಕದಲ್ಲಿ ಮಾತ್ರ ಚಲಾವಣೆಯಾಗುವ ಧನವನ್ನು ಸಂಗ್ರಹಿಸಿ ಅದನ್ನೂ ಸಹ ಪರಲೋಕಕ್ಕೆ ತೆಗೆದುಕೊಂಡು ಹೋಗುವೆನೆಂಬ ಭ್ರಮೆಯಿಂದ ನುಂಗಿ ಎಲ್ಲವನ್ನೂ ಇಲ್ಲಿಯೇ ಬಿಟ್ಟು ಬರಿಗೈಬಂಟನಾಗಿ ಜೀವನವನ್ನು ವ್ಯರ್ಥವಾಗಿಸಿಕೊಂಡನು. ಆದ್ದರಿಂದ ಪ್ರತಿಯೊಬ್ಬರು ದೇಹವನ್ನು ಬಿಡುವದರೊಳಗಾಗಿ ಧರ್ಮ ಸಂಪಾದನೆಯನ್ನು ಮಾಡಬೇಕು.

ಪುಣ್ಯರೂಪವಾದ ಧರ್ಮವನ್ನು ಸಂಗ್ರಹಿಸಬೇಕಾದರೆ ಏನು ಮಾಡಬೇಕು ? ಹೇಗೆ ವರ್ತಿಸಬೇಕು ಎಂಬ ಜಿಜ್ಞಾಸೆಯುಂಟಾದಾಗ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಧರ್ಮ ಸಂಪಾದನೆಯ ಮಾರ್ಗವನ್ನು ಬೋಧಿಸಲೋಸುಗ ಪುನಃ

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾಕ್ಷಮಾ ।
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ ॥

(ಸಿ. ಶಿ. ೧೬—೫೯)

ಹೀಗೆ ಉಪದೇಶಿಸಿದ್ದಾರೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜೆ, ಜಪ ಮತ್ತು ಧ್ಯಾನವೆಂಬ ಹತ್ತು ಮಾರ್ಗಗಳು ಧರ್ಮಸಂಪಾದನೆಗೆ ಮೂಲಗಳಾಗಿರುತ್ತವೆಂಬುದು ಪೂಜ್ಯರ ಆಶಯವಾಗಿದೆ.

ಈ ಹತ್ತು ವಿಧವಾದ ಧರ್ಮಮಾರ್ಗಗಳಲ್ಲಿ ಮೊದಲನೆಯದಾದ ಮಾರ್ಗವೇ ಅಹಿಂಸೆಯು. ಅಹಿಂಸೆಯೆಂದರೆ ಯಾವುದೇ ಪ್ರಾಣಿಗೆ ಶರೀರ, ವಾಣಿ ಮತ್ತು ಮನಸ್ಸಿನಿಂದ ದುಃಖವನ್ನುಂಟು ಮಾಡದೇ ಇರುವದು. ಮನುಷ್ಯನು ಸ್ವಾರ್ಥಿಯಾದ ಪ್ರಾಣಿಯು. ಅಂತೆಯೇ ತಾನು ಸುಖವನ್ನು ಪಡೆಯುವದಕ್ಕಾಗಿ ಅನ್ಯರನ್ನು ಸದಾ ಪೀಡಿಸುತ್ತಿರುತ್ತಾನೆ. ಮನುಷ್ಯನ ಈ ಪ್ರವೃತ್ತಿಯನ್ನು ನಿಯಂತ್ರಿಸುವದಕ್ಕಾಗಿಯೇ ಪೂಜ್ಯರು ಅಹಿಂಸಾರೂಪವಾದ ಧರ್ಮವನ್ನು ಪ್ರಪ್ರಥಮವಾಗಿ ಉಪದೇಶಿಸಿದ್ದಾರೆ. ಅಂತೆಯೇ 'ಅಂಹಿಸಾ ಪರಮೋ ಧರ್ಮಃ' ಎಂಬುದಾಗಿಯೂ ಶಾಸ್ತ್ರಗಳು ಉಪದೇಶಿಸಿವೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ನಿರ್ಮಾಣಶಕ್ತಿ ಮತ್ತು ವಿನಾಶಕಾರಿ ಶಕ್ತಿಯೆಂಬುದಾಗಿ ಎರಡು ವಿಧ ಶಕ್ತಿಗಳಿರುತ್ತವೆ. ಈತನು ತನ್ನ ಬುದ್ಧಿ ಕುಶಲತೆಯಿಂದ ನವ ನಿರ್ಮಾಣವನ್ನು ಮಾಡಬಲ್ಲನಲ್ಲದೆ ಇವನ ಬುದ್ಧಿಯಲ್ಲಿ ವಿಕೃತಭಾವನೆಯುಂಟಾದಾಗ ತಾನು ಮಾಡಿದ್ದನ್ನಾಗಲಿ ಅಥವಾ ಅನ್ಯರು ಮಾಡಿದ್ದನ್ನಾಗಲಿ ವಿನಾಶಗೊಳಿಸಲೂ ಬಹುದು. ಸಾಮಾನ್ಯವಾಗಿ ರಚನಾತ್ಮಕ ವಿಚಾರಕ್ಕಿಂತಲೂ ವಿಧ್ವಂಸಕ ವಿಚಾರಗಳೇ ಮನುಷ್ಯನ ಮನಸ್ಸಿನಲ್ಲಿ ತಲೆದೋರುತ್ತಿರುತ್ತವೆ. ಈ ವಿಧ್ವಂಸಕ ವಿಚಾರಧಾರೆಯನ್ನು ಸಂಪೂರ್ಣವಾಗಿ ನಿರ್ನಾಮಗೊಳಿಸಲೋಸುಗವೇ' ಈ ಅಹಿಂಸಾ ಧರ್ಮದ ಪ್ರವೃತ್ತಿಯು.

ಹಿಂಸೆಯೆಂಬ ಶಬ್ದವು ಕೊಲ್ಲು ಎಂಬ ಅರ್ಥದಲ್ಲಿ ರೂಢವಾಗಿದೆ. ಇದು ಅಧರ್ಮವು ''ಮಾಹಿಂಸ್ಯಾತ್ ಸರ್ವಾಭೂತಾನಿ'' ಎಂಬ ವೇದವಾಕ್ಯದಲ್ಲಿ ಯಾವದೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಣಿಯನ್ನು ಯಾರೂ ಹಿಂಸಿಸಬಾರದು ಎಂಬುದಾಗಿ ಉಪದೇಶಿಸಲಾಗಿದೆ. ಈ ಜಗತ್ತಿನಲ್ಲಿ ಪ್ರಾಣಿಗಳ ಪ್ರಾಣಹರಣವನ್ನು ಮಾಡುವ ಅಧಿಕಾರವು ಕೇವಲ ರುದ್ರನಿಗೆ ಮಾತ್ರ ಇದೆ. ಈ ಕಾರ್ಯವನ್ನು ಬೇರಾರೂ ಮಾಡುವಂತಿಲ್ಲ. ಬ್ರಹ್ಮ ವಿಷ್ಣುಗಳ ಕಾರ್ಯಗಳಾದ ಸೃಜನ ಮತ್ತು ಪಾಲನೆಗಳನ್ನು ಬೇರೆಯವರೂ ಸಹ ಮಾಡಬಹುದು ಅದರಿಂದ ಯಾವ ದೋಷವೂ ಇಲ್ಲ. ಮನುಷ್ಯನನ್ನೇ ಮೊದಲು ಮಾಡಿಕೊಂಡು ೮೪ ಲಕ್ಷ ಪ್ರಕಾರದ ಜೀವಿಗಳು ತಮ್ಮ ತಮ್ಮ ಸಂತಾನಕ್ಕೆ ಜನ್ಮಕೊಡುತ್ತವೆ. ಇದೂ ಸೃಜನಕಾರ್ಯವೇ. ಈ ಕಾರ್ಯವು ಮೂಲತಃ ಬ್ರಹ್ಮದೇವನದಾಗಿದ್ದರೂ ಜೀವಿಗಳು ಆ ಕಾರ್ಯವನ್ನು ಮಾಡಿದರೆ ಯಾವ ಆಕ್ಷೇಪಣೆ ಇರುವದಿಲ್ಲ. ಇತ್ತೀಚೆಗೆ ವಿಶ್ವದಲ್ಲಿಯೇ ಜನಸಂಖ್ಯೆಯು ಹೆಚ್ಚುತ್ತಿರುವದರಿಂದ ಅದನ್ನು ನಿಯಂತ್ರಣಗೊಳಿಸಲೋಸುಗ "ಹಮ್‌ದೋ ಹಮಾರೆ ದೋ" ಎಂಬುದಾಗಿ ಕುಟುಂಬ ಕಲ್ಯಾಣ ಮಂತ್ರಾಲಯದವರು ಪ್ರಚಾರಮಾಡುತ್ತಲಿದ್ದಾರೆ. ಇಲ್ಲಿ ಈ ಪ್ರತಿಬಂಧನೆಯ ಮುಖ್ಯ ಉದ್ದೇಶವೆಂದರೆ ಸಂರಕ್ಷಿಸುವ ಸಾಮರ್ಥ್ಯವಿಲ್ಲದವರು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳಿಗೆ ಜನ್ಮಕೊಡಕೂಡದು ಎಂಬುದಾಗಿದೆ. ಮಕ್ಕಳಿಗೆ ಜನ್ಮಕೊಡುವದೇನೂ ಅಪರಾಧವಲ್ಲ ಎಂಬುದು ಇಲ್ಲಿ ತಿಳಿದುಬರುತ್ತದೆ. ಇದರಂತೆ ಸಂರಕ್ಷಣೆಯ ಕಾರ್ಯವು ಮೂಲತಃ ವಿಷ್ಣು ಪರಮಾತ್ಮನದಾಗಿದ್ದರೂ ತನ್ನ ಕುಟುಂಬದ ಹಾಗೂ ಸಮಾಜದ ಲಾಲನೆ–ಪಾಲನೆಯಲ್ಲಿ ಅನ್ನ–ವಸ್ತ್ರಾದಿಗಳನ್ನಿತ್ತು ಯಾರಾದರೂ ಮಾಡಬಹುದು. ಇಲ್ಲಿಯೂ ಸಹ ಯಾರೂ ಯಾವದೇ ಆಕ್ಷೇಪವನ್ನು ಮಾಡಲಾರರು ಆದರೆ ರುದ್ರನ ಕಾರ್ಯವಾದ ಪ್ರಾಣಹರಣ ಕ್ರಿಯೆಯನ್ನು ರುದ್ರನ ಹೊರತಾಗಿ ಬೇರಾರೂ ಮಾಡುವಂತಿಲ್ಲ. ಹಾಗೇನಾದರೂ ಯಾರಾದರೂ ಮಾಡಿದರೆ ಶಿಕ್ಷೆಯು ವಿಧಿಸಲ್ಪಡುತ್ತದೆ. ತನ್ನವರೇ ಆದ ಹೆಂಡತಿ, ಮಕ್ಕಳು, ಅಣ್ಣ–ತಮ್ಮ ತಂದೆ–ತಾಯಿ ಹೀಗೆ ಪರಿವಾರದ ಯಾವುದೇ ಸದಸ್ಯನನ್ನು ಯಾರಿಗೂ ಕೊಲ್ಲುವ ಅಧಿಕಾರವಿರುವದಿಲ್ಲ. ಇಷ್ಟೇ ಅಲ್ಲ, ತನ್ನನ್ನೇ ತಾನು ಕೊಂದುಕೊಳ್ಳುವ ಹಕ್ಕೂ ಸಹ ಯಾರಿಗೂ ಇರುವದಿಲ್ಲ. ಯಾವನಾದರೊಬ್ಬನು ಆತ್ಮ ಹತ್ಯೆಯನ್ನು ಮಾಡಿಕೊಳ್ಳುವ ಪ್ರಸಂಗದಲ್ಲಿ ಪೋಲಿಸರ ಕೈಗೆ ಸಿಕ್ಕನೆಂದರೆ ಅವರು ಅವನನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸುತ್ತಾರೆ. ಇವನು ಮಾಡುತ್ತಿರುವ ಅಪರಾಧಕ್ಕಾಗಿ ನ್ಯಾಯಾಲಯವು ಇವನಿಗೆ ಕಠೋರ ಶಿಕ್ಷೆಯನ್ನೂ ಸಹ ವಿಧಿಸಬಹುದು. ಇದೆಲ್ಲವನ್ನು ಪರ್ಯಾಲೋಚಿಸಿದಾಗ ಪ್ರಾಣಿಯ ಪ್ರಾಣಹರಣರೂಪವಾದ ಹಿಂಸೆಯನ್ನು ಯಾರೂ ಮಾಡಬಾರದೆಂಬು ದಾಗಿಯೇ ಈ ಅಹಿಂಸಾಧರ್ಮವನ್ನು ವಿಧಿಸಲಾಗಿದೆ. ರುದ್ರನು ಜೀವಿಗಳ ಪ್ರಾಣ ಹರಣ ಮಾಡುವದಕ್ಕೂ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಪ್ರಾಣಹರಣ ಮಾಡುವದಕ್ಕೂ ಭಾವನೆಯಲ್ಲಿ ಬಹಳಷ್ಟು ವ್ಯತ್ಯಾಸವಿರುತ್ತದೆ. ರುದ್ರನು ತಾನೇ ಮಾಡಿದ ಸೃಷ್ಟಿಯ ನಿಯಮಾನುಸಾರವಾಗಿ ಪ್ರಾಣಿಗಳ ಪ್ರಾಣಹರಣವನ್ನೂ ಮಾಡಿದರೆ ಸಾಮಾನ್ಯ ವ್ಯಕ್ತಿಯು ದ್ವೇಷ, ಲೋಭ, ಕಾಮ, ಮದ ಮತ್ಸರ ಮುಂತಾದ ದುರ್ಗುಣಗಳಿಂದ ಪ್ರೇರಿತನಾಗಿ ದುರ್ಭಾವನೆಯಿಂದ ಪ್ರಾಣಹರಣ ಮಾಡುತ್ತಾನೆ. ಅಂತೆಯೇ ಅವನು ಶಿಕ್ಷೆಗೆ ಗುರಿಯಾಗುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂಸೆಯೆನ್ನುವಂಥಾದ್ದು ಮುಖ್ಯವಾಗಿ ಒಂದೇ ಆಗಿದ್ದರೂ ಅದರ ಬೇರೆ ಬೇರೆ ಕಾರಣಗಳ ಮುಖಾಂತರ ಅದು ಅನಂತ ರೂಪವನ್ನೂ ತಾಳುತ್ತದೆ. ಯಾರು ಸ್ವತಃ ಪ್ರಾಣಿಗಳನ್ನು ಹಿಂಸಿಸುತ್ತಾರೆಯೋ ಅವರು ಹಿಂಸಕರೇನೋ ನಿಜ, ಆದರೆ ಸ್ವತಃ ತಾನು ಮಾಡದೆ ಅನ್ಯರಿಂದ ಮಾಡಿಸಿದರೂ ಅವನು ಹಿಂಸಕನೆಂದೇ ಪರಿಗಣಿಸಲ್ಪಡುತ್ತಾನೆ. ಇದೂ ಅಲ್ಲದೆ ಹಿಂಸಾಸಕ್ತನಾದ ವ್ಯಕ್ತಿಗೆ ಹಿಂಸೆಯನ್ನು ಮಾಡಲು ಪ್ರಚೋದನೆ ಇಲ್ಲವೆ ಅನುಮೋದನೆ ನೀಡಿದವನೂ ಸಹ ಹಿಂಸಕನೇ ಎಂಬುದಾಗಿ ತಿಳಿದುಕೊಳ್ಳಬೇಕು.

ಮನುಷ್ಯನಲ್ಲಿ ಈ ಹಿಂಸಾ ಪ್ರವೃತ್ತಿಯುಉಂಟಾಗಲು ಕಾರಣವೇನು ? ಎಂಬುದರ ಬಗ್ಗೆ ಯೋಗಶಾಸ್ತ್ರದಲ್ಲಿ ಮನೋವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡಲಾಗಿದೆ. ಅದರ ಪ್ರಕಾರವಾಗಿ ಮನುಷ್ಯನ ಮನಸ್ಸಿನಲ್ಲಿರುವ ಲೋಭ, ಕ್ರೋಧ ಮತ್ತು ಮೋಹಗಳು ಹಿಂಸೆಗೆ ಮೂಲ ಕಾರಣಗಳೆಂಬುದು ತಿಳಿದುಬರುತ್ತದೆ. ಇವುಗಳಲ್ಲಿ ಮೊದಲನೆಯ ಕಾರಣವೇ ಲೋಭವು. ಸಂಪತ್ತಿನ ಆಶೆಗಾಗಿ ಮನುಷ್ಯನು ಮನುಷ್ಯನನ್ನು ಕೊಲ್ಲುವದಲ್ಲದೆ ಮೂಕಪ್ರಾಣಿಗಳನ್ನೂ ಸಹ ಕೊಂದುಹಾಕುತ್ತಾನೆ. ಆ ಪ್ರಾಣಿಗಳ ಚರ್ಮ, ಮಾಂಸ, ಕೋಉ ಮತ್ತು ಕೋರೆಹಲ್ಲುಗಳ ಮಾರಾಟದಿಂದ ಅಪಾರವಾದ ಸಂಪತ್ತುದೊರೆಯುವದರಿಂದ ಈ ಹಿಂಸೆಯಲ್ಲಿ ತೊಡಗುತ್ತಾನೆ.

ಇನ್ನು ಎರಡನೆಯ ಕಾರಣವೇನೆಂದರೆ ಕ್ರೋಧವು. ಕ್ರೋಧಾಕ್ರಾಂತನಾದ ಮನುಷ್ಯನು ಕುರುಡನಾಗುತ್ತಾನೆ ಅಂದರೆ ವಿವೇಕವನ್ನು ಕಳೆದುಕೊಳ್ಳುತ್ತಾನೆ. ಈ ಕುರುಡುತನದಲ್ಲಿಯೇ ತಾನು ಮಾಡುವ ಅಧರ್ಮದ ಅರಿವಿಲ್ಲದಾಗಿ ಹಿಂಸೆಯಲ್ಲಿ ಪ್ರವೃತ್ತನಾಗುತ್ತಾನೆ. ಈ ತೆರನಾಗಿ ಕ್ರೋಧಭಾವನೆಯು ಮನುಷ್ಯನನ್ನೂ ಹಿಂಸಕನನ್ನಾಗಿ ಮಾಡುತ್ತದೆ. ಇನ್ನೂ ಹಿಂಸೆಯ ಮೂರನೇ ಕಾರಣವೇ ಮೋಹವು. ಯಜ್ಞ ಯಾಗಾದಿಗಳಲ್ಲಿ ಪ್ರಾಣಿ ಹಿಂಸೆಯನ್ನು ಮಾಡಿದಾಗ ಅದರಿಂದ ತನಗೆ ಸ್ವರ್ಗಾದಿ ಲೋಕಗಳು ದೊರೆಯುವೆಂಬ ಮೋಹದಿಂದ ಹಿಂಸೆಯನ್ನು ಮಾಡುತ್ತಾನೆ, ಇದೂ ಅಲ್ಲದೆ ಸ್ತ್ರೀ ಮೋಹದಿಂದಲೂ ಸಹ ಅನೇಕಸಾರೆ ಮನುಷ್ಯನು ಹಿಂಸೆಯಲ್ಲಿ ಪ್ರವೃತ್ತ ನಾಗುವದುಂಟು.

ಯಜ್ಞದಲ್ಲಿ ಪ್ರತಿಪಾದಿಸಲ್ಪಟ್ಟ ಪ್ರಾಣಿಹಿಂಸೆಯು ಮನುಷ್ಯನ ಸ್ವಾಭಾವಿಕ ಹಿಂಸಾ ಪ್ರವೃತ್ತಿಯನ್ನು ಕಡಿಮೆಮಾಡಲೋಸುಗ ಎಂಬುದಾಗಿ ತಿಳಿದುಕೊಳ್ಳಬೇಕು. ಅಂದರೆ ಯಾವಾಗ ಬೇಕಾದಾಗ ಪ್ರಾಣಿ ಹಿಂಸೆ ಮಾಡುತ್ತಿರುವ ಮನುಷ್ಯನಿಗೆ ಪ್ರತಿ ಬಂಧನೆ ಯನ್ನು ಮಾಡಿ ಇಂತಹ ದೊಡ್ಡ ಯಜ್ಞ ಸಮಾರಂಭ ಮಾತ್ರ ಪ್ರಾಣಿ ಹಿಂಸೆಯನ್ನು ಮಾಡಬಹುದೆಂಬುದಾಗಿ ಹೇಳಿ ಮನುಷ್ಯನ ಸಹಜ ಪ್ರವೃತ್ತಿಗೆ ಕಡಿವಾಣವನ್ನು ಹಾಕ ಲಾಗಿದೆ, ಆದ್ದರಿಂದ ಪ್ರಾಣಿಹಿಂಸೆಯನ್ನು ವಿಧಿಸಿರುವ ವೇದಮಂತ್ರಗಳ ತಾತ್ಪರ್ಯವು ಹಿಂಸೆಯಲ್ಲಿರದೆ ಅಹಿಂಸಾತತ್ತ್ವವನ್ನು ಪ್ರತಿಪಾದಿಸುವದರಲ್ಲಿದೆ ಎಂಬುದಾಗಿ ತಿಳಿದು ಕೊಳ್ಳಬೇಕು.

ಈ ಪೂರ್ವದಲ್ಲಿ ವಿವರಿಸಿದಂತೆ ಲೋಭ, ಕ್ರೋಧ ಮತ್ತು ಮೋಹಗಳು ಹಿಂಸಾಪ್ರವೃತ್ತಿಯ ಮೂಲ ಕಾರಣಗಳಾಗಿರುತ್ತವೆ. ಯೋಗಶಾಸ್ತ್ರದ ಪ್ರಕಾರವಾಗಿ ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂಸೆಯ ಕಾರಣ, ಉಪಕಾರಣಗಳ ಮೂಲಕವಾಗಿ ಇದು ಎಂಭತ್ತು ಪ್ರಕಾರವಾಗಿ ಸಂಭವಿಸುತ್ತದೆ. ಹೀಗೆ ಹಿಂಸೆಯ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳು ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರೋಣದರಿಂದ ಯಾವುದೇ ಪ್ರಕಾರದ ಹಿಂಸೆಯು ಆಗಲಾರದಂತೆ ನಡೆದುಕೊಳ್ಳುವದೇ ಅಹಿಂಸಾವ್ರತವು. ಹಿಂಸೆಯ ಮತ್ತು ಅಹಿಂಸೆಯ ಹೆಚ್ಚಿನ ವಿಚಾರಗಳನ್ನು ನಾಳೆಯ ದಿನ ನಿರೂಪಿಸೋಣ ಎಂಬಲ್ಲಿಗೆ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೮ ಅಗಷ್ಟ ೧೯೯೩

(ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮಾಚಾರಸ್ಥಲ-೨

ಜಿಜ್ಞಾಸುಗಳಾದ ಸದ್ಭಕ್ತರೇ,

ಶ್ರೀ ಕಾಶೀಮಹಾಕ್ಷೇತ್ರದಲ್ಲಿ ಶ್ರೀ ಮಹಾಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲ ವಾಗಿ ಸಾಗುತ್ತಲಿವೆ. ಶಾಸ್ತ್ರಕಾರರು ಕಾಶೀಕ್ಷೇತ್ರಕ್ಕೆ 'ಕಲಿಯುಗದ ಕಾಮಧೇನು' ಎಂದು ಕರೆದಿದ್ದಾರೆ. ಕಾಮಿತಾರ್ಥವನ್ನು ಕರುಣಿಸುವುದಕ್ಕೆ ಕಾಮಧೇನು ಎಂದು ಹೆಸರು. ಸ್ವರ್ಗಲೋಕದಲ್ಲಿರುವ ಕಾಮಧೇನು ಕಾಮಿರ್ತಾಥವನ್ನು ಅನುಗ್ರಹಿಸುವಂತೆ ಭೂಲೋಕದಲ್ಲಿ ಕಾಶೀಕ್ಷೇತ್ರವೂ ಸಹ ಭಕ್ತರ ಅಭೀಪ್ಸೆಗಳನ್ನು ಪೂರ್ಣಗೊಳಿಸೋಣದ ರಿಂದ ಇದೂ ಸಹ ಒಂದು ಭೂಲೋಕದ ಕಾಮಧೇನುವಿದ್ದಂತೆಯೇ. ಅತ್ಯಂತ ದುರ್ಲಭವಾದ ಎಲ್ಲರಿಗೂ ಬೇಕಾಗಿರುವ ಅಂತೆಯೇ ಎಲ್ಲರ ಪರಮ ಪುರುಷಾರ್ಥವಾದ ಮೋಕ್ಷವನ್ನು ಸರ್ವರಿಗೂ ಅನುಗ್ರಹಿಸುವ ಕಾರಣದಿಂದ ಇದು ಕಾಮಧೇನುವಲ್ಲದೆ ಮತ್ತೇನು?

ಈ ಕ್ಷೇತ್ರದ ಮಹಿಮೆಯನ್ನು ವರ್ಣಿಸುತ್ತ ಶಾಸ್ತ್ರಕಾರರು- ''ಯೋಗೋऽತ್ರ ನಿದ್ರಾ ಜಪಃ ಪ್ರಜಲ್ಪಃ ಸ್ವೇಚ್ಛಾಶನಂ ನೈವೇದ್ಯಂ, ಶಯನಂ ಪ್ರಣಾಮಃ'' ಎಂಬುದಾಗಿ ಹೇಳಿದ್ದಾರೆ. ತಾತ್ಪರ್ಯವೇನೆಂದರೆ, ಕಾಶೀಕ್ಷೇತ್ರಕ್ಕೆ ಬಂದು ಇಲ್ಲಿ ಕೇವಲ ನಿದ್ರೆಯನ್ನು ಮಾಡಿದರೂ ಯೋಗ ಸಮಾಧಿಯ ಫಲವು ಪ್ರಾಪ್ತವಾಗುತ್ತದೆ. ಇಲ್ಲಿ ಏನನ್ನಾದರೂ ಮಾತನಾಡುತ್ತ ಕುಳಿತರೆ ಅವನಿಗೆ ಜಪ ಮಾಡಿದ ಫಲವು ಪ್ರಾಪ್ತವಾಗುತ್ತದೆ. ಅದರಂತೆ ಇಲ್ಲಿ ಕುಳಿತು ತಾನು ಆಹಾರವನ್ನು ಸೇವಿಸಿದರೆ ದೇವರಿಗೆ ನೈವೇದ್ಯವನ್ನು ಸಮರ್ಪಿಸಿದ ಫಲವು ಪ್ರಾಪ್ತವಾಗುತ್ತದೆ. ಇನ್ನು ಈ ಕ್ಷೇತ್ರದಲ್ಲಿ ಸುಮ್ಮನೆ ಒರಗಿದರೆ ಅವನಿಗೆ ಸಾಷ್ಟಾಂಗ ಪ್ರಣಾಮದ ಫಲವೂ ದೊರೆಯುವದು. ಕೇವಲ ಊಟ, ಹರಟೆ, ಶಯನ ಮತ್ತು ನಿದ್ರೆಗಳೆಂಬ ದೈನಂದಿನ ವ್ಯವಹಾರಗಳನ್ನು ಮಾಡಿದ ಮಾತ್ರಕ್ಕೆ ಇಷ್ಟೊಂದು ಫಲಪ್ರಾಪ್ತಿಯಾಗುತ್ತಿರುವಾಗ ಇನ್ನು ಈ ಕ್ಷೇತ್ರದಲ್ಲಿ ಇದ್ದು ಯೋಗಾಭ್ಯಾಸಾದಿಗಳನ್ನು ಮಾಡಿದರೆ ಅದೆಷ್ಟು ಫಲವು ದೊರಕಲಿಕ್ಕಿಲ್ಲ? ಆದ್ದರಿಂದ ಕಾಶೀ ಕ್ಷೇತ್ರದಲ್ಲಿ ವಾಸಿಸಿ ಸ್ವಲ್ಪೇ ಧರ್ಮಕಾರ್ಯವನ್ನಾಚರಿಸಿದರೂ ಸಹ ಅದು ಮಹಾಫಲವನ್ನು ಕೊಡು ವಂಥಾದ್ದಾಗುತ್ತದೆ.

ನಿನ್ನೆಯ ದಿನ ಧರ್ಮಾಚಾರ ಸ್ಥಲದಲ್ಲಿ ಬರುವ ಅಹಿಂಸೆ ವಿಷಯಕವಾಗಿ ಸಾಕಷ್ಟು ಶ್ರವಣ ಮಾಡಿದ್ದೀರಿ ಮನುಷ್ಯನು ಧಾರ್ಮಿಕರಾಗಬೇಕಾದರೆ ಅವನು ಮೊಟ್ಟಮೊದಲು ಅಹಿಂಸೆಯ ಪಾಲನೆಯನ್ನು ಮಾಡಬೇಕಾಗುವದು. ನಿನ್ನೆಯ ದಿನ ನೀವೆಲ್ಲ ಕೇಳಿದಂತೆ ಮನುಷ್ಯನು ಲೋಭ, ಕ್ರೋಧ ಹಾಗೂ ಮೋಹಗಳ ಮೂಲಕವಾಗಿ ಹಿಂಸಕನಾಗುತ್ತಾನೆ. ಈ ದುರ್ಗುಣಗಳು ಎಲ್ಲಿಯವರೆಗೆ ಮನಸ್ಸಿನಲ್ಲಿ ಮನೆ ಮಾಡಿಕೊಂಡಿರುವವೋ ಅಲ್ಲಿಯವರೆಗೆ ಹಿಂಸೆಯು ನಿಲ್ಲಲು ಸಾಧ್ಯವಾಗುವದಿಲ್ಲ. ರೋಗದ ನಿಜವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರಣವನ್ನರಿಯದ ಅದೆಷ್ಟೇ ಉಪಚಾರವನ್ನು ಮಾಡಿದರೂ ಅದು ವಾಸಿಯಾಗದಿರುವಂತೆ ಹಿಂಸೆಯ ಮೂಲಕಾರಣಗಳಾದ ಲೋಭಾದಿಗಳನ್ನು ಸಂಪೂರ್ಣವಾಗಿ ನಿವೃತ್ತಿಗೊಳಿಸಿಕೊಳ್ಳದೆ ಅಹಿಂಸಕನಾಗಲು ಸಾಧ್ಯವಾಗುವದಿಲ್ಲ.

ಯಾವದೊಂದು ಪ್ರಾಣಿಯ ಪ್ರಾಣಘಾತ ಮಾಡುವದು ಹಿಂಸೆ ಏನೋ ನಿಜ ಆದರೆ ಯಾರಿಗಾದರೂ ಅವಾಚ್ಯ ಶಬ್ದಗಳನ್ನು ಬಳಸಿ ಅವರ ಮನಸ್ಸನ್ನು ನೋಯಿಸಿದರೆ ಅದು ಸಹ ಹಿಂಸೆಯೇ. ಇದರಂತೆ ಮನಸ್ಸಿನಲ್ಲಿ ಮತ್ತೊಬ್ಬರ ಬಗ್ಗೆ ಅನಿಷ್ಟ ಚಿಂತನೆಯನ್ನು ಮಾಡುವದೂ ಸಹ ಹಿಂಸೆಯೆನಿಸಿಕೊಳ್ಳುತ್ತದೆ. ಹೀಗೆ ಶಾರೀರಿಕ, ವಾಚಿಕ ಮತ್ತು ಮಾನಸಿಕವೆಂಬುದಾಗಿ ಹಿಂಸೆಯು ಮುಖ್ಯವಾಗಿ ಮೂರು ಪ್ರಕಾರವಾಗಿರುತ್ತದೆ. ಶರೀರ, ವಾಣಿ ಮತ್ತು ಮನಸ್ಸುಗಳೆಂಬ ತ್ರಿಕರಣಗಳು ಪರಿಶುದ್ಧವಾಗದ ಹೊರತು ಪರಮಾತ್ಮನ ಕೃಪೆಯು ಪ್ರಾಪ್ತವಾಗುವದಿಲ್ಲ. ಆದ್ದರಿಂದ ಈಶ್ವರಕೃಪೆಯನ್ನು ಪಡೆದುಕೊಳ್ಳಲೋಸುಗ ತ್ರಿಕರಣ ಪೂರ್ವಕವಾಗಿ ಅಹಿಂಸಾವ್ರತವನ್ನು ಪರಿಪಾಲನೆ ಮಾಡಿದಾಗಲೇ ಧಾರ್ಮಿಕನೆನಿಸಿಕೊಳ್ಳುವನು.

ಸಾಮಾನ್ಯವಾಗಿ ಮನುಷ್ಯನು ಹಿಂಸೆಯಲ್ಲಿ ಪ್ರವೃತ್ತನಾದಾಗ ನಾನು ಏನು ಮಾಡುತ್ತಾ ಇದ್ದೇನೆ ? ಇದರ ಪರಿಣಾಮವೇನಾಗಬಹುದು ? ಎಂಬುದರ ಬಗ್ಗೆ ಸರಿಯಾದ ತಿಳುವಳಿಕೆಯು ಇರುವದಿಲ್ಲ. ಯಾರಿಂದಲಾದರೂ ಯೋಗ್ಯವ್ಯಕ್ತಿಯಿಂದ ಅದರ ಬಗ್ಗೆ ಪರಿಪೂರ್ಣ ತಿಳುವಳಿಕೆಯುಂಟಾದಾಗ ಎಂತಹ ಹಿಂಸಕನೂ ಸಹ ಅಹಿಂಸಕನಾಗಲು ಸಾಧ್ಯವಾಗುತ್ತದೆ. ಅಂತಹ ಎಷ್ಟೋ ಘಟನೆಗಳು ಈ ದೇಶದಲ್ಲಿ ನಡೆದುಹೋಗಿವೆ. ಅಂಗುಲಿಮಾಲನೆಂಬ ಘೋರ ಹಿಂಸಕನು ಭಗವಾನ್‌ಬುದ್ಧನ ಉಪದೇಶಾಮೃತವನ್ನು ಆಲಿಸಿ ಕೊನೆಗೆ ತನ್ನ ಹಿಂಸಾಪ್ರವೃತ್ತಿಯನ್ನು ಸಂಪೂರ್ಣವಾಗಿ ತ್ಯಜಿಸಿ ಬುದ್ಧನ ಪರಮ ಶಿಷ್ಯನಾದನು. ವಾಲ್ಯಾ ಎಂಬ ಹಿಂಸಾಪ್ರವೃತ್ತಿಯ ದಾರಿಬಡಕ ಧರೋಡೆಖೋರನು ನಾರದ ಮಹರ್ಷಿಯ ಸಹವಾಸದಿಂದ ವಾಲ್ಮೀಕಿ ಮಹರ್ಷಿಯೆಂದು ಪ್ರಸಿದ್ಧನಾದನಲ್ಲದೆ ಅತ್ಯಂತ ಅಹಿಂಸಕನಾಗಿಯೂ ಪರಿವರ್ತನೆ ಗೊಂಡನು. ಇದೇ ಪ್ರಕಾರವಾಗಿ ಮಾತಂಗತಮ್ಮನೆಂಬ ಓರ್ವ ಕ್ರೂರಿಯು ಸುಜ್ಞಾನದೇವರ ಸಹವಾಸದಿಂದಾಗಿ ತನ್ನ ಪೂರ್ವದ ಕುಕರ್ಮಗಳನ್ನು ತ್ಯಜಿಸಿ ಸುಜ್ಞಾನದೇವರ ಪರಮ ಶಿಷ್ಯನಾದನು. ಈ ಎಲ್ಲ ಘಟನೆಗಳಲ್ಲಿ ಅತಿಹಿಂಸಕನಾದ ವ್ಯಕ್ತಿಯೇ ತಿಳಿವಳಿಕೆ ಬಂದಾಗ ಸಂಪೂರ್ಣವಾಗಿ ಅಹಿಂಸಕನಾದನೆಂಬ ಸಂಗತಿಯು ತಿಳಿದು ಬರುತ್ತದೆ. ಈ ತೆರನಾಗಿ ಇದರ ರಹಸ್ಯಾರ್ಥವನ್ನು ತಿಳಿದು ಪ್ರತಿಯೊಬ್ಬರೂ ಮೊದಲು ಅಹಿಂಸಾ ಧರ್ಮವನ್ನು ಪರಿಪಾಲಿಸಬೇಕೆಂದು ಪೂಜ್ಯರು ಆದೇಶವಿತ್ತಿದ್ದಾರೆ.

ಸತ್ಯವು ಜಗತ್ತಿನ ಆಧಾರಸ್ಥಂಬವಾಗಿರುತ್ತದೆ. ಅಂತೆಯೇ ಒಬ್ಬ ಸುಭಾಷಿತಕಾರನು–

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ।
ಸತ್ಯೇನ ವಾಯವೋ ವಾಂತಿ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥

ಹೀಗೆ ಹೇಳಿದ್ದಾನೆ. ಅವನ ಈ ಅಭಿಪ್ರಾಯದಂತೆ ಈ ಪೃಥ್ವಿಯು ಸತ್ಯದ ಮೇಲೆ ನಿಂತುಕೊಂಡಿದೆ. ಸತ್ಯದಿಂದಲೇ ಸೂರ್ಯನು ಪ್ರತಾಪವುಳ್ಳವನಾಗಿದ್ದಾನೆ. ವಾಯುವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೀಸಲು ಸತ್ಯವೇ ಕಾರಣವು ಆದ್ದರಿಂದ ಸರ್ವವೆಲ್ಲವೂ ಸತ್ಯದಲ್ಲಿಯೇಪ್ರತಿಷ್ಠೆಗೊಂಡಿದೆ. ಪುರಾಣಗಳಲ್ಲಿ ಪೃಥ್ವಿಯು ಆದಿಶೇಷನ ಹೆಡೆಯ ಮೇಲೆ ಇದೆಯೆಂಬುದಾಗಿ ವರ್ಣಿಸಲಾಗಿದೆ. ಶೇಷವೆಂಬ ಶಬ್ದಕ್ಕೆ ಆದಿಶೇಷನೆಂಬ ಅರ್ಥವಾಗುತ್ತಿದ್ದರೂ ಎಲ್ಲವೂ ಅಳಿದ ಬಳಿಕ ವಸ್ತುವಿಗೆ ಶೇಷವೆಂತಲೂ ಕರೆಯುತ್ತಾರೆ. ಎಲ್ಲವೂ ಅಳಿದ ಬಳಿಕ ಉಳಿಯುವವಂಥಾದ್ದು ಸತ್ಯವೇ. ಸತ್ಯವೆಂದರೆ ಸಾಕ್ಷಾತ್ ಶಿವನೇ ಎಂದರ್ಥ. ಆದ್ದರಿಂದ ಪ್ರಪಂಚದ ಸರ್ವವೆಲ್ಲಕ್ಕೂ ಈ ಸತ್ಯವೇ ಆಧಾರವೆಂಬುದಾಗಿ ತಿಳಿದುಕೊಳ್ಳಬೇಕು.

ಅಹಿಂಸಾದಿ ಉಳಿದೆಲ್ಲ ಧರ್ಮಗಳನ್ನು ಆಚರಿಸುತ್ತಿದ್ದರೂ ಸತ್ಯವೊಂದನ್ನು ಆಚರಿಸದಿದ್ದರೆ ಅವನ ಎಲ್ಲ ಧರ್ಮಾಚರಣೆಗಳು ವ್ಯರ್ಥವಾಗಿ ಹೋಗುತ್ತವೆ. ಆದ್ದರಿಂದ ದೊಡ್ಡ ದೊಡ್ಡ ಧರ್ಮಾಚರಣೆಯನ್ನು ಆಚರಿಸುವದು ಅಸಾಧ್ಯವಾದರೂ ಸತ್ಯ ನುಡಿಯುವದನ್ನು ಮಾತ್ರ ಎಂದಿಗೂ ಬಿಡಬಾರದು.

ಸತ್ಯವೊಂದನ್ನು ಹಿಡಿದ ಹರಿಶ್ಚಂದ್ರನಿಗೆ ಜೀವನದಲ್ಲಿ ಅನೇಕ ತೊಂದರೆಗಳುಂಟಾದರೂ ಕೊನೆಗೆ ಆತನೇ ಜಯಶಾಲಿಯಾದನು. ಈತನ ಸತ್ಯಸಂಧತೆಯ ಮುಂದೆ ಪರಾಭವವನ್ನು ಅನುಭವಿಸಿದ ವಿಶ್ವಾಮಿತ್ರನು ತನ್ನ ಎಲ್ಲ ತಪಸ್ಸಿನ ಫಲವನ್ನು ಇವನಿಗೆ ಧಾರೆಯೆರೆದು ತಾನು ಬರಿಗೈಯ್ಯವನಾಗಿದ್ದು ಸರ್ವರಿಗೂ ತಿಳಿದ ವಿಷಯವೇ. ಅಂತೆಯೇ ವೇದಗಳು, 'ಸತ್ಯಮೇವ ಜಯತೆ' ಎಂಬುದಾಗಿ ಉಪದೇಶಿಸಿವೆ. ನಮ್ಮ ರಾಷ್ಟ್ರದ ಧ್ಯೇಯ ವಾಕ್ಯವಾದರೂ ಇದೇ ಆಗಿರುತ್ತದೆ.

ಒಂದು ಊರಿನಲ್ಲಿ ತಂದೆಗೆ ಒಬ್ಬನೇ ಒಬ್ಬ ಮಗನಿದ್ದ ಅವನು ಯಾವಾಗಲೂ ಅಸತ್ಯವನ್ನೇ ನುಡಿಯುತ್ತಿದ್ದನು. ಮನೆಯವರೆಲ್ಲರೂ ಅವನಿಂದ ಬಹಳಷ್ಟು ಬೇಸರಗೊಂಡಿದ್ದರು ಒಂದು ಸಾರೆ ಅವರ ಊರಿಗೆ ಸತ್ಯಹರಿಶ್ಚಂದ್ರನ ನಾಟಕವು ಬಂದಿತು. ಆಗ ಈ ಹುಡುಗನ ತಂದೆಯು ಅವನ ಕೈಯಲ್ಲಿ ಹತ್ತು ರೂಪಾಯಿಗಳನ್ನು ಕೊಟ್ಟು ''ಹೋಗು ಸತ್ಯ ಹರಿಶ್ಚಂದ್ರನ ನಾಟಕ ಬಂದಿದೆ ಅದನ್ನು ನೋಡಿಯಾದರೂ ಸುಳ್ಳುಹೇಳುವದನ್ನು ಬಿಡು ಎಂಬುದಾಗಿ ಹೇಳಿ ಕಳಿಸಿಕೊಟ್ಟನು. ಈ ಹುಡುಗನು ನಾಟಕ ಥೇಟರನ್ನು ಪ್ರವೇಶಿಸುವ ಹೊತ್ತಿಗಾಗಲೇ ನಾಟಕವು ಪ್ರಾರಂಭವಾಗಿ ಬಿಟ್ಟಿತ್ತು. ಈತನು ತನ್ನ ಸ್ಥಾನದಲ್ಲಿ ಕುಳಿತು ನೋಡುತ್ತಿರುವಾಗ—ವಿಶ್ವಾಮಿತ್ರನ ಕಾಟದಿಂದಾಗಿ ರಾಜಾ ಹರಿಶ್ಚಂದ್ರನು ರಾಜ್ಯವನ್ನು ಮತ್ತು ಹೆಂಡತಿ ಮಕ್ಕಳನ್ನು ಕಳೆದುಕೊಂಡು ಹೊಲೆಯನಿಗೆ ಆಳಾಗಿ ಸ್ಮಶಾನವನ್ನು ಕಾಯುತ್ತಿರುವ ದೃಶ್ಯವು ಬಂದಿತು. ಆಗ ಆ ಹುಡುಗನು ಪಕ್ಕದಲ್ಲಿ ಕುಳಿತಿರುವ ಯಜಮಾನನನ್ನು ಕುರಿತು ''ಅಜ್ಜಾ! ಇವನಾರು ? ಇವನಿಗೆ ಈ ಪರಿಸ್ಥಿತಿಯು ಬರಲು ಕಾರಣವೇನು ?'' ಎಂಬುದಾಗಿ ಪ್ರಶ್ನಿಸಿದನು. ಆಗ ಆ ಯಜಮಾನನು ''ನೀನು ಈಗ ಬಂದಿರುವಿಯಾ ತಮ್ಮ ! ಈತನು ಹರಿಶ್ಚಂದ್ರ ಮಹಾರಾಜನು ಸತ್ಯವನ್ನು ನುಡಿಯುವ ಹಟಹಿಡಿದದ್ದಕ್ಕಾಗಿ ವಿಶ್ವಾಮಿತ್ರನು ಇವನಿಗೆ ಈ ಪರಿಸ್ಥಿತಿಯನ್ನು ತಂದೊಡ್ಡಿದ್ದಾನೆ.'' ಎಂಬುದಾಗಿ ನಾಟಕದ ಪ್ರಾರಂಭದಿಂದ ಹಿಡಿದು ಪ್ರಸ್ತುತ ಸನ್ನಿವೇಶದವರೆಗೆ ವಿವರಿಸಿದನು. ಇದನ್ನು ಕೇಳಿದ ಆ ಹುಡುಗನು ''ಅಯ್ಯೋ ಬುದ್ಧಿಗೇಡಿಯಾದ ಹರಿಶ್ಚಂದ್ರನೇ ಸತ್ಯಹೇಳುವದರಿಂದ ಏನು ಪ್ರಯೋಜನವಿದೆ ? ಬೇಡಪ್ಪಾ ಬೇಡ ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಷ್ಟವನ್ನು ನೋಡಲಾಗುವದಿಲ್ಲ'' ಎಂದು ನುಡಿಯುತ್ತ ಕುಳಿತಲ್ಲಿಯೇ ಕಣ್ಣು ಮುಚ್ಚಿಕೊಂಡ ಆಗಲೇ ಮಧ್ಯರಾತ್ರಿ ಸಮೀಪಿಸುತ್ತಲಿತ್ತು, ಇವನು ಕಣ್ಣುಮುಚ್ಚಿದೊಡನೆ ನಿದ್ರೆಯು ಆವರಿಸಿಬಿಟ್ಟಿತು. ಯಾವಾಗ ಇವನು ನಿದ್ರೆಯಿಂದ ಎಚ್ಚರಾದನೋ ಆಗ ನಾಟಕವೆಲ್ಲ ಮುಗಿದುಹೋಗಿ ಜನರೆಲ್ಲ ಎದ್ದು ತಮ್ಮ ತಮ್ಮ ಮನೆಗಳತ್ತ ಹೊರಟಿದ್ದರು. ಆಗ ಈ ಹುಡುಗನೂ ಸಹ ಲಗುಬಗೆಯಿಂದ ಥೇಟರಿನಿಂದ ಹೊರಬಂದು ಮನೆಗೆ ಬಂದು ತಲುಪಿದನು.

ಈತನು ಬರುತ್ತಲೇ ಇವನ ತಂದೆಯು ಮಗುವನ್ನು ಕುರಿತು ''ಏನು ಮಗು ? ಸತ್ಯಹರಿಶ್ಚಂದ್ರನ ನಾಟಕವು ಹೇಗಿತ್ತು ? ಎಂಬುದಾಗಿ ಬಹಳಷ್ಟು ಹರ್ಷದಿಂದಲೇ ಪ್ರಶ್ನಿಸಿದನು. ಆಗ ಆ ಹುಡುಗನು ''ಅಪ್ಪಾ ! ಆ ನಾಟಕವನ್ನು ನಾನು ನೋಡಲು ಹೋಗಬಾರದಿತ್ತು ಅದಾವನೋ ರಾಜಾ ಹರಿಶ್ಚಂದ್ರನಂತೆ ಸತ್ಯವನ್ನು ಹೇಳುವ ಹಟಹಿಡಿದ ಕಾರಣ ಆತನು ತನ್ನ ರಾಜ್ಯವನ್ನು ಹೆಂಡತಿ ಮಕ್ಕಳನ್ನು ಕಳೆದುಕೊಂಡು ಸ್ಮಶಾನದಲ್ಲಿ ಹೊಲೆಯನಿಗೆ ಆಳಾಗಿ ಗೋಳಾಡುವದನ್ನು ನಾನು ನೋಡಿ ಬೇಸರಪಟ್ಟು ಅಯ್ಯೋ ! ಎಂದೂ ಸತ್ಯವನ್ನು ನುಡಿಯಬಾರದು ಎಂಬುದಾಗಿ ಮನದಲ್ಲಿ ನಿಶ್ಚಯಿಸಿ ಮುಂದಿನ ಸನ್ನಿವೇಶವನ್ನು ನೋಡುವ ಗೊಡವೆಗೆ ಹೋಗದೆ ನಿದ್ರೆಮಾಡಿ ಮನೆಗೆ ಬಂದಿರುವೆ ಎಂದು ಹೇಳಿದನು. ಆಗ ಅವನ ತಂದೆಯು ಅಯ್ಯೋ ಮೂರ್ಖನೇ ! ನಾಟಕದ ಫಲಶ್ರುತಿಯಾದ ಕೊನೆಯ ಸನ್ನಿವೇಶವನ್ನು ನೀನು ನೋಡಲಿಲ್ಲವೇ ? ಸತ್ಯ ನುಡಿಯುವದನ್ನು ಎಂದೂ ಬಿಡೆನೆಂಬ ಹಟ ಹಿಡಿದ ಕಾರಣದಿಂದಾಗಿ ಮೊದ ಮೊದಲು ರಾಜನಿಗೆ ತೊಂದರೆಯಾದರೂ ಕೊನೆಗೆ ಶಿವನ ಸಾಕ್ಷಾತ್ಕಾರವಾಗಿ ಕಳೆದುಹೋದ ರಾಜ್ಯವನ್ನು ಹಾಗೂ ಹೆಂಡರು ಮಕ್ಕಳನ್ನು ಮರಳಿಪಡೆದು ಕೊಂಡನಲ್ಲದೆ ವಿಶ್ವಾಮಿತ್ರನ ಸಂಪೂರ್ಣವಾದ ತಪಸ್ಸಿನ ಫಲವನ್ನು ಕೂಡ ಪಡೆದು ಕೊಂಡು ಸತ್ಯಹರಿಶ್ಚಂದ್ರನೆಂಬ ಹೆಸರಿನಿಂದ ಪ್ರಖ್ಯಾತನಾದನು. ಈ ಮುಂದಿನ ಸನ್ನಿವೇಶವನ್ನು ನೋಡದ ಕಾರಣ ದಿಂದಾಗಿ ನಿನಗೆ ಸತ್ಯದ ಮಹತ್ವವು ಗುರುತಾಗಲಿಲ್ಲ, ಈಗಲಾದರೂ ಅದರ ಮರ್ಮವು ತಿಳಿಯಿತಲ್ಲವೆ ? ಸತ್ಯಧರ್ಮವನ್ನು ಪರಿಪಾಲಿಸುವವರಿಗೆ ಮೊದಮೊದಲು ಅನೇಕ ತೊಂದರೆಗಳುಂಟಾದರೂ ಕೊನೆಗೆ ಒಳ್ಳೆಯದೇ ಆಗುತ್ತದೆ. ಆದರೆ ಅಸತ್ಯವನ್ನು ನುಡಿದಾಗ ಮೊದಮೊದಲು ಏನೋ ಸುಖವಾಗಿ ಕಂಡರೂ ಕೊನೆಗೆ ಮಹದನರ್ಥನ್ನೇ ಅನುಭವಿಸಬೇಕಾಗುತ್ತದೆ ಎಂಬುದಾಗಿ ಮಗನಿಗೆ ತಂದೆಯು ತಿಳಿಹೇಳಿದನು. ಸತ್ಯಹರಿಶ್ಚಂದ್ರ ನಾಟಕದ ಕೊನೆಯ ಸನ್ನಿವೇಶವನ್ನು ತಿಳಿದುಕೊಂಡ ಆ ಹುಡುಗನು ಸತ್ಯದ ಮಹತ್ವವನ್ನು ತಂದೆಯ ಮುಖದಿಂದ ಅರಿತುಕೊಂಡು ಸುಳ್ಳು ಹೇಳುವದನ್ನು ಬಿಟ್ಟನಂತೆ.

ಈ ಜಗತ್ತಿನಲ್ಲಿ ಬಹಳಷ್ಟು ಜನರು ಸತ್ಯದ ಮರ್ಮವನ್ನರಿಯದೇ ಕ್ಷಣಿಕವಾದ ಸುಖಕ್ಕೆ ಬಲಿಯಾಗಿ ಅಸತ್ಯದಲ್ಲಿ ಪ್ರವೃತ್ತಗುತ್ತಿರುತ್ತಾರೆ. ನಮಗೆ ದೊರೆತಿರುವ ಪಂಚಕರ್ಮೇಂದ್ರಿಯಗಳಲ್ಲಿ ವಾಣಿಯು ಬಹುಮುಖ್ಯವಾದುದು. 'ನಾಲಿಗೆ ಒಳ್ಳೆಯ ದಾದರೆ ನಾಡೆಲ್ಲಾ ಒಳ್ಳೆಯದು' ಎಂಬ ನಾಡುನುಡಿಯು ಪ್ರಸಿದ್ಧವಾಗಿದೆ. ಓರ್ವ ಸುಭಾಷಿತಕಾರನು–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಿಹ್ವಾಗ್ರೇ ವರ್ತತೇ ಲಕ್ಷ್ಮೀ ಜಿಹ್ವಾಗ್ರೇ ಮಿತ್ರಬಾಂಧವಾಃ।
ಜಿಹ್ವಾಗ್ರೇ ಬಂಧನ ಪ್ರಾಪ್ತಿಃ ಜಿಹ್ವಾಗ್ರೇ ಮರಣಂಧ್ರುವಮ್ ॥

ಹೀಗೆ ನಾಲಿಗೆಯ ಮಹತ್ವವನ್ನು ಕೊಂಡಾಡಿದ್ದಾನೆ. ಏನೆಲ್ಲವನ್ನು ನಾಲಿಗೆಯಿಂದಲೇ ಸಂಪಾದಿಸಬಹುದು. ನಾವು ಮಾತನಾಡಿಯೇ ಲಕ್ಷ್ಮೀಯನ್ನು ಸಂಪಾದಿಸಿಕೊಳ್ಳುತ್ತೇವೆ. ಮಾತಿನಿಂದಲೇ ಇಷ್ಟಮಿತ್ರರನ್ನು ಗಳಿಸಬಹುದು. ಮಾತಿನಿಂದಲೇ ಬಂಧನವು ಹಾಗೂ ಮಾತಿನಿಂದಲೇ ಮರಣವು ಸಹ ಪ್ರಾಪ್ತವಾಗುವದು. ಹೀಗೆ ವಾಣಿಯು, ಮನುಷ್ಯನಿಗೆ ದೊರೆತ ದೇವರ ಬಹುದೊಡ್ಡ ದೇಣಿಗೆಯು. ಇದರ ದುರುಪಯೋಗವನ್ನು ಮಾಡಿ ಕೊಳ್ಳದೆ ಸದುಪಯೋಗವನ್ನು ಮಾಡಿಕೊಂಡರೆ ಸರ್ವವೆಲ್ಲವನ್ನು ಸಂಪಾದಿಸಬಹುದು. ಸರ್ವಜ್ಞ ಕವಿಯು ಮಾತಿಗೆ ಮಾಣಿಕ್ಯವೆಂದು ಕರೆದರೆ ಶರಣರು ಮಾತಿಗೆ ಜ್ಯೋತಿರ್ಲಿಂಗ ವೆಂದು ಕರೆದಿದ್ದಾರೆ. ''ವಾಗೇವ ಜ್ಯೋತಿಃ'' ಎಂಬ ಉಪನಿಷದ್ ಮಂತ್ರದಲ್ಲಿಯೂ ವಾಣಿಗೆ ಜ್ಯೋತಿ ಎಂಬುದಾಗಿ ಕರೆದಿದ್ದಾರೆ. ಹೀಗೆ ಮಾಣಿಕ್ಯದಂತಿರುವ ಜ್ಯೋತಿ ಯಂತಿರುವ ಮತ್ತು ಜ್ಯೋತಿರ್ಲಿಂಗದಂತಿರುವ ಈ ವಾಣಿಗೆ ಸತ್ಯದ ಸಂಬಂಧವನ್ನು ಮಾಡಬೇಕೇ ವಿನಃ ಅಸತ್ಯದ ಸ್ಪರ್ಶವನ್ನೂ ಸಹ ಮಾಡಕೂಡದು. ಯಾರು ಈ ಅಮೂಲ್ಯವಾದ ವಾಣಿಯಿಂದ ಸದಾ ಸತ್ಯವನ್ನೇ ನುಡಿಯುವರೋ ಅವರು ಈ ಧರ್ಮಾಚರಣೆಯ ಪ್ರಭಾವದಿಂದಾಗಿ ಇಹಲೋಕದಲ್ಲಿ ಸುಖವನ್ನು ಪಡೆಯುವರಲ್ಲದೆ ಕೊನೆಗೆ ಸತ್ಯಸ್ವರೂಪನಾದ ಶಿವನನ್ನು ಪಡೆದು ಶಾಶ್ವತ ಸುಖಿಗಳಾಗುವರೆಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೮ ಅಗಸ್ಟ ೧೯೯೩
ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮಾಚಾರಸ್ಥಲ-೩

ಜಿಜ್ಞಾಸುಗಳಾದ ಸದ್ಭಕ್ತರೇ,

ಶ್ರೀ ಕಾಶೀಮಹಾಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಶ್ರೀಮಹಾಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಿವೆ. ಈ ಜಗತ್ತಿನಲ್ಲಿರುವ ಅನೇಕ ತೀರ್ಥಕ್ಷೇತ್ರಗಳಲ್ಲಿ ಕಾಶೀಕ್ಷೇತ್ರದ ಮಹಾತ್ಮೆಯು ವಿಶೇಷವಾದುದಾಗಿದೆ. ಬೇರೆ ಕ್ಷೇತ್ರಗಳಲ್ಲಿ ದೇವರ ದರ್ಶನಕ್ಕಾಗಿ ಹೋದ ಭಕ್ತರ ಮನಸ್ಸಿನಲ್ಲಿ ಅನೇಕ ವಿಧಗಳಾದ ಸಾಂಸಾರಿಕ ಬಯಕೆಗಳು ಉತ್ಪನ್ನಗಳಾಗುತ್ತವೆ ಆದರೆ ಕಾಶೀ ಕ್ಷೇತ್ರದಲ್ಲಿ ವಿಶ್ವನಾಥ ಹಾಗೂ ಅನ್ನಪೂರ್ಣೆಯರ ದರ್ಶನವನ್ನು ಪಡೆಯುವ ಭಕ್ತರ ಮನಸ್ಸಿನಲ್ಲಿ ವೈರಾಗ್ಯ ಹಾಗೂ ಜ್ಞಾನಗಳ ಬಯಕೆಗಳು ಒಡಮೂಡುತ್ತವೆ. ಇಲ್ಲಿಯ ಅನ್ನಪೂರ್ಣಾ ದೇವಿಯು ಬಂದ ಭಕ್ತರಿಗೆ ಭಿಕ್ಷಾರೂಪವಾದ ಪ್ರಸಾದವನ್ನು ಅನುಗ್ರಹಿಸುತ್ತಾಳೆ. ಅದರ ಸೇವನೆಯಿಂದ ಭಕ್ತರ ಮನಸ್ಸಿನಲ್ಲಿ ವೈರಾಗ್ಯ ಭಾವನೆಯು ಉತ್ಪನ್ನವಾಗುತ್ತದೆ. ಇಂತಹ ವಿರಕ್ತವಾದ ಮನಸ್ಸಿಗೆ ಶಿವನು ಜ್ಞಾನವನ್ನನು ಗ್ರಹಿಸುತ್ತಾನೆ. ಆಗ ಇವರ ಜೀವನವು ಜ್ಞಾನರೂಪವಾದ ಪ್ರಕಾಶದಿಂದ ತುಂಬಿ ಹೋಗುತ್ತದೆ. ಅಂತೆಯೇ ''ಕಾಶ್ಯತೇ ಪ್ರಕಾಶ್ಯತೆ ಇತಿ ಕಾಶೀ'' ಎಂಬ ವ್ಯುತ್ಪತ್ತಿಯನ್ನು ವಿದ್ವಾಂಸರು ಮಾಡಿದ್ದಾರೆ. ಉಳಿದ ಕ್ಷೇತ್ರಗಳಲ್ಲಿ ಜ್ಞಾನಪ್ರಾಪ್ತಿಗೆ ವಿಳಂಬವಾಗಬಹುದು ಆದರೆ ಕಾಶೀಕ್ಷೇತ್ರದಲ್ಲಿ ಅವಿಲಂಬವಾಗಿ ಜ್ಞಾನೋದಯವಾಗುತ್ತದೆ. ಅಂತೆಯೇ ಈ ಕ್ಷೇತ್ರಕ್ಕೆ ಕಾಶಿ ಎಂದು ಕರೆದಿದ್ದಾರೆ.

ಕಾಶಿಯು ಎರಡು ಪ್ರಕಾರವಾಗಿರುತ್ತದೆ. ಒಂದು ಬ್ರಹ್ಮಾಂಡದಲ್ಲಿರುವ ಕಾಶಿ ಇನ್ನೊಂದು ಪಿಂಡಾಂಡದಲ್ಲಿರುವ ಕಾಶಿ. ಬ್ರಹ್ಮಾಂಡದಲ್ಲಿರುವ ಕಾಶಿಯು ಉತ್ತರ ಪ್ರದೇಶದ ಉತ್ತರವಾಹಿನಿಯಾದ ಗಂಗೆಯ ತಟದಲ್ಲಿ ನೆಲೆ ನಿಂತಿದೆ. ಇಲ್ಲಿ ಗಂಗಾನದಿಯು ಉತ್ತರ ವಾಹಿನಿಯಾಗಿರೋಣದರಿಂದ ಅದಕ್ಕೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯವು ಬಂದೊದಗಿದೆ. ಸಾಮಾನ್ಯವಾಗಿ ನದಿಗಳು ಎಲ್ಲ ಉತ್ತರ ಅಥವಾ ಪಶ್ಚಿಮವಾಹಿನಿಗಳಾಗಿ ಹರಿಯುತ್ತವೆಯೋ ಅಲ್ಲಿ ಒಂದಿಲ್ಲೊಂದು ಕ್ಷೇತ್ರವು ಇದ್ದೇ ಇರುತ್ತದೆ. ಇದು ಬ್ರಹ್ಮಾಂಡದೊಳಗಿನ ಕಾಶಿಯಾದರೆ ಪ್ರತಿಯೊಬ್ಬ ವ್ಯಕ್ತಿಯ ಹೃದಯವೇ ಪಿಂಡಾಂಡದಲ್ಲಿಯ ಕಾಶಿಯು. ಕಾಶಿಯಲ್ಲಿ ವಿಶ್ವೇಶ್ವರನ ನಿತ್ಯನಿವಾಸವಿರುವಂತೆ ''ತಥಾತ್ಮನಿ ಶಿವಸ್ಥಿತಃ'' ಎಂಬ ಆಚಾರ್ಯೋಕ್ತಿಗನುಸಾರವಾಗಿ ಪ್ರತಿಯೊಬ್ಬರ ಹೃದಯದಲ್ಲಿಯೂ ಶಿವನ ನಿತ್ಯ ನಿವಾಸವಿರುತ್ತದೆ. ಈ ಹೃದಯರೂಪವಾದ ಕಾಶೀಕ್ಷೇತ್ರದಲ್ಲಿ ಉತ್ಕೃಷ್ಟ ವಿಚಾರಧಾರೆಯ ಪವಿತ್ರವಾದ ಮನಸ್ಸೇ ಉತ್ತರವಾಹಿನಿಯಾದ ಗಂಗೆಯಿದ್ದಂತೆ. ಅಂತೆಯೇ ನಿಜಗುಣ ಶಿವಯೋಗಿಗಳು ''ವಿಮಲಮಾನಸದಿಂದೆ ಶಿವತೀರ್ಥಮುಂಟೇ ?'' ಎಂಬುದಾಗಿ ಪ್ರಶ್ನಿಸಿ ಪವಿತ್ರಮನವೇ ಒಂದು ಶ್ರೇಷ್ಠವಾದ ತೀರ್ಥವೆಂಬುದಾಗಿ ನಿರ್ಣಯಿಸಿದ್ದಾರೆ. ಹೀಗೆ ಆತ್ಮಜ್ಞಾನವನ್ನು ಮಾಡಿಕೊಂಡ ವ್ಯಕ್ತಿಯ ಹೃದಯವು ಜ್ಞಾನಪ್ರಕಾಶದಿಂದ ತುಂಬಿ ಕೊಂಡಿರುವದರಿಂದ ಹೃದಯವು ಪಿಂಡಾಂಡದ ಕಾಶಿ ಎಂಬುದರಲ್ಲಿ ಯಾವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂದೇಹವೂ ಇಲ್ಲ. ಬ್ರಹ್ಮಾಂಡದ ಕಾಶಿಯು ಸ್ಥಾವರವಾದರೆ ಪಿಂಡಾಂಡದ ಕಾಶಿಯು ಜಂಗಮವಾಗಿರುತ್ತದೆ. ಅಂದರೆ ನಡೆದಾಡುವ ಕಾಶಿಯಾಗಿರುತ್ತದೆ ಎಂಬ ಭಾವವು. ಹೀಗೆ ಬ್ರಹ್ಮಾಂಡದಲ್ಲಿಯ ಕಾಶೀಯಾತ್ರೆಯನ್ನು ಮಾಡುವ ಉದ್ದೇಶವೆಂದರೆ ತನ್ನ ಪಿಂಡಾಂಡವನ್ನೇ ಕಾಶಿಯನ್ನಾಗಿ ಮಾಡಿಕೊಳ್ಳುವದಾಗಿದೆ. ಹೀಗೆ ಯಾರ ಹೃದಯದಲ್ಲಿ ಪವಿತ್ರವಾದ ವಿಚಾರಧಾರೆಗಳಿವೆಯೋ ಮತ್ತು ಯಾರ ಹೃದಯದಲ್ಲಿ ಶಿವನ ನಿತ್ಯಾನುಭೂತಿಯುಂಟಾಗುತ್ತದೆಯೋ ಅಂತಹ ಹೃದಯಸಂಪನ್ನವಾದ ಕಾಯವು ಕಾಶಿಯೂ ಅಹುದು ಕೈಲಾಸವೂ ಅಹುದು ಇದನ್ನು ತಿಳಿದೇನೇ ಶರಣರು ಕಾಯವೇ ಕೈಲಾಸವೆಂಬುದಾಗಿ ನುಡಿದಿದ್ದಾರೆ.

ಆದ್ಯ ಶಂಕರಾಚಾರ್ಯರು ಕಾಶಿಯಲ್ಲಿ ನಿವಾಸ ಮಾಡಿಕೊಂಡಿದ್ದಾಗ ದಿನಾಲೂ ಮನೆ ಮನೆಗೆ ಭಿಕ್ಷೆಗೆ ಹೋಗುತ್ತಿದ್ದರಂತೆ ಭಿಕ್ಷೆಯನ್ನು ನೀಡುವ ಪ್ರತಿಯೊಬ್ಬ ತಾಯಿಯನ್ನು ಮಾತಾ ಅನ್ನಪೂರ್ಣಾ ಎಂತಲೇ ಭಾವಿಸಿ– ''ಜ್ಞಾನವೈರಾಗ್ಯ ಸಿದ್ಧ್ಯರ್ಥಂ ಭಿಕ್ಷಾಂ ವೋ ದೇಹಿ ಪಾರ್ವತೀ !'' ಎಂಬುದಾಗಿ ಭಿಕ್ಷೆಯನ್ನು ಬೇಡುತ್ತಿದ್ದರು. ಶಂಕರಾಚಾರ್ಯರನ್ನು ಸಾಕ್ಷಾತ್ ಶಂಕರನ ಅವತಾರವೆಂದು ಪ್ರತಿಪಾದಿಸಲಾಗಿದೆ. ಇಂತಹ ಅವತಾರಿ ಪುರುಷರೂ ಸಹ ಕಾಶೀ ಕ್ಷೇತ್ರಕ್ಕೆ ಬಂದು ಜ್ಞಾನ ಹಾಗೂ ವೈರಾಗ್ಯಗಳ ಭಿಕ್ಷೆಯನ್ನು ಬೇಡಿದ್ದಾರೆಂದ ಬಳಿಕ ಪ್ರತಿಯೊಬ್ಬರು ಅವರ ಅನುಕರಣೆಯನ್ನು ಮಾಡಬೇಕು. ಕಾರಣ ಈ ಸಂದರ್ಭದಲ್ಲಿ ಕಾಶಿಗೆ ಬಂದಿರುವ ನೀವುಗಳೆಲ್ಲ ಈ ಜ್ಞಾನ–ವೈರಾಗ್ಯಗಳನ್ನು ಪಡೆದುಕೊಳ್ಳುವ ಉತ್ಕಟವಾದ ಬಯಕೆಯುಳ್ಳವರಾಗಬೇಕು. ಇಂತಹ ತೀವ್ರ ಇಚ್ಛೆಯಿದ್ದಾಗ ನಿಮ್ಮೆಲ್ಲರಿಗೂ ಅವೆರಡೂ ಅವಶ್ಯವಾಗಿ ಪ್ರಾಪ್ತವಾಗುತ್ತವೆ. ಈ ಯೋಗ್ಯತೆಯು ಬರಬೇಕಾದರೆ ಧರ್ಮಾಚಾರಣೆಯನ್ನು ಪ್ರತಿಯೊಬ್ಬರೂ ಮಾಡ ಬೇಕೆಂಬುದೇ ಪೂಜ್ಯರ ಆಶಯವಾಗಿದೆ.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಯನ್ನು ಕುರಿತು ಉಪದೇಶ ಮಾಡಿರುವ ದಿವ್ಯಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿಯು. ಈ ಗ್ರಂಥದ ಲಿಂಗ ಷಟ್‌ಸ್ಥಲಾಂತರ್ಗತವಾದ ಮಾಹೇಶ್ವರಸ್ಥಲದ ಅವಾಂತರ ಸ್ಥಲದ ಬಗ್ಗೆ ನೀವೆಲ್ಲ ಆಶೀರ್ವಚನಗಳನ್ನೂ ಆಲಿಸುತ್ತಿದ್ದೀರಿ. ನಿನ್ನೆಯ ದಿನ ಧರ್ಮಾಚಾರ ಸ್ಥಲದಲ್ಲಿ ಬರುವ ಸತ್ಯ ಅಹಿಂಸೆಗಳ ಬಗ್ಗೆ ಸಾಕಷ್ಟು ತಿಳಿದವರಾಗಿದ್ದೀರಿ. ಇಂದೂ ಸಹ ಸತ್ಯ ಹಾಗೂ ಅಸ್ತೇಯಗಳ ಬಗ್ಗೆ ಪ್ರಸ್ತಾಪಿಸಲಾಗುವದು.

ಪೂಜ್ಯರು ಉಪದೇಶಿಸಿದ ಅಹಿಂಸಾದಿ ದಶವಿಧ ಧರ್ಮಾಚರಣೆಗಳಲ್ಲಿ ಸತ್ಯವು ಎರಡನೆಯದಾಗಿರುತ್ತದೆ. ಸತ್ಯವು ಸರ್ವಶ್ರೇಷ್ಠವಾದ ಧರ್ಮವು. ಸತ್ಯವನ್ನು ಕುರಿತೇ ''ಧರ್ಮ ನಾ ದೂಸರಚಾಣೆಯೇ'' ಅಂದರೆ ಸತ್ಯಕ್ಕೆ ಸಮಾನವಾದ ಬೇರೊಂದು ಧರ್ಮವಿಲ್ಲ. ಸತ್ಯವನ್ನು ಶೋಧಿಸುವದಕ್ಕಾಗಿಯೇ ಮನುಷ್ಯ ಜನ್ಮವು ಪ್ರಾಪ್ತವಾಗಿರುತ್ತದೆ. ಈ ಪೂರ್ವದಲ್ಲಿ ಹೇಳಿದಂತೆ ಸತ್ಯವೆಂದರೆ ಸಾಕ್ಷಾತ್ ಶಿವನೇ ಎಂದರ್ಥ. ಇಂತಹ ಸತ್ಯ ಸಂಶೋಧನೆಗಾಗಿ ಹೊರಟಿರುವ ಜೀವಾತ್ಮನನ್ನು ಕುರಿತು ಉಪನಿಷತ್ತುಗಳು– 'ಹಿರಣ್ಮಯೇನ ಪಾತ್ರೇನ ಸತ್ಯಸ್ಯಾಪಿಹಿತಂ ಮುಖಮ್' ಎಂಬುದಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಪದೇಶಿಸಿವೆ. ಸತ್ಯಸಂಶೋಧನೆಗಾಗಿ ಹೊರಟಿರುವ ಎಲೈ ಮಾನವನೇ ! ಶಿವನು ಆ ಸತ್ಯವನ್ನು ಬಂಗಾರದ ಪಾತ್ರೆಯೊಳಗೆ ಬಂಗಾರದ ಮುಚ್ಚಳದಿಂದ ಮುಚ್ಚಿ ಇಟ್ಟಿದ್ದಾನೆ. ಅದರ ಮೇಲಿನ ಮುಚ್ಚಳವನ್ನು ಎತ್ತಿ ಒಳಗಿನ ಸತ್ಯವನ್ನು ತಿಳಿದುಕೋ'' ಎಂಬುದೇ ಆ ಉಪನಿಷದ್ ಮಂತ್ರದ ಮಥಿತಾರ್ಥವಾಗಿದೆ.

ಈ ಸತ್ಯಶೋಧನೆಗಾಗಿ ಬಂದ ಮನುಷ್ಯನು ಬಂಗಾರದ ಪಾತ್ರೆಯೊಳಗಿರುವ ಸತ್ಯವನ್ನರಿಯದೆ ಆ ಪಾತ್ರೆಗೇನೇಮೋಹಿತನಾಗಿ ಹೋಗಿದ್ದಾನೆ. ಇಲ್ಲಿ ಬಂಗಾರದ ಪಾತ್ರೆಯೆಂದರೆ ಈ ಸ್ಥೂಲದೇಹವೇ ! ಇಲ್ಲಿ ಜನ್ಮತಾಳಿದ ಪ್ರತಿಯೊಬ್ಬ ಮನುಷ್ಯನು ದೇಹದೊಳಗಿನ ಸತ್ಯವನ್ನರಿಯಲು ಪ್ರಯತ್ನಿಸದೆ ದೇಹದ ಲಾಲನೆ-ಪಾಲನೆ ಹಾಗೂ ಅದರಿಂದ ಸುಖೋಪಭೋಗವನ್ನು ಪಡೆಯುವ ವಿಚಾರದಲ್ಲಿಯೇ ಸದಾ ನಿಮಗ್ನನಾಗಿರುತ್ತಾನೆ. ಇದೇ ವ್ಯವಹಾರದಲ್ಲಿಯೇ ತನಗೆ ದೊರೆತ ನೂರು ವರ್ಷಗಳ ಆಯುಷ್ಯವನ್ನು ಹಾಳು ಮಾಡಿಕೊಂಡು ಕೊನೆಗೆ ಸತ್ಯವನ್ನು ಕಾಣದೆ ಅಸತ್ಯವನ್ನೇ ಮೋಹಿಸಿ ಜನನ-ಮರಣಾತ್ಮಕವಾದ ಚಕ್ರದಲ್ಲಿ ಸಿಲುಕಿಕೊಳ್ಳುತ್ತಾನೆ.

ಸತ್ಯದ ಪ್ರಾಪ್ತಿಯು ಸಹಜವಾಗಿಯಾಗುವದಿಲ್ಲ ಅದಕ್ಕಾಗಿ ಹಗಲಿರುಳು ಪ್ರಯತ್ನಿಸಬೇಕು. ''ನಾಯಮಾತ್ಮಾ ಬಲಹೀನೇನ ಲಭ್ಯಃ'' ಎಂಬ ಉಪನಿಷದ್ವಾಕ್ಯದಲ್ಲಿ ಬಲಶಾಲಿಯು ಮಾತ್ರ ಸತ್ಯರೂಪನಾದ ಆತ್ಮನನ್ನು ಅರಿಯಲು ಸಾಧ್ಯ. ಆದರೆ ಬಲಹೀನನಿಗೆ ಅದೆಂದೂ ದೊರಕದು ಎಂಬುದಾಗಿ ಉಪದೇಶಿಸಲಾಗಿದೆ. ಇಲ್ಲಿಯ ಬಲವೆಂದರೆ ಶಾರೀರಿಕವಾದುದಲ್ಲ ಇಲ್ಲಿ ಬೇಕಾದುದು ಮನೋಬಲ. ಚಂಚಲವಾದ ಮನಸ್ಸುಳ್ಳ ವ್ಯಕ್ತಿಯು ಅದೆಂದಿಗೂ ಆತ್ಮಜ್ಞಾನವನ್ನು ಪಡೆಯಲಾರ. ಮನಸ್ಸು ಸ್ಥಿರವಾಗಿದ್ದು ದೃಢಸಂಕಲ್ಪದಿಂದ ಕೂಡಿಕೊಂಡಿದ್ದರೆ ಅದು ಏನೆಲ್ಲವನ್ನು ಸಾಧಿಸಬಹುದು. ಪ್ರಕೃತದಲ್ಲಿ ಸತ್ಯರೂಪನಾದ ಪರಮಾತ್ಮನನ್ನು ಅರಿಯಲು ಮನುಷ್ಯನು ಸತ್ಯಸಂಧನಾಗಬೇಕು ಅರ್ಥಾತ್ ಸತ್ಯದ ಪ್ರಾಪ್ತಿಗಾಗಿ ಸತ್ಯವನ್ನೇ ನುಡಿಯಬೇಕೆಂದರ್ಥ. ಸಂಪೂರ್ಣವಾಗಿ ಸತ್ಯಮಾತನಾಡದ ವ್ಯಕ್ತಿಗೆ ಸತ್ಯಸ್ವರೂಪನಾದ ಭಗವಂತನ ಪ್ರಾಪ್ತಿಯಾಗಲು ಸಾಧ್ಯವಿಲ್ಲ ಅಂತೆಯೇ ಪೂಜ್ಯರು ಸತ್ಯ ನುಡಿಯುವದು ಒಂದು ಧರ್ಮಾಚರಣೆಯೆಂಬುದಾಗಿ ಉಪದೇಶಿಸಿದ್ದಾರೆ.

ಪೂರ್ವೋಕ್ತಗಳಾದ ದಶವಿಧ ಧರ್ಮಗಳಲ್ಲಿ ಮೂರನೆಯದಾದ ಧರ್ಮಾಚರಣೆಯೇ ಅಸ್ತೇಯವು. ''ಸ್ತೇಯಂ ಪರಸ್ವಾಪಹರಣಂ ತದಭಾವೋಽಸ್ತೇಯಮ್'' ಎಂಬ ಭೋಜದೇವನ ಯೋಗ ಸೂತ್ರವೃತ್ತಿಯಲ್ಲಿ ಅಸ್ತೇಯದ ಲಕ್ಷಣವು ಪ್ರತಿಪಾದಿಸಲ್ಪಟ್ಟದೆ. ಮತ್ತೊಬ್ಬರ ದ್ರವ್ಯವನ್ನು ಅಪಹರಿಸುವದು ಸ್ತೇಯವೆಂಬುದಾಗಿ ಕರೆಯಲ್ಪಡುತ್ತದೆ. ಅದಿಲ್ಲದಿರುವಿಕೆಯೇ ''ಅಸ್ತೇಯವು' ಅಂದರೆ ಅನ್ಯರ ಧನಾದಿಗಳನ್ನು ಅಪಹರಿಸದಿರುವದೇ ಅಸ್ತೇಯವೆಂಬುದಾಗಿ ತಿಳಿದುಕೊಳ್ಳಬೇಕು. ಪರರ ದ್ರವ್ಯವನ್ನು ಕಳ್ಳತನದಿಂದಾಗಲೀ ಬಲಾತ್ಕಾರವಾಗಿಯೇ ಆಗಲಿ ಅಪಹರಿಸುವದು ಸ್ತೇಯವು. ಅದಿಲ್ಲದಿರುವದೇ ಅಸ್ತೇಯರೂಪವಾದ ಧರ್ಮವೆಂಬುದಾಗಿ 'ಈಶ್ವರಗೀತೆ'ಯಲ್ಲಿ ನಿರೂಪಿಸಲಾಗಿದೆ. ''ತೇನ ತ್ಯಕ್ತೇನ ಭುಂಜಿಥಾಃ ಮಾ ಗೃಧಃ ಕಸ್ಯಸ್ವಿದ್ಧನಮ್ಃ'' ಎಂಬ ಈಶಾವಾಸ್ಯೋಪನಿಷತ್ತಿನಲ್ಲಿ ನಿನ್ನಲ್ಲಿರುವ ಸಂಪತ್ತನ್ನು ನೀನು ದಾನಮಾಡಬಹುದೇ ವಿನಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನ್ಯರ ಸಂಪತ್ತನ್ನು ಎಂದೂ ಅಪಹರಿಸಬಾರದೆಂಬುದಾಗಿ ಉಪದೇಶಿಸಲಾಗಿದೆ. ಚೌರ್ಯವೃತ್ತಿಯು ಮನುಷ್ಯನ ನಿರ್ಭೀಕತೆಯನ್ನೂ ಹಾಳುಮಾಡುತ್ತದೆ. ಎಂತಹ ಧೈರ್ಯಶಾಲಿಯೇ ಇದ್ದರೂ ಅನ್ಯರ ಮನೆಯಲ್ಲಿ ಕಳ್ಳತನಮಾಡುವಾಗ ಆ ಮನೆಯಲ್ಲಿಯ ಚಿಕ್ಕಮಗುವೊಂದು ಚೀತ್ಕರಿಸಿದರೂ ಭಯಭೀತನಾಗಿ ಅವನು ಓಡಿಹೋಗುತ್ತಾನೆ. ಅಂದ ಹಾಗೆ ಈ ಚೌರ್ಯವೃತ್ತಿಯು ಮನುಷ್ಯನ ಧೈರ್ಯವನ್ನು ಹಾಳು ಮಾಡುತ್ತದೆ.

ಕಳ್ಳತನದಿಂದ ಸಂಪಾದಿಸಿದ್ದೆಲ್ಲವೂ ಅಧರ್ಮದ ಸಂಪಾದನೆಯು ಅಸತ್ಯವನ್ನು ನುಡಿದು ಮತ್ತು ಮತ್ತೊಬ್ಬರನ್ನು ವಂಚಿಸಿ ಧನವನ್ನೇನೋ ವಾಮಮಾರ್ಗದಿಂದ ಸಂಪಾದಿಸಬಹುದು ಆದರೆ ಇಲ್ಲಿ ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ ಪ್ರತಿಯೊಬ್ಬ ಮನುಷ್ಯನು ಸುಖ–ಶಾಂತಿ ಮತ್ತು ಸಮಾಧಾನವನ್ನು ಪಡೆಯಲೋಸುಗವಾಗಿಯೇ ಧನವನ್ನು ಸಂಪಾದಿಸುತ್ತಿರುತ್ತಾನೆ. ಪರರನ್ನೂ ಪೀಡಿಸಿ ಅವರಲ್ಲಿಯ ದ್ರವ್ಯವನ್ನು ಅಪಹರಿಸಿ ತಾನು ಈ ಧನದಿಂದ ಸುಖಿಯಾಗಬೇಕೆಂದರೆ ಅದೆಂದಿಗೂ ಸಾಧ್ಯವಿಲ್ಲ. ಅಂತೆಯೇ ಜಗತ್ತಿನಲ್ಲಿಯ ಧನಿಕರೆಲ್ಲರೂ ಸುಖಿಗಳಾಗಿರುವದಿಲ್ಲ ಧನವು ಸುಖದ ಸಾಧನವಾಗಿದ್ದರೂ ಅದು ಧರ್ಮಮಾರ್ಗದಿಂದ ಬಂದಾಗಲೇನೇ ಸುಖಕೊಟ್ಟಿತೇ ವಿನಃ ಅಧರ್ಮ ಮಾರ್ಗದಿಂದ ಬಂದದ್ದು ಸುಖವನ್ನು ಕೊಡಲಾಗದು. ಹೀಗೆ ದುಃಖವನ್ನೇ ಕೊಡುವ ಆ ಧನದಿಂದಲಾದರೂ ಏನು ಪ್ರಯೋಜನ ?

ಧನಕ್ಕೆ ಲಕ್ಷ್ಮಿಯೆಂಬುದೊಂದು ಪರ್ಯಾಯ ನಾಮ. ಇದು ಮೂರು ಪ್ರಕಾರವಾಗಿರುತ್ತದೆ. ಅಲಕ್ಷ್ಮೀ, ಲಕ್ಷ್ಮೀ ಮತ್ತು ಮಹಾಲಕ್ಷ್ಮೀ ಇವೇ ಆ ಮೂರು ಪ್ರಕಾರಗಳು. ಅನ್ಯಾಯ ಮತ್ತು ಅಸತ್ಯ ಮಾರ್ಗದಿಂದ ಸಂಪಾದಿಸಿದ ಧನಕ್ಕೆ ಅಲಕ್ಷ್ಮೀ ಎನ್ನುವರು. ಧರ್ಮ ಅಧರ್ಮಮಾರ್ಗಗಳೆರಡರಿಂದಲೂ ಸಂಪಾದಿತವಾದ ಧನಕ್ಕೆ ಲಕ್ಷ್ಮೀ ಎಂಬ ಹೆಸರು. ಇನ್ನು ಕೇವಲ ಧರ್ಮಮಾರ್ಗದಿಂದಲೇ ಸಂಗ್ರಹಿಸಿದ ಧನಕ್ಕೆ ಮಹಾಲಕ್ಷ್ಮೀ ಎಂದು ಕರೆಯುತ್ತಾರೆ. ಈ ಮೂರುವಿಧವಾದ ಲಕ್ಷ್ಮೀಯರಲ್ಲಿ ಮಹಾಲಕ್ಷ್ಮೀಯೇ ಸರ್ವಶ್ರೇಷ್ಠವಾದುದು. ಎಷ್ಟು ಪ್ರಮಾಣದ ಧನವು ಯಾವ ಮಾರ್ಗದಿಂದ ಬರುತ್ತದೆಯೋ ಅಷ್ಟು ಪ್ರಮಾಣದ ಧನವು ಅದೇ ಮಾರ್ಗದಲ್ಲಿಯೇ ವ್ಯಯವಾಗಿ ಹೋಗುತ್ತದೆ. ಕೇವಲ ಅನ್ಯಾಯಮಾರ್ಗದಿಂದ ಸಂಪಾದಿಸಲ್ಪಟ್ಟ ಅಲಕ್ಷ್ಮೀಯು ದುರ್ವ್ಯವಹಾರಕ್ಕಾಗಿಯೇ ವ್ಯಯವಾಗುತ್ತದೆ. ಇದೇ ವಿಷಯವನ್ನೇ ಬಸವಣ್ಣನವರು–

ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೆ
ಸತ್‌ಪಾತ್ರಕ್ಕೆ ಸಲ್ಲದಯ್ಯಾ !
ನಾಯ ಹಾಲು ನಾಯಿಗಲ್ಲದೆ
ಪಂಚಾಮೃತಕ್ಕೆ ಸಲ್ಲದಯ್ಯಾ !
ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ
ಅರ್ಥ ವ್ಯರ್ಥ ಕಂಡಯ್ಯಾ !

ಎಂಬ ತಮ್ಮ ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ. ಓರ್ವ ಸುಭಾಷಿತಕಾರನು ಅನ್ಯಾಯದ ಧನವನ್ನು ಕುರಿತು–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನ್ಯಾಯೋಪಾರ್ಜಿತಂ ದ್ರವ್ಯಂದಶವರ್ಷಾಣಿ ತಿಷ್ಠತಿ !
ಪ್ರಾಪ್ತೇತ್ವೇಕಾದಶೇಯವರ್ಷೇ ಸಮೂಲಂ ವಿನಶ್ಯತಿ ||

ಹೀಗೆ ವಿವರಿಸಿದ್ದನ್ನು ಸಹ ಕಾಣುತ್ತೇವೆ. ತಾತ್ಪರ್ಯವೇನೆಂದರೆ ಅನ್ಯಾಯದಿಂದ ಸಂಪಾದಿತವಾದ ಹಣವು ಹತ್ತು ವರ್ಷಗಳವರೆಗೆ ಮಾತ್ರ ಇದ್ದು ಕೊನೆಗೆ ಸರ್ವವೆಲ್ಲವೂ ನಷ್ಟವಾಗಿ ಹೋಗುತ್ತದೆ. ಅನುಭವಿಕರ ಈ ಎಲ್ಲ ನುಡಿಗಳನ್ನು ಪರ್ಯಾಲೋಚಿಸಲಾಗಿ ಅನ್ಯಾಯದ ಧನವಾದ ಅಲಕ್ಷ್ಮೀಯು ಸುಖಕ್ಕಿಂತಲೂ ದುಃಖವನ್ನೇ ತಂದೊಡ್ಡು ತ್ತಾಳೆಂಬುದು ತಿಳಿದು ಬರುತ್ತದೆ. ಇನ್ನು ಧರ್ಮ ಅಧರ್ಮ ಮಾರ್ಗಗಳಿಂದ ಬಂದ ಲಕ್ಷ್ಮೀಯು ದೂದಕಾ ದೂಧ ಪಾನಿ ಕಾ ಪಾನಿ '' ಎಂಬ ಉಕ್ತಿಗನುಸಾರವಾಗಿ ಧರ್ಮ ಮತ್ತು ಅಧರ್ಮ ಮಾರ್ಗಗಳೆರಡರಲ್ಲಿಯೂ ಅದು ವ್ಯಯವಾಗುತ್ತದೆ.

ಒಂದು ಹಳ್ಳಿಯಲ್ಲಿ ಓರ್ವ ಮುದುಕಿಯು ಹೊಸದಾಗಿ ಎಮ್ಮೆಯನ್ನು ಕೊಂಡು ತಂದು ಹಾಲುಮಾರುವ ಉದ್ಯೋಗವನ್ನು ಪ್ರಾರಂಭಿಸಿದಳು. ತನ್ನ ಹಳ್ಳಿಯಿಂದ ಪಟ್ಟಣಕ್ಕೆ ಹೋಗುವ ದಾರಿಯಲ್ಲಿ ಒಂದು ಹೊಳೆ ಹರಿಯುತ್ತಿತ್ತು. ಆ ವೃದ್ಧೆಯು ದಿನಾಲೂ ಆ ಹೊಳೆಯ ದಂಡೆಯಲ್ಲಿ ಕುಳಿತು ತಾನು ಮಾರಲು ಒಯ್ಯಲಿರುವ ಹಾಲಿನಲ್ಲಿ ಅರ್ಧ ನೀರನ್ನು ಬೆರೆಸಿ ತೆಗೆದುಕೊಂಡು ಹೋಗುತ್ತಿದ್ದಳು. ಹೀಗೆ ಒಂದು ತಿಂಗಳ ಪರ್ಯಂತರವಾಗಿ ಹಾಲನ್ನು ಮಾರಿ ಕೊನೆಯ ದಿನ ತನ್ನ ಎಲ್ಲ ಗ್ರಾಹಕರಿಂದ ಹಾಲಿನ ಹಣವನ್ನು ಸಂಗ್ರಹಿಸಿಕೊಂಡು, ಮರಳಿ ಮನೆಗೆ ಹೋಗುವಾಗ ಆ ನದಿಯ ದಡದಲ್ಲಿರುವ ಗಿಡದ ಕೆಳಗೆ ವಿಶ್ರಾಂತಿಗಾಗಿ ಒಂದಿಷ್ಟು ಒರಗಿದಳು. ಆಗ ಅವಳಿಗೆ ತತ್‌ಕ್ಷಣದಲ್ಲಿಯೇ ನಿದ್ರೆ ಆವರಿಸಿತು. ಅವಳ ತಲೆಯ ಹತ್ತಿರ ಹಾಲಿನ ಗಡಿಗೆಯಲ್ಲಿ ಹಾಲು ಮಾರಿದ ಹಣವನ್ನು ಇಟ್ಟುಕೊಂಡಿದ್ದಳು. ಗಿಡದ ಮೇಲೆ ಕುಳಿತುಕೊಂಡಿರುವ ಒಂದು ಮಂಗವು ಸಾವಕಾಶವಾಗಿ ಇಳಿದಬಂದು ಆ ಗಡಿಗೆಯನ್ನು ತೆಗೆದುಕೊಂಡು ಹೋಗಿ ಗಿಡದ ಮೇಲೆ ಕುಳಿತಿತು. ಹಾಗೂ ಗಡಿಗೆಯಲ್ಲಿ ಕೈ ಹಾಕಿ ಕೈಗೆ ದೊರೆತ ಆ ರೂಪಾಯಿ ನಾಣ್ಯಗಳಲ್ಲಿ ಒಂದನ್ನು ನದಿಯಲ್ಲಿ ಚೆಲ್ಲಿದರೆ ಇನ್ನೊಂದನ್ನು ಗಿಡದ ಕೆಳಗಿರುವ ಬಂಡೆಗಲ್ಲಿನ ಮೇಲೆ ಒಗೆಯುತ್ತಿತ್ತು. ಹೀಗೆ ಒಗೆಯುತ್ತಿರುವಾಗ ರೂಪಾಯಿಯು ನೀರಲ್ಲಿ ಬಿದ್ದಾಗ ಗುಳುಮ್'' ಎಂಬ ಧ್ವನಿಯು ಕಲ್ಲಿನ ಮೇಲೆ ಬಿದ್ದಾಗ ''ಝುಣ್'' ಎಂಬ ಧ್ವನಿಯು ಇಂಪಾಗಿ ಕೇಳತೊಡಗಿತು. ಆಗ ಆ ಮಂಗವು ಆ ರೂಪಾಯಿಗಳು ಮುಗಿಯುವವರೆಗೆ ಆ ಶಬ್ದಾನಂದವನ್ನು ಅನುಭವಿಸುತ್ತ ಕೆಳಕ್ಕೆ ಎಸೆಯುತ್ತಲೇ ಇತ್ತು. ಈ ವ್ಯವಹಾರವು ನಡೆದಾಗ ಆ ಮುದುಕಿಯು ಎಚ್ಚರವಾಗಿ ಗಾಬರಿಗೊಂಡು ನೋಡುತ್ತಿದ್ದಳು. ಎಲ್ಲ ಹಣ ಮುಗಿದೊಡನೆ ಬರಿದಾದ ಗಡಗಿಯನ್ನು ಕಳಗೆ ಎಸೆದು ಓಡಿ ಹೋಯಿತು. ಗಿಡದಕೆಳಗಿರುವ ಆ ಮುದಿಕೆಯು ಅಲ್ಲಿ ಬಿದ್ದಿರುವ ರೂಪಾಯಿಗಳನ್ನು ಸಂಗ್ರಹಿಸಿಕೊಂಡು ಎಣಿಸಲಾಗಿ ತಾನು ತಂದದರಲ್ಲಿ ಅರ್ಧ ಮಾತ್ರ ಹಣ ಆಕೆಗೆ ದೊರೆಯಿತು. ಮಂಗವು ಮಾಡಿದ ಈ ನ್ಯಾಯವನ್ನು ನೋಡಿ ಓಹೋ ! ನೀರಿನ ಹಣ ನೀರಿಗೆ ಹೋಯಿತು. ಹಾಲಿನ ಹಣ ಮಾತ್ರ ನನಗೆ ದೊರೆಯಿತು. ಇನ್ನು ಮೇಲೆ ಇಂತಹ ಉದ್ಯೋಗವನ್ನೆಂದೂ ಮಾಡಬಾರದೆಂಬ ಪಶ್ಚಾತ್ತಾಪವು ಅವಳಿಗೆ ಆಯಿತು. ಹೀಗೆ ಧರ್ಮಾ- ಧರ್ಮಗಳಿಂದ ಬಂದ ಲಕ್ಷ್ಮೀಯು ಪುನಃ ಅದೇ ಮಾರ್ಗಗಳಲ್ಲಿ ವ್ಯಯವಾಗಿ ಹೋಗುತ್ತಾಳೆಂಬುದು ತಿಳಿದುಬರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇನ್ನು ಕೇವಲ ಧರ್ಮಮಾರ್ಗದಿಂದ ಸಂಗ್ರಹೀತವಾದ ಹಣಕ್ಕೆ ಮಹಾಲಕ್ಷ್ಮೀ ಎನ್ನುವರು, ವ್ಯಾಪಾರಿಗಳ ದೀಪಾವಳಿಯೆಂದು ಮಹಾಲಕ್ಷ್ಮೀ ಹಾಗೂ ಮಹಾ ಸರಸ್ವತಿಯರನ್ನು ಪೂಜೆಮಾಡುವ ಪರಂಪರೆಯು ರೂಢಿಯಲ್ಲಿದೆ. ಮಹಾಲಕ್ಷ್ಮೀಯನ್ನು ಸಂಪಾದಿಸಬೇಕಾದರೆ ವ್ಯಾಪಾರಿಗಳು ಮೊದಲು ಲಾಭಭಾವನೆಯನ್ನು ತಾಳಬೇಕು. ಶುಭಭಾವನೆಯನ್ನು ತಾಳಬೇಕಾಗುತ್ತದೆ. ಅಂತೆಯೇ ಅವರು ತಮ್ಮ ಖತಾವಣೆಯಲ್ಲಿ ಮಧ್ಯದಲ್ಲಿ ಸ್ವಸ್ತಿಕವನ್ನು ಬರೆದು ಎಡಕ್ಕೆ ಶುಭವೆಂತಲೂ ಬಲಕ್ಕೆ ಲಾಭವೆಂತಲೂ ಬರೆಯುತ್ತಾರೆ. ಈ ಸ್ವಸ್ತಿಕ ಹಾಗೂ ಶುಭಲಾಭಗಳನ್ನು ಗೋಡೆಯ ಮೇಲೆ ಹಾಗೂ ತಾವು ಆನಿಸಿ ಕೂಡ್ರುವ ತಲೆದಿಂಬುಗಳ ಮೇಲೆ ಬರೆಯುತ್ತಾರೆ. ಪೂಜಾ ಕಾಲದಲ್ಲಿ ಮೊದಲು ಶುಭವೆಂದು ಬರೆದಿದ್ದರೂ ಮಾರಾಟಕ್ಕಾಗಿ ಪದಾರ್ಥಗಳನ್ನು ಅಳತೆ ಮಾಡುವಾಗ ಮೊದಲನೇ ಅಳತೆಗೆ ಶುಭವೆಂದು ಕರೆಯಬೇಕಾಗಿದ್ದರೂ ಅವರು ಅದನ್ನು ಬಿಟ್ಟು ಲಾಭವೆಂದೇ ಪ್ರಾರಂಭಿಸುತ್ತಾರೆ. ಯಾರ ಮನಸ್ಸಿನಲ್ಲಿ ಮೊದಲು ಲಾಭಭಾವನೆಯು ಬರುತ್ತದೆಯೋ ಅವರು ಮುಂದೆ ಲೋಭಾಕ್ರಾಂತರಾಗಿ ಶುಭವನ್ನೇ ಮರೆತು, ಲಾಭ-ಲೋಭಗಳ ಜಾಲದಲ್ಲಿ ಸಿಲುಕಿಕೊಂಡು ಮಹಾಕ್ಷ್ಮೀಯನ್ನು ಪಡೆಯದೆ ಲಕ್ಷ್ಮೀಯನ್ನೋ ಅಲಕ್ಷ್ಮೀಯನ್ನೋ ಸಂಪಾದಿಸಿಕೊಂಡು ಅದಕ್ಕೆ ತಕ್ಕಂತೆ ಸುಖದುಃಖ ಗಳನ್ನು ಅನುಭವಿಸುತ್ತಲಿರುತ್ತಾರೆ. ಆದ್ದರಿಂದ ಈ ಜಗತ್ತಿನಲ್ಲಿ ಲಕ್ಷ್ಮೀ, ಅಲಕ್ಷ್ಮೀಯ, ಭಕ್ತರು ಸಿಗುವರಲ್ಲದೆ ಮಹಾಲಕ್ಷ್ಮೀಯ ಭಕ್ತರು ಕ್ವಚಿತ್ತಾಗಿ ದೊರೆಯುವದುಂಟು.

ಮನುಷ್ಯನ ಮನಸ್ಸಿನಲ್ಲಿ ಯಾವಾಗ ಲೋಭಗುಣವು ಪ್ರಾಬಲ್ಯವನ್ನು ತಾಳುವದೋ ಆಗ ಅದು ಮನಸ್ಸಿನಲ್ಲಿ ಚೌರ್ಯಗುಣವನ್ನು ಹುಟ್ಟಿಸುತ್ತದೆ. ಚೌರ್ಯ ವೆಂದರೆ ಮತ್ತೊಬ್ಬರ ವಸ್ತುವನ್ನು ಅಪಹರಿಸುವದಷ್ಟೇ ಅಲ್ಲ ತಾನೇ ಅನ್ಯರಿಗೆ ಕೊಟ್ಟ ವಸ್ತುವನ್ನು ಪುನಃ ತೆಗೆದುಕೊಂಡರೆ ಅದೂ ಸಹ ಚೌರ್ಯವೆಂದೇ ಕರೆಯಲ್ಪಡುತ್ತವೆ. ರಾಮಾಯಣದಲ್ಲಿಯ ಒಂದು ಪ್ರಸಂಗವು ಇದನ್ನು ಸುಸ್ಪಷ್ಟ ಗೊಳಿಸುತ್ತದೆ. ರಾವಣನ ವಧೆಯನ್ನು ಮಾಡಿ ಲಂಕೆಯ ಮೇಲೆ ವಿಜಯವನ್ನು ಸಂಪಾದಿಸಿದ ನಂತರ ರಾಮ, ಲಕ್ಷ್ಮಣ ಮತ್ತು ಅವರ ವಾನರ ಸೇನೆ ಇವರೆಲ್ಲರೂ ಅಯ್ಯೋಧ್ಯೆಗೆ ಮರಳಿ ಹೋಗುವ ನಿಮಿತ್ತದಲ್ಲಿ ಲಂಕೆಯಿಂದ ಹೊರಬಂದು ಸಮುದ್ರದ ದಂಡೆಯ ಮೇಲೆ ಸ್ವಲ್ಪ ಸಮಯ ವಿಶ್ರಾಂತಿಗಾಗಿ ಕುಳಿತಿದ್ದರು. ಆಗ ಅಲ್ಲಿರುವ ವಾನರ ಸೇನೆಯು ತಮ್ಮ ತಮ್ಮೊಳಗೆ ವಿಚಾರ-ವಿಮರ್ಶೆ ಮಾಡುತ್ತಿರುವಾಗ ಒಂದು ವಾನರು ''ನಾವೆಲ್ಲ ಲಂಕೆಯ ಮೇಲೆ ವಿಜಯವನ್ನು ಸಂಪಾದಿಸಿ ಅಯೋಧ್ಯೆಗೆ ಮರಳುತ್ತಿದ್ದೇವೆ ಆದರೆ ಬರಿಗೈಯ್ಯಿಯಿಂದ ಅಯೋಧ್ಯೆಗೆ ಹೋಗುವದು ಅಷ್ಟೊಂದು ಸಮಂಜಸವಲ್ಲ. ಇಲ್ಲಿರುವ ಯಾವದಾದ ರೊಂದು ಬೆಲೆ ಬಾಳುವ ವಸ್ತುವನ್ನು ವಿಜಯದ ಸಂಕೇತವಾಗಿ ತೆಗೆದುಕೊಂಡು ಹೋದರೆ ಕಾಲಕಾಲಕ್ಕೆ ಈ ವಿಜಯೋತ್ಸವದ ಸ್ಮರಣೆಯು ಎಲ್ಲರಿಗೂ ಆಗುತ್ತಲಿರುವದು'' ಎಂಬುದಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿತು. ಆಗ ಅಲ್ಲಿರುವ ವಾನರಗಳೆಲ್ಲ ಹನುಮಂತನ ಕಡೆಗೆ ಕೈಮಾಡಿ ಈತನು ಲಂಕೆಯ ಒಳ-ಹೊರಗೆಲ್ಲ ಸಂಚರಿಸಿದ್ದಾನೆ ಇಲ್ಲಿರುವ ಅತೀ ಬೆಲೆಬಾಳುವ ವಸ್ತುಯಾವದೆಂಬುದು ಇವನಿಗೇನೇ ಗುರುತು. ಕಾರಣ ಈತನು ಹೇಳಿದ್ದನ್ನು ತೆಗೆದುಕೊಂಡು ಹೋಗೋಣ ಎಂಬುದಾಗಿ ಎಲ್ಲ ವಾನರಗಳು ನಿರ್ಣಯಿಸಿ ಹನುಮಂತನ ಮೇಲೆ ಅದರ ಹೊಣೆಗಾರಿಕೆಯನ್ನು ಹೊರಿಸಿದರು. ಆಗ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹನುಮಂತನು ನನ್ನ ದೃಷ್ಟಿಯಲ್ಲಿ ಲಂಕೆಯಲ್ಲಿರುವ ವಸ್ತುಗಳಲ್ಲಿ ಅತಿ ಬೆಲೆಬಾಳುವ ವಸ್ತುವೆಂದರೆ ಲಂಕಾಧಿಪತಿಯ ರತ್ನ ಖಚಿತ ಸಿಂಹಾಸನವು, ಆಗ ಎಲ್ಲ ವಾನರಗಳು ಆ ಸಿಂಹಾಸನವನ್ನು ತೆಗೆದುಕೊಂಡು ಬರುವಂತೆ ಆಗ್ರಹ ಮಾಡಿದವು. ವಾನರಗಳ ಈ ಸಂವಾದವನ್ನು ಆಲಿಸುತ್ತ ಸಮೀಪದಲ್ಲಿಯೇ ಕುಳಿತಿರುವ ರಾಮ ಲಕ್ಷ್ಮಣರು ಇವರ ಮಾತಿನೊಂದಿಗೆ ಯಾವ ಮಾತನ್ನೂ ಬೆರೆಸದೆ ಸುಮ್ಮನೆ ಕುಳಿತುಕೊಂಡಿದ್ದರು. ಇವರು ಮೌನವಾಗಿ ಕುಳಿತಿದ್ದನ್ನು ಕಂಡು ಇವರ ಸಮ್ಮತಿಯು ಇರವುದಾಗಿ ನಿರ್ಣಯಿಸಿದ ಹನುಮಂತನು ಲಂಕೆಯತ್ತ ಹೊರಟನು. ದಾರಿಯಲ್ಲಿ ಜಾಂಬವಂತನ ಭೆಟ್ಟಿಯಾಯಿತು. ಆಗ ಆ ಜಾಂಬವಂತನು ''ಎಲ್ಲಿ ಹೊರಟಿರುವೆ ?'' ಎಂಬುದಾಗಿ ಹನುಮಂತನನ್ನು ಪ್ರಶ್ನಿಸಿದನು. ಆಗ ಆತನು ನಡೆದ ಪ್ರಸಂಗವನ್ನೆಲ್ಲ ವಿವರಿಸಿ ಹೇಳಿದನು. ವಯೋ ವೃದ್ಧನೂ ಜ್ಞಾನವೃದ್ಧನೂ ಆದ ಜಾಂಬವಂತನು ಹನುಮಂತನನ್ನುದ್ದೇಶಿಸಿ ನೀನು ಹೊರಟ ಕಾರ್ಯಕ್ಕೆ ಪ್ರಭು ರಾಮಚಂದ್ರನ ಅನುಮತಿ ಇದೆ ಏನು ? ಎಂಬುದಾಗಿ ಪ್ರಶ್ನಿಸಿದನು. ಆಗ ಹನುಮಂತನು ಈ ವಿಷಯದಲ್ಲಿ ನಾವು ಚರ್ಚಿಸುವಾಗ ಹಾಗೂ ನಿರ್ಣಯವನ್ನು ತೆಗೆದುಕೊಂಡು ಲಂಕೆಯತ್ತ ಹೊರಟಾಗ ರಾಮನಾಗಲಿ ಲಕ್ಷ್ಮಣನಾಗಲಿ ನಮಗೆ ಯಾವ ಪ್ರತಿಕ್ರಿಯೆಯನ್ನು ತೋರಿಸದೆ ಸುಮ್ಮನೆ ಕುಳಿತುಕೊಂಡಿದ್ದರು 'ಮೌನಂ ಸಮ್ಮತಿ ಲಕ್ಷಣಮ್' ಎಂಬ ಉಕ್ತಿಗನುಸಾರವಾಗಿ ಅವರು ಸುಮ್ಮನೆ ಕುಳಿತದ್ದೇ ಅವರ ಸಮ್ಮತಿಯೆಂಬುದಾಗಿ ತಿಳಿದು ನಾನು ಹೊರಟ್ಟಿದೇನೆ ಎಂಬುದಾಗಿ ಹನುಮಂತನು ಹೇಳಿದನು. ಆಗ ಜಾಂಬುವಂತನು ನಕ್ಕು ಹೇಳಿದ್ದೇನೆಂದರೆ ಕೆಲವೊಂದು ವಿಚಾರಗಳಲ್ಲಿ ಪ್ರಭುವಿನ ಸ್ಪಷ್ಟವಾದ ಆಜ್ಞೆಯನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಮರಳಿ ನಡೆ ಎಂಬುದಾಗಿ ಹೇಳಿ ಹನುಮಂತನನ್ನು ಮರಳಿ ಕರೆದುಕೊಂಡು ಬಂದನು.

ಆಗ ಇಬ್ಬರೂ ರಾಮನೆಡೆಗೆ ಬಂದು ಹನುಮಂತನು ಹೊರಟ ಕಾರ್ಯದ ಬಗ್ಗೆ ಜಾಂಬವಂತನು ರಾಮನಿಗೆ ತಿಳಿಯಪಡಿಸಿ ಇದಕ್ಕೆ ನಿಮ್ಮ ಆದೇಶವಿದೆಯೇ ಎಂಬುದಾಗಿ ಪ್ರಶ್ನಿಸಿದನು. ಆಗ ಶ್ರೀರಾಮಚಂದ್ರನು 'ತರಲಿ ಬಿಡು ಅದರಿಂದೇನು ಅನರ್ಥ ವಾಗುತ್ತಿದೆ' ? ಎಂಬುದಾಗಿ ಪ್ರಶ್ನಿಸಿದನು. ಆಗ ಜಾಂಬವಂತನು ಶ್ರೀರಾಮನೆದುರು ಕೈಜೋಡಿಸಿ ನಿಂತು–ಹೇ ಪ್ರಭು ! ಇಂತಹ ಘಟನೆಯು ಹಿಂದೆಂದೂ ಆಗಿಲ್ಲ ಇನ್ನೂ ಮುಂದೆಯೂ ಸಹ ಆಗುವ ಪ್ರಸಂಗವಿಲ್ಲ, ನೀವು ಲಂಕೆಯ ಮೇಲೆ ವಿಜಯವನ್ನು ಸಂಪಾದಿಸುವ ಪೂರ್ವದಲ್ಲಿಯೇ ಸಮುದ್ರದ ದಂಡೆಯಲ್ಲಿ ಸಮುದ್ರೋದಕದಿಂದ ವಿಭೀಷಣನಿಗೆ ಅಭಿಷೇಕವನ್ನು ಮಾಡಿ ಎಲ್ಲರ ಸಾಕ್ಷಿಯೊಂದಿಗೆ ಆತನನ್ನು ಲಂಕಾಧಿಪತಿ ಯನ್ನಾಗಿ ಘೋಷಿಸಿದ್ದೀರಿ. ಆದ್ದರಿಂದ ರಾವಣನ ಸಿಂಹಾಸನದ ಮೇಲೆ ಈಗ ವಿಭೀಷಣನ ಅಧಿಕಾರವು ಪ್ರಾಪ್ತವಾಗಿದೆ. ಹೀಗೆ ನೀವು ಅನುಗ್ರಹಿಸಿದ ಸಿಂಹಾಸನವನ್ನು ಮರಳಿ ನೀವೇ ಪಡೆಯುವದು ಸೂಕ್ತವಲ್ಲ, ಹಾಗೇನಾದರೂ ಮಾಡಿದರೆ ಅದೂ ಸಹ ಒಂದು ಚೌರ್ಯಕೃತ್ಯವಾಗುವದು'' ಜಾಂಬುವಂತನ ಅಭಿಪ್ರಾಯವು ಶ್ರೀರಾಮನಿಗೆ ಮನವರಿಕೆಯಾಗಿ ಮುಂದೆ ಆಗಬಹುದಾಗಿದ್ದ ಅನರ್ಥವು ತಪ್ಪಿಹೋಯಿತು.

''ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಮ್' ಎಂಬ ಉಕ್ತಿಗನುಸಾರವಾಗಿ ಧರ್ಮದ ತತ್ತ್ವಗಳು ಅತಿಸೂಕ್ಷ್ಮಗಳಾಗಿರುತ್ತವೆ. ತಾನೇ ಕೊಟ್ಟದ್ದನ್ನು ತಾನು ಮರಳಿ ಪಡೆದಾಗ ಅದು ಮಹದನರ್ಥವನ್ನು ಉಂಟುಮಾಡುವದೆಂಬ ವಿಷಯವು–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ್ ಪೃಥಿವೀಮಿಮಾಮ್
ಷಷ್ಟಿವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ||

ಹೀಗೆ ಪ್ರತಿಪಾದಿಸಲ್ಪಟ್ಟಿದೆ. ತಾತ್ಪರ್ಯವೇನೆಂದರೆ, ತಾನೇ ಕೊಟ್ಟಿರಲಿ ಅಥವಾ ಅನ್ಯರೇ ಕೊಟ್ಟಿರಲಿ ಅಂತಹ ಭೂಮಿ ಧನ–ಕನಕಾದಿ ಮುಂತಾದ ಸಂಪತ್ತನ್ನು ಯಾರು ಅಪಹರಿಸುತ್ತಾರೆಯೋ ಅವರು ಅರವತ್ತು ಸಾವಿರ ವರ್ಷಗಳವರೆಗೆ ಮಲದಲ್ಲಿಯ ಕ್ರಿಮಿಗಳಾಗಿ ಕಾಲಕಳೆಯಬೇಕಾಗುತ್ತದೆ. ಶಾಸ್ತ್ರಗಳಲ್ಲಿ ವರ್ಣಿಸಿದ ಧರ್ಮದ ಅತಿಸೂಕ್ಷ್ಮ ವಿಚಾರಗಳನ್ನು ತಿಳಿದುಕೊಂಡು ನಡೆದಾಗಲೇ ಜೀವಾತ್ಮನು ಸುಖಿಯಾಗಬಲ್ಲನು.

ಪ್ರತಿಯೊಬ್ಬ ವ್ಯಕ್ತಿಯು ತಾನು ಏನನ್ನೇ ಮಾಡುತ್ತಿರುವಾಗ ನಾನು ಮಾಡುತ್ತಿರುವದು ಸರಿಯೋ ತಪ್ಪೋ ಎಂಬುದರ ಬಗ್ಗೆ ಆತ್ಮ ನಿರೀಕ್ಷಣೆಯನ್ನು ಮಾಡಿಕೊಳ್ಳಬೇಕು. ನಮ್ಮ ಕೈಯಿಂದ ಯಾವದೇ ವಿಧವಾದ ಚೌರ್ಯ ಕಾರ್ಯವು ಆಗದಂತೆ ಜಾಗ್ರತೆಯನ್ನು ವಹಿಸಬೇಕು. ಅಂದಾಗಲೇನೇ ಅಸ್ತೇಯ ವ್ರತವನ್ನು ಪರಿಪಾಲಿಸಲು ಸಾಧ್ಯವಾಗುವದು. ಯಾರು ಅಸ್ತೇಯ ವ್ರತವನ್ನು ಪರಿಪಾಲಿಸುವರೋ ಅವರ ಶರೀರವು ಪವಿತ್ರವಾಗಿರುವದಷ್ಟೇ ಅಲ್ಲ ಅವರು ಸದಾ ನಿರ್ಭೀತರಾಗಿರುತ್ತಾರೆ. ಧರ್ಮದಿಂದ ನಡೆಯುವವರು ಯಾರಿಗೂ ಅಂಜುವದಿಲ್ಲ.

ಈ ಅಹಿಂಸಾ ಸತ್ಯ, ಅಸ್ತೇಯ ಮುಂತಾದ ಧರ್ಮಗಳನ್ನು ಆಚರಿಸಲೋಸುಗ ವಯಸ್ಸಿನ ನಿರ್ಬಂಧತೆಗಳಿರುವದಿಲ್ಲ. ಆದ್ದರಿಂದ ಬಾಲ್ಯದಿಂದಲೇ ಧರ್ಮಾಚರಣೆಯ ಅಭ್ಯಾಸವನ್ನು ಮಕ್ಕಳಿಗೆ ಕೊಡಬೇಕು ಇಲ್ಲವಾದರೆ ಅವರು ತಾರುಣ್ಯಾವಸ್ಥೆಯಲ್ಲಿ ಅಧಾರ್ಮಿಕರಾಗಿ ಅದರ ಸಂಸ್ಕಾರ ಮೂಲಕವಾಗಿಯೇ ವೃದ್ಧಾವಸ್ಥೆಯಲ್ಲಿಯೂ ಸಹ ಅವರಿಂದ ಧರ್ಮಾಚರಣೆಯು ಸಂಭವಿಸುವದಿಲ್ಲ. ಧಾರ್ಮಿಕನಾಗುವದೆಂದರೆ ಕೇವಲ ಧರ್ಮಚಿಹ್ನೆಗಳನ್ನು ಧರಿಸುವದಲ್ಲ. ಅಹಿಂಸಾದಿ ವ್ರತಗಳನ್ನು ಮನಃಪೂರ್ವಕವಾಗಿ ಪರಿಪಾಲಿಸಿದಾಗಲೇ ಧಾರ್ಮಿಕನಾಗಲು ಸಾಧ್ಯವಾಗುವದು. ಅಂತೆಯೇ ಪೂಜ್ಯಪಾದರು ಈ ಧರ್ಮಾಚಾರ ಸ್ಥಲದಲ್ಲಿ ಅಹಿಂಸಾದಿ ದಶವಿಧ ಧರ್ಮಗಳನ್ನು ಉಪದೇಶಿಸಿದ್ದಾರೆ. ಇಂದು ನೀವೆಲ್ಲ ಸತ್ಯ ಹಾಗೂ ಅಹಿಂಸೆಗಳ ಬಗ್ಗೆ ಸಾಕಷ್ಟು ಶ್ರವಣ ಮಾಡಿದ್ದೀರಿ. ಈ ಧರ್ಮಾಚರಣೆಗಳ ಮರ್ಮವನ್ನರಿತು ಅದರಂತೆ ಆಚರಿಸಿ ಸುಖಿಗಳಾಗಿರೆಂಬುದಾಗಿ ಹರಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೧೦ ಆಗಸ್ಟ ೧೯೯೩
ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ಅತಿ ವಿಸ್ತಾರವಾಗಿ ಬ್ರಹ್ಮಚರ್ಯದ ಲಕ್ಷಣವನ್ನು ಪ್ರತಿಪಾದಿಸಲಾಗಿದೆ. ಇದರ ಪ್ರಕಾರವಾಗಿ ನಾಯಕ ನಾಯಕಿಯರ ಮನಸ್ಸಿನಲ್ಲಿ ಪರಸ್ಪರ ಉಂಟಾಗುವ ಸ್ಮರಣೆ, ಪರಸ್ಪರ ಪ್ರಶಂಸೆ, ಕೂಡಿ ಆಡುವದು, ಕದ್ದು ನೋಡುವದು, ಕದ್ದು ಮಾತನಾಡುವದು ಮನಸ್ಸಿನಲ್ಲಿ ಮೈಥುನದ ಬಗ್ಗೆ ಯಾವಾಗಲೂ ಸಂಕಲ್ಪವನ್ನು ಮಾಡುವದು. ಇದನ್ನು ಇಂದೇ ಮಾಡೇತೀರಬೇಕೆಂಬ ನಿಶ್ಚಯವು, ಹಾಗೂ ಕೊನೆಗೆ ಮೈಥುನವನ್ನು ಮಾಡುವದು. ಇವು ಎಂಟು ಮೈಥುನ ಸಂಬಂಧಿಗಳಾದ ಅಷ್ಟಾಂಗಗಳು. ಎಂದು ಕರೆಯಲ್ಪಡುತ್ತವೆ. ಇವುಗಳೇ ವಿಪರೀತ ಸ್ವರೂಪಗಳನ್ನು ತಾಳಿದಾಗ ಬ್ರಹ್ಮಚರ್ಯದ ಅಷ್ಟಾಂಗಗಳೆಂದು ಕರೆಯಲ್ಪಡುತ್ತವೆ. ಅಂದರೆ ಪೂರ್ವದಲ್ಲಿ ಹೇಳಿದ ಪರಸ್ಪರ ಸ್ಮರಣೆ, ಪರಸ್ಪರರ ಗುಣಗಾನ, ಪರಸ್ಪರ ಕ್ರೀಡೆ ಮುಂತಾದವುಗಳು ತನ್ನಿಂದ ಆಗದಿರುವಂತೆ ಎಚ್ಚರಿಕೆಯನ್ನು ವಹಿಸುವದೇ ಪರಿಪೂರ್ಣವಾದ ಬ್ರಹ್ಮಚರ್ಯವೆನಿಸುವದು.

ಇಂತಹ ಬ್ರಹ್ಮಚರ್ಯ ವ್ರತವನ್ನು ಪರಿಪಾಲನೆ ಮಾಡಿದಾಗ ವ್ಯಕ್ತಿಯ ಮನಸ್ಸಿನಲ್ಲಿ ಮೇಧಾಶಕ್ತಿಯು ಬೆಳೆಯುತ್ತದೆ. ಅದರ ಬಲದಿಂದಲೇ ಬ್ರಹ್ಮಜ್ಞಾನವನ್ನು ಪಡೆಯಲು ಸಾಧ್ಯವಾಗುವದು. ಹೀಗೆ ಈ ಬ್ರಹ್ಮಚರ್ಯ ವ್ರತವು. ಬ್ರಹ್ಮಜ್ಞಾನದ ಮೂಲ ಸಾಧನವೆಂಬುದಾಗಿ ತಿಳಿದುಕೊಳ್ಳಬೇಕು. ಈ ಬ್ರಹ್ಮಚರ್ಯ ಭಾವನೆ ಯಿದ್ದಾಗಲೇ ವಿವೇಕ ವೈರಾಗ್ಯಾದಿಗಳು ಒಡಮೂಡುತ್ತವೆ. ಇವೇ ಮುಂದೆ ಬ್ರಹ್ಮಜ್ಞಾನಕ್ಕೆ ಸಹಾಯಕಗಳಾಗುತ್ತವೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಇದಕ್ಕೆ ಸಂಬಂಧಪಟ್ಟ ಒಂದು ಸುಮನೋಹರವಾದ ಕಥೆಯುಂಟು.

ಒಂದಾನೊಂದು ಸಮಯದಲ್ಲಿ ಪ್ರಜಾಪತಿಯಾದ ಬ್ರಹ್ಮದೇವನ ಕಡೆಗೆ ದೇವ, ದಾನವ ಮತ್ತು ಮಾನವರು ಕೂಡಿಕೊಂಡು ಹೋಗಿ "ಅಧೀಃ ಮೇ ಭಗವನ್" ಅಂದರೆ ಹೇ ! ಪ್ರಜಾಪತಿಯೇ ! ನಮಗೇನಾದರೂ ಉಪದೇಶವನ್ನು ಮಾಡಿ ಪ್ರಾರ್ಥಿಸಿಕೊಂಡರು. ಆಗ ಬ್ರಹ್ಮದೇವನು ಆ ಮೂರೂ ಜನರನ್ನೂ ಉದ್ದೇಶಿಸಿ 'ದ, ದ, ದ' ಎಂಬುದಾಗಿ ಮೂರೂ ಸಾರೆ ಉಚ್ಚರಿಸಿದರು. ಆಗ ದೇವತೆಗಳು– ಹೇ ಭಗವನ್ ಈ 'ದ' ಶಬ್ದದ ಅರ್ಥವೇನು ? ಎಂಬುದಾಗಿ ಕೇಳಿದರು. ಆಗ ಬ್ರಹ್ಮದೇವನು. ಎಲೈ ದೇವತೆಗಳೇ ! ನೀವೆಲ್ಲ ಸದಾ ಸ್ವರ್ಗದಲ್ಲಿದ್ದು, ಅಮೃತಪಾನ ಅಪ್ಸರಾಗಮನ ಮತ್ತು ನಂದನವನ ವಿಹಾರ ಮುಂತಾದ ವಿಷಯಭೋಗದಲ್ಲಿಯೇ ಸದಾ ಆಸಕ್ತರಾಗಿರುವ ನಿಮಗೆ ಬ್ರಹ್ಮಜ್ಞಾನವು ಅದೆಂದಿಗೂ ಆಗುವದಿಲ್ಲ, ಒಂದು ವೇಳೆ ಬ್ರಹ್ಮಜ್ಞಾನವನ್ನು ಪಡೆಯುವ ಇಚ್ಛೆ ನಿಮಗಿದ್ದರೆ ನಿಮ್ಮೆಲ್ಲ ಇಂದ್ರಿಯಗಳ ಮೇಲೆ ದಮನವನ್ನು ಮಾಡಿರಿ. ಇದುವೇ ನಿಮಗೆ ಉಪದೇಶ ಮಾಡಿದ 'ದ' ಶಬ್ದದ ಅರ್ಥವು. ಇದೇ ಪ್ರಕಾರವಾಗಿ ಮನುಷ್ಯರಿಗೆ 'ದ' ಎಂದರೆ ದಾನ ಮಾಡಬೇಕೆಂಬುದಾಗಿಯೂ ಹಾಗೂ ಅಸುರರಿಗೆ 'ದ' ಎಂದರ ದಯಾಗುಣವುಳ್ಳವರಾಗಿರಬೇಕೆಂಬುದಾಗಿ ಉಪದೇಶಿಸಲಾಗಿದೆ.

ಬ್ರಹ್ಮದೇವರ ಉಪದೇಶದಂತೆ ದೇವತೆಗಳ ಒಡೆಯನಾದ ಇಂದ್ರನು ನಾಲ್ವತ್ತೆಂಟು ವರ್ಷಗಳವರೆಗೆ ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸಿ ಕೊನೆಗೆ ಬ್ರಹ್ಮಜ್ಞಾನವನ್ನು ಪಡೆದ ಕಥಾ ಪ್ರಸಂಗವು ಛಾಂದೋಗ್ಯೋಪನಿಷತ್ತಿನಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸವಿಸ್ತಾರವಾಗಿ ನಿರೂಪಿಸಲಾಗಿದೆ. ಹೀಗೆ ಬ್ರಹ್ಮಚರ್ಯ ವ್ರತವು ಬ್ರಹ್ಮಜ್ಞಾನಕ್ಕೆ ಸಹಾಯಕವಾಗುವದೆಂಬುದು ತಿಳಿದುಬರುತ್ತದೆ.

ನಮ್ಮ ದೇಶದ ಸಂಸ್ಕೃತಿಯಲ್ಲಿ ಬರುವ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸಗಳೆಂಬ ಚತುರ್ವಿಧ ಆಶ್ರಮಗಳಲ್ಲಿ ಗೃಹಸ್ಥಾಶ್ರಮವನ್ನು ಬಿಟ್ಟರೆ ಉಳಿದ ಮೂರೂ ಆಶ್ರಮಗಳಲ್ಲಿ ಬ್ರಹ್ಮಚರ್ಯ ಪರಿಪಾಲನೆಯು ಪ್ರತಿಪಾದಿಸಲಾಗಿದೆ. ಗೃಹಸ್ಥಾಶ್ರಮದಲ್ಲಿಯೂ ಸಹ 'ನುತಬ್ರಹ್ಮಚರ್ಯವ್ರತ'ವನ್ನು ಪರಿಪಾಲಿಸಬೇಕೆಂಬ ವಿಧಾನವಿದೆ. ಅಂದರೆ ತನ್ನ ವಂಶಾಭಿವೃದ್ಧಿಗಾಗಿ ಬ್ರಹ್ಮಚರ್ಯ ವ್ರತವನ್ನು ಖಂಡಿತ ಮಾಡಿಕೊಂಡರೂ ಗೃಹಸ್ಥನು ವಿಷಯಭೋಗಿಯಾಗಬೇಕೇ ವಿನಃ ವಿಷಯ ಲಂಪಟ ನಾಗಬಾರದೆಂಬ ಉದ್ದೇಶದಿಂದ ಅವನಿಗೂ ಸಹ ವಿಷಯ ಭೋಗದಲ್ಲಿ ಅನೇಕ ಕಡಿವಾಣಗಳನ್ನು ಹಾಕಲಾಗಿದೆ.

ಓರ್ವ ವ್ಯಕ್ತಿಯು ಗೃಹಸ್ಥಾಶ್ರಮವನ್ನು ಪ್ರವೇಶಿಸಿದಾಗ ಆತನು ಸದಾ ಸರ್ವದಾ ತನ್ನ ಸತಿಯೊಂದಿಗೆ ಕೂಡಿದ್ದು ವಿಷಯ ವ್ಯಾಮೋಹಿಯಾಗಿ ಸ್ವಾಸ್ಥ್ಯವನ್ನು ಹಾಳು ಮಾಡಿ ಕೊಳ್ಳಬಾರದೆಂಬ ಉದ್ದೇಶದಿಂದ ಮತ್ತು ಮಧ್ಯ ಮಧ್ಯದಲ್ಲಿ ಬ್ರಹ್ಮಚರ್ಯವ್ರತವು ಇವನಿಂದ ಆಚರಿಸಲ್ಪಡಬೇಕೆಂಬ ಉದ್ದೇಶದಿಂದ ಹಬ್ಬ ಹರಿದಿನಗಳ ನಿಮಿತ್ತವಾಗಿ ಆತನ ಧರ್ಮಪತ್ನಿಯನ್ನು ತವರು ಮನೆಗೆ ಆಗಾಗ ಕಳಿಸಿಕೊಡುವ ಪದ್ಧತಿಯು ಇಂದಿಗೂ ರೂಢಿಯಲ್ಲಿರುವದನ್ನು ಕಾಣುತ್ತೇವೆ. ಹೊಸದಾಗಿ ಲಗ್ನವಾದ ವರ್ಷ ಆಷಾಢಮಾಸ ಬಂದಿತೆಂದರೆ ಅತ್ತೆ–ಸೊಸೆ ಕೂಡಿರಬಾರದು ಎಂಬ ಒಂದು ಪದ್ಧತಿಯು ನಡೆದು ಬಂದಿದೆ. ಅಂದರೆ ಈ ನಿಮಿತ್ತವಾಗಿ ಗಂಡ ಹೆಂಡರು ದೂರಾಗಿದ್ದು ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸಬೇಕೆಂಬುದು ಅದರ ಉದ್ದೇಶವಾಗಿದೆ. ಈ ರೂಢಿ ಪರಂಪರೆಯ ಮರ್ಮವನ್ನು ಇಂದಿನ ಯುವ ಪೀಳಿಗೆಯು ಅತ್ತೆ–ಸೊಸೆ ಕೂಡಿರಬಾರದೆಂಬ ಶಬ್ದದ ಕೇವಲ ಸ್ಥೂಲಾರ್ಥದ ವಿಚಾರ ಮಾಡಿ ತನ್ನ ಹೆಂಡತಿಯನ್ನು ತವರು ಮನೆಗೆ ಕಳಿಸುವದನ್ನು ಬಿಟ್ಟು ತನ್ನ ತಾಯಿಯನ್ನೇ ಕೆಲದಿನ ಮಟ್ಟಿಗೆ ಬೇರೆ ಊರಿಗೆ ಕಳಿಸುವ ಒಂದು ಹೊಸ ಪರಂಪರೆಯು ಇತ್ತೀಚೆಗೆ ಬೆಳೆದುಬರುತ್ತಿದೆ. ಇದು ಅಷ್ಟೊಂದು ವೈಜ್ಞಾನಿಕವಾದ ಪರಂಪರೆಯಲ್ಲ. ಇದರ ಬಗ್ಗೆ ನವ–ದಂಪತಿಗಳು ಕೂಲಂಕಷವಾಗಿ ವಿಚಾರ ಮಾಡಿ ಪ್ರಾಚೀನಕಾಲದಿಂದ ಬಂದಿರುವ 'ರೂಢಿಯ' ರಹಸ್ಯಾರ್ಥವನ್ನು ತಿಳಿದು ಆಚರಿಸಬೇಕು.

ಇದೂ ಅಲ್ಲದೆ ದಂಪತಿಗಳು ಕೂಡಿಕೊಂಡಿರುವಾಗಲೂ ಸಹ ಅವರಲ್ಲಿ ಮೈಥುನ ಪ್ರವೃತ್ತಿಯು ಅಧಿಕವಾಗಿ ಬೆಳೆಯಬಾರದೆಂಬ ಉದ್ದೇಶದಿಂದ ಗಂಡಹೆಂಡರ ಸಮಾಗಮ ಪ್ರಸಂಗದಲ್ಲಿ ಕೆಲವೊಂದು ತಿಥಿ–ವಾರ–ನಕ್ಷತ್ರಾದಿಗಳನ್ನು ನಿಷೇಧಿಸಲಾಗಿದೆ. ಅಮವಾಸ್ಯೆ, ಪೌರ್ಣಿಮೆ, ಸಂಕ್ರಾಂತಿ, ಅಷ್ಟಮಿ, ಹೀಗೆ ಇನ್ನೂ ಅನೇಕ ತಿಥಿ–ಮಿತಿಗಳ ಮೈಥುನಕ್ಕೆ ವರ್ಜ್ಯವೆಂಬುದಾಗಿ ಹೇಳಲಾಗಿದೆ. ಇದರಲ್ಲಿಯೂ ಸಹ ದಂಪತಿಗಳ ಬ್ರಹ್ಮಚರ್ಯ ಪರಿಪಾಲನೆಗೆ ಹೆಚ್ಚಿನ ಮಹತ್ವವು ಕೊಡಲಾಗಿದೆ. ಶಾಸ್ತ್ರೋಕ್ತವಾದ ಈ ಕಟ್ಟು–ನಿಟ್ಟುಗಳನ್ನು ಕಡ್ಡಾಯವಾಗಿ ನಿಷ್ಠೆಯಿಂದ ಪರಿಪಾಲಿಸುವ ಗೃಹಸ್ಥಾಶ್ರಮಿಗೆ ನುತಬ್ರಹ್ಮಚಾರಿ ಎಂಬುದಾಗಿ ಕರೆಯಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ಶಾಸ್ತ್ರಗಳಲ್ಲಿ ನೈಷ್ಠಿಕ ಬ್ರಹ್ಮಚರ್ಯ, ಸುತಬ್ರಹ್ಮಚರ್ಯ ವಿಧುರ ಬ್ರಹ್ಮಚರ್ಯ ಮತ್ತು ವಿಧವಾ ಬ್ರಹ್ಮಚರ್ಯವೆಂಬುದಾಗಿ ಬ್ರಹ್ಮಚರ್ಯದ ಅನೇಕ ಪ್ರಕಾರಗಳು ಪ್ರತಿಪಾದಿಸಲ್ಪಟ್ಟಿವೆ.

ಒಟ್ಟಿನಲ್ಲಿ ಮನುಷ್ಯನು ಯಾವದೇ ರೀತಿಯಿಂದಲಾದರೂ ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸಬೇಕೆಂಬುದೇ ಶಾಸ್ತ್ರಗಳ ಮುಖ್ಯ ಉದ್ದೇಶವಾಗಿದೆ. ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸಿದಾಗಲೇ ಆತನು ಬ್ರಹ್ಮಜ್ಞಾನಿಯಾಗಲು ಸಮರ್ಥನಾಗುವನು. ಆದ್ದರಿಂದ ಪೂಜ್ಯಪಾದರು ದಶವಿಧ ಧರ್ಮಾಚರಣೆಗಳಲ್ಲಿ ಬ್ರಹ್ಮಚರ್ಯಕ್ಕೂ ಸಹ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ.

ಇನ್ನು ಮುಂದೆ ಬರುವ ಧರ್ಮವೇ ದಯೆಯು. ಸಕಲಪ್ರಾಣಿಗಳ ಬಗ್ಗೆ ಇರುವ ಕಾರುಣ್ಯಭಾವಕ್ಕೆ ದಯೆ ಎಂಬುದಾಗಿ ಕರೆಯುತ್ತಾರೆ. ಯಾರ ಹೃದಯದಲ್ಲಿ 'ದಯಾ' ಭಾವನೆಯಿರುತ್ತದೆಯೋ ಅವನು ಯಾರಿಗೂ ಯಾವ ಕಾಲಕ್ಕೂ ದುಃಖವನ್ನು ಕೊಡಲಾರನು. ಇದೂ ಅಲ್ಲದೆ ದುಃಖಿತರಾದ ಪ್ರಾಣಿಗಳನ್ನು ನೋಡಿ ಅವರ ಬಗ್ಗೆ ಕನಿಕರ ಹುಟ್ಟಿ ತನ್ನ ಶಕ್ತ್ಯಾನುಸಾರವಾಗಿ, ಅವರಿಗೆ ಸಹಾಯವನ್ನು ಮಾಡುತ್ತಿರುತ್ತಾನೆ. ಹೀಗೆ ದಯಾಭಾವವುಳ್ಳ ವ್ಯಕ್ತಿಯಲ್ಲಿ ಸಹಾನುಭೂತಿ ಹಾಗೂ ಸಮಾನುಭೂತಿಗಳೆರಡೂ ಇರುತ್ತವೆ. ದುಃಖಿಯಾದ ವ್ಯಕ್ತಿಯೊಂದಿಗೆ ತಾನು ತಟಸ್ಥನಾಗಿದ್ದು ಅವನಿಗೆ ಸಹಾಯವನ್ನೂ ಒದಗಿಸುವದು ಸಹಾನುಭೂತಿಯಾದರೆ, 'ಅನ್ಯವ್ಯಕ್ತಿಗಾಗುವ ದುಃಖವು ತನಗೇ ಆಗುತ್ತಿದೆ' ಎಂಬ ತಾದಾತ್ಮ್ಯ ಭಾವವನ್ನು ತಾಳಿ ಅವನಿಗೆ ಸಹಾಯವನ್ನು ಒದಗಿಸುವ ಭಾವನೆಗೆ ಸಮಾನುಭೂತಿ ಎಂದು ಕರೆದಿದ್ದಾರೆ. ಹೀಗೆ ಸಹಾನುಭೂತಿ ರೂಪವಾದ ಮತ್ತು ಸಮಾನುಭೂತಿ ರೂಪವಾದ ದಯೆಗಳಲ್ಲಿ ಸಮಾನುಭೂತಿ ರೂಪವಾದ ದಯೆಯೇ ಸರ್ವೋತ್ಕೃಷ್ಟವಾದುದು. ಇಂತಹ ದಯಾಭಾವನೆಯಿಂದ ಜಗತ್ತಿನ ಜೀವಿಗಳನ್ನು ತನ್ನಂತೆ ಕಾಣುವ ಒಂದು ದಿವ್ಯ ದೃಷ್ಟಿಯು ಪ್ರಾಪ್ತವಾಗುತ್ತದೆ ಈ ದೃಷ್ಟಿಯಿಂದಲೇ ಸರ್ವವೆಲ್ಲವನ್ನು ತನ್ನ ರೂಪವಾಗಿ ತಿಳಿಯುವ ಯೋಗ್ಯತೆಯು ದೊರೆಯುತ್ತದೆ. ಆದ್ದರಿಂದ ದಯೆಯು ಪರಂಪರೆಯಿಂದ ಆತ್ಮಜ್ಞಾನಕ್ಕೆ ಸಹಾಯಕ ವಾಗುವದು. ಅಂತೆಯೇ ಪೂಜ್ಯಪಾದರು ದಯೆಯನ್ನು ಸಹ ಒಂದು ಧರ್ಮವನ್ನಾಗಿ ಪರಿಗಣಿಸಿದ್ದಾರೆ. ದಯೆಯ ಮರ್ಮವನ್ನರಿತ ಶ್ರೀ ಬಸವಣ್ಣನವರು–

ದಯವಿಲ್ಲದ ಧರ್ಮವದೇವುದಯ್ಯಾ ?
ದಯವೇಬೇಕು ಸಕಲಪ್ರಾಣಿಗಳೆಲ್ಲರಲ್ಲಿಯೂ ;
ದಯವೇ ಧರ್ಮದ ಮೂಲವಯ್ಯಾ ;
ಕೂಡಲಸಂಗಯ್ಯನಂತಲ್ಲದೊಲ್ಲಯ್ಯಾ

ಎಂಬ ತಮ್ಮ ಈ ವಚನದಲ್ಲಿ ದಯೆಯು ಎಲ್ಲ ಧರ್ಮಗಳ ಮೂಲ ಎಂಬುದಾಗಿ ತಿಳಿಯಪಡಿಸಿದ್ದಾರೆ. ಆದ್ದರಿಂದ ಪ್ರತಿಯೊಬ್ಬರೂ ಪ್ರಾಣಿದಯೆಯುಳ್ಳವರಾಗಿರಬೇಕು.

ಇನ್ನು ಈ ಮುಂದೆ ಬರುವ ಧರ್ಮವೇ ಕ್ಷಮೆಯು. ಮನುಷ್ಯನಲ್ಲಿರುವ ಸಹನ ಶಕ್ತಿಗೆ ಕ್ಷಮಾ ಎಂದು ಕರೆಯುತ್ತಾರೆ. ಅಪರಾಧ ಮಾಡಿದ ವ್ಯಕ್ತಿಗೆ ದಂಡಕೊಡುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಮರ್ಥ್ಯವಿದ್ದರೂ ದಂಡವಿಲ್ಲದೆ ಸುಧಾರಿಸಿಕೊಳ್ಳಲೆಂಬ ಭಾವನೆಯಿಂದ ಸಹಿಸುವದೇ ಕ್ಷಮೆಯು.

ಈ ಕ್ಷಮೆಯೂ ಸಹ ಒಂದು ತಪಸ್ಸೆಂದು ಕರೆಯಿಸಿಕೊಳ್ಳುವದು. ಓರ್ವ ಕನ್ನಡದ ಕವಿಯು

ತಾಳುವಿಕೆಗಿಂತ ತಪವಿಲ್ಲ।
ಕೇಳಬಲ್ಲವರಿಗೆ ಹೇಳುವೆನು ಸೊಲ್ಲ ॥ ಪಲ್ಲ॥
ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು।
ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು॥
ಕಹಿನುಡಿ ಕುಹಕ ಕುಮಂತ್ರವನು ತಾಳು
ತಾಳುವಿಕೆಗಿಂತ ತಪವಿಲ್ಲ.................
....

ಈ ರೀತಿಯಾಗಿ ತಾಳ್ಮೆಯ ಸ್ವರೂಪವನ್ನು ನಿರೂಪಿಸಿ ಅದೂ ಒಂದು ತಪಸ್ಸೆಂಬುದಾಗಿ ಸ್ಪಷ್ಟಪಡಿಸಿದ್ದಾರೆ. ತಾಳಿದವನು ಬಾಳಿಯಾನು ಎಂಬ ಕನ್ನಡದ ನಾಡ ನುಡಿಯಂತೆ ಯಾರು ಎಷ್ಟು ಸಹನೆಮಾಡಿಕೊಳ್ಳುವರೋ ಅವರು ಅಷ್ಟೇ ದೊಡ್ಡವ ರಾಗುವರು. ಆದಕಾರಣ ಈ ಕ್ಷಮಾಗುಣವನ್ನು ಮೈಗೂಡಿಸಿಕೊಳ್ಳಬೇಕೆಂಬುದೇ ಪೂಜ್ಯಪಾದರ ಆಶಯವಾಗಿದೆ.

ಇನ್ನು ಮುಂದಿನ ಧರ್ಮವೇ ದಾನವು. ''ಸ್ವತ್ವ ನಿವೃತ್ತಿಪೂರ್ವಕ ಧನಾದಿ ಸಮರ್ಪಣಂ ದಾನಮ್'' ಅಂದರೆ ತನ್ನದೆನ್ನುವ ಭಾವನೆಯನ್ನು ಇಟ್ಟುಕೊಳ್ಳಲಾರದೆ ಸುಪಾತ್ರದಲ್ಲಿ ಧನಾದಿಗಳನ್ನು ಸಮರ್ಪಿಸುವದೇ ದಾನವು. ''ತೇನ ತ್ಯಕ್ತೇನ ಭುಂಜೀಥಾಃ'' ಎಂಬ ಈಶಾವಾಸ್ಯ ಉಪನಿಷತ್ ಮಂತ್ರದಲ್ಲಿ ತಾನು ಉಪಭೋಗಿಸುವ ವಸ್ತುಗಳೆಲ್ಲವನ್ನು ಭಗವದರ್ಪಣ ಮಾಡಿ ಅದನ್ನು ಪ್ರಸಾದ ರೂಪವಾಗಿ ಸೇವಿಸುವ ವಿಧಾನವು ಪ್ರತಿಪಾದಿಸಲ್ಪಟ್ಟಿದೆ. ಯಾರು ಅನ್ನಾದಿ ಭೋಗ್ಯ ಪದಾರ್ಥಗಳನ್ನು ಅನ್ಯರಿಗೆ ದಾನ ಮಾಡದೆ ತಾವೇ ಭುಂಜಿಸುತ್ತಾರೆಯೋ ಅವರು ಕಳ್ಳರೆಂಬುದಾಗಿ ಭಗವದ್ಗೀತೆ ಯಲ್ಲಿ ಪ್ರತಿಪಾದಿಸಲಾಗಿದೆ. ಹಿಂದಿನ ಕಾಲದಲ್ಲಿ ತಾವು ಉಡಬೇಕಾಗಿರುವ ನೂತನ ವಸ್ತ್ರಾದಿಗಳನ್ನು ಮೊದಲು ಅನ್ಯರಿಗೆ ಉಡಲುಕೊಟ್ಟು, ಆಮೇಲೆ ಅದನ್ನು ಉಡುವ ಪದ್ಧತಿಯು ರೂಢಿಯಲ್ಲಿತ್ತು ಈಗಲೂ ಸಹ ಅಲ್ಲಲ್ಲಿ ಈ ಪದ್ಧತಿಯನ್ನು ಕಾಣಬಹುದು. ಆದರೆ ಸರ್ವೇಸಾಮಾನ್ಯವಾಗಿ ಈ ಪದ್ಧತಿಯು ಲುಪ್ತವಾಗುತ್ತ ನಡೆದಿದೆ. ತಾನು ಉಡುವ ವಸ್ತ್ರಾದಿಗಳನ್ನು ಅನ್ಯರಿಗೇಕೆ ಕೊಡಬೇಕು? ಎಂಬ ಸ್ವಾರ್ಥ ಮನೋ ಭಾವನೆಯು ಒಡಮೂಡರುವದೇ ಕಾರಣವು.

ದಾನ ಮಾಡೋಣದರಿಂದ ಹೃದಯ ವೈಶಾಲ್ಯತೆಯು ಬೆಳೆಯುತ್ತ ಹೋಗುವ ದಲ್ಲದೆ ಕಾಲಾಂತರದಲ್ಲಿ ಈ ದಾನದ ಮಹಿಮೆ ಯಿಂದಲೇ ದಾನಿಯು ವಿಶ್ವಕೌಟುಂಬಿಕ ಭಾವನೆಯನ್ನು ತಾಳುತ್ತಾನೆ. ದಾನಮಾಡುವದು ಧರ್ಮವಷ್ಟೇ ಅಲ್ಲ ಅದು ಕರ್ತವ್ಯವೂ ಆಹುದು. ತಾನು ಸಂಪಾದಿಸಿದ ಸಂಪತ್ತಿನಲ್ಲಿ ಕೆಲವಷ್ಟು ಅಂಶವನ್ನು ಧರ್ಮಕ್ಕಾಗಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಾಜಕ್ಕಾಗಿ ಮತ್ತು ರಾಷ್ಟ್ರಕ್ಕಾಗಿ ಪ್ರತಿಯೊಬ್ಬರೂ ಕೊಡಲೇಬೇಕು ಅಂದಾಗಲೇನೇ ಪ್ರಪಂಚದ ವ್ಯವಸ್ಥೆಯು ಸುಗಮವಾಗಿ ಸಾಗುವದು.

ಈ ಜಗತ್ತಿನಲ್ಲಿ ನಮ್ಮದೆನ್ನುವ ವಸ್ತುವು ಯಾವದೂ ಇರುವದಿಲ್ಲ. ಎಲ್ಲವೂ ಈಶ್ವರನದೇ ಅಂದಾಗ ಈಶ್ವರನ ಅನುಗ್ರಹದಿಂದ ಪ್ರಾಪ್ತವಾದದ್ದರಲ್ಲಿ ಸ್ವಲ್ಪನ್ನು ಈಶ್ವರನಿಗೆ ಸಮರ್ಪಿಸುವದು ಜೀವನ ಕರ್ತವ್ಯವಾಗಿರುತ್ತದೆ. ಯಾವ ವ್ಯಕ್ತಿಯು ಸಂಪಾದಿಸಿದ ಸಂಪತ್ತನ್ನು ತಾನು ಉಪಭೋಗಿಸದೆ ಅನ್ಯರಿಗೂ ಕೊಡದೇ ಹೋದರೆ ಅದಕ್ಕೆ ಮೂರನೆಯದಾದ ವಿನಾಶಗತಿಯೇ ಪ್ರಾಪ್ತವಾಗುವದು. ಆದ್ದರಿಂದ ಉದಾರಿಯಾಗಿ ದಾನಮಾಡುವ ರೂಢಿಯನ್ನು ಬೆಳೆಸಿಕೊಳ್ಳಬೇಕು. ಶ್ರೀ ತುಳಸೀದಾಸರು– "ಲೋಭ ಬಾಪಕಾ ಪಾಪ ಬಖಾನಾ। ದಾನ ಧರ್ಮಕಾ ಮೂಲ।'' ಎಂಬುದಾಗಿ ಹೇಳಿ 'ಲೋಭವು ಪಾಪದ ಜನಕವಾದರೆ ದಾನವು ಧರ್ಮದ ಮೂಲ ಎಂಬುದಾಗಿ ತಿಳಿಸಿದ್ದಾನೆ. ಒಂದು ವೃಕ್ಷದ ತಾಯಿಬೇರು ಕಡಿದುಹೋಯಿತೆಂದರೆ ಆ ಗಿಡವೇ ಒಣಗಿ ಹೋಗುವಂತೆ ದಾನ ರೂಪವಾದ ಧರ್ಮವನ್ನು ಮಾಡದೇ ಹೋದಾಗ ಪುಣ್ಯಹೀನನಾದ ಅವನ ಬದುಕು ದುಃಖಮಯವಾಗುವದು. ನಾವು ಯಾರಿಗಾದರೂ ಏನನ್ನಾದರೂ ದಾನಮಾಡಿದರೆ ಅದು ಅವರಿಗೆ ಹೋಯಿತೆಂದು ಭಾವಿಸಕೂಡದು ಅದು ಒಂದಿಲ್ಲೊಂದು ರೀತಿಯಿಂದ ವೃದ್ಧಿಂಗತವಾಗಿ ಪುನಃ ತನಗೇ ಪ್ರಾಪ್ತವಾಗುತ್ತದೆ. ಅಂತೆಯೇ ಸರ್ವಜ್ಞಕವಿಯು–

> ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ
> ಕೊಟ್ಟಿದ್ದು ಕೆಟ್ಟಿತೆನಬೇಡ
> ಅದು ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ।

ಈ ತನ್ನ ವಚನದಲ್ಲಿ ಆ ಮಾತನ್ನು ಸ್ಪಷ್ಟಪಡಿಸಿದ್ದಾನೆ. ಈ ವಿಷಯದಲ್ಲಿ ಒಂದು ಬಹು ಸುಂದರವಾದ ದೃಷ್ಟಾಂತವಿದೆ.

ಒಂದಾನೊಂದು ಕಾಲದಲ್ಲಿ ಭೂಲೋಕದಲ್ಲಿ ನಡೆದ ಯಜ್ಞ ಸಮಾರಂಭಕ್ಕಾಗಿ ಯಜಮಾನನು ದೇವ ಹಾಗೂ ದಾನವರಿಬ್ಬರನ್ನೂ ಬರಮಾಡಿಕೊಂಡಿದ್ದನು. ಊಟಕ್ಕೆ ಕೂಡ್ರಿಸುವ ಪ್ರಸಂಗ ಬಂದಾಗ ಪ್ರತಿಸಲದಂತೆ ದೇವತೆಗಳನ್ನು ಮೊದಲನೆಯ ಪಂಕ್ತಿಗೆ ಕೂಡ್ರಿಸಲು ತಯಾರಾದರು. ಆಗ ದಾನವರು ಮನೆಯ ಯಜಮಾನೊಂದಿಗೆ ಕಲಹವನ್ನು ಮಾಡಿ ನೀವು ಪ್ರತಿಸಲ ದೇವತೆಗಳನ್ನೇ ಮೊದಲ ಪಂಕ್ತಿಗೆ ಕೂಡ್ರಿಸುತ್ತೀರಿ ಇದು ನಮಗಾದ ಬಹುದೊಡ್ಡ ಅಪಮಾನವು. ದೇವತೆಗಳಿಗಿಂತಲೂ ನಾವು ಹಿರಿಯರು. ಕಾರಣ ಮೊದಲ ಪಂಕ್ತಿಗೆ ನಮ್ಮನ್ನೇ ಕೂಡ್ರಿಸಬೇಕೆಂದು ಹಟಹಿಡಿದರು. ಆಗ ಯಜಮಾನನು ಸಮಾರಂಭದಲ್ಲಿ ಕಲಹವನ್ನು ಬೆಳೆಸುವದು ಸರಿಯಲ್ಲವೆಂದು ಭಾವಿಸಿ ಅವರಿಗೆ ಒಪ್ಪಿಗೆಕೊಟ್ಟು, ದಾನವರನ್ನೇ ಮೊದಲ ಪಂಕ್ತಿಗೆ ಕೂಡ್ರಿಸಿದರು. ಆಗ ಆತನ ಮನಸ್ಸಿನಲ್ಲಿ ಒಂದು ಯುಕ್ತಿಯು ಹೊಳೆಯಿತು. ಆ ಯುಕ್ತಿಯ ಪ್ರಕಾರ ಬಿದಿರುಗಳನ್ನು ಸೀಳಿಸಿ ದಾನವರ ಬಲಗೈಯು ಮಣಿಯದ ಹಾಗೆ ಬಿದಿರ ಪಟ್ಟಿಗಳಿಂದ ಬಿಗಿಯಾಗಿ ಕಟ್ಟಿ ಕೈಯನ್ನು ಮಣಿಸದೆ ಬಿದಿರನ್ನು ಮುರಿಯದೆ ಅರ್ಧಗಂಟೆಯೊಳಗಾಗಿ ನೀವೆಲ್ಲರೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಣ್ಣಬೇಕೆಂಬುದಾಗಿ ವಿನಂತಿಸಿಕೊಂಡನು. ಆಗ ದಾನವರು ತಮ್ಮ ತಾಟಿನಲ್ಲಿ ಬಡಿಸಿರುವ ಪಂಚಪಕ್ವಾನ್ನಗಳನ್ನು ಉಣ್ಣುವ ಆಶೆಯಲ್ಲಿ ತಾಟಿನೊಳಗೆ ಕೈಹಾಕಿದ ರೇನೋ ನಿಜ ಆದರೆ ಉಣ್ಣಲು ಯಾರೂ ಸಮರ್ಥರಾಗಲಿಲ್ಲ, ಕೊಟ್ಟ ಅವಧಿಯು ಮುಗಿದು ಹೋಯಿತು ಆಗ ನಿರುಪಾಯರಾಗಿ ಭೋಜನಸ್ಥಾನವನ್ನು ಬಿಟ್ಟು ಎದ್ದು ಹೋದರು ಆಗ ಅದೇ ಸ್ಥಾನದಲ್ಲಿ ದೇವತೆಗಳು ಕುಳಿತುಕೊಂಡಾಗ ಅವರಿಗೂ ಸಹ ಅದೇರೀತಿಯಾದ ಹಸ್ತ ಬಂಧನವನ್ನು ಮಾಡಲಾಯಿತು. ದೇವತೆಗಳೂ ಸಹ ತಮ್ಮ ತಾಟಿನಲ್ಲಿಯ ಪದಾರ್ಥವನ್ನು ತಾವು ಉಣ್ಣಲು ಅಸಮರ್ಥರಾದಾಗ ಅವರ ಮನಸ್ಸಿನಲ್ಲಿ ಒಂದು ಸುವಿಚಾರವು ಪ್ರಾದುರ್ಭವಿಸಿತು. ಅದೇನೆಂದರೆ ನಮ್ಮ ತಾಟಿನಲ್ಲಿದ್ದುದು ನಮಗೆ ಉಣ್ಣಲು ಆಗದಿದ್ದರೂ ಮತ್ತೊಬ್ಬರಿಗಾದರೂ ಉಣಿಸಲು ಬರುತ್ತದೆಯಲ್ಲಾ ? ಆಗ ಅವರೆಲ್ಲರೂ ಒಬ್ಬರು ಮತ್ತೊಬ್ಬರಿಗೆ, ಮತ್ತೊಬ್ಬರು ಇವರಿಗೆ ಹೀಗೆ ಮಗ್ಗಲು ಕುಳಿತವರ ಬಾಯೊಳಗೆ ಸುಗ್ರಾಸಭೋಜನವನ್ನು ಇಡುತ್ತ ಎಲ್ಲರೂ ಸಂತೃಪ್ತರಾದರು.

ಇಲ್ಲಿ ತಿಳಿದುಬಂದ ರಹಸ್ಯಾರ್ಥವೇನೆಂದರೆ, ತಾವು ಒಬ್ಬರಿಗೆ ಕೊಟ್ಟಾಗ ಮತ್ತೊಬ್ಬರು ನಮಗೆ ಕೊಡುತ್ತಾರೆ. ಅಂತೆಯೇ ''ಕೊಟ್ಟದ್ದು ತನಗೆ'' ಸಿದ್ಧವಾಗುವದು. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಶಕ್ತ್ಯಾನುಸಾರವಾಗಿ ದಾನ ಮಾಡಬೇಕೆಂಬುದು ಪೂಜ್ಯರ ಆಶಯವಾಗಿದೆ ಎಂಬುದಾಗಿ ತಿಳಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೧೧ ಅಗಷ್ಟ ೧೯೯೩

(ಜ್ಞಾನಮಂದಿರ ಜಂಗವಾಡಿಮಠ ವಾರಾಣಸಿ)

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವಚನ-೧೬

ಧರ್ಮಾಚಾರಸ್ಥಲ-೫

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಪೂಜ್ಯ ಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗ ಮಂಗಲವಾಗಿ ಸಾಗುತ್ತಲಿವೆ. ನೀವೆಲ್ಲ ಪ್ರತಿದಿನ ಕ್ಷೇತ್ರ ಮಹಿಮೆಯನ್ನೂ ಸಹ ಆಲಿಸುತ್ತ ಬಂದಿದ್ದೀರಿ. ಶ್ರೀ ಕಾಶೀ ಮಹಾ ಕ್ಷೇತ್ರಕ್ಕೆ ಇರುವ ಅನೇಕ ಹೆಸರುಗಳಲ್ಲಿ ಅವಿಮುಕ್ತ ಕ್ಷೇತ್ರ ಎಂಬುವದೂ ಒಂದು ಅವಿನಾಮುಕ್ತಃ ಅವಿಮುಕ್ತಃ ಎಂಬ ವ್ಯುತ್ಪತ್ತಿಯ ಮೇರೆಗೆ ಅವಿ ಎಂದರೆ ಪಾಪ ಮುಕ್ತ ಎಂದರೆ ಬಿಡಲ್ಪಟ್ಟದ್ದು ಹೀಗೆ ಪಾಪನಿರ್ಮುಕ್ತವಾದದ್ದು ಎಂದರ್ಥ. ತಾತ್ಪರ್ಯ ವೇನೆಂದರೆ ಎಂತಹ ಪಾಪಿಯೇ ಇರಲಿ ಅವನು ಕಾಶೀ ಕ್ಷೇತ್ರವನ್ನು ಪ್ರವೇಶಿಸಿದನೆಂದರೆ ತನ್ನ ಪ್ರಾಕ್ತನ ಪಾಪಗಳಿಂದ ಮುಕ್ತನಾಗುತ್ತಾನೆ.

ಇನ್ನು ವಿಶ್ವೇಶ್ವರನು ಕಾಶಿಗೆ ಬಂದ ನಂತರ ಈ ಕ್ಷೇತ್ರವನ್ನು ಆತನು ಎಂದೂ ಬಿಟ್ಟು ಹೋಗದೆ ಇಲ್ಲಿಯೇ ಶಾಶ್ವತವಾಗಿ ನೆಲೆನಿಂತಿರುವ ಕಾರಣದಿಂದಾಗಿಯೂ ಇದಕ್ಕೆ ಅವಿಮುಕ್ತ ಕ್ಷೇತ್ರವೆಂದು ಕರೆದಿದ್ದಾರೆ. ಇಂತಹ ಪವಿತ್ರವಾದ ಕ್ಷೇತ್ರದಲ್ಲಿ ನೀವೆಲ್ಲ ಪ್ರತಿನಿತ್ಯ ಗಂಗಾ ಸ್ನಾನ ಇಷ್ಟಲಿಂಗಪೂಜೆ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನದಲ್ಲಿ ಪಾಲುಗೊಂಡು ಪ್ರತಿದಿನವೂ ಪಾವನವಾಗುತ್ತಿದ್ದೀರಿ.

ಶ್ರೀ ಸಿದ್ಧಾಂತಶಿಖಾಮಣಿಯ ಲಿಂಗಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದ ಅವಾಂತರ ಸ್ಥಲವಾದ ಧರ್ಮಾಚರದ ಸ್ಥಲದ ಬಗ್ಗೆ ಅನೇಕ ದಿನಗಳಿಂದ ಅಹಿಂಸಾ ಮುಂತಾದ ಧರ್ಮಗಳ ಬಗ್ಗೆ ಆಲಿಸುತ್ತ ನಿನ್ನೆಯ ದಿನ ಬ್ರಹ್ಮಚರ್ಯ, ದಯಾ, ಕ್ಷಮೆ, ಹಾಗೂ ದಾನಗಳ ಬಗ್ಗೆ ಸಾಕಷ್ಟು ಶ್ರವಣಮಾಡಿದ್ದೀರಿ. ಇಂದು ಪುನಃ ದಾನ, ಪೂಜೆ, ಜಪ ಹಾಗೂ ಧ್ಯಾನಾದಿಗಳ ಬಗ್ಗೆ ಪರ್ಯಾಲೋಚಿಸೋಣ.

ಈ ಧರ್ಮಾಚರಣೆಗಳೂ ಸಹ ದೇಹದ ಆಭೂಷಣಗಳೆಂಬುದಾಗಿ ಕರೆಯಲ್ಪ ಡುತ್ತವೆ. ಅಂತೆಯೇ ಓರ್ವ ಸುಭಾಷಿತಕಾರನು–

> ಹಸ್ತಸ್ಯ ಭೂಷಣಂ ದಾನಂ ಸತ್ಯಂ ಕಂಠಸ್ಯ ಭೂಷಣಮ್ ।
> ಶ್ರೋತ್ರಸ್ಯ ಭೂಷಣಂ ಶಾಸ್ತ್ರಂ ಭೂಷಣೈಃ ಕಿಂ ಪ್ರಯೋಜನಮ್ ॥

ಹೀಗೆ ಹೇಳಿದ್ದಾನೆ. ದಾನ ಮಾಡುವದು ಹಸ್ತದ ಆಭರಣವು. ಶಾಸ್ತ್ರಾದಿಗಳನ್ನು ಶ್ರವಣ ಮಾಡುವದು ಕಿವಿಯ ಆಭೂಷಣವು. ಅದರಂತೆ ಸತ್ಯವನ್ನು ನುಡಿಯುವದೇ ಕಂಠದ ಆಭೂಷಣವು. ದಾನಮಾಡದ ಮನುಷ್ಯನು ತನ್ನ ಹಸ್ತವನ್ನು ಸುವರ್ಣಾಭರಣಗಳಿಂದ ಅಲಂಕರಿಸಿಕೊಂಡಿದ್ದರೂ ಅವನ ಆ ಹಸ್ತಕ್ಕೆ ಸಮಾಜದಲ್ಲಿ ಯಾವ ಮರ್ಯಾದೆಯೂ ಇರುವದಿಲ್ಲ. ಅವನಲ್ಲಿರುವ ಕಾರ್ಪಣ್ಯಗುಣದಿಂದಾಗಿ ಎಲ್ಲರೂ ಅವನನ್ನು ತಿರಸ್ಕರಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುವವರೇ ವಿನಃ ಪುರಸ್ಕರಿಸುವವರೊಬ್ಬರೂ ಇರುವದಿಲ್ಲ. ಕಿವಿತುಂಬ ಅಲಂಕಾರಗಳನ್ನು ಹಾಕಿಕೊಂಡಿದ್ದರೂ ಒಮ್ಮೆಯೂ ಶಾಸ್ತ್ರಪ್ರವಚನಾದಿಗಳನ್ನು ಕೇಳದೇ ಇದ್ದರೆ ಆ ಕಿವಿಗಳು ಅಲಂಕೃತಗಳಾಗಿದ್ದರೂ ನಿರಲಂಕೃತಗಳೇ. ಕಿವಿಗೆ ಹಾಕಿರುವ ಆಭರಣಗಳು ಶಾಶ್ವತ ಗಳಾದ ಆಭರಣಗಳಲ್ಲ. ಒಂದು ವೇಳೆ ಅವು ಇದ್ದರೂ ಈ ಶರೀರವನ್ನು ಬಿಡುವವರೆಗೆ ಮಾತ್ರ ನಮ್ಮವುಗಳು. ಅನಂತರ ಎಲ್ಲರೂ ಬಡಿದಾಡಿ ಆ ಆಭರಣಗಳನ್ನು ಹಂಚಿಕೊಂಡು ಬಿಡುತ್ತಾರೆ. ಆದ್ದರಿಂದ ನಮ್ಮ ಜೊತೆಗೆ ಬರುವಂಥ ಶ್ರೋತ್ರದ ಆಭರಣವೆಂದರೆ ನಾವು ಆಲಿಸಿದ ಒಳ್ಳೆ ನುಡಿಗಳು.

ಇದರಂತೆ ಕಂಠಕ್ಕೆ ಶ್ರೇಷ್ಠವಾದ ಆಭರಣವೆಂದರೆ ಸತ್ಯವನ್ನು ನುಡಿಯುವದು. ಸದಾ ಸುಳ್ಳನ್ನು ಹೇಳುವ ವ್ಯಕ್ತಿಯು ತನ್ನ ಕಂಠವನ್ನು ಕನಕಾಭರಣಗಳಿಂದ ಅಲಂಕರಿಸಿಕೊಂಡಿದ್ದರೂ, ಒಂದೂ ಆಭರಣವಿಲ್ಲದೆ ಸದಾ ಸತ್ಯವನ್ನೇ ನುಡಿಯುವ ಮಹಾವ್ಯಕ್ತಿಯ ಮುಂದೆ ಕುಬ್ಜನಾಗಿ ತೋರುವನು. ಆದ್ದರಿಂದ ಹೊರಗಿನ ಆಭೂಷಣಗಳಿಗಿಂತಲೂ ಈ ಧರ್ಮಾಚರಣ ರೂಪವಾದ ಅಂತರಂಗ ಆಭೂಷಣಗಳು ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಾಸಗೊಳಿಸಿ ಅವನ ಆಧ್ಯಾತ್ಮಿಕ ಸೌಂದರ್ಯವನ್ನು ವರ್ಧಿಸುತ್ತವೆ. ಅಂತೆಯೇ ಆಚಾರ್ಯರು ಈ ಧರ್ಮಾಚರಣೆಗಳಿಗೆ ಹೆಚ್ಚಿನ ಮಹತ್ತ್ವವನ್ನು ಇತ್ತಿದ್ದಾರೆ.

''ದಾನಮೇಕಂ ಕಲೌಯುಗೇ'' ಎಂಬ ಉಕ್ತಿಗನುಸಾರವಾಗಿ ಈ ಕಲಿಯುಗದಲ್ಲಿ ಪ್ರತಿಯೊಬ್ಬರಿಗೂ ಆಚರಿಸಲು ಅನುಕೂಲವಾದ ಸರಳವಾದ ಧರ್ಮವೆಂದರೆ ದಾನವು. ದಾನವನ್ನು ಮಾಡುವಾಗ ತನ್ನ ಶಕ್ತಿ ಸಾಮರ್ಥ್ಯಗಳಿಗೆ ಅನುಗುಣವಾಗಿ ಮಾಡಬೇಕು. ದಾನಕ್ಕೆ ಅಷ್ಟೇ ಇಷ್ಟೇ ಎನ್ನುವ ಕಟ್ಟುಪಾಡುಗಳೇನಿರುವದಿಲ್ಲ. ಯಾರು ಎಷ್ಟೇ ಕೊಟ್ಟರೂ ಅದು ದಾನವೆಂಬುದಾಗಿ ತಿಳಿಯಲ್ಪಡುತ್ತದೆ. ಈ ದಾನದ ಮರ್ಮವನ್ನು ಸರ್ವಜ್ಞಕವಿಯು–

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಸುರಿವರೆ !
ಕೊಡಬೇಡ ಕೊಡದೆ ಇರಬೇಡ
.....................ಸರ್ವಜ್ಞ.

ಈ ತನ್ನ ವಚನದಲ್ಲಿ ಸ್ಪಷ್ಟ ಪಡಿಸಿದ್ದಾನೆ. ಅಂದರೆ ತನ್ನ ಶಕ್ತಿ ಭಕ್ತಿಗಳಿಗೆ ಅನುರೂಪವಾಗಿ ಸದಾ ದಾನ ಮಾಡುತ್ತಿರಬೇಕೆಂಬುದು ಸರ್ವಜ್ಞನ ಆಶಯವಾಗಿದೆ. ಈ ಜಗತ್ತಿನಲ್ಲಿರುವ ಜನರಲ್ಲಿ ದಾತೃತ್ವ ಗುಣವುಳ್ಳ ವ್ಯಕ್ತಿಗಳು ಅತೀ ವಿರಳ ಎಂಬ ವಿಷಯವನ್ನು ಓರ್ವ ಸುಭಾಷಿತಕಾರನು–

ಶತೇಷು ಜಾಯತೇಶೂರಃ ಸಹಸ್ರೇಷು ಚ ಪಂಡಿತಃ
ವಕ್ತಾ ದಶಸಹಸ್ರೇಷು ದಾತಾ ಭವತಿ ವಾ ನ ವಾ

ಹೀಗೆ ಪ್ರತಿಪಾದಿಸಿದ್ದಾನೆ. ತಾತ್ಪರ್ಯವೇನೆಂದರೆ ಒಂದು ನೂರು ಜನರಲ್ಲಿ ಒಬ್ಬ ಶೂರನೂ, ಸಾವಿರ ಜನರಲ್ಲಿ ಒಬ್ಬ ಪಂಡಿತನು ಮತ್ತು ಹತ್ತು ಸಾವಿರ ಜನರಲ್ಲಿ ಒಬ್ಬ ವಕ್ತಾರನು ದೊರೆಯಬಹುದು. ಆದರೆ ದಾನಮಾಡುವ ವ್ಯಕ್ತಿಯು ಸಿಗುವದೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದುರ್ಲಭವು. ಅನ್ಯರ ವಸ್ತುಗಳನ್ನು ತೆಗೆದುಕೊಳ್ಳಬೇಕೆನ್ನುವ ಈ ಭಾವನೆಯು ಎಲ್ಲರಲ್ಲಿಯೂ ಇರುತ್ತದೆ. ಆದರೆ ತನ್ನದನ್ನು ಅನ್ಯರಿಗೆ ಕೊಡಬೇಕೆನ್ನುವ ಉದಾರತೆಯು ಬಹಳ ಕಡಿಮೆ ಜನರಲ್ಲಿ ಕಂಡುಬರುತ್ತದೆ. ಕೆಲವು ಜನರಿಗೆ ವಸ್ತುಗಳನ್ನು ಕೊಡಲು ಆಗುವದಿಲ್ಲವಷ್ಟೇ ಅಲ್ಲ ಕೊಡು ಅನ್ನುವ ಶಬ್ದವೂ ರುಚಿಸುವದಿಲ್ಲ.

ಒಂದು ಊರಿನಲ್ಲಿ ಓರ್ವ ಕೃಪಣನು ಸಾಯಂಕಾಲ ಸಮಯ ದಾರಿ ಹಿಡಿದು ಹೋಗುವಾಗ ಬಾಯಿ ತೆರೆದಿಟ್ಟಿದ್ದ ಒಂದು ಹಗೆಯಲ್ಲಿ ಕಾಲುಜಾರಿ ಒಳಗೆ ಬಿದ್ದು ಬಿಟ್ಟನು. ಆಗ ಗಾಬರಿಗೊಂಡು ನನ್ನನ್ನು ಯಾರಾದರೂ ಮೇಲೆತ್ತಿರಿ ಮೇಲೆತ್ತಿರಿ ಎಂಬುದಾಗಿ ಚೀರಾಡತೊಡಗಿದನು. ಆಗ ದಾರಿಹೋಕರು ಹಗೆಯ ಸುತ್ತಲೂ ನಿಂತು ಒಳಗೆ ತಮ್ಮ ಕೈಗಳನ್ನು ಚಾಚಿ ನಿನ್ನ ಕೈಯನ್ನು ಕೊಡು ಮೇಲೆತ್ತುತ್ತೇವೆ ಎಂಬುದಾಗಿ ಎಷ್ಟೋ ಜನರು ತಮ್ಮ ಕೈಗಳನ್ನು ಚಾಚಿ ಅವನನ್ನು ಮೇಲೆತ್ತಲು ಪ್ರಯತ್ನಿಸಿದರೂ ಆತನು ತನ್ನ ಕೈಯನ್ನು ಕೊಡಲೇ ಇಲ್ಲ ಅಷ್ಟೇ ಅಲ್ಲ ನಾನು ಕೊಡುವದಿಲ್ಲ ಕೊಡುವದಿಲ್ಲ ಎಂದು ಕೂಗಾಡುತ್ತಿದ್ದನು. ಆಗ ಅವನ ವಿಚಿತ್ರವಾದ ವರ್ತನೆಯನ್ನು ಕಂಡು ಎಲ್ಲರಿಗೂ ಆಶ್ಚರ್ಯವೇ ಆಶ್ಚರ್ಯ, ನಾವೇನು ಕೇಳುತ್ತಿದ್ದೇವೆ ಕೇವಲ ಕೈಕೊಡು ಎಂದು ಮಾತ್ರ. ಇವನು ತನ್ನ ಕೈಯನ್ನು ಕೊಡದೇ ಹೋದರೆ ನಾವು ಈತನನ್ನು ಮೇಲಕ್ಕೆ ಎತ್ತುವದಾದರೂ ಹೇಗೆ ಎಂದು ಆಲೋಚಿಸುತ್ತ ಕುಳಿತುಕೊಂಡಾಗ ಹಗೆಯಲ್ಲಿ ಬಿದ್ದ ವ್ಯಕ್ತಿಗೆ ಸುಪರಿಚಿತನಾದ ವ್ಯಕ್ತಿಯೋರ್ವನು ಅಲ್ಲಿಗೆ ಬಂದನು. ನೆರೆದ ಜನರೆಲ್ಲ ನಡೆದ ಸಂಗತಿಯನ್ನು ಅವನಿಗೆ ವಿವರಿಸಿ ಹೇಳಿದರು. ಆಗ ಆತನು ಎಲ್ಲರನ್ನೂ ಹಿಂದಕ್ಕೆ ಸರಿಸಿ ಒಳಗೆ ಹಣಿಕಿ ಹಾಕಿ ತನ್ನ ಕೈಯನ್ನು ಚಾಚಿ 'ಇಗೋ ನನ್ನ ಕೈಯನ್ನು ತೆಗೆದುಕೋ ಎಂದೊಡನೆ ಆತನು ಇವನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡನು. ಆಗ ಅವನನ್ನು ಜಗ್ಗಿ ಮೇಲೆತ್ತಿಕೊಂಡನು. ನೆರೆದ ಜನರಿಗೆ ಇದರ ಮರ್ಮವೇ ತಿಳಿಯಲಿಲ್ಲ, ನಾವು ಎಷ್ಟೇ ಪ್ರಯತ್ನಪಟ್ಟರೂ ಈತನ ಕೈಯನ್ನು ಮೇಲಕ್ಕೆತ್ತಿಸಲಾಗಲಿಲ್ಲ, ನೀವು ಒಂದು ಕ್ಷಣದಲ್ಲಿ ಆತನ ಕೈಗಳನ್ನು ಮೇಲಕ್ಕೆತ್ತಿಸಿ ಹೊರ ತೆಗೆದಿರಲ್ಲಾ ಇದರ ರಹಸ್ಯವೇನು ? ಎಂಬುದಾಗಿ ಕೇಳಲು ಹಗೆಯಲ್ಲಿ ಬಿದ್ದ ವ್ಯಕ್ತಿಯ ಸ್ವಭಾವದ ಬಗ್ಗೆ ಸುಪರಿಚಿತನಾದ ಈತನು ಹೇಳಿದ್ದೇನೆಂದರೆ ಇವನು ಅತ್ಯಂತ ಕೃಪಣನಾದ ವ್ಯಕ್ತಿಯು. ತನ್ನ ಜೀವನದಲ್ಲಿ ಯಾರಿಗೂ ಏನನ್ನೂ ಕೊಟ್ಟವನಲ್ಲ. ಅಷ್ಟೇ ಅಲ್ಲಾ ಕೊಡು ಎನ್ನುವ ಶಬ್ದವನ್ನೂ ಸಹ ಈತನಿಗೆ ಸಹಿಸಲಾಗುವದಿಲ್ಲ. ಅಂತೆಯೇ ನೀವೆಲ್ಲ 'ಕೈಕೊಡು ಕೊಡು ಎಂದಾಗ ಆತನು ಕೊಡುವದಿಲ್ಲ ಕೊಡುವದಿಲ್ಲ ಎಂದು ಕೂಗಾಡುತ್ತಿದ್ದನು. ಆದರೆ ಕೈ ತೆಗೆದುಕೋ ಎಂದು ನುಡಿದಾಕ್ಷಣ ನನ್ನ ಕೈಯನ್ನು ಹಿಡಿದುಕೊಂಡು ಮೇಲಕ್ಕೆ ಬಂದನು. ನೋಡಿದಿರಾ ! ಕೃಪಣರ ಸ್ವಭಾವವನ್ನು ಇದನ್ನು ತಿಳಿದೇ ಸುಭಾಷಿತಕಾರನು– ''ದಾತಾ ಭವತಿ ವಾ ನ ವಾ'' ಎಂಬುದಾಗಿ ಹೇಳಿದ್ದಾನೆ.

ಈ ದಾನವು ಸೋಪಾಧಿಕ ನಿರುಪಾದಿಕ ಮತ್ತು ಸಹಜವೆಂಬುದಾಗಿ ಮೂರು ಪ್ರಕಾರವಾಗಿರುತ್ತದೆ. ಪ್ರತಿಫಲದ ಅಪೇಕ್ಷೆಯನ್ನಿಟ್ಟು ಕೊಟ್ಟ ದಾನಕ್ಕೆ ಸೋಪಾಧಿಕ ವೆನ್ನುವರು. ಪ್ರತಿಫಲದ ಅಪೇಕ್ಷೆಯಿಲ್ಲದೆ ನಿಷ್ಕಾಮ ಭಾವನೆಯಿಂದ ಮಾಡಿದ ದಾನಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರುಪಾಧಿಕವೆನ್ನುತ್ತಾರೆ. ಇನ್ನು ಕೊಡುವ ಮತ್ತು ತೆಗೆದುಕೊಳ್ಳುವ ವ್ಯಕ್ತಿಗಳಲ್ಲಿ ಹಾಗೂ ದಾನದ ಪದಾರ್ಥದಲ್ಲಿ ಸಂಪೂರ್ಣ ಶಿವಮಯ ಭಾವನೆಯನ್ನು ತಾಳಿ ಮಾಡುವ ದಾನಕ್ಕೆ 'ಸಹಜದಾನವೆಂದು' ಕರೆಯುತ್ತಾರೆ. ಈ ಮೂರು ವಿಧದ ದಾನಗಳಲ್ಲಿ 'ಸಹಜ ದಾನವೇ ಶ್ರೇಷ್ಠವಾದುದು. ಇದನ್ನೇ ಸರ್ವರೂ ಮೈಗೂಡಿಸಿಕೊಳ್ಳಬೇಕೆಂಬುದು ಪೂಜ್ಯರ ಆಶಯವಾಗಿದೆ.

ಇನ್ನು ಈ ಮುಂದೆ ಹೇಳಿರುವ ಧರ್ಮಾಚರಣೆಯೇ ಪೂಜೆಯು. ಅನೇಕ ವಿಧಗಳಾದ ಉಪಚಾರದ ಸಾಮಗ್ರಿಗಳಿಂದ ತನ್ನ 'ಇಷ್ಟದೇವರನ್ನು ಮನಃಪೂರ್ವ ಕವಾಗಿ ಆರಾಧಿಸುವ ಕ್ರಿಯೆಗೆ ಪೂಜೆಯೆಂಬುದಾಗಿ ಕರೆಯುತ್ತಾರೆ. ಈ ಪೂಜೆಯು ಬಾಹ್ಯ ಮತ್ತು ಅಂತರಂಗವೆಂಬುದಾಗಿ ಎರಡು ವಿಧವಾಗಿರುತ್ತದೆ. ಬಹಿರಂಗದಲ್ಲಿ ಸಾಕಾರದ ಪೂಜೆಯಾದರೆ ಅಂತರಂಗದಲ್ಲಿ ಸಾಕಾರ ನಿರಾಕಾರಗಳೆರಡರ ಪೂಜೆಯು ಸಂಭವಿಸುತ್ತದೆ. ಶಿವನು ನಿರ್ಗುಣ ನಿರಾಕಾರನಿರುವಂತೆ ಸಗುಣ ಸಾಕಾರನೂ ಇದ್ದಾನೆ. ದೇವ ಮಂದಿರಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಶಿವಲಿಂಗಾದಿಗಳು ಸಗುಣ–ಸಾಕಾರ ಸ್ವರೂಪಗಳಾದರೆ ವೀರಶೈವರ ಇಷ್ಟಲಿಂಗ ಮತ್ತು ಪ್ರಾಣಲಿಂಗಾದಿಗಳ ಪೂಜೆಯು ನಿರ್ಗುಣ ನಿರಾಕಾರದ ಪೂಜೆಯಾಗಿರುತ್ತದೆ. ಅಂತೆಯೇ ವೀರಶೈವರ ಇಷ್ಟಲಿಂಗ ಪೂಜೆಯು ಒಂದು ಮೂರ್ತಿಪೂಜೆಯಾಗಿರದೆ ಅದು ಆತ್ಮಾನುಸಂಧಾನದ ಶಿವಯೋಗ ವಾಗಿರುತ್ತದೆ.

ಅತೀ ಚಂಚಲವಾದ ಚಿತ್ತವನ್ನು ಏಕಾಗ್ರಗೊಳಿಸುವದಕ್ಕಾಗಿ ಮೊದಲು ಉಪಚಾರಗಳಿಂದ ಇಷ್ಟಲಿಂಗವನ್ನು ಅನೇಕ ಘಂಟೆಗಳ ಕಾಲ ಪೂಜೆ ಮಾಡಬೇಕು. ಯಾವಾಗ ಚಿತ್ತದಲ್ಲಿ ಸ್ಥೈರ್ಯವು ಪ್ರಾಪ್ತವಾಗುವದೋ ಆಗ ಯಾವದೇ ಉಪಚಾರಗಳ ಅವಶ್ಯಕತೆಯಿಲ್ಲದೆ ಕೇವಲ ತನ್ನಿಷ್ಟಲಿಂಗವನ್ನು ತನ್ನ ವಾಮಹಸ್ತ ಪೀಠದಲ್ಲಿರಿಸಿ ದೃಷ್ಟಿ ಯೋಗ (ತ್ರಾಟಕ ಯೋಗ)ದ ಮೂಲಕ ಆ ಲಿಂಗದೊಂದಿಗೆ ಆತ್ಮಾನುಸಂಧಾನವನ್ನು ಮಾಡುತ್ತ ಶಿವೋऽಹಂ ಭಾವನೆಯನ್ನು ತಾಳುವದೇ ಅಂತರಂಗದ ಪೂಜೆಯು, ಹೀಗೆ ಕ್ರಮವಾಗಿ ಬಹಿರಂಗದಿಂದ ಅಂತರಂಗಕ್ಕೆ ಪ್ರಯಾಣ ಬೆಳೆಸಲು ಪೂಜೆಯು ಅತ್ಯಂತ ಸಹಾಯಕವಾಗಿರೋಣದರಿಂದ ಪ್ರತಿಯೊಬ್ಬರು ಇಷ್ಟಲಿಂಗದ ಬಹಿರಂಗ ಹಾಗೂ ಅಂತರಂಗ ಪೂಜೆಯಲ್ಲಿ ಆಸಕ್ತರಾಗಬೇಕು.

ಪೂಜೆಯ ನಂತರ ಬರುವ ಧರ್ಮಾಚರಣೆಯೇ ''ಜಪವು, ''ತಜ್ಜಪಃ ತದರ್ಥ ಭಾವನಮ್'' ಎಂಬ ಯೋಗಶಾಸ್ತ್ರದ ಉಕ್ತಿಗನುಸಾರವಾಗಿ ಭಗವಂತನ ನಾಮದ ಅರ್ಥಾನುಸಂಧಾನವನ್ನು ಮಾಡುತ್ತ ಆ ನಾಮವನ್ನು ಪುನಃ ಪುನಃ ಆವೃತ್ತಿಗೊಳಿಸುವದೇ ಜಪವು. ಇದೂ ಒಂದು ನಾಮಾಭ್ಯಾಸವೆಂದು ಕರೆಯಲ್ಪಡುತ್ತದೆ. ಹೀಗೆ ಇಷ್ಟಮಂತ್ರದ ಅರ್ಥವನ್ನರಿತು ಅದರ ಆವೃತ್ತಿಯನ್ನು ಮಾಡುತ್ತಿರುವಾಗ ಇಷ್ಟದ ಜೊತೆಗೆ ಸಾಧಕನ ಸಾಮರಸ್ಯ ಸ್ಥಿತಿಯು ಪ್ರಾಪ್ತವಾಗುತ್ತದೆ. ಒಂದು ಚಕ್ರವು ತನ್ನ ಮೈಸುತ್ತ ತಿರುಗುತ್ತಿರುವಾಗ ಅಲ್ಲೊಂದು ಊರ್ಜಾಶಕ್ತಿಯು ನಿರ್ಮಾಣವಾಗುವದನ್ನು ಕಾಣುತ್ತೇವೆ. ಅದುವೇ ವಿದ್ಯುದ್ರೂಪದಲ್ಲಿ ಸರ್ವತ್ರ ಬಳಕೆಯಾಗಿ ಮನುಷ್ಯನ ಲೌಕಿಕ ಜೀವನಕ್ಕೆ ಅನುಕೂಲತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯನ್ನು ಒದಗಿಸಿ ಕೊಡುತ್ತದೆ. ಇದೇ ಪ್ರಕಾರವಾಗಿ ಭಗವಂತನ ನಾಮದ ಆವೃತ್ತಿಯಿಂದ ಜಪಮಾಡುವವನ ಮನಸ್ಸಿನಲ್ಲಿ ಪುಣ್ಯರೂಪವಾದ ಒಂದು ಊರ್ಜಾಶಕ್ತಿಯು ನಿರ್ಮಾಣವಾಗಿ ಜಪಮಾಡುವವನ ಎಲ್ಲ ದೋಷಗಳನ್ನು ದೂರೀಕರಿಸಿ, ಅವನನ್ನು ಪವಿತ್ರಾತ್ಮನನ್ನಾಗಿ ಮಾಡುತ್ತದೆ. ಅಂತೆಯೇ ''ಜಪತೊ ನಾಸ್ತಿ ಪಾತಕಮ್'' ಎಂಬುದಾಗಿ ಹೇಳಲಾಗಿದೆ. ಆದ್ದರಿಂದ ಪ್ರತಿಯೊಬ್ಬರು ಇಷ್ಟಮಂತ್ರದ ಜಪವನ್ನು ಸದಾ ಮಾಡುತ್ತಿರಬೇಕು. ವೈಯಕ್ತಿಕವಾಗಿಯಾಗಲೀ ಸಾಮೂಹಿಕವಾಗಿಯಾಗಲೀ ಮಾಡುತ್ತಿರುವ ಜಪಕ್ಕೆ ಜಪಯಜ್ಞವೆಂತಲೂ ಕರೆಯುತ್ತಾರೆ. ಇದು ಎಲ್ಲ ವಿಧ ಯಜ್ಞಗಳಲ್ಲಿ ಸರ್ವಶ್ರೇಷ್ಠವಾದುದು. ಬೇರೆ ಯಜ್ಞಾದಿಗಳಲ್ಲಿ ಪ್ರಾಣಹಿಂಸೆ ಮೊದಲಾದ ದೋಷಗಳಿರುವದು ಕಂಡುಬರುತ್ತದೆ. ಆದರೆ ಜಪಯಜ್ಞವು ಅಂಥ ಯಾವದೇ ವಿಧವಾದ ದೋಷಗಳಿಂದ ದೂಷಿತವಾಗಿರುವದಿಲ್ಲ. ಇದೂ ಅಲ್ಲದೆ ಈ ಯಜ್ಞವನ್ನಾಚರಿಸಲು ಬಹುಧನಾದಿಗಳ ಅಪೇಕ್ಷೆಯೂ ಸಹ ಇರುವದಿಲ್ಲ. ಅಂತೆಯೇ ರಂಕ ಇರಲಿ ರಾಜನೇ ಇರಲಿ ಎಲ್ಲರಿಗೂ ಇದರಲ್ಲಿ ಸಮಾನವಾದ ಅಧಿಕಾರವಿದೆ. ಭಗವಂತನ ನಾಮ ಜಪಕ್ಕೆ ಜಾತಿಯ ತಾರತಮ್ಯಗಳೂ ಸಹ ಇರುವದಿಲ್ಲ. ಭಕ್ತಿಯುಳ್ಳ ವ್ಯಕ್ತಿಯು ಯಾವದೇ ಜಾತಿಯವನಿದ್ದರೂ ಭಗವನ್ನಾಮ ಜಪವನ್ನು ಮಾಡಲು ಯಾವ ಅಡೆತಡೆಗಳೂ ಇರುವದಿಲ್ಲ.

ಈ ಜಪವು ವಾಚಿಕ, ಉಪಾಂಶು ಮತ್ತು ಮಾನಸಿಕವೆಂಬುದಾಗಿ ಮೂರು ವಿಧವಾಗಿರುತ್ತದೆ. ಅನ್ಯರಿಗೆ ಕೇಳಿಸುವ ಹಾಗೆ ಜಪಮಾಡಿದರೆ ಅದು ವಾಚಕವೆನಿಸುವದು. ಇನ್ನು ತನ್ನ ಉಚ್ಚಾರಣೆಯು ಕೇವಲ ತನಗೆ ಮಾತ್ರ ಕೇಳುತ್ತಿದ್ದರೆ ಅದಕ್ಕೆ ಉಪಾಂಶು ಜಪವೆನ್ನುವರು. ಇದೇ ಪ್ರಕಾರವಾಗಿ ತನಗೂ ಕೇಳದ ಹಾಗೆ ಕೇವಲ ಮನಸ್ಸಿನಲ್ಲಿ ಮಾಡುವ ನಾಮದ ಆವೃತ್ತಿಗೆ ಮಾನಸಿಕ ಜಪವೆನ್ನುವರು. ಇವುಗಳಲ್ಲಿ ಮಾನಸಿಕ ಜಪವೇ ಸರ್ವಶ್ರೇಷ್ಠವಾದದ್ದು. ಕಾರಣ ಸರ್ವರಿಗೂ ಸುಲಭವಾದ ಈ ಜಪಾನುಷ್ಠಾನವನ್ನು ಪ್ರತಿಯೊಬ್ಬರು ಮಾಡಬೇಕು.

ಇದೇ ಪ್ರಕಾರವಾಗಿ ಮುಂಬರುವ ಧರ್ಮಾಚರಣೆಯೆಂದರೆ ಧ್ಯಾನವು. ಯಾವ ದೇವರ ನಾಮಜಪವನ್ನು ಮಾಡುತ್ತಿರುತ್ತೇವೆಯೋ ಆ ದೇವರ ಸಗುಣ ಇಲ್ಲವೆ ನಿರ್ಗುಣ ಸ್ವರೂಪವನ್ನು ಮನಸ್ಸಿನಲ್ಲಿ ಸದಾ ಚಿಂತಿಸುವದಕ್ಕೆ ಧ್ಯಾನವೆಂದು ಕರೆಯುತ್ತಾರೆ. ಸಂಸಾರದ ಚಿಂತೆಯು ದುಃಖಕ್ಕೆ ಕಾರಣೀಭೂತವಾದ ಶಿವನ ಚಿಂತನಾರೂಪವಾದ ಧ್ಯಾನವು ಎಲ್ಲ ದುಃಖಗಳ ನಿವೃತ್ತಿಗೆ ಕಾರಣವಾಗಿರುತ್ತದೆ. ''ತತ್ರ ಪ್ರತ್ಯಯೈಕ ತಾನತಾ ಧ್ಯಾನಮ್'' ಎಂಬ ಯೋಗಸೂತ್ರಾನುಸಾರವಾಗಿ ತಾನು ಚಿಂತಿಸುತ್ತಿರುವ ಭಗವತ್ ಸ್ವರೂಪದ ಚಿಂತನೆಯಲ್ಲಿ ಬೇರಾವ ವೃತ್ತಿಯು ಏಳದ ಹಾಗೆ ಅದೊಂದೇ ವೃತ್ತಿಯು ಅಖಂಡ ಧಾರಾಪ್ರವಾಹದಂತೆ ನಡೆಯುತ್ತಿದ್ದರೆ ಅದಕ್ಕೇನೇ ಧ್ಯಾನವೆಂದು ಕರೆಯುತ್ತಾರೆ. ''ಧ್ಯಾನಂ ಸ್ಯಾತ್ ಷಷ್ಟಿನಾಡಿಕಮ್'' ಎಂಬ ಸ್ಕಂಧ ಪುರಾಣದ ಉಕ್ತಿಯಂತೆ ಅರವತ್ತು ಘಟಿಕಾ ಪರ್ಯಂತವಾಗಿ ಅಂದರೆ ಇಪ್ಪತ್ನಾಲ್ಕು ಘಂಟೆಗಳ ಕಾಲ ಚಿತ್ತ ವೃತ್ತಿಯು ಏಕಾಗ್ರವಾಗಿದ್ದು ತನ್ನ ಇಷ್ಟ ಚಿಂತನೆಯಲ್ಲಿ ತಲ್ಲೀನವಾಗಿದ್ದರೆ ಅದಕ್ಕೆ 'ಧ್ಯಾನ' ಎಂಬುದಾಗಿ ಕರೆಯುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀ ಸಿದ್ಧಾಂತ ಶಿಖಾಮಣಿಯ ಧರ್ಮಾಚಾರ ಸ್ಥಲದಲ್ಲಿ ಅಹಿಂಸೆಯನ್ನೇ ಮೊದಲು ಮಾಡಿಕೊಂಡು ಧ್ಯಾನ ಪರ್ಯಂತವಾದ ದಶವಿಧ ಧರ್ಮಾಚರಣೆಯನ್ನು ಉಪದೇಶಿಸಿದ್ದಾರೆ. ಇವುಗಳಲ್ಲಿ ಎಲ್ಲವುಗಳನ್ನಾಗಲಿ ಇಲ್ಲವೆ ತನಗೆ ಸಾಧ್ಯವಾದ ಯಾವದೊಂದನ್ನಾಗಲೀ ನಿಷ್ಠೆಯಿಂದ ಆಚರಿಸುವ ವ್ಯಕ್ತಿಯೇ ಧಾರ್ಮಿಕನೆಂದು ಕರೆಸಿಕೊಳ್ಳುತ್ತಾನೆ. ಕಾರಣ ಪ್ರತಿಯೊಬ್ಬರು ತಮ್ಮ ಶಕ್ತ್ಯಾನುಸಾರವಾಗಿ ಈ ಧರ್ಮಾಚರಣೆಗಳನ್ನು ಆಚರಿಸಬೇಕೆಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೧೨ ಅಗಷ್ಟ ೧೯೯೩
(ಜ್ಞಾನಮಂದಿರ ಜಂಗಮವಾಡಿ ಮಠ ವಾರಾಣಸಿ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧರ್ಮಾಚಾರಸ್ಥಲ-೬

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಪೂಜ್ಯ ಮಹಾಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ನೀವೆಲ್ಲ ಪ್ರತಿದಿನ ಕ್ಷೇತ್ರಮಹಿಮೆಯನ್ನು ಸಹ ಆಲಿಸುತ್ತ ಬಂದಿದ್ದೀರಿ. ಕಾಶೀ ಮಹಾಕ್ಷೇತ್ರಕ್ಕೆ ಇರುವ ಅನೇಕ ನಾಮಗಳಲ್ಲಿ ವಾರಾಣಸಿ ಎಂಬುವದು ಸಹ ಒಂದು ಗಂಗೋತ್ರಿಯಿಂದ ದಕ್ಷಿಣವಾಹಿನಿಯಾಗಿ ಹರಿಯುತ್ತ ಬಂದಿರುವ ಗಂಗೆಯು ಕಾಶೀ ಮಹಾಕ್ಷೇತ್ರದಲ್ಲಿ ಉತ್ತರವಾಹಿನಿಯಾಗಿದೆ. ಈ ನದಿಗೆ ವರುಣಾ ಮತ್ತು ಅಸ್ಸೀ ಎಂಬ ಎರಡು ನದಿಗಳು ಪಶ್ಚಿಮ ದಿಕ್ಕಿನಿಂದ ಹರಿದು ಬಂದು ಕೂಡುತ್ತವೆ. ಈ ವರುಣಾ ಮತ್ತು ಅಸ್ಸೀ ನದಿಗಳ ನಡುವಿನ ಭೂಖಂಡಕ್ಕೆ ವಾರಾಣಸಿಯೆಂದು ಕರೆಯುತ್ತಾರೆ. ಇಲ್ಲಿ ಹರಿಯುತ್ತಿರುವ ಗಂಗಾನದಿಯಲ್ಲಿ ಮೊಸಳೆ ಮೊದಲಾದ ಕ್ರೂರ ಜಲಚರ ಪ್ರಾಣಿಗಳು ಇರುತ್ತಿದ್ದರೂ ವರುಣಾ ಹಾಗೂ ಅಸ್ಸೀ ನದಿಗಳ ಮಧ್ಯದಲ್ಲಿರುವ ಗಂಗಾ ಪ್ರವಾಹದಲ್ಲಿ ಈ ಕ್ರೂರ ಜಲಚರ ಪ್ರಾಣಿಗಳ ಪ್ರವೇಶಕ್ಕೆ ಶಿವನ ನಿಷೇಧಾಜ್ಞೆಯಿದೆ ಅಂತೆಯೇ ಈ ಪ್ರದೇಶದಲ್ಲಿ ಇನ್ನೂವರೆಗೂ ಮೊಸಳೆ ಮುಂತಾದವುಗಳಿಂದ ಯಾವುದೇ ಪ್ರಾಣಹಾನಿಯು ಉಂಟಾಗಿರುವದಿಲ್ಲ. ಇದೆಲ್ಲವೂ ವಾರಾಣಸಿಯ ಮಹಿಮೆ ಹಾಗೂ ವಿಶ್ವೇಶ್ವರನ ಕೃಪಾಶೀರ್ವಾದ.

ಇಂತಹ ಪರಮಪಾವನವಾದ ವಾರಾಣಸಿ ಮಹಾ ಕ್ಷೇತ್ರದಲ್ಲಿ ನೀವುಗಳೆಲ್ಲ ಶ್ರೀ ಸಿದ್ಧಾಂತ ಶಿಖಾಮಣಿಯ ಲಿಂಗ ಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದಲ್ಲಿ ಬರುವ ಧರ್ಮಾಚಾರಸ್ಥಲದ ಬಗ್ಗೆ ಆಶೀರ್ವಚನಗಳನ್ನು ಆಲಿಸುತ್ತಿದ್ದೀರಿ. ನಿನ್ನೆಯ ವರೆಗೆ ಅಂಹಿಸಾ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜೆ, ಜಪ ಮತ್ತು ಧ್ಯಾನಗಳೆಂಬ ದಶವಿಧ ದರ್ಮಗಳ ಬಗ್ಗೆ ಕೂಲಂಕಷವಾಗಿ ತಿಳಿದುಕೊಂಡಿದ್ದೀರಿ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಈ ಧರ್ಮಾಚಾರ ಸ್ಥಲದ ಬಗ್ಗೆ ಇನ್ನಷ್ಟು ಮಹತ್ತ್ವವನ್ನು ನಿರೂಪಿಸುತ್ತ ಪುನಃ–

ಶಿವೇನ ವಿಹಿತೋ ಯಸ್ಮಾದಾಗಮೈರ್ಧರ್ಮ ಸಂಗ್ರಹಃ ।
ತಸ್ಮಾತ್ತಮಾಚರನ್ವಿದ್ವಾನ್ ತತ್ ಪ್ರಸಾದಾಯ ಕಲ್ಪ್ಯತೇ ॥

(ಸಿ. ಶಿ. ೧೬–೬೦)

ಈ ತೆರನಾಗಿ ಉಪದೇಶಿಸಿದ್ದಾರೆ. ಶಿವನು ಶಿವಾಗಮುಗಳ ಮೂಲಕ ಈ ಧರ್ಮಗಳನ್ನು ಜನಕಲ್ಯಾಣಕ್ಕಾಗಿ ಉಪದೇಶಿಸಿದ್ದಾನೆ. ಹೀಗೆ ಇವುಗಳು ಶಿವನಿಂದ ಉಪದಿಷ್ಟಗಳಾಗಿ ರುವದರಿಂದ ಪ್ರತಿಯೊಬ್ಬರೂ ಇವುಗಳನ್ನು ಆಚರಣೆಯಲ್ಲಿ ತರಲು ಯತ್ನಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾರು ಇವುಗಳನ್ನು ಆಚರಣೆಯಲ್ಲಿ ತರುತ್ತಾರೋ ಅವರ ಮೇಲೆ ಶಿವನ ಅನುಗ್ರಹವು ಉಂಟಾಗುತ್ತದೆ ಎಂಬುದು ಪೂಜ್ಯರ ಅಭಿಪ್ರಾಯವಾಗಿದೆ.

ವೇದ ಮತ್ತು ಆಗಮಗಳು ನಮ್ಮ ದೇಶದ ಪ್ರಾಚೀನ ವಾಙ್ಮಯಗಳು. ಇವೆರಡೂ ಶಿವನಿಂದಲೇ ಹೊರಬಂದವುಗಳಾಗಿವೆ. ವೇದಭಾಗವು ಶಿವನ ಶ್ವಾಸೋಚ್ಛ್ವಾಸ ಮೂಲಕವಾಗಿ ಹೊರಹೊಮ್ಮಿದರೆ ಇಪ್ಪತ್ತೆಂಟು ಶಿವಾಗಮಗಳು ಆತನ ವೈಖರಿಯ ವಾಣಿಯಿಂದ ಉಪದಿಷ್ಟಗಳಾಗಿವೆ. ಇವೆರಡರಲ್ಲಿ ಉಪದೇಶಿಸಲ್ಪಟ್ಟಿದ್ದೆಲ್ಲವೂ ಶಿವನ ಆದೇಶವಾಗಿರುತ್ತದೆ. ಆದ್ದರಿಂದ ಅಹಿಂಸಾದಿ ಧರ್ಮಾಚರಣೆಗಳನ್ನು ಪರಿಪಾಲಿಸಿ ದರೆ ಶಿವನ ಆಜ್ಞೆಯನ್ನು ಪರಿಪಾಲಿಸಿದಂತೆಯೇ ಸರಿ. ಹೀಗೆ ಶಿವನ ಆದೇಶವನ್ನು ಪರಿಪಾಲಿಸುವ ವ್ಯಕ್ತಿಗೆ ಶಿವನ ಅನುಗ್ರಹವು ಪ್ರಾಪ್ತವಾಗುವದು ಶಿವನ ಅನುಗ್ರಹವಿಲ್ಲದೆ ಆದಾವ ಜೀವಿಯೂ ಕೈವಲ್ಯವನ್ನು ಪಡೆಯಲಾರನು. ಆದಕಾರಣ ಶಿವಕೃಪೆಯ ಪ್ರಾಪ್ತಿಗಾಗಿ ಈ ಪೂರ್ವದಲ್ಲಿ ಹೇಳಿದ ದಶವಿಧ ಧರ್ಮಾಚರಣೆಗಳನ್ನು ಪರಿಪಾಲಿಸ ಬೇಕು.

ಧರ್ಮಾಚರಣೆಯಿಲ್ಲದವನು ಪಶುವಿಗೆ ಸಮಾನನಾಗಿರುತ್ತಾನೆ. ಆದರೆ ಧರ್ಮಾ ಚರಣೆಯನ್ನು ಮಾಡುವವನು ಪಶುತ್ವದಿಂದ ಮುಕ್ತನಾಗಿ ಪಶುಪತಿಯ ಸ್ಥಿತಿಯನ್ನು ಪಡೆದುಕೊಳ್ಳುತ್ತಾನೆ. ಅಧರ್ಮಾಚರಣೆಯಲ್ಲಿ ಮನುಷ್ಯನು ಸಹಜವಾಗಿ ಪ್ರವೃತ್ತನಾಗು ವಂತೆ ಧರ್ಮಾಚರಣೆಯಲ್ಲಿ ಪ್ರವೃತ್ತನಾಗುವದಿಲ್ಲ. ಅಂತೆಯೇ ವೇದವು 'ಧರ್ಮಂಚರ' ಅಂದರೆ ಧರ್ಮದಿಂದ ನಡೆ ಅರ್ಥಾತ್ ಧರ್ಮವನ್ನು ಆಚರಿಸು ಎಂಬುದಾಗಿ ಆದೇಶಿಸಿದೆ. ಮನುಷ್ಯನ ಸ್ವಾಭಾವಿಕವಾದ ಅಧರ್ಮ ಪ್ರವೃತ್ತಿಯನ್ನು ಕಂಡು ಒಬ್ಬ ಸುಭಾಷಿತ ಕಾರನು–

> ಆಶ್ಚರ್ಯಮೇತದ್ ಮನುಷ್ಯಲೋಕೇ ಅಮೃತಂ ಪರಿತ್ಯಜ್ಯವಿಷಂ ಪಿ ಬಂತಿ ।
> ಧರ್ಮಂ ಪ್ರಸಂಗಾದ ಪಿ ನಾಚರಂತಿ ಪಾಪಂ ಪ್ರಯತ್ನೇನ ಸಮಾಚರಂತಿ ॥

ಹೀಗೆ ವಿವರಿಸಿದ್ದಾನೆ. ಈ ಮನುಷ್ಯಲೋಕದಲ್ಲಿ ಬಂದ ಪ್ರತಿಯೊಬ್ಬನೂ ಧರ್ಮವನ್ನು ಆಚರಿಸುವ ಪ್ರಸಂಗ ಬಂದೊದಗಿದರೂ ಅದನ್ನು ಮಾಡದೆ ಪ್ರಯತ್ನಪೂರ್ವಕವಾಗಿ ಪಾಪಾಚರಣೆಯನ್ನು ಮಾಡುತ್ತಿರುತ್ತಾನೆ. ಹೀಗೆ ಮಾಡುವದನ್ನು ಕಂಡಾಗ ಅಮೃತವನ್ನು ತ್ಯಜಿಸಿ ವಿಷವನ್ನು ಕುಡಿಯುವವನ ಗತಿಯು ಬಂದೊದಗಿದೆಯಲ್ಲಾ ಎಂದು ಯಾರಿಗೆ ತಾನೆ ಆಶ್ಚರ್ಯವಾಗಲಿಕ್ಕಿಲ್ಲ?

ಧರ್ಮಾಚರಣೆಯನ್ನು ಹೇಗೆ ಮಾಡಬೇಕು ? ಎಂಬ ಪ್ರಶ್ನೆಯುದ್ಭವಿಸಿದಾಗ ಪೂಜ್ಯರು–

> ಅಧರ್ಮಂ ನಸ್ಪೃಶೇತ್ ಕಿಂಚಿತ್ ವಿಹಿತಂ ಧರ್ಮಮಾಚರೇತ್ ।
> ತಂ ಚ ಕಾಮವಿನಿರ್ಮುಕ್ತಂ ತಮಪಿ ಜ್ಞಾನಪೂರ್ವಕಮ್ ॥

(ಸಿ. ಶಿ. ೧೬–೬೧)

ಹೀಗೆ ಆದೇಶಿಸಿದ್ದಾರೆ; ತನ್ನ ಜೀವನದಲ್ಲಿ ಅಧರ್ಮವನ್ನು ಆಚರಿಸುವ ಪ್ರಸಂಗ ಬಂದರೂ ಅದನ್ನು ಎಂದೂ ಆಚರಿಸಕೂಡದು. ಅಂದರೆ ಹಿಂಸೆಯನ್ನು ಮಾಡುವ ಸುಳ್ಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳುವ ಮತ್ತು ಕಳ್ಳತನವನ್ನು ಮಾಡುವ ಮುಂತಾದ ಸನ್ನಿವೇಶಗಳು ಬಂದರೂ ಸಹ ಸಂಯಮವನ್ನು ತಾಳಿ ಅವುಗಳು ಆಗದಂತೆ ಎಚ್ಚರಿಕೆ ವಹಿಸಬೇಕು ಆದರೆ ಶಾಸ್ತ್ರದಲ್ಲಿ ವಿಧಿಸಲ್ಪಟ್ಟ ಅಹಿಂಸೆ ಸತ್ಯ ಮುಂತಾದ ಧರ್ಮಾಚರಣೆಗಳನ್ನು ಪ್ರಯತ್ನ ಪೂರ್ವಕವಾಗಿ ಆಚರಿಸಬೇಕು. ಇವುಗಳನ್ನು ಆಚರಿಸುವಾಗಲೂ ಸಹ ಯಾವದೇ ಪ್ರಕಾರದ ಫಲಾಪೇಕ್ಷೆಯು ಮನಸ್ಸಿನಲ್ಲಿ ಬರದಿರಬೇಕಲ್ಲದೆ ತಾನು ಆಚರಿಸುವ ಧರ್ಮಾಚರಣೆಯ ಬಗ್ಗೆ ಸಂಪೂರ್ಣವಾದ ತಿಳುವಳಿಕೆಯು ಸಹ ಇರಬೇಕು. ತಾನು ಆಚರಿಸುವ ಕ್ರಿಯಾದಿಗಳ ಬಗ್ಗೆ ಪರಿಪೂರ್ಣವಾದ ತಿಳುವಳಿಕೆಯು ಇರದೇ ಹೋದರೆ ಒಮ್ಮೊಮ್ಮೆ ಬಹುದೊಡ್ಡ ಅನರ್ಥವಾಗುವ ಪ್ರಸಂಗವೂ ಸಹ ಬಂದೊದಗಬಹುದು.

ಪಂಚತಂತ್ರದಲ್ಲಿ ಪ್ರಸ್ತುತ ಸಂದರ್ಭೋಚಿತವಾದ ಒಂದು ಕಥೆಯುಂಟು. ಓರ್ವ ರಾಜನು ಒಂದು ಮಂಗವನ್ನು ಸಾಕಿದ್ದನು. ರಾಜನು ಅದನ್ನು ಅತಿಯಾಗಿ ಪ್ರೀತಿಸುತ್ತಿದ್ದನು. ಹೀಗಾಗಿ ಅರಮನೆಯೊಳಗೆ ಆ ಮಂಗಕ್ಕೆ ಎಲ್ಲಿಯೂ ಪ್ರತಿಬಂಧಕವೇ ಇರಲಿಲ್ಲ. ಒಮ್ಮೆ ಮಧ್ಯಾಹ್ನದ ವೇಳೆಯಲ್ಲಿ ರಾಜನು ಊಟವನ್ನು ಮಾಡಿ ತನ್ನ ಶಯ್ಯಾಗೃಹದಲ್ಲಿ ವಿಶ್ರಮಿಸಿದಾಗ ಇವನು ಸಾಕಿದ ಮಂಗವೂ ಸಹ ಇವನ ಪಕ್ಕದಲ್ಲಿ ಸುಮ್ಮನೇ ಕುಳಿತುಕೊಂಡಿತ್ತು, ಆ ಸಂದರ್ಭದಲ್ಲಿ ಎಲ್ಲಿಂದಲೋ ಒಂದು ನೊಣವು ಹಾರುತ್ತ ಬಂದು ರಾಜನ ಮೀಸೆಯ ಮೇಲೆ ಕುಳಿತುಕೊಂಡಿತು. ಅದನ್ನು ನೋಡಿದಾಗ ಮಂಗಕ್ಕೆ ಸಹನೆಯಾಗಲಿಲ್ಲ. ರಾಜನ ನಿದ್ರಾಭಂಗವಾದೀತೆಂಬ ದೃಷ್ಟಿಯಿಂದ ಆ ನೊಣವನ್ನು ಕೈಜಾಡಿಸಿ ಹಾರಿಸಿತು. ಹಾರಿಹೋದ ನೊಣವು ಕೆಲಕ್ಷಣದ ನಂತರ ಮತ್ತೆ ಬಂದು ಅಲ್ಲಿಯೇ ಕುಳಿತಿತು. ಮಂಗವು ಅದನ್ನು ಅನೇಕಸಾರೆ ಹಾರಿಸುತ್ತಿರಲಿಕ್ಕಾಗಿಯೂ ಅದು ಪುನಃ ಪುನಃ ಬಂದು ರಾಜನ ಮೀಸೆಯ ಮೇಲೆ ಕೂಡ್ರುವದನ್ನು ನೋಡಿ ಮಂಗಕ್ಕೆ ಸಹನೆಯಾಗಲಿಲ್ಲ. ಅತ್ಯಂತ ಕುಪಿತವಾದ ಆ ಮಂಗವು ರಾಜನ ಪಕ್ಕದಲ್ಲಿರುವ ಖಡ್ಗವನ್ನು ಕೈಗೆತ್ತಿಕೊಂಡು ನೊಣವನ್ನು ಕತ್ತರಿಸಿ ಹಾಕುವ ಆವೇಶದಲ್ಲಿ ಖಡ್ಗವನ್ನೆತ್ತಿ ಹೊಡೆದಾಗ ನೊಣವು ಹಾರಿ ಹೋಗಿತ್ತು ರಾಜನ ಬಾಯಿ ಹರಿದು ಹೋಗಿತ್ತು.

ಇಲ್ಲಿ ರಾಜನ ಮೇಲೆ ಮಂಗವು ಅತಿ ಸ್ನೇಹವನ್ನು ತಾಳಿ ರಾಜನ ನಿದ್ರಾಭಂಗವನ್ನುಂಟು ಮಾಡುತ್ತಿರುವ ನೊಣವನ್ನು ಹೊಡೆಯಲು ಹೋಗಿ ರಾಜನ ಬಾಯಿಯು ಹರಿದು ಹೋಗುವಂತೆ ಮಾಡಿದ್ದನ್ನು ನೋಡಿದಾಗ ನಾನು ಏನು ಮಾಡುತ್ತಿದ್ದೇನೆ ಇದರಿಂದಾಗುವ ಪರಿಣಾಮವೇನು ? ಎಂಬುದರ ಅರಿವು ಆ ಮಂಗಕ್ಕೆ ಇಲ್ಲದ ಕಾರಣ ಇಂತಹ ಅನರ್ಥವು ಉಂಟಾಯಿತು. ಅಂತಲೇ ಪೂಜ್ಯಪಾದರು ಯಾವುದೇ ಧರ್ಮಾಚರಣೆಯನ್ನು ಮಾಡುವ ಪೂರ್ವದಲ್ಲಿ ಅದರ ಬಗ್ಗೆ ಸರಿಯಾದ ತಿಳುವಳಿಕೆ ಇರಬೇಕೆಂಬುದಾಗಿ ಆದೇಶಿಸಿದ್ದಾರೆ. ಅರಿತು ಮಾಡಿದ ಆಚರಣೆಯು ಯೋಗ್ಯ ಫಲವನ್ನು ಕೊಡುತ್ತದೆ. ಹಾಗಿಲ್ಲದೆ ಹೋದರೆ ಮಹದನರ್ಥವು ಉಂಟಾಗುತ್ತದೆ. ಧರ್ಮಾಚರಣೆಯನ್ನು ಮಾಡುವ ವ್ಯಕ್ತಿಯಲ್ಲಿ ಎಂತಹ ಜ್ಞಾನವಿರಬೇಕೆಂಬುದರ ಬಗ್ಗೆ ಪೂಜ್ಯರು ಪುನಃ–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆತ್ಮವತ್ಸರ್ವಭೂತಾನಿ ಸಂಪಶ್ಯೇದ್ಯೋಗವಿತ್ತಮಃ।
ಜಗದೇಕಾತ್ಮತಾ ಭಾವಾನ್ನಿಗ್ರಹಾದಿ ವಿರೋಧತಃ॥

(ಸಿ. ಶಿ. ೧೬–೬೨)

ಹೀಗೆ ಆದೇಶಿಸಿದ್ದಾರೆ. ತಾತ್ಪರ್ಯವೇನೆಂದರೆ ಶಿವಯೋಗಿಯಾದವನು ಸರ್ವರನ್ನು ತನ್ನಾತ್ಮರೂಪರನ್ನಾಗಿ ಕಾಣಬೇಕು. ಏಕೆಂದರೆ ಈ ಜಗತ್ತೆಲ್ಲವೂ ಒಬ್ಬನೇಯಾದ ಪರಬ್ರಹ್ಮಸ್ವರೂಪವಾಗಿದೆ ಎಂಬ ಭಾವನೆಯು ಅವನಲ್ಲಿ ಇರುತ್ತದೆ. ಆಂತಲೇ ಒಬ್ಬರನ್ನು ನಿಗ್ರಹಿಸುವ ಮತ್ತೊಬ್ಬರನ್ನು ಅನುಗ್ರಹಿಸುವ ಪ್ರಸಂಗವೇ ಇಲ್ಲಿ ಬರುವದಿಲ್ಲ. ಎಲ್ಲವೂ ತಾನೇ ತಾನಾದ ಬಳಿಕ ನಿಗ್ರಹ ಮತ್ತು ಅನುಗ್ರಹಗಳಿಗೆ ಅವಕಾಶವೇ ಇರುವದಿಲ್ಲವೆಂಬ ಭಾವವು. ಧರ್ಮಾಚರಣೆಯನ್ನು ಮಾಡುವ ವ್ಯಕ್ತಿಯಲ್ಲಿ ಇಂತಹ ಸರ್ವಾತ್ಮರೂಪವಾದ ಜ್ಞಾನವಿರಬೇಕೆಂಬುದು ಪೂಜ್ಯಪಾದರ ಆಶಯವಾಗಿದೆ.

ಈ ಪೂರ್ವದಲ್ಲಿ ಹೇಳಿದ ಹಾಗೆ ಯಾರು ಸರ್ವಾತ್ಮರೂಪವಾದ ಜ್ಞಾನವನ್ನು ಪಡೆದುಕೊಂಡಿರುತ್ತಾರೋ ಅವರಿಗೆ ಮಮಕಾರ ಭಾವನೆಯು ಉಂಟಾಗುವದಿಲ್ಲವೆಂಬ ವಿಚಾರವನ್ನು ಸ್ಪಷ್ಟಪಡಿಸಲೋಸುಗ ಪೂಜ್ಯರು ಪುನಃ–

ಏಕ ಏವ ಶಿವಃ ಸಾಕ್ಷಾಜ್ಜಗದೇತದಿತಿ ಸ್ಫುಟಮ್।
ಪಶ್ಯತಃ ಕಿನ್ನಜಾಯೇತ ಮಮಕಾರೋಹಿ ವಿಭ್ರಮಃ॥

(ಸಿ. ಶಿ. ೧೬–೬೩)

ಈ ವಿಧವಾಗಿ ಉಪದೇಶಿಸಿದ್ದಾರೆ. 'ಇದೆಲ್ಲವೂ ಒಬ್ಬನೇ ಆದ ಶಿವನೇ ಆಗಿದ್ದಾನೆ' ಎಂಬುವ ದೃಢವಾದ ಜ್ಞಾನವುಳ್ಳವನಿಗೆ ಮಮಕಾರ ಭಾವನೆಯೇ ಇಲ್ಲದಾಗಿ ಹೋಗುತ್ತದೆ. ಏಕಮೇವಾದ್ವಿತೀಯಂ ಬ್ರಹ್ಮ ಎಂಬ ಶ್ರುತಿವಾಕ್ಯದಲ್ಲಿ ಈ ಜಗತ್ತು ಸೃಷ್ಟಿಯಾಗುವ ಮೊದಲು ಒಬ್ಬನೇ ಆದ ಪರಮಾತ್ಮನಿದ್ದನು ಅವನೇ ಎಲ್ಲ ಜಗದ್ರೂಪನೂ ಆಗಿದ್ದಾನೆ. ಇಂತಹ ಶಿವನೊಂದಿಗೆ ತಾದಾತ್ಮ್ಯ ಭಾವನೆಯನ್ನು ತಾಳಿದ ಶಿವಯೋಗಿಯ ಮನಸ್ಸಿನಲ್ಲಿ ಸರ್ವವೆಲ್ಲವೂ ನಾನೇ ಇದ್ದೇನೆ ಎನ್ನುವ ಪೂರ್ಣಾಹಂತೆಯು ಪ್ರಾಪ್ತವಾಗಿರೋಣದರಿಂದ ಎಲ್ಲವನ್ನು ಅಹಂರೂಪವಾಗಿ ಅನುಭವಿಸುವ ಶಿವಯೋಗಿಗೆ ಮಮಕಾರ ಭಾವನೆಯು ಅದು ಹೇಗೆ ತಾನೆ ಉಂಟಾದೀತು ? ಆ ಭಾವನೆಗೆ ಇಲ್ಲಿ ಅವಕಾಶವೇ ಇರುವದಿಲ್ಲವೆಂಬುದು ಪೂಜ್ಯರ ಆಶಯವಾಗಿದೆ.

ಈ ಪೂರ್ವದಲ್ಲಿ ಹೇಳಿದ ಅಹಿಂಸಾದಿ ಧರ್ಮಾಚರಣೆಯನ್ನು ಯಾರೂ ತ್ಯಜಿಸಬಾರದು ಎಂಬ ವಿಷಯವನ್ನು ಪೂಜ್ಯರು ಪುನಃ–

ಧರ್ಮ ಏವ ಸಮಸ್ತಾನಾಂ ಯತಸ್ಸಂಸಿದ್ಧಿ ಕಾರಣಮ್।
ನಿಸ್ಪೃಹೋಪಿ ಮಹಾಯೋಗೀ ಧರ್ಮಮಾರ್ಗಂಚನ ತ್ಯಜೇತ್॥

(ಸಿ.ಶಿ. ೧೬–೬೪)

ಈ ರೀತಿಯಾಗಿ ವಿವರಿಸಿದ್ದಾರೆ. ಧರ್ಮಾಚರಣೆಯೇ ಎಲ್ಲರಿಗೂ ಭೋಗ ಹಾಗೂ ಮೋಕ್ಷಗಳನ್ನು ಕೊಡುವಂತಹದಾಗಿದೆ. ಆದ್ದರಿಂದ ಯಾವುದೇ ಫಲದ ಅಪೇಕ್ಷೆಯಿಲ್ಲದೆ ಇದ್ದರೂ ಯೋಗಿಯಾದವನು ಧರ್ಮಾಚರಣೆಯನ್ನು ಎಂದೂ ಬಿಡಕೂಡದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬುದು ಪೂಜ್ಯರ ಆದೇಶವಾಗಿದೆ. ಮನುಷ್ಯನ ಅಭ್ಯುದಯ ಹಾಗೂ ನಿಶ್ರೇಯಸ್ಸಗಳಿಗೆ ಸಾಧನವಾದದ್ದು ಧರ್ಮವೇ ಧರ್ಮಾಚರಣೆಯಿಂದ ಮನುಷ್ಯನು ಇಹದಲ್ಲಿ ಸರ್ವವಿಧಗಳಾದ ಭೋಗ ಭಾಗ್ಯಗಳನ್ನು ಪಡೆಯುವನಲ್ಲದೆ ಕೊನೆಗೆ ಪರಮ ಪುರುಷಾರ್ಥವಾದ ಮೋಕ್ಷವನ್ನೂ ಸಹ ಪ್ರಾಪ್ತಿಮಾಡಿಕೊಳ್ಳಬಲ್ಲನು. ಅಂತೆಯೇ ಚತುರ್ವಿಧ ಪುರುಷಾರ್ಥಗಳನ್ನು ನಿರೂಪಿಸುವಾಗ ಧರ್ಮವನ್ನು ಮೊದಲನೆಯ ಸ್ಥಾನದಲ್ಲಿ ಪರಿಗ್ರಹಿಸಿದ್ದಾರೆ. ಧರ್ಮದಿಂದಲೇ ಅರ್ಥವು, ಕಾಮವು ಮತ್ತು ಕೊನೆಯದಾಗಿ ಮೋಕ್ಷವೂ ಸಹ ಪ್ರಾಪ್ತವಾಗುತ್ತದೆ. ಆದ್ದರಿಂದ ಎಂಥ ಯೋಗಿಯೇ ಇರಲಿ ಧರ್ಮಾಚರಣೆಯನ್ನು ಮಾಡುತ್ತಲೇ ಇರಬೇಕು.

ಜ್ಞಾನಿಗಳಾದವರು ಧರ್ಮಾಚರಣೆಯನ್ನು ಏಕೆ ಮಾಡಬೇಕು ? ಅದರಿಂದ ಅವರಿಗೆ ಯಾವುದೇ ಪ್ರಯೋಜನ ವಿರುವದಿಲ್ಲವಲ್ಲ? ಎಂಬ ಪ್ರಶ್ನೆಯು ಪ್ರಾದುರ್ಭವಿಸಲು ಅದಕ್ಕೆ ಸಮಾಧಾನ ರೂಪವಾಗಿ ಪೂಜ್ಯರು ಪುನಃ–

ಜ್ಞಾನಾಮೃತೇನ ತೃಪ್ತೋಪಿ ಯೋಗೀ ಧರ್ಮಂ ನ ಸಂತ್ಯಜೇತ್ ।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥

(ಸಿ. ಶಿ. ೧೬–೬೫)

ಈ ವಿಧವಾಗಿ ಉಪದೇಶಿಸಿದ್ದಾರೆ. ಶಿವಾದ್ವೈತ ಜ್ಞಾನದಿಂದ ಸಂತೃಪ್ತನಾದ ಶಿವ ಯೋಗಿಯೂ ಸಹ ಧರ್ಮಾಚರಣೆಯನ್ನು ಬಿಡಕೂಡದು. ಯಾಕೆಂದರೆ ಸಾಮಾನ್ಯ ವಾಗಿ ಲೌಕಿಕ ಜನರು ದೊಡ್ಡವರ ಆಚರಣೆಯನ್ನೇ ಅನುಕರಣೆ ಮಾಡುತ್ತಿರುತ್ತಾರೆ. ಆದ್ದರಿಂದ ಲೋಕಕಲ್ಯಾಣಾರ್ಥವಾಗಿ ಜ್ಞಾನಿಗಳು ಧರ್ಮಾಚರಣೆಯನ್ನು ಮಾಡಲೇ ಬೇಕೆಂಬುದು ಆಚಾರ್ಯರ ಆಶಯವಾಗಿದೆ.

ಶಿವಾದ್ವೈತ ಜ್ಞಾನವು ಮನುಷ್ಯ ಜೀವನದ ಕೊನೆಯದಾದ ಗುರಿಯು. ಇದನ್ನು ಪಡೆದ ಬಳಿಕ ಆ ಜ್ಞಾನಿಗೆ ಧರ್ಮಾಚರಣೆಯ ಪ್ರಯೋಜನವು ತನಗಾಗಿ ಏನೂ ಇರುವದಿಲ್ಲ. ಆದರೂ ಸಹ ಅಜ್ಞರಾದ ಜನಸಾಮಾನ್ಯರನ್ನು ಧರ್ಮಮಾರ್ಗದಲ್ಲಿ ಮುನ್ನಡೆಸಲೋಸುಗ ತಾವು ಸ್ವತಃ ಧರ್ಮಾಚರಣೆಯನ್ನು ಮಾಡಬೇಕಾಗುತ್ತದೆ. ಶಿಕ್ಷಕ ತರಬೇತಿ ಪರೀಕ್ಷೆ (ಟಿ.ಸಿ.ಹೆಚ್) ಪಾಸಾದ ಒಬ್ಬ ವ್ಯಕ್ತಿಯನ್ನು ಪ್ರಾಥಮಿಕ ಶಾಲೆಯ ಶಿಕ್ಷಕನನ್ನಾಗಿ ನೇಮಿಸಿದಾಗ ಅವನು ದಿನಾಲೂ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಮಾಡಿಸುತ್ತಿರುತ್ತಾನೆ. ನಿತ್ಯವೂ ಮೂಲಾಕ್ಷರಗಳನ್ನು ಬರೆಯುವ, ಬರೆಯಿಸುವ, ಅನ್ನುವ, ಅನಿಸುವ ಕಾರ್ಯದಲ್ಲಿಯೇ ಇಡೀ ತನ್ನ ದಿನವನ್ನು ಆತನು ವ್ಯಯಮಾಡಿಕೊಳ್ಳುತ್ತಿರು ತ್ತಾನೆ. ಅವನು ಪುನಃ ಪುನಃ ಉಚ್ಚರಿಸುತ್ತಿರುವ ಅವನ ಅಕ್ಷರಾಭ್ಯಾಸವು ಅವನಿಗಾಗಿ ಯಾವ ಪ್ರಯೋಜನವಿರದಿದ್ದರೂ ಅವನ ಉಚ್ಚಾರಣೆಯಿಂದ ಮಕ್ಕಳಿಗೆ ಬೋಧೆ ಯುಂಟಾಗುತ್ತದೆ. ಹೀಗೆ ಮಕ್ಕಳ ಬೋಧೆಗಾಗಿ ಅವನ ಅಕ್ಷರಾಭ್ಯಾಸವು ಪ್ರಯೋಜನ ಕಾಯಾಗಿರುವಂತೆ ಜ್ಞಾನಿಯಾದ ಶಿವಯೋಗಿಯ ಧರ್ಮಾಚರಣೆಯಿಂದ ಸ್ವತಃ ಅವನಿಗೆ ಯಾವುದೇ ಪ್ರಯೋಜನವಾಗದಿದ್ದರೂ ಸಾಮಾನ್ಯ ಜನರಿಗೆ ಮಾರ್ಗದರ್ಶನ ವಾಗುವದೆಂಬ ಪ್ರಯೋಜನ ಮಾತ್ರ ಸಿದ್ಧಿಸುತ್ತದೆ: ಆದುದರಿಂದ ಲೋಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲ್ಯಾಣಾರ್ಥವಾಗಿ ಜ್ಞಾನಿಗಳೂ ಸಹ ಧರ್ಮಾಚರಣೆಯನ್ನು ಮಾಡುತ್ತಿರಬೇಕೆಂಬುದು ಜಗದ್ಗುರು ರೇಣುಕ ಭಗವತ್ಪಾದರ ಆಶಯವಾಗಿದೆ.

ಒಮ್ಮೆ ರಾಮಕೃಷ್ಣ ಪರಮಹಂಸರ ಆಶ್ರಮಕ್ಕೆ ಓರ್ವ ಆತ್ಮಜ್ಞಾನಿಯು ಬಂದಿದ್ದನು. ಅವನಿಗೆ ತನ್ನ ಜ್ಞಾನದ ಬಗ್ಗೆ ಬಹಳಷ್ಟು ಅಭಿಮಾನವಿತ್ತು ಆ ಅಭಿಮಾನದಿಂದಾಗಿಯೇ ಆಚಾರ–ವಿಚಾರಗಳನ್ನು ಕಡೆಗಣಿಸಿ ಮಾತನಾಡುತ್ತಿದ್ದನು. ಆಶ್ರಮಕ್ಕೆ ಬಂದ ಈ ಅತಿಥಿಯನ್ನು ಅಲ್ಲಿಯ ವ್ಯವಸ್ಥಾಪಕರು ಭೋಜನಕ್ಕಾಗಿ ಆಹ್ವಾನಿಸಿದರು. ಅಲ್ಲದೆ ಮಗ್ಗುಲಲ್ಲಿ ಭಾಗೀರಥಿ ನದಿಯು ಹರಿಯುತ್ತಿದ್ದಾಳೆ ಹೋಗಿ ಮುಖಮಾರ್ಜನ ಮಾಡಿ ಕೊಂಡು ಬನ್ನಿರೆಂಬುದಾಗಿ ವಿನಂತಿಸಿಕೊಂಡರು. ಆಗ ಈ ಅಹಂಕಾರಿಯಾದ ಜ್ಞಾನಿಯು ಮುಖಮಾರ್ಜನವನ್ನು ಮಾಡದೆ ಹಾಗೇ ಹೋಗಿ ಪಂಕ್ತಿಯಲ್ಲಿ ಕುಳಿತುಕೊಂಡನು. ಇದೇನು ತಾವು ಹಾಗೇ ಬಂದು ಕುಳಿತಿರಲ್ಲ ? ನೀವು ಮುಖಮಾರ್ಜನೆಯನ್ನೇಕೆ ಮಾಡಲಿಲ್ಲ ? ಎಂದು ವ್ಯವಸ್ಥಾಪಕನು ಪ್ರಶ್ನಿಸಲು ಆ ಜ್ಞಾನಿಯು– ''ನಾನು ಜ್ಞಾನಗಂಗೆಯಲ್ಲಿ ಸ್ನಾನಮಾಡಿ ಬಂದಿದ್ದೇನೆ. ಹೀಗಿದ್ದಾಗ ಈ ಭಾಗೀರಥಿಯ ನೀರಿನಲ್ಲಿ ಕೈಕಾಲು ತೊಳೆಯುವ ಅವಶ್ಯಕತೆ ನನಗಿಲ್ಲ'' ಇವರ ಈ ತೆರನಾದ ಮಾತನ್ನು ಕೇಳಿ ವ್ಯವಸ್ಥಾಪಕನು ಮುಂದೇನೂ ಉತ್ತರಿಸದೆ ಎಲ್ಲರಿಗೂ ಕೊಡುವಂತೆ ಭೋಜ್ಯ ಪದಾರ್ಥಗಳಿಂದ ತುಂಬಿದ ತಟ್ಟೆಯನ್ನು ಇವನಿಗೂ ಕೊಟ್ಟನು. ಆದರೆ ಕುಡಿಯಲು ನೀರನ್ನು ಮಾತ್ರ ಇಟ್ಟಿರಲಿಲ್ಲ. ಎಲ್ಲರೂ ಭೋಜನವನ್ನು ಪ್ರಾರಂಭಿಸಿದರು. ಸ್ವಲ್ಪೇ ಹೊತ್ತಿನಲ್ಲಿ ಆ ಜ್ಞಾನಿಯ ಕಂಠದಲ್ಲಿ ತುತ್ತು ಸಿಕ್ಕು ಬಿಕ್ಕು ಹತ್ತಿತು. ಆಗ ಅವನು ಕೈ ಸನ್ನೆಯನ್ನು ಮಾಡುತ್ತ ನೀರನ್ನು ಯಾಚಿಸಿದನು. ಅಲ್ಲಿಯೇ ಉಪಸ್ಥಿತನಿದ್ದ ವ್ಯವಸ್ಥಾಪಕನು ಜ್ಞಾನಿಯನ್ನು ಉದ್ದೇಶಿಸಿ ''ಓಹೋ ! ನೀವು ಜ್ಞಾನಗಂಗೆಯಲ್ಲಿ ಮಿಂದು ಬಂದವರು ನಿಮಗೇಕೆ ಈ ಭಾಗೀರಥಿಯ ನೀರು ? ಜ್ಞಾನಗಂಗೆಯನ್ನೇ ಕುಡಿದು ಬಿಕ್ಕನ್ನು ಕಳೆದುಕೊಳ್ಳಿ'' ಎಂಬುದಾಗಿ ವ್ಯಂಗ್ಯವಾಗಿ ನುಡಿದನು. ಆಗ ಆ ಜ್ಞಾನಿಗೆ ತನ್ನ ತಪ್ಪಿನ ಅರಿವಾಗಿ ಜ್ಞಾನವಾದರೂ ಆಚಾರ–ವಿಚಾರಗಳನ್ನು ಆಲಕ್ಷಿಸಬಾರದೆಂಬುದಾಗಿ ನಿಶ್ಚಯಿಸಿ ಕೊಂಡನು.

ಜ್ಞಾನಿಯಾದವನು ಧರ್ಮಾಚರಣೆಯನ್ನು ಏಕೆ ಮಾಡಬೇಕು ? ಎಂಬುದರ ಬಗ್ಗೆ ಮತ್ತೊಂದು ಕಾರಣವನ್ನು ತಿಳಿಯಪಡಿಸಲೋಸುಗ ಪೂಜ್ಯರು ಪುನಃ–

ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ ।
ಸದಾಚಾರಂ ವಿನಾ ತಸ್ಯ ಪ್ರಸಾದೋನೈವ ಜಾಯತೇ ॥

(ಸಿ. ಶಿ. ೧೬–೬೬)

ಈ ತೆರನಾಗಿ ಉಪದೇಶಿಸಿದ್ದಾರೆ. ಶಿವನು ಸದಾಚಾರಪ್ರಿಯನಾಗಿದ್ದಾನೆ. ಸದಾಚಾರ ದಿಂದಲೇ ಅವನು ಪೂಜೆಗೊಳ್ಳುತ್ತಾನೆ. ಸದಾಚಾರಸಂಪನ್ನರಲ್ಲದವರ ಮೇಲೆ ಅವನು ಎಂದೂ ಕೃಪೆಯನ್ನು ಮಾಡಲಾರನು. ಆದ್ದರಿಂದ ಶಿವನಕೃಪೆಯ ಪ್ರಾಪ್ತಿಗಾದರೂ ಸಹ ಜ್ಞಾನಿಯು ಆಚಾರವುಳ್ಳವನಾಗಿರಬೇಕೆಂಬುದು ಪೂಜ್ಯರ ಆಶಯವಾಗಿದೆ.

ವೀರಶೈವ ಸಿದ್ಧಾಂತದಲ್ಲಿ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಭೃತ್ಯಾಚಾರಗಳೆಂಬುದಾಗಿ ಪಂಚ ಆಚಾರಗಳು ಪ್ರತಿಪಾದಿಸಲ್ಪಟ್ಟಿವೆ. ಈ ಆಚಾರಗಳನ್ನು ಪ್ರಾಣಗಳಿಗೆ ಹೋಲಿಸಿದ್ದಾರೆ. ಶರೀರದಲ್ಲಿ ಪ್ರಾಣಸಂಚಾರವಿದ್ದಾಗ ಲೇನೇ ಶರೀರದ ಎಲ್ಲ ವ್ಯವಹಾರಗಳು ನಡೆಯುತ್ತಿರುತ್ತವೆ. ಯಾವ ಕ್ಷಣದಲ್ಲಿ ಪ್ರಾಣಸಂಚಾರವು ನಿಂತುಹೋಗುವದೋ ಆದೇ ಕ್ಷಣದಲ್ಲಿ ಎಲ್ಲ ವ್ಯವಹಾರಗಳು ನಿಂತುಹೋಗುವವು. ಹೀಗೆ ಜೀವನಕ್ಕೆ ಪ್ರಾಣಗಳ ಅವಶ್ಯಕತೆ ಇರುವಂತೆ ಮನುಷ್ಯನ ಆಧ್ಯಾತ್ಮಿಕ ಉನ್ನತಿಗೆ ಆಚಾರಗಳು ಪರಮಾವಶ್ಯಕವಾದವುಗಳಾಗಿವೆ.

ಈ ಜಗತ್ತಿಗೆ ಒಡೆಯನಾದ ಶಿವನು ಸದಾಚಾರಪ್ರಿಯನಾಗಿರುತ್ತಾನೆ. ಅಂದರೆ ಆಚಾರವುಳ್ಳ ಭಕ್ತನೇ ಅವನಿಗೆ ಪ್ರಿಯನಾಗುವನು. ಆದ್ದರಿಂದ ಆ ಶಿವನನ್ನು ಪೂಜಿಸಬೇಕಾದರೆ ಆಚಾರವಂತನಾಗಿಯೇ ಪೂಜಿಸಬೇಕು. ಅನಾಚಾರಿಯಾದ ವ್ಯಕ್ತಿಯು ಅದೆಂತಹ ದೊಡ್ಡ ಪೂಜೆಯನ್ನು ಮಾಡಿದರೂ ಶಿವನು ಅದನ್ನು ಸ್ವೀಕರಿಸುವದಿಲ್ಲ. ಮನುಷ್ಯನು ಸದಾಚಾರ ಸಂಪನ್ನನಾಗದೆ ಶಿವನ ಕೃಪೆಯನ್ನು ಸಹ ಪಡೆಯಲಾಗುವದಿಲ್ಲ. ಆದ್ದರಿಂದ ಶಿವಾನುಗ್ರಹ ಪ್ರಾಪ್ತಿಗಾಗಿ ಯಾರೇ ಇದ್ದರೂ ಆಚಾರ ಸಂಪನ್ನರಾಗಲೇ ಬೇಕೆಂಬುದು ಪೂಜ್ಯರ ಆದೇಶವಾಗಿದೆ.

ಈ ಧರ್ಮಾಚಾರಸ್ಥಲದಲ್ಲಿ ಉಪದೇಶಿಸಲ್ಪಟ್ಟ ದಶವಿಧ ಧರ್ಮಗಳಲ್ಲಿ ಯಾವ ದಾದರೊಂದು ಧರ್ಮವನ್ನು ಆಚರಿಸಲು ಪ್ರತಿಯೊಬ್ಬರೂ ಉದ್ಯುಕ್ತರಾಗಬೇಕು. ಈ ಧರ್ಮದ ಮಹತಿಯನ್ನು ಪ್ರತಿಪಾದಿಸುತ್ತ ಓರ್ವ ಸುಭಾಷಿತಕಾರನು–

ನಿಶಾಯಾಂ ದೀಪಕಶ್ಚಂದ್ರಃ ಪ್ರಭಾತೇ ದೀಪಕೋ ರವಿಃ ।
ತ್ರೈಲೋಕ್ಯೇ ದೀಪಕೋಧರ್ಮಃ ಸುಪುತ್ರಃ ಕುಲದೀಪಕಃ ॥

ಹೀಗೆ ವಿವರಿಸಿದ್ದಾನೆ ರಾತ್ರಿಯಲ್ಲಿ ಚಂದ್ರನು ದೀಪನಾದರೆ ಹಗಲಿನಲ್ಲಿ ಸೂರ್ಯನೇ ದೀಪವು. ಉತ್ತಮನಾದ ಪುತ್ರನು ಕುಲಕ್ಕೆ ದೀಪವಾದರೆ ಮೂರೂ ಲೋಕವನ್ನು ಬೆಳಗುವ ದೀಪವೆಂದರೆ ಧರ್ಮವು. ಇಲ್ಲಿ ಪ್ರತಿಪಾದಿಸಲ್ಪಟ್ಟ ದೀಪಗಳಲ್ಲಿ ಸೂರ್ಯ, ಚಂದ್ರ ಹಾಗೂ ಸುಪುತ್ರರು ದೇಶ–ಕಾಲ ಪರಿಚ್ಛಿನ್ನರು ಆದರೆ ಧರ್ಮರೂಪವಾದ ದೀಪವು ಮೂರೂ ಲೋಕಗಳನ್ನು ಸದಾ ಬೆಳಗುವಂಥದ್ದಾಗಿದೆ. ಆದ್ದರಿಂದ ಪ್ರತಿ ಯೊಬ್ಬರೂ ಧರ್ಮವಂತರಾಗಿ ಬಾಳಿರೆಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ ೧೩- ಅಗಷ್ಟ ೯೯೩

(ಜ್ಞಾನಮಂದಿರ ಜಂಗಮವಾಡಿಮಠ, ವಾರಾಣಾಸಿ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವಚನ-೧೮

ಭಾವಾಚಾರಸ್ಥಲ-೧

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಪೂಜ್ಯ ಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಅಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ನೀವೆಲ್ಲ ಪ್ರತಿದಿನ ಕ್ಷೇತ್ರ ಮಹಿಮೆಯನ್ನು ಆಲಿಸುತ್ತ ಬಂದಿದ್ದೀರಿ. ಕಾಶೀ ಮಹಾಕ್ಷೇತ್ರಕ್ಕೆ ಇರುವ ಅನೇಕ ನಾಮಗಳಲ್ಲಿ ಆನಂದವನ ಅಥವಾ ಆನಂದಕಾನನ ಎಂಬುದೂ ಒಂದು. ಇಲ್ಲಿ ನಿವಾಸಿಸುವವರಿಗೆಲ್ಲ ಆನಂದದಾಯಕವಾಗಿರೋಣದರಿಂದ ಇದಕ್ಕೆ ಆನಂದ ಕಾನನ ವೆಂದು ಕರೆಯುತ್ತಾರೆ. ಭಗವಾನ್ ವಿಶ್ವೇಶ್ವರನು ತನ್ನ ಆನಂದಕ್ಕಾಗಿ ಈ ನಗರವನ್ನು ಸ್ವತಃ ನಿರ್ಮಾಣ ಮಾಡಿದ್ದಾನೆ. ಇದು ಮೂರು ಲೋಕಗಳಲ್ಲಿ ವಿಲಕ್ಷಣವಾಗಿರುವ ಕ್ಷೇತ್ರವು. ಈ ಕ್ಷೇತ್ರವನ್ನುಳಿದು ಎಲ್ಲ ಕಡೆಗೆ ವಿಷ್ಣು ಭಗವಂತನು ಪಾಲನೆಯನ್ನು ಮಾಡಿ ದರೆ, ಯಮನು ದಂಡವನ್ನು ವಿಧಿಸುತ್ತಾನೆ. ಆದರೆ ಕಾಶೀ ಮಹಾಕ್ಷೇತ್ರದಲ್ಲಿ ಸಂರಕ್ಷಿಸುವ ವನು ಶಿವನು ಹಾಗೂ ದಂಡ ವಿಧಿಸುವವನು ಕಾಲಭೈರವನು ಅಂತೆಯೇ ಕಾಶೀ ವಾಸಿಗಳಿಗೆ ಯಮ ದಂಡದ ಭೀತಿ ಇರುವದಿಲ್ಲ.

ಪಾಪೀ ವ್ಯಕ್ತಿಯು ಕಾಶಿಯನ್ನು ಪ್ರವೇಶಿಸಿದಾಗ ತನ್ನ ಪ್ರಾಕ್ತನ ಪಾಪಗಳಿಂದ ಮುಕ್ತ ನಾಗುತ್ತಾನೇನೋ ನಿಜ ಆದರೆ ಕಾಶಿಯಲ್ಲಿ ಪುನಃ ಪಾಪವನ್ನು ಮಾಡಿದರೆ ಕಾಲಭೈರವನ ಘೋರವಾದ ಯಾತನೆಯನ್ನು ಸಹನಮಾಡಬೇಕಾಗುವದು. ಕಾಲಭೈರವನಿಗೆ ಸಂಭ್ರಮ ಮತ್ತು ಉದ್ಭ್ರಮ ಎಂಬ ಇಬ್ಬರು ಸೇವಕರಿರುತ್ತಾರೆ. ಇವರು ಭೈರವನ ಆದೇಶದಂತೆ ಪಾಪಿಗಳಿಗೆ ದಂಡವನ್ನು ಕೊಡುತ್ತಾರೆ. ಈ ಕಾಲಭೈರವನ ದಂಡವು ಯಮನ ದಂಡ ಕ್ಕಿಂತಲೂ ಮೂವತ್ತೆರಡು ಪಟ್ಟು ಹೆಚ್ಚಿನದಾಗಿರುತ್ತದೆ. ಈ ಕಾಶೀ ಕ್ಷೇತ್ರವು ಶಂಕರನ ಶಿವ ಸಾಮ್ರಾಜ್ಯದ ರಾಜಧಾನಿಯಾಗಿರುತ್ತದೆ. ಇಂದಿಗೂ ಸಹ ಭಾರತದ ರಾಜಧಾನಿಯು ದಿಲ್ಲಿಯಾಗಿದ್ದರೂ ಈ ದೇಶದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ರಾಜಧಾನಿಯು ಕಾಶಿಯೇ ಆಗಿರುತ್ತದೆ.

ವೇದ ಉಪನಿಷತ್ತು ಹಾಗೂ ಪುರಾಣಗಳಲ್ಲಿ ಈ ಕ್ಷೇತ್ರದ ಮಹಿಮೆಯು ಅಲ್ಲಲ್ಲಿ ವರ್ಣಿಸಲ್ಪಟ್ಟಿದೆ. ಸ್ಕಂದ ಪುರಾಣದಲ್ಲಿರುವ ಕಾಶೀಖಂಡದಲ್ಲಿ ಮಹರ್ಷಿವ್ಯಾಸರು ಹದಿನೈದು ಸಾವಿರ ಶ್ಲೋಕಗಳಲ್ಲಿ ಕಾಶಿಯ ಮಹಿಮೆಯನ್ನು ವರ್ಣಿಸಿದ್ದಾರೆ. ಇದೂ ಅಲ್ಲದೆ ಮತ್ಸ್ಯ, ಕೂರ್ಮ, ಲಿಂಗ, ಪದ್ಮ ಅಗ್ನಿ ಮತ್ತು ನಾರದೀಯ ಪುರಾಣಗಳಲ್ಲಿಯೂ ಸಹ ಪ್ರಸಂಗಾನುಸಾರವಾಗಿ ಕಾಶಿಯ ಮಹಿಮೆಯು ವರ್ಣಿಸಲ್ಪಟ್ಟಿದೆ. ಜಗತ್ತಿನ ಯಾವ ನಗರದ ಬಗ್ಗೆಯೂ ಇಷ್ಟೊಂದು ವರ್ಣನೆಯು ದೊರೆಯುವದಿಲ್ಲ. ಸ್ವಾಮಿ ವಿವೇಕಾನಂದರ ಶಿಷ್ಯಳಾದ ಭಗಿನೀ ನಿವೇದಿತಾ ಇವರು "Foot falls of Indian History" ಎಂಬ ತಮ್ಮ ಪುಸ್ತಕದಲ್ಲಿ–''ರೋಮನ್ ಕೆಥೊಲಿಕ್ ಕ್ರಿಶ್ಚಿಯನ್ನರಿಗೆ ಪೋಪ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುರಿ (ವ್ಯಾಟಿಕನ್ ಸಿಟಿ)ಯು ಎಷ್ಟು ಮಹತ್ವದ್ದೋ ಹಿಂದೂ ಜನರಿಗೆ ಕಾಶೀ ಮಹಾಕ್ಷೇತ್ರವು ಅದರ ಸಾವಿರಪಟ್ಟು ಹೆಚ್ಚು ಮಹತ್ವದ್ದಾಗಿದೆ'' ಎಂಬುದಾಗಿ ಹೇಳಿ ಕಾಶಿಯ ಮಹಿಮೆಯನ್ನು ಎತ್ತಿತೋರಿಸಿದ್ದಾರೆ.

ಈ ಮಹಾಕ್ಷೇತ್ರದಲ್ಲಿ ನಮ್ಮ ದೇಶದ ಪ್ರತಿಯೊಂದು ಪ್ರಾಂತದ ಜನರು ಅಲ್ಲಲ್ಲಿ ಅನಾದಿ ಕಾಲದಿಂದಲೂ ವಾಸಗೈದಿದ್ದಾರೆ. ಆ ಜನರೆಲ್ಲ ತಮ್ಮ ಪ್ರಾಂತದ ಭಾಷೆ,ಸಂಸ್ಕೃತಿ ಮೊದಲಾದವುಗಳನ್ನು ಉಳಿಸಿಕೊಂಡು ಉತ್ತರ ಭಾರತದ ಜನತೆಯೊಂದಿಗೆ ಅವರಾಡುವ ಭಾಷೆಯನ್ನೇ ಆಡುತ್ತ ಸಮರಸವಾಗಿ ಜೀವನವನ್ನು ಸಾಗಿಸುತ್ತಲಿದ್ದಾರೆ. ಇದೆಲ್ಲವನ್ನು ನೋಡಿದಾಗ ಕಾಶೀ ಮಹಾಕ್ಷೇತ್ರವು ಸಂಪೂರ್ಣ ಭಾರತದ ಒಂದು ಮಾದರಿ ನಗರ (Model City) ವಾಗಿದೆ.

ಶ್ರೀ ಕಾಶೀ ಕ್ಷೇತ್ರವು ಕೇವಲ ಧಾರ್ಮಿಕಸ್ಥಳವಾಗಿರದೆ ಇದೊಂದು ವಿದ್ಯಾಕೇಂದ್ರವೂ ಆಹುದು. ಅಂತೆಯೇ ಇದಕ್ಕೆ 'ವಿದ್ಯಾಯಾಃ ಸದನಂ ಕಾಶೀ' ಎಂಬುದಾಗಿ ಕರೆಯಲಾಗಿದೆ. ಹದಿನೆಂಟು ಪುರಾಣಗಳನ್ನು ಮಹಾಭಾರತಾದಿ ಉದ್ಗ್ರಂಥಗಳನ್ನು ಬರೆದಿರುವ ಮಹರ್ಷಿವ್ಯಾಸನು ಇಲ್ಲಿಯೇ ನಿವಾಸಗೈದಿದ್ದಾನೆ. ಅವನ ನಿವಾಸದ ಆ ಸ್ಥಾನಕ್ಕೆ ಇಂದಿಗೂ 'ವ್ಯಾಸ ಕಾಶೀ' ಎಂಬುದಾಗಿ ಕರೆಯುತ್ತಾರೆ. ಕಾಶೀ ನಗರದಲ್ಲಿ ಸಂಸ್ಕೃತ ಭಾಷೆಯ ಹಾಗೂ ಭಾರತೀಯ ದರ್ಶನ ಶಾಸ್ತ್ರಗಳ ಅಧ್ಯಯನವು ಅನಾದಿಕಾಲದಿಂದಲೂ ಸಾಗಿ ಬಂದಿದೆ. ಇದೂ ಅಲ್ಲದೆ ಇಂದು ಆಧುನಿಕ ವಿದ್ಯೆಗಳ ಅಧ್ಯಯನ ಕೇಂದ್ರವೂ ಇದಾಗಿದೆ. ಇಲ್ಲಿ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ಕಾಶೀ ಹಿಂದೂ ವಿಶ್ವವಿದ್ಯಾಲಯ ಮತ್ತು ಮಹಾತ್ಮಾಗಾಂಧಿ ವಿದ್ಯಾಪೀಠವೆಂಬ ಮೂರು ವಿಶ್ವವಿದ್ಯಾಲಯಗಳು ಇವೆ. ಇವುಗಳಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವೇ ಅತೀ ಪ್ರಾಚೀನವಾದುದು. ಬ್ರಿಟೀಶ ವ್ಹಾಯಿಸ್‌ರಾಯ್ ಲಾರ್ಡ್ ಕಾರ್ನವಾಲೀಸನ ಕಾಲದಲ್ಲಿ 'ಗವ್ಹರ್ನಮೆಂಟ್ ಸಂಸ್ಕೃತ ಕಾಲೇಜ್' ಎಂಬುದಾಗಿ ಸ್ಥಾಪಿಸಲ್ಪಟ್ಟ ಆ ಸಂಸ್ಥೆಯು ಡಾ|| ಸಂಪೂರ್ಣಾನಂದರ ಪ್ರಯತ್ನದ ಫಲವಾಗಿ 'ವಾರಾಣಸೇಯ ಸಂಸ್ಕೃತ ವಿಶ್ವವಿದ್ಯಾಲಯ' ಎಂಬುದಾಗಿ ಮಾರ್ಪಟ್ಟಿತು. ಮುಂದೆ ೧೯೭೪ನೇ ಇಸ್ವಿಯಲ್ಲಿ ಈ ವಿಶ್ವವಿದ್ಯಾಲಯದ ಹೆಸರು ''ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ'' ಎಂಬುದಾಗಿ ಪರಿವರ್ತಿಸಲ್ಪಟ್ಟಿತು. ಇಲ್ಲಿ ಸಂಸ್ಕೃತ ಭಾಷೆಯ ಮಾಧ್ಯಮದಿಂದ ವೇದ, ಆಗಮ, ಜ್ಯೋತಿಷ್ಯ ಹಾಗೂ ದರ್ಶನಶಾಸ್ತ್ರಗಳ ಅಧ್ಯಯನವು ಆಗುತ್ತಲಿದೆ.

ಹೀಗೆ ಧಾರ್ಮಿಕ ಹಾಗೂ ವಿದ್ಯಾಕೇಂದ್ರವಾದ ಶ್ರೀ ಕಾಶೀಮಹಾಕ್ಷೇತ್ರದಲ್ಲಿ ನೀವುಗಳೆಲ್ಲ ಪ್ರತಿದಿನ ಧರ್ಮಾನುಷ್ಠಾನವನ್ನು ಮಾಡುತ್ತ ಧರ್ಮಸಭೆಯಲ್ಲಿ ಭಾಗಿಗಳಾಗಿ ಶ್ರೀ ಸಿದ್ಧಾಂತ ಶಿಖಾಮಣಿಯ ಆಶೀರ್ವಚನಗಳನ್ನು ಶ್ರವಣಮಾಡುತ್ತಿದ್ದೀರಿ. ಈ ಗ್ರಂಥರತ್ನದ ಲಿಂಗಷಟ್‌ಸ್ಥಲಾಂರ್ಗತವಾದ ಈ ಮಾಹೇಶ್ವರ ಸ್ಥಲದಲ್ಲಿ ಬರುವ ಧರ್ಮಾಚಾರ ಸ್ಥಲದ ಬಗ್ಗೆ ನಿನ್ನೆಯ ದಿನ ಪ್ರತಿಪಾದಿಸಲಾಗಿದೆ. ಇಂದು ಕ್ರಮಪ್ರಾಪ್ತವಾದ 'ಭಾವಾಚಾರ ಸ್ಥಲ'ದ ಬಗ್ಗೆ ಕೂಲಂಕಷವಾಗಿ ವಿವೇಚಿಸೋಣ.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಭಾವದ ಲಕ್ಷಣ ಹಾಗೂ ಅದರ ಮಹತ್ತ್ವವನ್ನೂ–

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವ ಏವಾಸ್ಯ ಸರ್ವೇಷಾಂ ಭಾವಾಚಾರಃ ಪ್ರಕೀರ್ತಿತಃ।
ಭಾವೋ ಮಾನಸ ಚೇಷ್ಟಾತ್ಮಾ ಪರಿಪೂರ್ಣಃ ಶಿವಾಶ್ರಯಃ॥

(ಸಿ. ಶಿ. ೧೬—೬೭)

ಈ ರೀತಿಯಾಗಿ ವಿವರಿಸಿದ್ದಾರೆ. ಭಾವವೆಂದರೆ ಭಾವನೆಯೆಂದರ್ಥ ಇದು ಮನಸ್ಸಿನ ಒಂದು ವೃತ್ತಿಯು, ಯಾವ ಮನೋವೃತ್ತಿಯು ಸಂಪೂರ್ಣವಾಗಿ ಶಿವನನ್ನೇ ಆಶ್ರಯಿಸಿರುತ್ತದೆಯೋ ಆದಕ್ಕೆ ಭಾವ ಇಲ್ಲವೆ ಭಾವನೆಯೆಂದು ಕರೆಯುತ್ತಾರೆ. ಪೂರ್ವದಲ್ಲಿ ಹೇಳಿದ ಧರ್ಮಾಚಾರ ಸಂಪನ್ನನಾದ ಶಿವಯೋಗಿಯ ಮನಸ್ಸಿನಲ್ಲಿ ಉಂಟಾದ ಈ ಭಾವನೆಯೇ ಉಳಿದವರಿಗೆ ಭಾವಾಚಾರವಾಗಿ ತೋರ್ಪಡುತ್ತದೆ. ಯಾರು ಯಾವದೇ ಕಾರ್ಯವನ್ನು ಮಾಡಬೇಕಾದರೂ ಆದಕ್ಕೆ ಮನಸ್ಸಿನ ಸಹಾಯವು ಬೇಕಾಗುತ್ತದೆ. ಕ್ರಿಯೆಯನ್ನು ಮಾಡುವಾಗ ಮನಸ್ಸಿನ ಸಂಪೂರ್ಣ ಸಹಕಾರವಿದ್ದರೆ ಆ ಕ್ರಿಯೆಯು ಒಂದು ಯೋಗವಾಗಿ ಅರ್ಥಾತ್ ಕರ್ಮಯೋಗವಾಗಿ ಪರಿವರ್ತಿಸುತ್ತದೆ. ಅಂದರೆ ಮನಃಪೂರ್ವಕವಾಗಿ ಮಾಡುವ ಕರ್ಮವೇ ಕರ್ಮಯೋಗವು. ಕರ್ಮಗಳನ್ನು ಮಾಡುವವರಿಗೇನೂ ಕೊರತೆಯಿಲ್ಲ. ಆದರೆ ಆದನ್ನೇ ಮನಃಪೂರ್ವಕವಾಗಿ ಮಾಡುವವರು ಅತಿ ವಿರಳ. ಅಂತೆಯೇ ಪೂಜ್ಯರು ಮಾಡುವ ಕ್ರಿಯೆಯೊಂದಿಗೆ ಭಾವನೆಯನ್ನು ಬೆರೆಸಬೇಕೆಂಬುದಾಗಿ ತಿಳಿಸಲೋಸುಗವೇ ಈ ಭಾವಾಚಾರ ಸ್ಥಲವನ್ನು ಪ್ರಾರಂಭಿಸಿದ್ದಾರೆ. ಕಡಲೆ ಹಿಟ್ಟು ಅಥವಾ ರವೆ ಮುಂತಾದವುಗಳಿಂದ ಉಂಡಿಗಳನ್ನು ಮಾಡುವಾಗ ಆದರಲ್ಲಿ ಬೆಲ್ಲ ಇಲ್ಲವೆ ಸಕ್ಕರೆಯನ್ನು ಬೆರೆಸುತ್ತಾರೆ. ಆದಿದ್ದಾಗಲೇ ಉಂಡಿಯಲ್ಲಿ ಮಾಧುರ್ಯವು ಅರ್ಥಾತ್ ಸಿಹಿತನವು ಪ್ರಾಪ್ತವಾಗುತ್ತದೆ. ಅದರಂತೆ ಮಾಡುವ ಕ್ರಿಯೆಯೊಂದಿಗೆ ಭಾವವು ಬೆರೆದಾಗ ಆ ಕ್ರಿಯೆಯು ಭಗವಂತನಿಗೆ ಅತ್ಯಂತ ಪ್ರಿಯವಾಗುವದು. ದೇವರಿಗೆ ಬೇಕಾದದ್ದು ಕರ್ಮವಲ್ಲ, ಭಾವವು. ಭಗವಂತನಿಗೆ ಭಾವದ ಹಸಿವೆ ಇರುತ್ತದೆ. ಅಂತೆಯೇ ಮರಾಠಿಯಲ್ಲಿ ''ದೇವ ಭಾವಾಚಾ ಭೂಕೇಲಾ'' ಎಂಬುದಾಗಿ ಹೇಳಿದ್ದಾರೆ.

ಭಾವಯುಕ್ತವಾದ ಕರ್ಮವು ಹೆಚ್ಚು ಪವಿತ್ರವಾದುದು. ಮತ್ತು ಭಾವದಿಂದಲೇ ಮನಸ್ಸು ಪರಿಶುದ್ಧವಾಗುವದೆಂಬ ವಿಷಯವನ್ನು ಪ್ರತಿಪಾದಿಸಲೋಸುಗ ಪೂಜ್ಯರು ಪುನಃ—

ಬಾವನಾವಿಹಿತಂ ಕರ್ಮ ಪಾವನಾದಪಿ ಪಾವನಮ್।
ತಸ್ಮಾದ್ಭಾವನಯಾ ಯುಕ್ತಂ ಪರಧರ್ಮಂ ಸಮಾಚರೇತ್॥

ಭಾವನೇ ಹಿ ಮನಃ ಶುದ್ಧಿರ್ಭಾವಶುದ್ಧಿಶ್ಚ ಕರ್ಮಣಾ।
ಇತಿ ಸಂಚಿಂತ್ಯ ಮನಸಾ ಯೋಗೀ ಭಾವಂ ನ ಸಂತ್ಯಜೇತ್॥

(ಸಿ. ಶಿ. ೧೬, ೬೮—೬೯)

ಈ ವಿಧವಾಗಿ ಉಪದೇಶಿಸಿದ್ದಾರೆ. ಭಾವನಾಪೂರ್ವಕವಾಗಿ ಮಾಡಿದ ಕರ್ಮವು ಪರಮ ಪವಿತ್ರವಾಗಿರುತ್ತದೆ. ಆದ್ದರಿಂದ ಯಾವದೇ ಧರ್ಮಾಚರಣೆಯನ್ನು ಮಾಡಬೇಕಾದರೂ ಭಾವನಾಯುಕ್ತವಾಗಿಯೇ ಮಾಡಬೇಕು. ಶಿವಪೂಜಾದಿ ಧರ್ಮಕಾರ್ಯಗಳನ್ನು ಮಾಡೋಣದರಿಂದ ಭಾವನೆಯು ಪರಿಶುದ್ಧವಾಗುತ್ತದೆ. ಶುದ್ಧವಾದ ಭಾವನೆಯಿದ್ದಾಗ ಮನಸ್ಸು ಪರಿಶುದ್ಧವಾಗುವದು. ಆದಕಾರಣ ಇದರ ಬಗ್ಗೆ ವಿಚಾರಮಾಡಿದ ಶಿವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೋಗಿಯು ಭಾವನೆಯನ್ನು ಎಂದೂ ತ್ಯಾಗಮಾಡಕೂಡದು ಎಂಬುದು ಪೂಜ್ಯರ ಆಶಯವಾಗಿದೆ.

ಶಾಸ್ತ್ರಗಳು ಧರ್ಮಕಾರ್ಯಗಳನ್ನು ಆಚರಿಸಲು ಆಜ್ಞೆಯನ್ನು ಮಾಡುತ್ತವೆ. ಆಜ್ಞೆಯನ್ನು ಪರಿಪಾಲಿಸುವಾಗ ಆ ವ್ಯಕ್ತಿಯು ಶ್ರದ್ಧಾಭಾವವುಳ್ಳವನಾಗಿದ್ದರೆ ಅದು ಹೆಚ್ಚಿನ ಫಲವನ್ನು ಕೊಡುತ್ತದೆ. ಕೇವಲ ಆಜ್ಞೆಯನ್ನು ಪರಿಪಾಲಿಸಲೋಸುಗ ಮನಸ್ಸಿಲ್ಲದ ಮನಸ್ಸಿನಿಂದ ಯಾವದೇ ಧರ್ಮಾಚರಣೆಯನ್ನು ಮಾಡಿದರೂ ಅದು ನಿರರ್ಥಕ ವಾಗುತ್ತದೆ. ಸೇವಕನೋರ್ವನು ಮಾಲಕನ ಆಜ್ಞಾನುಸಾರವಾಗಿ ಮನೆಗೆಲಸದಲ್ಲಿ ತೊಡಗಿದಾಗ ಅವನು ಆ ಕೆಲಸವನ್ನು ಮನಃಪೂರ್ವಕವಾಗಿ ಮಾಡುತ್ತಿದ್ದರೆ ಅವನ ಮೇಲೆ ನಿರೀಕ್ಷಿಸುವ ಇನ್ನೋರ್ವ ವ್ಯಕ್ತಿಯ ಅವಶ್ಯಕತೆ ಇರುವದಿಲ್ಲ. ಆದರೆ ಅವನು ಕೇವಲ ಆಜ್ಞಾ ಪರಿಪಾಲನೆಗಾಗಿ ಹಾಗೂ ಹೀಗೂ ಮಾಡುತ್ತಿದ್ದಾಗ ಅವನಿಂದ ಕೆಲಸ ತೆಗೆದುಕೊಳ್ಳಲು ಇನ್ನೋರ್ವ ವ್ಯಕ್ತಿಯು ಅಲ್ಲಿ ಬೇಕಾಗುವದು. ಆದರೆ ಮನಃಪೂರ್ವಕ ವಾಗಿ ಕಾರ್ಯಮಾಡುತ್ತಿರುವ ವ್ಯಕ್ತಿಯ ಕಡೆಗೆ ಇನ್ನೊಬ್ಬರು ಲಕ್ಷ್ಯಹಾಕುವ ಅವಶ್ಯಕತೆ ಇರುವದಿಲ್ಲ. ವ್ಯಕ್ತಿಯು ಭಾವನೆಯು ಕಣ್ಣಿಗೆ ಕಾಣದಿದ್ದರೂ ಅವನು ಮಾಡುತ್ತಿರುವ ಕ್ರಿಯೆಯ ಮೂಲಕವಾಗಿ ಆತನ ಭಾವನೆಯನ್ನು ತಿಳಿದುಕೊಳ್ಳಬಹುದು.

ಭಾವನೆಯಿಲ್ಲದೆ ಮಾಡುವ ಕ್ರಿಯೆಗಳೆಲ್ಲ ಯಾಂತ್ರಿಕವೆನಿಸುತ್ತವೆ. ಯಂತ್ರ ಮಾಡುವದಕ್ಕೂ ಈ ಭಾವಶೂನ್ಯ ವ್ಯಕ್ತಿಮಾಡುವದಕ್ಕೂ ಯಾವ ಅಂತರವೂ ಇರುವದಿಲ್ಲ.

ಕಾಶೀ ಕ್ಷೇತ್ರದ ತುಳಸೀಮಾನಸಮಂದಿರವನ್ನು ನೀವೆಲ್ಲ ನೋಡಿ ಬಂದಿರ ಬಹುದು. ಆ ಮಾನಸಮಂದಿರವನ್ನೂ ಪ್ರವೇಶಿಸಿದ ಕೂಡಲೇ ಎಡಮಗ್ಗಲಲ್ಲಿ ತುಳಸೀ ದಾಸನ ಒಂದು ಬಟ್ಟೆಯ ಮೂರ್ತಿಯು ಇಡಲ್ಪಟ್ಟಿದೆ. ಆ ಮೂರ್ತಿಯ ಕೆಳಗೆ ರಾಮಾಯ ಣದ ರಿಕಾರ್ಡ್‌ನ್ನು ಹಚ್ಚಿರುತ್ತಾರೆ. ವಿದ್ಯುತ್ ಯಂತ್ರದ ಮಾಧ್ಯಮದಿಂದ ಆ ಮೂರ್ತಿಯು ಬಾಯಿಬಡಿಯುವಂತೆಯೂ ಗೋಣು ಅಲ್ಲಾಡಿಸುವಂತೆಯೂ ಮಾಡಿರು ತ್ತಾರೆ. ಅದರ ಕೈಯಲ್ಲಿ ಒಂದು ಜಪಮಾಲೆಯೂ ಸಹ ಇರುತ್ತದೆ. ನೋಡಿದವರಿಗೆ ತುಳಸೀದಾಸನು ಕುಳಿತುಕೊಂಡು ರಾಮಾಯಣವನ್ನು ಹೇಳುತ್ತಿರುವಂತೆಯೂ ಮತ್ತು ಮಂತ್ರ ಜಪವನ್ನು ಮಾಡುತ್ತಿರುವಂತೆಯೂ ಕಾಣುತ್ತದೆ. ಈ ಕ್ರಿಯೆಯು ಆ ಮೂರ್ತಿ ಯಿಂದ ಎಷ್ಟೋ ದಿನಗಳಿಂದ ನಡೆಯುತ್ತಿದ್ದರೂ ಅದಕ್ಕೆ ಯಾವ ಫಲವೂ ಪ್ರಾಪ್ತ ವಾಗುವದಿಲ್ಲ. ಏಕೆಂದರೆ ಆ ಮೂರ್ತಿಯೊಳಗೆ ಪ್ರಾಣಮನಸ್ಸುಗಳು ಇರುವದಿಲ್ಲ. ಅದೊಂದು ಕೇವಲ ಯಾಂತ್ರಿಕ ಕ್ರಿಯೆ. ಇದರಂತೆ ಭಾವನೆಯಿಲ್ಲದೆ ಮಾಡಿದ ಪ್ರತಿಯೊಬ್ಬರ ಧರ್ಮಾಚರಣೆಗಳು ಯಾಂತ್ರಿಕಗಳಾಗಿರೋಣದಿಂದ ಅವುಗಳಿಗೆ ಯಾವ ಫಲವೂ ಇರುವದಿಲ್ಲ. ಆದ್ದರಿಂದ ಭಾವನಾಯುಕ್ತವಾಗಿಯೇ ಧರ್ಮಾನುಷ್ಠಾನವನ್ನು ಮಾಡಬೇಕು.

ಭಾವನೆಯಿಂದಲೇ ಮನಸ್ಸು ಪರಿಶುದ್ಧವಾಗುತ್ತದೆ. ಭಾವನೆಯೆಂದರೆ ಮನಸ್ಸಿನ ವೃತ್ತಿಯೆಂಬುದಾಗಿ ಈ ಹಿಂದೆ ಹೇಳಲಾಗಿದೆ. ಅದು ಭಗವಂತನ ಆಕಾರವನ್ನು ತಾಳಿದರೆ ಪವಿತ್ರವಾಗುವದು. ಅದುವೇ ವಿಷಯಾಕಾರವನ್ನು ತಾಳಿದರೆ ಅಪವಿತ್ರವಾಗುವದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಕಾಶದಿಂದ ಬಿದ್ದ ನೀರು ಎಂಥ ಬಣ್ಣದ ಭೂಮಿಯೊಂದಿಗೆ ಸಂಪರ್ಕವನ್ನು ಪಡೆಯುವದೋ ಅದೇ ಬಣ್ಣದ ರೂಪವನ್ನು ತಾಳುವಂತೆ ಮನಸ್ಸು ಯಾವ ವಿಷಯದ ಸಂಪರ್ಕವನ್ನು ಪಡೆಯುವದೋ ಅದೇ ಸ್ವರೂಪವನ್ನು ತಾಳುತ್ತದೆ. ಆದ್ದರಿಂದ ಭಾವವನ್ನು ಸದಾ ಶುದ್ಧವಾಗಿ ಇಡಬೇಕಾದರೆ ಅದಕ್ಕೆ ಭಗವಂತನ ಸಂಬಂಧವನ್ನು ಮಾಡಬೇಕು.

ಶಿವಭಾವನೆಯಿಂದ ಕರ್ಮಾದಿಗಳನ್ನು ಮಾಡಿದರೆ ಅವು ಪ್ರತಿಬಂಧಕಗಳಾಗುವದಿಲ್ಲ ಎಂಬ ವಿಷಯವನ್ನು ಪ್ರತಿಪಾದಿಸಲೋಸುಗ ಪೂಜ್ಯಪಾದರು ಪುನಃ–

ಶಿವಭಾವನಯಾ ಸರ್ವಂ ನಿತ್ಯನೈಮಿತ್ತಿಕಾದಿಕಮ್
ಕುರ್ವನ್ನಪಿ ಮಹಾಯೋಗೀ ಗುಣದೋಷೈರ್ನಬಾಧ್ಯತೇ ||

(ಸಿ.ಶಿ. ೧೬–೨೦)

ಈ ತೆರನಾಗಿ ವಿವರಿಸಿದ್ದಾರೆ. ಶಾಸ್ತ್ರೋಕ್ತಗಳಾದ ನಿತ್ಯ ಹಾಗೂ ನೈಮಿತ್ತಿಕಾದಿ ಕರ್ಮಗಳನ್ನು ಶಿವಭಾವನೆಯಿಂದ ಮಾಡಿದಾಗ ಅವುಗಳನ್ನು ಮಾಡುವ ಯೋಗಿಗೆ ಯಾವ ದೋಷಗಳೂ ಅಂಟಿಕೊಳ್ಳುವದಿಲ್ಲ.

ಶಾಸ್ತ್ರಗಳಲ್ಲಿ ನಿತ್ಯ ನೈಮಿತ್ತಿಕ, ಕಾಮ್ಯ ಮತ್ತು ನಿಷಿದ್ಧಗಳೆಂಬುದಾಗಿ ಅನೇಕ ಕರ್ಮಗಳು ಪ್ರತಿಪಾದಿಸಲ್ಪಟ್ಟಿವೆ. ಜ್ಞಾನಿಯಾದವನು ಕಾಮ್ಯ ಹಾಗೂ ನಿಷಿದ್ಧಕರ್ಮಗಳನ್ನು ಮಾಡುವದಿಲ್ಲವಾದ್ದರಿಂದ ನಿತ್ಯ ಹಾಗೂ ನೈಮಿತ್ತಿಕ ಕರ್ಮಗಳನ್ನು ಮಾತ್ರ ಮಾಡಬೇಕಾಗುತ್ತದೆ. ಈ ಕರ್ಮಗಳನ್ನು ಮಾಡುವಾಗಲೂ ಸಹ ಅದಕ್ಕಾಗಿ ವಿಧಿಸಲ್ಪಟ್ಟ ಎಲ್ಲ ನಿಯಮಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸಬೇಕಾಗುತ್ತದೆ. ಆದರೆ ಶಿವಭಾವನೆಯಿಂದ ಯುಕ್ತನಾದ ಮಹಾಯೋಗಿಯು ಈ ಕರ್ಮಗಳನ್ನು ಮಾಡುವಾಗ ಅದರಿಂದ ಉಂಟಾಗುವ ಯಾವುದೇ ಗುಣದೋಷಗಳಿಂದ ಈತನು ಪತಿತನಾಗುವದಿಲ್ಲ. ಅಂದರೆ ಕರ್ಮಗಳನ್ನು ಮಾಡುವಾಗ ನಾನು ಮಾಡುತ್ತೇನೆಂಬ ಅಹಂಭಾವನೆಯು ಬಂದಾಗ ಅಲ್ಲಿ ಉಂಟಾಗುವ ಗುಣದೋಷಗಳಿಗೆ ಸಹಭಾಗಿಯಾಗಬೇಕಾಗುತ್ತದೆ. ಒಂದು ವೇಳೆ ನಾನು ಮಾಡುವವನಲ್ಲ ಎಲ್ಲದಕ್ಕೂ ಕರ್ತಾ ಶಿವನೇ ಆಗಿರುತ್ತಾನೆ. ಅವನ ಪ್ರೇರಣೆಯಿಂದಲೇ ಎಲ್ಲವೂ ನಡೆಯುತ್ತದೆ ಎಂಬ ಭಾವನೆಯಿಂದ ನಿತ್ಯ ನೈಮಿತ್ತಿಕಾದಿ ಕರ್ಮಗಳನ್ನು ಮಾಡುವಾಗ ಏನೇ ಲೋಪದೋಷಗಳಾದರೂ ಅವುಗಳು ಈ ಶಿವಯೋಗಿಗೆ ಸಂಬಂಧವಾಗಲಾರವು.

ಶಿವಯೋಗಿಯು ಮಾಡಬೇಕಾದ ಸಂಧ್ಯಾವಂದನೆಯನ್ನು ಕುರಿತು ಪೂಜ್ಯಪಾದರು ಪುನಃ–

ಅಂತಃ ಪ್ರಕಾಶಮಾನಸ್ಯ ಸಂವಿತ್ಸೂರ್ಯಸ್ಯ ಸಂತತಮ್ ।
ಭಾವೇನ ಯದುಪಸ್ಥಾನಂ ತತ್ಸಂಧ್ಯಾವಂದನಂ ವಿದುಃ ||

(ಸಿ. ಶಿ. ೧೬–೨೧)

ಈ ರೀತಿಯಾಗಿ ಉಪದೇಶಿಸಿದ್ದಾರೆ. ''ಅಹರಹಃ ಸಂಧ್ಯಾಮುಪಾಸೀತ'' ಎಂಬ ವೇದ ವಾಕ್ಯದಲ್ಲಿ ಪ್ರತಿದಿನವೂ ಸಂಧ್ಯಾವಂದನೆಯನ್ನು ಮಾಡಬೇಕೆಂಬುದಾಗಿ ಆದೇಶವಿತ್ತಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಯಃ ಈ ಸಂಧ್ಯಾವಂದನೆಯು ಪ್ರಾತಃ ಸಂಧ್ಯಾ, ಮಧ್ಯಾಹ್ನ ಸಂಧ್ಯಾ ಮತ್ತು ಸಾಯಂ ಸಂಧ್ಯಾ ಎಂಬುದಾಗಿ ಮೂರು ಪ್ರಕಾರವಾಗಿ ಇರುತ್ತದೆ. ಪ್ರಾತಃಕಾಲ ಅರುಣೋದಯದ ನಂತರ ಸೂರ್ಯೋದಯದ ಪೂರ್ವದಲ್ಲಿ ಮಾಡುವ ಸಂಧ್ಯಾ ವಂದನೆಗೆ ಪ್ರಾತಃ ಸಂಧ್ಯಾ ಎನ್ನುತ್ತಾರೆ. ಇನ್ನು ಮಧ್ಯಾಹ್ನ ೧೨ ಘಂಟೆಗೆ ಮಾಡುವ ಸಂಧ್ಯಾ ವಂದನೆಗೆ ಮಧ್ಯಾಹ್ನ ಸಂಧ್ಯಾ ಎನ್ನುತ್ತಾರೆ. ಇನ್ನು ಸೂರ್ಯಾಸ್ತದ ವೇಳೆಯಲ್ಲಿ ಮಾಡುವ ಸಂಧ್ಯಾವಂದನೆಗೆ ಸಾಯಂಸಂಧ್ಯಾ ಎನ್ನುತ್ತಾರೆ. ಈ ಮೂರು ಬಹಿರಂಗದ ಸಂಧ್ಯಾವಂದನೆಗಳು. ಆದರೆ ಪೂಜ್ಯಪಾದರು ಇಲ್ಲಿ ಅಂತರಂಗದ ಸಂಧ್ಯಾವಂದನೆ ಬಗ್ಗೆ ತಿಳಿಯ ಪಡಿಸಿದ್ದಾರೆ.

ಹೃದಯಕಮಲದಲ್ಲಿ ಸದಾ ಪ್ರಕಾಶಿಸುತ್ತಿರುವ ಜ್ಞಾನವೆಂಬ ಸೂರ್ಯನನ್ನು ಭಾವನೆಯಿಂದ ಅನುಸಂಧಾನಿಸುವದೇ ಸಂಧ್ಯಾವಂದನೆಯು ಈ ತೆರನಾದ ಸಂಧ್ಯಾ ವಂದನೆಯನ್ನು ನಿರಂತರವಾಗಿ ಮಾಡುತ್ತಿರಬೇಕು. ಶಿವಚಿಂತನೆ– ಶಿವಧ್ಯಾನಾದಿಗಳನ್ನು ನಿರಂತರವಾಗಿ ಮಾಡುವದಾಗದಿದ್ದರೆ ಕೊನೆಯಪಕ್ಷ ದಿನಾಲೂ ಮೂರು ವೇಳೆ ಯಾದರೂ ಅದನ್ನು ಮಾಡಬೇಕೆಂಬುವ ಉದ್ದೇಶದಿಂದ ಧರ್ಮ ಶಾಸ್ತ್ರದಲ್ಲಿ ಪ್ರಾತಃ ಕಾಲ ಮಧ್ಯಾಹ್ನ ಮತ್ತು ಸಾಯಕಾಲದ ಸಂಧ್ಯಾವಂದನೆಯು ವಿಧಿಸಲ್ಪಟ್ಟಿದೆ. ಮನುಷ್ಯನ ಶ್ವಾಸವೇ ಜೀವನವು. ಎಲ್ಲಿಯವರೆಗೆ ಪ್ರಾಣದ ಗಮನಾಗಮನವಿರುತ್ತದೆಯೋ ಅಲ್ಲಿಯ ವರೆಗೆ ನಾವು ಬದುಕಿಕೊಂಡಿರುತ್ತೇವೆ. ಈ ಪ್ರಾಣವಾಯುವು ಒಂದು ದಿವಸಕ್ಕೆ ೨೧೬೦೦ (ಇಪ್ಪತ್ತೊಂದು ಸಾವಿರದಾ ಆರುನೂರು) ಸಲ ಹೊರಹೋಗಿಬರುವ ಕ್ರಿಯೆಗಳನ್ನು ಮಾಡುತ್ತಿರುತ್ತದೆ. ನಾವು ರಾತ್ರಿ ಮಲಗಿಕೊಂಡಾಗ ಆ ಪ್ರಾಣದ ಮೇಲೆ ಪರಮಾತ್ಮನು ಅದು ಹೊರಗೆ ಹೋದರು ಹೊರಗೇ ಹೋಗದಂತೆ ನಿಯಂತ್ರಣವಿರಿಸುತ್ತಾನೆ. ಆದರ ಕೃತಜ್ಞತೆಗಾಗಿಯಾದರೂ ಪ್ರಾತಃಕಾಲ ಎದ್ದೊಡನೆ ಸಂಧ್ಯಾವಂದನೆಯನ್ನು ಮಾಡಬೇಕು. ಇನ್ನು ಮಧ್ಯಾಹ್ನ ತಾನು ಊಟಮಾಡುವ ಪೂರ್ವದಲ್ಲಿ ಶಿವನನ್ನು ಸ್ಮರಿಸಿ ಆತನ ಪೂಜೆಯನ್ನು ಮಾಡಿ ಅವನಿಗೆ ನೈವೇದ್ಯವನ್ನು ಸಮರ್ಪಿಸಿ ಅದನ್ನು ಪ್ರಸಾದರೂಪವಾಗಿ ತೆಗೆದುಕೊಳ್ಳುವ ಉದ್ದೇಶದಿಂದ ಮಧ್ಯಾಹ್ನದ ಸಂಧ್ಯಾವಂದನೆಯನ್ನು ಮಾಡಬೇಕೆಂಬು ದಾಗಿ ಉಪದೇಶಿಸಲಾಗಿದೆ. ಅದೇ ಪ್ರಕಾರವಾಗಿ ಸಾಯಂಕಾಲ ಮತ್ತೊಮ್ಮೆ ಸಂಧ್ಯಾ ವಂದನೆಯನ್ನು ಮಾಡಿ ತಾನು ಮಲಗಿಕೊಳ್ಳುವ ಪೂರ್ವದಲ್ಲಿ ತನ್ನ ಎಲ್ಲ ಭಾರವನ್ನು ಆ ಶಿವನ ಮೇಲಿರಿಸಬೇಕು. ಈ ಉದ್ದೇಶಕ್ಕಾಗಿಯೇ ಸಂಧ್ಯಾಕಾಲೀನ ಸಂಧ್ಯಾವಂದನೆಯು ಉಪದೇಶಿಸಲ್ಪಟ್ಟಿದೆ. ಹೀಗೆ ನಿರಂತರವಾದ ಧ್ಯಾನಾದಿಗಳು ಸಂಭವಿಸದಿದ್ದಾಗ ಕೊನೆಯ ಪಕ್ಷ ಈ ಮೂರು ವೇಳೆಯಲ್ಲಾದರೂ ಆಚರಿಸಬೇಕೆಂಬುದು ಶಾಸ್ತ್ರಾದೇಶವಾಗಿದೆ.

ಇಲ್ಲಿ ಸಂಧ್ಯಾವಂದನೆಯೆಂದರೆ ಸಂಧಿಕಾಲದಲ್ಲಿ ಮಾಡುವ ಶಿವಪೂಜೆಯೆಂದರ್ಥ. ಅರುಣೋದಯವಾಗಿ ಸೂರ್ಯೋದಯವಾಗುವ ಪೂರ್ವದ ಕ್ಷಣ. ಇದು ಪ್ರಾತಃ ಕಾಲದ ಸಂಧಿಸಮಯವು. ವೀರಶೈವರು ಬ್ರಾಹ್ಮೀ ಮುಹೂರ್ತದಲ್ಲೆದ್ದು ಮಂಗಲ ಸ್ನಾನಾದಿಗಳನ್ನು ಮಾಡಿ ತನ್ನ ನಿತ್ಯ ಕರ್ಮವಾದ ಇಷ್ಟಲಿಂಗ ಪೂಜೆಯನ್ನು ಸೂರ್ಯೋದ ಯವಾಗುವ ಪೂರ್ವದ ಕ್ಷಣದವರೆಗೆ ಪೂರ್ಣಗೊಳಿಸಬೇಕು. ಇದು ವೀರಶೈವರ ಪ್ರಾತಃಕಾಲೀನ ಸಂಧ್ಯಾವಂದನೆಯು ಇದೇ ಪ್ರಕಾರವಾಗಿ ಸೂರ್ಯನು ಪೂರ್ವದಿಕ್ಕಿನಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏರುತ್ತ ಏರುತ್ತ ಮಧ್ಯಾಹ್ನ ೧೨ ಗಂಟೆಗೆ ಆಕಾಶದ ಮಧ್ಯದಲ್ಲಿದ್ದು ಮರುಕ್ಷಣದಲ್ಲಿ ಪಶ್ಚಿಮಕ್ಕೆ ಇಳಿಯುವ ಪೂರ್ವದ ಕ್ಷಣವೇ ಮಧ್ಯಾಹ್ನದ ಸಂಧಿಸಮಯವು. ಈ ಸಮಯದಲ್ಲಿಯೂ ಸಹ ಇಷ್ಟಲಿಂಗ ಪೂಜೆಯನ್ನು ಮಾಡಬೇಕು. ಇದು ಮಧ್ಯಾಹ್ನದ ಸಂಧ್ಯಾವಂದನೆಯು. ಇದೇ ತೆರನಾಗಿ ಸಾಯಂಕಾಲ ಸೂರ್ಯಾಸ್ತವಾಗುವ ವೇಳೆಯಲ್ಲಿ ಸೂರ್ಯಬಿಂಬವು ಮುಳುಗುತ್ತ ಮುಳುಗುತ್ತ ಕೊನೆಯದಾಗಿ ಪೂರ್ಣವಾಗಿ ಮುಳುಗಿದ ಮತ್ತು ಇನ್ನೂ ಕತ್ತಲೆಯು ಆವರಿಸದಿರುವ ಸಮಯವೂ ಸಹ ಸಂಧಿ ಸಮಯವೆಂದು ಕರೆಯಲ್ಪಡುತ್ತದೆ. ಈ ಸಂಧಿ ಸಮಯದಲ್ಲಿ ಮಾಡುವ ಶಿವಪೂಜೆಗೆ ಸಾಯಂ ಸಂಧ್ಯಾ ಎನ್ನುವರು ವೀರಶೈವರಾದವರು. ಈ ಸಮಯದಲ್ಲಿಯೂ ಸಹ ಇಷ್ಟಲಿಂಗ ಪೂಜೆಯನ್ನು ಅವಶ್ಯವಾಗಿ ಮಾಡಬೇಕು ಇದುವೇ ವೀರಶೈವರ ಸಾಯಂ ಸಂಧ್ಯಾವಂದನೆಯು.

ಹೀಗೆ 'ಸಂಧ್ಯಾವಂದನೆ' ಎಂಬ ಶಬ್ದಕ್ಕೆ ಪೂರ್ವದಲ್ಲಿ ಹೇಳಿದ ಸಂಧಿಕಾಲದಲ್ಲಿ ಮಾಡುವ ಶಿವಪೂಜೆಯೆಂಬುದಾಗಿ ತಿಳಿದುಬರುತ್ತದೆ. ಇದು ವೈದಿಕ ಪರಂಪರೆಯಲ್ಲಿ ಬಂದ ಶಬ್ದವು. ಅಂತೆಯೇ ಬಹಳಷ್ಟು ಜನ ವೀರಶೈವರಿಗೆ ಇದರ, ಸರಿಯಾದ ಅರ್ಥವು ಗುರುತಿರದಕಾರಣ ಬ್ರಾಹ್ಮಣರು ಮಾಡುವ ಗಾಯತ್ರಿ ಜಪ ಹಾಗೂ ಸೂರ್ಯನಿಗೆ ಕೊಡುವ ಅರ್ಘ್ಯಾದಿಗಳಿಗೇನೇ ಸಂಧ್ಯಾವಂದನೆಯೆಂದು ತಿಳಿದುಕೊಂಡು ಸಂಧ್ಯಾವಂದನೆಯು ನಮಗೆ ಸಂಬಂಧವೇ ಇಲ್ಲ ಎಂಬುವ ರೀತಿಯಲ್ಲಿ ಮಾತನಾಡುವವರು ಬಹಳ. ಆದರೆ ಈ ಶಬ್ದದ ಸರಿಯಾದ ಅರ್ಥವನ್ನು ತಿಳಿದುಕೊಂಡು ವೀರಶೈವರೂ ಸಹ ಪೂರ್ವದಲ್ಲಿ ಹೇಳಿದ ಹಾಗೆ ಮೂರು ವಿಧ ಸಂಧಿಕಾಲದಲ್ಲಿ ಇಷ್ಟಲಿಂಗ ಪೂಜೆಯನ್ನು ಅವಶ್ಯವಾಗಿ ಮಾಡಬೇಕು.

ಇನ್ನು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವ ಸಂಧ್ಯಾವಂದನೆಯು ಅತ್ಯಂತ ಉತ್ಕೃಷ್ಟವಾದುದು. ಆಕಾಶದಲ್ಲಿಯ ಸೂರ್ಯನು ಒಮ್ಮೆ ಉದಯಿಸುತ್ತಾನೆ. ಇನ್ನೊಮ್ಮೆ ಅಸ್ತನಾಗುತ್ತಾನೆ. ಆದರೆ ಹೃದಯಾಕಾಶದಲ್ಲಿ ಜ್ಞಾನರೂಪನಾದ ಸೂರ್ಯನು ಒಮ್ಮೆ ಉದಯವಾದನೆಂದರೆ ಅವನೆಂದೂ ಅಸ್ತವಾಗುವದಿಲ್ಲ. ಹೀಗೆ ತನ್ನ ಹೃದಯದಲ್ಲಿ ಜ್ಞಾನಸೂರ್ಯನು ಉದಯವಾಗಿರುವ ಸ್ಥಿತಿಯನ್ನು ನಿರಂತರವಾಗಿ ಅನುಸಂಧಾನಿಸುವದೇ ಸಂಧ್ಯಾವಂದನೆಯೆಂಬುದಾಗಿ ಹೇಳಲಾಗಿದೆ. ತಾತ್ಪರ್ಯವೇನೆಂದರೆ ತನಗೆ ಉತ್ಪನ್ನವಾದ ಶಿವೋಽಹಂ ಎನ್ನುವ ಶಿವಾದ್ವೈತ ಜ್ಞಾನವನ್ನು ನಿರಂತರವಾಗಿ ಅನುಸಂಧಾನಿಸುತ್ತಿರಬೇಕು. ಇದುವೇ ಸರ್ವೋತ್ಕೃಷ್ಟವಾದ ಸಂಧ್ಯಾವಂದನೆಯು ಪೂರ್ವದಲ್ಲಿ ಹೇಳಲ್ಪಟ್ಟ ಮೂರು ವಿಧ ಸಂಧ್ಯಾವಂದನೆಗಳನ್ನು ಮಾಡುವ ಉದ್ದೇಶವೆಂದರೆ ಸಾಧಕನ ಅಂತಃಕರಣವು ಪರಿಶುದ್ಧವಾಗಿ ಅವನಿಗೆ ಶಿವಾದ್ವೈತ ಜ್ಞಾನವು ಪ್ರಾಪ್ತವಾಗಬೇಕೆಂಬುದೇ ಆಗಿದೆ. ಅದು ಪ್ರಾಪ್ತವಾದ ಬಳಿಕ ನಿರಂತರವಾಗಿ ಅದನ್ನೇ ಅನುಸಂಧಾನಿಸುವದೇ ಜೀವನದ ಮುಖ್ಯ ಗುರಿಯೆಂಬುದಾಗಿ ಭಾವಿಸಿ ಪೂಜ್ಯಪಾದರು ಆ ವಿಧವಾದ ಅನುಸಂಧಾನಕ್ಕೇನೇ ಇಲ್ಲಿ ಸಂಧ್ಯಾವಂದನೆಯೆಂಬುದಾಗಿ ಕರೆದಿದ್ದಾರೆ.

ಈ ಭಾವಾಚಾರಸಂಪನ್ನನಾದ ಸಾಧಕನು ಮಾಡಬೇಕಾದ ಸಂಧ್ಯಾವಂದನೆಯ ಬಗ್ಗೆ ತಿಳಿಸಿದಂತೆ ಇನ್ನೂ ಆತನಿಂದ ಆಚರಿಸಲ್ಪಡಬೇಕಾದ ಹೋಮದ ವಿಷಯಕವಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಪಷ್ಟಪಡಿಸಲೋಸುಗ ಪೂಜ್ಯರು ಪುನಃ–

ಆತ್ಮಜ್ಯೋತಿಷಿ ಸರ್ವೇಷಾಂ ವಿಷಯಾಣಾಂ ಸಮರ್ಪಣಮ್ ।
ಅಂತರ್ಮುಖೇನ ಭಾವೇನ ಹೋಮಕರ್ಮೇತಿ ಗೀಯತೇ ॥
(ಸಿ. ಶಿ. ೧೬–೭೨)

ಹೀಗೆ ವಿವರಿಸಿದ್ದಾರೆ. ಅಂತರಂಗದ ಚಿದಗ್ನಿಯಲ್ಲಿ ಅಂತರ್ಮುಖನಾಗಿ ತನ್ನ ಮನಸ್ಸಿನಲ್ಲಿ ಬರುತ್ತಿರುವ ವಿಷಯಗಳನ್ನೆಲ್ಲ ಸಮರ್ಪಣಮಾಡುವದೇ ಹೋಮವು ಎಂಬುದು ಪೂಜ್ಯರ ಆಶಯವಾಗಿದೆ.

ಸಂಧ್ಯಾ ವಂದನೆಯನಂತರ ಬರುವ ಕ್ರಿಯೆಯೇ ಹೋಮಕರ್ಮವು. ಈ ಹೋಮವೂ ಸಹ ಬಾಹ್ಯ ಹಾಗೂ ಅಂತರಂಗ ಭೇದದಿಂದ ಎರಡು ಪ್ರಕಾರವಾಗಿರುತ್ತದೆ. ಬಾಹ್ಯದಲ್ಲಿ ಯಜ್ಞಕುಂಡವನ್ನು ಸಿದ್ಧಪಡಿಸಿ ಅದರಲ್ಲಿ ಮಂತ್ರಪೂರ್ವಕವಾಗಿ ಅಗ್ನಿಯನ್ನು ಪ್ರಜ್ವಲಿಸಿ ಇಷ್ಟದೇವರ ಹೆಸರಿನಿಂದ ಸಮಿತ್ತು ಹಾಗೂ ಘೃತ ಮೊದಲಾದ ದ್ರವ್ಯಗಳನ್ನು ಹೋಮಕುಂಡದಲ್ಲಿ ಸ್ವಾಹಾಕಾರ ಮಾಡುವದೇ ಬಾಹ್ಯ ಹೋಮವು, ಇಷ್ಟನ್ನು ಮಾಡಿದರೆ ಹೋಮಕ್ರಿಯೆಯು ಪೂರ್ಣವಾಯಿತಂತಲ್ಲ, ತನ್ನೊಳಗಿನ ಅವಗುಣಗಳನ್ನು ಆಹುತಿ ಕೊಟ್ಟಾಗಲೇ ಹೋಮಕ್ರಿಯೆಯು ಪೂರ್ಣವಾಗುವದು. ಅಂತೆಯೇ ಪೂಜ್ಯಪಾದರು ಇಲ್ಲಿ ಅಂತರಂಗದ ಹೋಮಕರ್ಮವನ್ನು ವಿಧಿಸಿದ್ದಾರೆ. ಆ ಪ್ರಕಾರ ತನ್ನ ಆತ್ಮವೆಂಬ ಚಿದ್ರೂಪವಾದ ಅಗ್ನಿಯಲ್ಲಿ ತನ್ನ ಮನಸ್ಸಿನಲ್ಲಿ ಬರುವ ವಿಷಯಾಕಾರ ವೃತ್ತಿಗಳನ್ನು ಒಂದೊಂದಾಗಿ ಸಮರ್ಪಿಸುತ್ತ ತಾನು ನಿರ್ವಿಷಯನಾಗಿ ಅಂತರ್ಮುಖಾವಸ್ಥೆಯಲ್ಲಿ ಇರುವದೇ ಅಂತರಂಗದ ಹೋಮ ಕರ್ಮವು ಇದುವೇ ನಿಜವಾದ ಮತ್ತು ಶ್ರೇಷ್ಠವಾದ ಹೋಮ ಕರ್ಮವೆನಿಸಿಕೊಳ್ಳುತ್ತದೆ.

ಇನ್ನು ಬಹಿರಂಗದಲ್ಲಿ ಮಾಡಲ್ಪಡುವ ಯಜ್ಞವು ನಿಷ್ಪ್ರಯೋಜಕವೆಂಬುದಾಗಿ ಯಾರೂ ತಿಳಿದುಕೊಳ್ಳಬಾರದು. ಯಜ್ಞದ ಸೂಕ್ಷ್ಮತತ್ವಾರ್ಥವನ್ನು ಅರಿಯದ ಅನೇಕ ಜನರು ಅಲ್ಲಸಲ್ಲದ ಅವಿಚಾರಪೂರ್ಣವಾದ ಮಾತುಗಳಿಂದ ಯಜ್ಞ ಕ್ರಿಯೆಯ ಬಗ್ಗೆ ಖಂಡಿಸುವದನ್ನು ಅಲ್ಲಲ್ಲಿ ಕೇಳುತ್ತೇವೆ. ಮನುಷ್ಯರಿಗೆ ತಿನ್ನಲು ತುಪ್ಪ ಸಿಗದ ವೇಳೆಯಲ್ಲಿ ಅದನ್ನು ಅಗ್ನಿಗೆ ಆಹುತಿಕೊಟ್ಟು ಹಾಳುಮಾಡುವದು ವ್ಯರ್ಥವಲ್ಲವೆ ? ನಮ್ಮ ದೇಶದ ಅದೆಷ್ಟೋ ಜನತೆ ವಸ್ತ್ರಹೀನರಾಗಿ ತಿರುಗುತ್ತಿರುವ ಸಂದರ್ಭದಲ್ಲಿ ಬೆಲೆಬಾಳುವ ದುಕೂಲ (ರೇಶ್ಮೆಯ ವಸ್ತ್ರ)ಗಳನ್ನು ಅಗ್ನಿಗೆ ಆಹುತಿಕೊಡುವದು ಬುದ್ಧಿ ಮತ್ತೆಯೇ ? ಎಂಬುದಾಗಿ ಅನೇಕ ಯುಕ್ತಿಗಳಿಂದ ಬಾಹ್ಯ ಯಜ್ಞ ಕ್ರಿಯೆಯನ್ನು ಖಂಡಿಸುತ್ತಾರೆ. ಇವರ ಈ ಯುಕ್ತವಾದವು ಅಷ್ಟೊಂದು ಸಮಂಜಸವಾದುದಲ್ಲ, ಈ ಜಗತ್ತಿನ ಎಲ್ಲ ವ್ಯವಹಾರಗಳು ಒಂದು ಯಜ್ಞ ಕ್ರಿಯೆಯಿದ್ದಂತೆಯೇ, 'ಯಜ್ಞಮಾಡು' ಎಂದರೆ ತ್ಯಾಗ ಭಾವನೆಯನ್ನು ದೃಢಪಡಿಸಿಕೊ ಎಂದರ್ಥ ಯಾವದೇ ಒಂದು ವಸ್ತುವನ್ನು ಭಗವಂತನ ನಾಮಸ್ಮರಣ ಪೂರ್ವಕವಾಗಿ ಯಜ್ಞದಲ್ಲಿ ಆಹುತಿ ಕೊಟ್ಟಾಗ ಅದು ಸಮಷ್ಟಿ ರೂಪವನ್ನು ತಾಳಿ ಬಹು ಜನರಿಗೆ ಉಪಯೋಗಿಯಾಗುತ್ತದೆ. ಅಗ್ನಿಯಲ್ಲಿ ಅರ್ಪಿಸಲ್ಪಟ್ಟ ವಸ್ತುವು ವ್ಯಾಪಕ ಸ್ವರೂಪವನ್ನು ತಾಳಿ ಸಮಷ್ಟಿಯ ಮೇಲೆ ಪರಿಣಾಮವನ್ನು ಬೀರುತ್ತದೆ. ಓರ್ವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ಯಕ್ತಿಯು ಒಂದು ಮೆಣಸಿನಕಾಯಿಯನ್ನು ತಿಂದದ್ದಾದರೆ ಅದರ ಖಾರಗುಣದ ಪ್ರಭಾವದಿಂದ ಇವನ ಕಣ್ಣು ಮೂಗುಗಳಲ್ಲಿ ನೀರು ಬಂದು ಮುಖವೆಲ್ಲಾ ಕೆಂಪಾಗಿ ಮೈಯೆಲ್ಲಾ ಬೆವರು ಬಿಡುವದನ್ನು ನೋಡಬಹುದು. ಆದರೆ ಅದೇ ಮೆಣಸಿನಕಾಯಿಯನ್ನು ನಿಗಿನಿಗಿಸುವ ಅಗ್ನಿಯ ಮೇಲೆ ಹಾಕಿದಾಗ ಅದು ಸುತ್ತಮುತ್ತಲೂ ಕುಳಿತಿರುವ ಅನೇಕ ಜನರ ಮೇಲೆ ತನ್ನ ವಾಸನೆಯ ಪ್ರಭಾವವನ್ನು ಬೀರಿ ಎಲ್ಲರಿಗೂ ಶೀನು ಬರುವಂತೆ ಮತ್ತು ಕಣ್ಣು–ಮೂಗುಗಳಲ್ಲಿ ನೀರು ಬರುವಂತೆ ಮಾಡುತ್ತದೆ. ಅಂದರೆ ಅಗ್ನಿಯಲ್ಲಿ ಅರ್ಪಿಸಲ್ಪಟ್ಟ ವಸ್ತುವಿನ ಶಕ್ತಿಯು ವೃದ್ಧಿಗೊಂಡು ಅನೇಕ ಜನರ ಮೇಲೆ ಪ್ರಭಾವವನ್ನು ಬೀರುವದು ಕಂಡುಬರುತ್ತದೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ವಿದ್ಯುದಗ್ನಿಯ ಬಳಕೆಯು ಸರ್ವತ್ರ ನಡೆಯುತ್ತಿದೆ. ವ್ಯಕ್ತಿಯ ಶಬ್ದ ಹಾಗೂ ರೂಪಗಳನ್ನು ವಿದ್ಯುದ್ಯಂತ್ರಗಳ ಮಾಧ್ಯಮದಿಂದ ವುದ್ಯುದಗ್ನಿಯಲ್ಲಿ ಸಮರ್ಪಿಸಿದಾಗ ಅದು ಹೆಚ್ಚು ಹೆಚ್ಚು ವ್ಯಾಪಕ ಸ್ವರೂಪವನ್ನು ತಾಳಿ ಆ ವ್ಯಕ್ತಿಯ ಶಬ್ದ ಹಾಗೂ ಚಿತ್ರಗಳು ರೇಡಿಯೋ ಹಾಗೂ ಟಿ. ವಿ.ಗಳ ಮುಖಾಂತರ ಕೋಟಿ ಕೋಟಿ ಜನರಿಗೆ ಆ ಶಬ್ದವನ್ನು ಕೇಳುವಂತೆಯೂ ಆ ರೂಪವನ್ನು ಕಾಣುವಂತೆಯೂ ಮಾಡುತ್ತದೆ. ಇದನ್ನು ಯಾರಿಂದಲೂ ಅಲ್ಲಗಳೆಯಲಾಗುವದಿಲ್ಲ ಹೀಗೆ ಯಾವದೊಂದು ಪದಾರ್ಥವು ಅಗ್ನಿಯಲ್ಲಿ ಸಮರ್ಪಿಸಿದಾಗ ಅದು ಅನೇಕ ರೂಪವನ್ನು ತಾಳಿ 'ಬಹುಜನ ಸುಖಾಯ ಬಹು ಜನ ಹಿತಾಯ' ಅಂದರೆ ಅನೇಕ ಜನರಿಗೆ ಅದು ಉಪಕಾರಿಯಾಗುತ್ತದೆಂಬುದು ತಿಳಿದುಬರುತ್ತದೆ. ಈ ವೈಜ್ಞಾನಿಕ ತತ್ತ್ವವನ್ನರಿತೇ ನಮ್ಮ ದೇಶದ ಪ್ರಾಚೀನ ಮಹರ್ಷಿಗಳು ವೇದಾಗಮಗಳನ್ನು ಅಭ್ಯಸಿಸಿ ಆದರಿಂದ ಯಜ್ಞಕ್ರಿಯೆಯ ಬಗ್ಗೆ ಸಂಶೋಧನೆಯನ್ನು ಮಾಡಿ ಈ ಯಜ್ಞದ ಮುಖಾಂತರ ಸಮಷ್ಟಿ ಪ್ರಪಂಚಕ್ಕೆ ಕಲ್ಯಾಣವನ್ನು ಮಾಡುವ ಉದ್ದೇಶದಿಂದ ಯಜ್ಞಪದ್ಧತಿಯನ್ನು ಬಳಕೆಗೆ ತಂದಿದ್ದಾರೆ.

''ಯಜ್ಞಾದ್ಭವತಿ ಪರ್ಜನ್ಯಃ ಪರ್ಜನ್ಯದನ್ನ ಸಂಭವಃ'' ಎಂಬ ಭಗವದ್ಗೀತೆಯ ಉಕ್ತಿಯಂತೆ ಯಜ್ಞವನ್ನು ಮಾಡಿದರೆ ಅದರ ಧೂಮವು ಪರಿಸರದಲ್ಲಿ ಅನುಕೂಲ ವಾತಾವರಣವನ್ನು ನಿರ್ಮಾಣಮಾಡಿ ಮಳೆ ಬರಲು ಸಹಾಯಕವಾಗುತ್ತದೆ. ಮಳೆ ಚೆನ್ನಾಗಿ ಬಂದಾಗ ಬೆಳೆ ಹುಲುಸಾಗಿ ಬೆಳೆಯುತ್ತದೆ. ಆದರಿಂದ ದೇಶದ ಪ್ರಜೆಯೆಲ್ಲ ಸುಖ ಸಮೃದ್ಧಿಯನ್ನು ಹೊಂದುವದು. ಈ ಪ್ರಾಚೀನ ಪರಂಪರೆಯ ವೈಜ್ಞಾನಿಕ ತತ್ತ್ವವನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಬೇಕೇ ವಿನಃ ಅತ್ಯಂತ ಹಗುರಾದ ಶಬ್ದಗಳಿಂದ ಯಜ್ಞವನ್ನು ತಿರಸ್ಕರಿಸುವದು ಸೂಕ್ತವಲ್ಲ.

ನಮ್ಮ ದೇಶದಲ್ಲಿ ರೂಢಿಯಲ್ಲಿ ಬಂದಿರುವ ಪ್ರತಿಯೊಂದು ಪರಂಪರೆಯ ಹಿಂದೆ ಒಂದಿಲ್ಲೊಂದು ವಿಧವಾದ ವೈಜ್ಞಾನಿಕ ತತ್ತ್ವವು ಅಡಕವಾಗಿರುತ್ತದೆ. ವಿಜ್ಞಾನವು ಇಂದೇ ಬಹಳಷ್ಟು ವಿಕಸಿತವಾಗಿದೆ. ಹಿಂದೆ ಏನೂ ಇರಲಿಲ್ಲ ಎಂಬುದಾಗಿ ಯಾರೂ ತಿಳಿದುಕೊಳ್ಳಬಾರದು. ಈ ಪ್ರಪಂಚವು ಚಕ್ರದೋಪಾಧಿಯಲ್ಲಿರೋಣದರಿಂದ ಇಂದಿರುವ ವಿಜ್ಞಾನವು ಹಿಂದೂ ಸಹ ಇತ್ತು, ಅದುವೇ ಪುನಃ ಪುನಃ ಆವೃತ್ತಿಯಾಗುತ್ತಿರುತ್ತದೆ. ದೂರದರ್ಶನ, ದೂರಶ್ರವಣ ಮತ್ತು ವಿಮಾನಗಮನಾದಿಗಳು ಇಂದಿನ ವಿಜ್ಞಾನಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿಶ್ರಮದ ಫಲವಾಗಿದ್ದರೂ ಈ ಸಾಧನೆಗಳು ಹಿಂದಿನಕಾಲದಲ್ಲಿಯೂ ಸಹ ಇದ್ದವು ಎನ್ನುವದರಲ್ಲಿ ಸಂಶಯವಿಲ್ಲ. ಯಾಕೆಂದರೆ ಪ್ರಾಚೀನ ಸಾಹಿತ್ಯದಲ್ಲಿ ವಿಮಾನದ ಉಲ್ಲೇಖವು ಬಂದಿರುವದನ್ನು ಕಾಣುತ್ತೇವೆ. ಆದರೆ ಅಂದಿನ ವಿಮಾನಗಳು ಅದರಲ್ಲಿ ಸವಾರನಾಗಿರುವ ಯಜಮಾನನ ಇಚ್ಛಾಶಕ್ತಿಯಿಂದ ಪಯಣಿಸುತ್ತಿದ್ದವು ಎಂದಾಗ ಇಂದಿನ ವಿಜ್ಞಾನಕ್ಕಿಂತಲೂ ಹಿಂದಿನ ವಿಜ್ಞಾನವು ಎಷ್ಟು ಸೂಕ್ಷ್ಮವಾಗಿತ್ತೆಂಬುದು ತಿಳಿದು ಬರುತ್ತದೆ. ಇಂದು ನಾವು ಬಳಸುತ್ತಿರುವ ಆಕಾಶವಾಣಿ ಹಾಗೂ ದೂರದರ್ಶನ ಶಬ್ದಗಳು ಹಿಂದಿನ ಸಾಹಿತ್ಯಗಳಲ್ಲಿ ಬಳಕೆಯಾಗಿರುವದನ್ನು ಕಾಣಬಹುದು. ಅಂದಾಗ ಈ ಎಲ್ಲ ಉಪಕರಣ ಗಳು ಅಂದು ಇದ್ದಿರಬಹುದು. ಇಲ್ಲವೆ ಅಂದಿನ ಕಾಲದ ಜನರ ಮಾನಸಿಕ ವಿಕಾಸವೇ ಅಷ್ಟು ರೀತಿಯಲ್ಲಿ ಬೆಳೆದಿತ್ತೆಂಬುದಾಗಿ ಊಹಿಸಬಹುದು. ಇಂದು ಆಕಾಶದಲ್ಲಿ ಪ್ರಕ್ಷೇಪ ಗೊಳಿಸಿದ ಶಬ್ದ ಹಾಗೂ ಚಿತ್ರಗಳನ್ನು ಯಂತ್ರಗಳು ಆಕರ್ಷಿಸಿ ನಮಗೆ ಕೇಳಲು ಹಾಗೂ ನೋಡಲು ಅನುಕೂಲತೆಯನ್ನು ಮಾಡಿಕೊಟ್ಟಿದ್ದರೆ ಅಂದು ಆ ಕಾಲದ ವ್ಯಕ್ತಿಗಳ ಬುದ್ಧಿ ಹಾಗೂ ಇಂದ್ರಿಯಗಳೇ ಗ್ರಹಿಸುವ ಸಾಮರ್ಥ್ಯವನ್ನು ಹೊಂದಿದ್ದವೆಂದು ತಿಳಿದುಬರು ತ್ತದೆ. ಇಷ್ಟು ಸೂಕ್ಷ್ಮವಾದ ಮನೋವಿಜ್ಞಾನವು ಅಂದು ವಿಕಸಿತವಾಗಿತ್ತೆಂದ ಬಳಿಕ ಅಂತಹ ಸಾಮರ್ಥ್ಯವುಳ್ಳ ಋಷಿ–ಮಹರ್ಷಿಗಳು ಹೇಳಿದ ಯಜ್ಞದ ವಿಷಯದಲ್ಲಿ ಅತಿಗೂಢವಾದ ರಹಸ್ಯಾರ್ಥವು ಇದ್ದಿರಲಿಕ್ಕೇ ಬೇಕು. ಕಾರಣ ಒಂದು ಯಜ್ಞ ಕ್ರಿಯೆಯನ್ನು ಮಾಡಿದಾಗ ಅದನ್ನು ಮಾಡುವ ವ್ಯಕ್ತಿಗಳ ಭಾವನೆ ಹಾಗೂ ಕ್ರಿಯೆಯ ಪರಿಣಾಮವು ಪ್ರಕೃತಿಯ ಮೇಲೆ ಹೇಗಾಗುತ್ತಿದೆಯೆಂಬುದನ್ನು ವಿಚಾರ ಮಾಡುವದು ಸೂಕ್ತವೇ ವಿನಃ ಸಹಜವಾಗಿ ಅದನ್ನು ಖಂಡಿಸುವದಾಗಲಿ ಅದರ ಬಗ್ಗೆ ಹಗುರಾಗಿ ಮಾತನಾಡುವದಾಗಲಿ ಬುದ್ಧಿಯ ಪರಿಪಕ್ವತೆ ಅಲ್ಲ.

ಇತ್ತೀಚಿನ ದಿನಮಾನಗಳಲ್ಲಿ ಪ್ರಾಚೀನವಾದ ಆ ಯಜ್ಞ ಪರಂಪರೆಯು ಲುಪ್ತ ವಾಗುತ್ತ ನಡೆದಿದ್ದರೂ ಅಲ್ಲಲ್ಲಿ ಆಗಾಗ ಬೃಹತ್ಪ್ರಮಾಣದ ಇಲ್ಲವೆ ಲಘು ಪ್ರಮಾಣದ ಯಜ್ಞಸಮಾರಂಭಗಳು ಜರುಗುತ್ತಿರುತ್ತವೆ. ಯಜ್ಞದಲ್ಲಿ ತುಪ್ಪ ಮೊದಲಾದ ದ್ರವ್ಯಗಳನ್ನು ಹಾಕಿ ಸುಡುವದಕ್ಕಿಂತ ಯಾರಿಗಾದರೂ ಉಣಿಸಿದರೆ ಯೋಗ್ಯ ಎನ್ನುವ ವಿಚಾರವು ತಾತ್ಕಾಲಿಕವಾಗಿ ಜನಸಾಮಾನ್ಯರಿಗೆ ಸರಿಯೆಂದು ತೋರಿದರೂ ಯಜ್ಞಸಮಾರಂಭದಲ್ಲಿ ಋತ್ವಿಜರಿಗೆ, ಬಡಬಗ್ಗರಿಗೆ ಹಾಗೂ ಊರಿನ ಜನರಿಗೆ ಸಮಷ್ಟಿ ಭೋಜನವನ್ನು ಸಹ ಮಾಡಿಸುತ್ತಾರೆ ಆದರೆ ಯಜ್ಞಕ್ಕೆ ಹಾಕುವ ಆಹುತಿಯನ್ನು ಸಹ ನಮಗೆ ಹಾಕಬೇಕೆನ್ನುವ ವಿಚಾರವು ಸಂಕುಚಿತ ಹಾಗೂ ಸ್ವಾರ್ಥಪರವಾದುದು. ಈ ಪೂರ್ವದಲ್ಲಿ ನಾವು ಹೇಳಿರುವಂತೆ ಒಬ್ಬ ವ್ಯಕ್ತಿಯ ಜಠರಾಗ್ನಿಗೆ ಕೊಟ್ಟ ಆಹುತಿಯಿಂದ ಅವನೋರ್ವನು ತೃಪ್ತನಾದರೆ ಅಗ್ನಿಗೆ ಸಮರ್ಪಿಸಿದ ಆಹುತಿಯಿಂದ ಸಮಷ್ಟಿಗೆ ಅರ್ಥಾತ್ ಇಡೀ ಜಗತ್ತಿಗೆ ತೃಪ್ತಿಯುಂಟಾಗುವದು. ಆದ್ದರಿಂದ ಈ ಬಾಹ್ಯ ಯಜ್ಞವನ್ನು ಕಾಲಕಾಲಕ್ಕೆ ಮಾಡುವದು ಸೂಕ್ತವೆಂಬುದಾಗಿ ಭಾವಿಸಬೇಕು.

ಈ ಬಾಹ್ಯ ಯಜ್ಞವು ಸಮಷ್ಟಿಯ ಮೇಲೆ ಸುಪರಿಣಾಮವನ್ನು ಬೀರಿದರೆ ಆಂತರಿಕ ಯಜ್ಞವು ವ್ಯಕ್ತಿಯ ಮನೋನೈರ್ಮಲ್ಯಕ್ಕೆ ಕಾರಣವಾಗಿ ಜ್ಞಾನ ಜ್ಯೋತಿಯು ಸ್ಥಿರಗೊಳ್ಳು ವದು. ಅಂತೆಯೇ ಪೂಜ್ಯಪಾದರು ತನ್ನ ಹೃದಯದಲ್ಲಿ ಪ್ರಾದುರ್ಭವಿಸಿದ ಜ್ಞಾನಾಗ್ನಿಯಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಂತರಿಕ ವಿಷಯಗಳನ್ನು ಆಹುತಿಕೊಡುವದೇ ಹೋಮಕ್ರಿಯೆ ಎಂಬುದಾಗಿ ಇಲ್ಲಿ ತಿಳಿಯ ಪಡಿಸಿದ್ದಾರೆ. ಶಬ್ದ–ಸ್ಪರ್ಶಾದಿ ವಿಷಯಗಳೆಂದರೆ ವಿಷವಿದ್ದಂತೆ. ಇವುಗಳ ಸೇವನೆಯು ಮನುಷ್ಯನಿಗೆ ಮೃತ್ಯುವನ್ನು ತಂದೊದಗಿಸುತ್ತದೆ. ವಿಷಯ ಲೋಲುಪನಾದ ವ್ಯಕ್ತಿಯು ತನ್ನ ದೈಹಿಕ ಹಾಗೂ ಐಂದ್ರಿಕ ಬಲವನ್ನು ಕಳೆದುಕೊಂಡು ದುರ್ಬಲನಾಗಿ ಕೊನೆಗೆ ಮೃತ್ಯುಮುಖವನ್ನು ಸೇರುವನು. ಅಂತೆಯೇ ಜ್ಞಾನಿಗಳು ''ವಿಷಯಾನ್ ವಿಷವತ್ತ್ಯಜ'' ಎಂಬುದಾಗಿ ಹೇಳಿದ್ದಾರೆ. ವಿಷಯಗಳನ್ನು ವಿಷವೆಂದು ತಿಳಿದು ಅವುಗಳನ್ನು ತ್ಯಜಿಸ ಬೇಕೆಂಬುದು ಈ ಉಕ್ತಿಯ ತಾತ್ಪರ್ಯವಾಗಿದೆ. ಈ ವಿಷಯಗಳನ್ನೇ ಭಗವದರ್ಪಣ ಮಾಡಿದಾಗ ಅವು ಪರಿಶುದ್ಧವಾಗಿ ಅಮೃತತತ್ವಕ್ಕೆ ಸಾಧನವಾಗುತ್ತವೆ. ಅಂತೆಯೇ ವೀರಶೈವ ಆಚಾರ್ಯರು ಪ್ರತಿಯೊಂದು ಇಂದ್ರಿಯಗಳನ್ನು ಲಿಂಗಾರ್ಪಿತಗೊಳಿಸುವ ಒಂದು ಪ್ರಕ್ರಿಯೆಯನ್ನು ತಿಳಿಯಪಡಿಸಿದ್ದಾರೆ.

ಇಂದ್ರಿಯಗಳಲ್ಲಿ ಭಾವಿಸಬೇಕಾದ ಲಿಂಗಗಳೆಂದರೆ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳು. ಜ್ಞಾನೇಂದ್ರಿಯ. ಹಾಗೂ ಕರ್ಮೇಂದ್ರಿಯಗಳಿಗೆ ಸಂಯುಕ್ತವಾಗಿ ಒಂದೊಂದು ಲಿಂಗಗಳನ್ನು ಇಲ್ಲಿ ಭಾವಿಸ ಲಾಗಿದೆ. ಗುದ ಹಾಗೂ ಘ್ರಾಣೇಂದ್ರಿಯಗಳಲ್ಲಿ ಆಚಾರಲಿಂಗವನ್ನೂ, ಗುಹ್ಯ ಹಾಗೂ ರಸನೇಂದ್ರಿಯಗಳಲ್ಲಿ ಗುರುಲಿಂಗವನ್ನು ಪಾದ ಹಾಗೂ ನೇತ್ರೇಂದ್ರಿಯಗಳಲ್ಲಿ ಶಿವಲಿಂಗ ವನ್ನು, ಹಸ್ತ ಹಾಗೂ ತ್ವಗೀಂದ್ರಿಯಗಳಲ್ಲಿ ಜಂಗಮಲಿಂಗವನ್ನು, ವಾಕ್ ಹಾಗೂ ಶ್ರವಣೇಂದ್ರಿಯಗಳಲ್ಲಿ ಪ್ರಸಾದಲಿಂಗವನ್ನೂ ಇನ್ನು ಇಂದ್ರಿಯಾಧ್ಯಕ್ಷವಾಗಿರುವ ಮನಸ್ಸಿ ನಲ್ಲಿ ಮಹಾಲಿಂಗವನ್ನು ಭಾವಿಸಬೇಕು. ಹೀಗೆ ಭಾವಿಸಿದ ಆಯಾ ಲಿಂಗಗಳಿಗೆ ಗಂಧ, ರಸ, ರೂಪ, ಸ್ಪರ್ಶ, ಮತ್ತು ಶಬ್ದಗಳೆಂಬ ವಿಷಯಗಳನ್ನು ಸಮರ್ಪಿಸಿ ಅವುಗಳನ್ನು ಪ್ರಸಾದ ರೂಪವಾಗಿ ಸ್ವೀಕರಿಸಿದಾಗ ಅವು ಬಾಧಕಗಳಾಗುವದಿಲ್ಲ. ವಿಷಯಗಳ ಸೇವನೆಯಿಂದ ಮನಸ್ಸಿನಲ್ಲಿ ವಾಸನೆಯು ಬೆಳೆಯುತ್ತ ಹೋಗುತ್ತದೆ. ಆದರೆ ಪ್ರಸಾದ ಸೇವನೆಯಿಂದ ಮನಸ್ಸು ಪ್ರಸನ್ನವಾಗಿರುತ್ತದೆ. ಅಂತೆಯೇ ಪೂಜ್ಯರು ಜ್ಞಾನಾಗ್ನಿಯಲ್ಲಿ ವಿಷಯಾರ್ಪಣ ರೂಪವಾದ ಹೋಮವನ್ನು ಆಚರಿಸಬೇಕೆಂಬುದಾಗಿ ತಿಳಿಯಪಡಿಸಿದ್ದಾರೆಂಬಲ್ಲಿಗೆ ಇಂದಿನ ಆಶೀರ್ವಚನವನ್ನು ವಿರಾಮಗೊಳಿಸುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೧೪ ಆಗಷ್ಟ್ ೧೯೯೩

ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವಚನ-೧೯

ಭಾವಾಚಾರಸ್ಥಲ-೨

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಶ್ರೀ ಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ನೀವೆಲ್ಲ ದಿನಾಲು ಕ್ಷೇತ್ರಮಹಿಮೆಯನ್ನೂ ಸಹ ಆಲಿಸುತ್ತಿದ್ದೀರಿ. ನಿನ್ನೆಯ ದಿನ ಕಾಶಿಗೆ ಆನಂದಕಾನನವೆಂದು ಕರೆಯುವ ವಿಚಾರವಾಗಿ ತಿಳಿದಿದ್ದೀರಿ. ಈ ವಿಶಾಲವಾದ ಆನಂದವನದಲ್ಲಿ ಒಂದು ಜಂಗಮವಾಟಿಕಾ ಇದೆ. ಅದುವೇ ಈ ಜಂಗಮವಾಡಿ ಮಹಾಮಠವು. ವಾಟಿಕಾ ಎಂದರೆ ಉಪವನವೆಂದರ್ಥ ಜಂಗಮವಾಡಿ ಮಹಾಮಠ ವೆಂಬ ಈ ಉಪವನವು ಈ ಆನಂದ ವನದಲ್ಲಿ ಅತಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ.

ಕೃತಯುಗದಲ್ಲಿ ಪಂಚಾಕ್ಷರ ಶಿವಾಚಾರ್ಯರೂ ತ್ರೇತಾಯುಗದಲ್ಲಿ ಪಂಚವಕ್ತ್ರ ಶಿವಾಚಾರ್ಯರು, ದ್ವಾಪರಯುಗದಲ್ಲಿ ವಿಶ್ವಕರ್ಣಶಿವಾಚಾರ್ಯರು ಮತ್ತು ಕಲಿಯುಗದಲ್ಲಿ ವಿಶ್ವಾರಾಧ್ಯ ಶಿವಾಚಾರ್ಯರು ಈ ಮಹಾಪೀಠದ ಅಧಿಪತಿಗಳಾಗುತ್ತ ಬಂದಿದ್ದಾರೆ. ಈ ಪರಂಪರೆಯ ದ್ವಾಪರಯುಗದ ಆಚಾರ್ಯರಾದ ವಿಶ್ವಕರ್ಣ ಭಗವತ್ಪಾದರು ಕಡುಕೋಪಿಯಾದ ದೂರ್ವಾಸನಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿ ಆತನ ಕ್ರೋಧವನ್ನು ಶಮನಗೊಳಿಸಿದರು. ಅತ್ರಿ ಅನಸೂಯೆಯರ ಪವಿತ್ರಗರ್ಭದಲ್ಲಿ ಶಿವನ ವಿಶೇಷಾಂಶವೇ ದೂರ್ವಾಸನ ರೂಪದಲ್ಲಿ ಜನ್ಮತಾಳಿದಾಗ ಆತನ ಕ್ರೋಧವೃತ್ತಿಯನ್ನು ಕಂಡು ಅದನ್ನು ಶಮನಗೊಳಿಸುವದಕ್ಕಾಗಿ ತಂದೆತಾಯಿಗಳ ಆಜ್ಞೆಯಂತೆ ಮತ್ತು ನಾರದ ಮಹರ್ಷಿಯ ಸಲಹೆಯಂತೆ ಕಾಶೀ ಮಹಾಕ್ಷೇತ್ರದ ಕಾಮಾಖ್ಯ ಕುಂಡದ ಬಳಿ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ ಅದಕ್ಕೆ ಕಾಮೇಶ್ವರ ಎಂಬ ನಾಮಕರಣಮಾಡಿ ತಪಸ್ಸನ್ನಾಚರಿಸತೊಡಗಿದನು. ಕ್ರೋಧ ಶಮನಕ್ಕಾಗಿ ಅದೆಷ್ಟೋ ದಿವಸ ತಪಸ್ಸನ್ನಾಚರಿಸಿದರೂ ಅಲ್ಲಿ ಅವನಿಗೆ ಶಿವನ ದರ್ಶನವಾಗಲಿಲ್ಲ. ಅದರಿಂದ ಕ್ಷುದ್ಧನಾದ ದೂರ್ವಾಸನು ತನ್ನ ಕಮಂಡಲದೊಳಗಿನ ಜಲವನ್ನು ತೆಗೆದುಕೊಂಡು ಭೂಮಿಗೆ ಅಪ್ಪಳಿಸಿದಾಗ ಭೂಮಿಯು ಬಿರಿದು ಅದರಿಂದ ಒಂದು ಶಿವಲಿಂಗವು ಉದ್ಭವಿಸುವುದು. ಆ ಶಿವಲಿಂಗದೊಳಗೆ ಶಿವನು ಪ್ರಕಟನಾಗಿ ದೂರ್ವಾಸನಿಗೆ ಹೇಳಿದ್ದೇನೆಂದರೆ ''ಎಲೈ ದೂರ್ವಾಸನೇ ! ಕೇವಲ ತಪಸ್ಸಿನಿಂದ ಕ್ರೋಧವು ಅದೆಂದಿಗೂ ಶಾಂತವಾಗಲಾರದು. ಕಾರಣ ಈ ಕಾಶೀ ಮಹಾಕ್ಷೇತ್ರದ ಜ್ಞಾನಸಿಂಹಾಸನದ ಅಧಿಪತಿಗಳಾದ ವಿಶ್ವಕರ್ಣಶಿವಾಚಾರ್ಯರ ಸಾನಿಧ್ಯಕ್ಕೆ ಹೋಗಿ ಅವರಿಂದ ಶಿವಾದ್ವೈತ ಜ್ಞಾನವನ್ನು ಪಡೆದಾಗ ನೀನು ಕ್ರೋಧಮುಕ್ತನಾಗಬಲ್ಲೆ ಕಾರಣ ಅಲ್ಲಿಗೆ ಹೋಗು'' ಎಂಬುದಾಗಿ ಆದೇಶಿಸಿದನು.

ಶಿವನ ಆದೇಶದ ಮೇರೆಗೆ ದುರ್ವಾಸನು ಜಂಗಮವಾಟಿಕೆಯಲ್ಲಿರುವ ಜ್ಞಾನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿಂಹಾಸನಕ್ಕೆ ಬಂದು ಆದರ ಅಧಿಪತಿಗಳಾಗಿದ್ದ ವಿಶ್ವಕರ್ಣ ಭಗವತ್ಪಾದರಿಗೆ ಶರಣಾಗತರಾಗಿ ಶಿವನ ಆದೇಶವನ್ನು ಮತ್ತು ತನ್ನ ಸ್ಥಿತಿಯನ್ನು ಅರಿಕೆ ಮಾಡಿಕೊಂಡನು. ಆಗ ವಿಶ್ವಕರ್ಣ ಭಗವತ್ಪಾದರು ಅವನಿಗೆ ಶಿವದೀಕ್ಷೆಯನ್ನಿತ್ತು ''ಪಂಚವರ್ಣ ಮಹಾಸೂತ್ರ''ವನ್ನು ಉಪದೇಶಿಸಿ ಆತನನ್ನು ಶಿವಾದ್ವೈತ ಜ್ಞಾನಿಯನ್ನಾಗಿ ಮಾಡಿ ಆತನ ಸಂಪೂರ್ಣವಾದ ಕ್ರೋಧವನ್ನು ಶಮನಗೊಳಿಸಿದರು. ಅಂದಿನಿಂದ ಶಾಂತನಾದ ದೂರ್ವಾಸ ಮಹರ್ಷಿಯು ಆ 'ಪಂಚವರ್ಣ ಮಹಾಸೂತ್ರಕ್ಕೆ ಭಾಷ್ಯವನ್ನು ಬರೆದು ತನ್ನ ಶಿಷ್ಯ-ಪ್ರಶಿಷ್ಯರ ಮುಖಾಂತರ ಶಿವಾದ್ವೈತ ಸಿದ್ಧಾಂತವನ್ನು ಪ್ರಚಾರಗೊಳಿಸಿದನು.

ಇಂತಹ ಅತ್ಯಂತ ಪ್ರಾಚೀನ ಪರಂಪರೆಯುಳ್ಳ ಈ ಜ್ಞಾನಸಿಂಹಾಸನಕ್ಕೆ ಕಲಿಯುಗದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರನ್ನೇ ಮೊದಲು ಮಾಡಿಕೊಂಡು ಇಂದಿನವರೆಗೆ ಅನೇಕ ಜನ ಪೀಠಾಚಾರ್ಯರೂ ಆಗಿ ಹೋಗಿದ್ದಾರೆ. ಅವರೆಲ್ಲರೂ ಪರಮ ತಪಸ್ವಿಗಳೂ ಶಿವಾದ್ವೈತ ಜ್ಞಾನಸಂಪನ್ನರೂ ಮತ್ತು ಕರುಣಾಹೃದಯಿಗಳು ಆಗಿದ್ದರು. ಈ ಪರಂಪರೆಯ ಪೀಠಾಚಾರ್ಯರಿಗೆ ಕ್ರಿ. ಶ. ೫೭೪ ರಲ್ಲಿ ಕಾಶೀ ನರೇಶನಾದ ಜಯನಂದದೇವನು ಭೂದಾನವನ್ನು ಮಾಡಿದ ದಾನ ಪತ್ರವು ಇಂದಿಗೂ ಶ್ರೀಪೀಠದಲ್ಲಿ ವಿರಾಜಮಾನವಾಗಿದೆ. ಅಂದು ರಾಜನು ಸಮರ್ಪಿಸಿದ ಆ ಭೂಮಿಯಲ್ಲಿ ಕ್ರಿ. ಶ. ೧೯೧೯ರಲ್ಲಿ ಮದನ ಮೋಹನ ಮಾಲವೀಯರವರು ಕಾಶೀ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಅಂದಿನ ಪೀಠಾಧಿಪತಿಗಳಾಗಿದ್ದ ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಶ್ರೀಮಾಲವೀಯರವರು ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಕಾಶೀ ನರೇಶರು ಪೀಠಕ್ಕೆ ಅರ್ಪಿಸಿದ ಭೂಮಿಯನ್ನು ಕೊಡಬೇಕೆಂದು ಕೇಳಿಕೊಂಡಾಗ ಶ್ರೀಮಹಾಸನ್ನಿಧಿಯವರು ಉದಾರವಾದ ಮನಸ್ಸಿನಿಂದ ಆ ಭೂಮಿಯನ್ನು ದಾನ ಮಾಡಿದ್ದಾರೆ. ಇಂದು ಆ ವಿಶ್ವವಿದ್ಯಾಲಯದಲ್ಲಿ ವಿಶ್ವದ ಮೂಲೆ ಮೂಲೆಗಳಿಂದ ಬಂದ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವದು ಜ್ಞಾನಪೀಠದ ಗೌರವವನ್ನು ಹೆಚ್ಚಿಸಿದಂತೆಯೇ ಇಂತಹ ಜ್ಞಾನಪೀಠದಲ್ಲಿ ನೀವುಗಳೆಲ್ಲ ಆಧ್ಯಾತ್ಮಿಕ ಜ್ಞಾನಾರ್ಜನೆಯನ್ನು ಮಾಡುತ್ತಿರುವದು ಒಂದು ಪುಣ್ಯವಿಶೇಷವೇ.

ಶ್ರೀ ಸಿದ್ಧಾಂತ ಶಿಖಾಮಣಿಯ ಲಿಂಗಷಟ್‌ಸ್ಥಲಾಂತರ್ಗತವಾದ ಮಾಹೇಶ್ವರ ಸ್ಥಲದ ಬಗ್ಗೆ ನೀವುಗಳೆಲ್ಲ ಅನೇಕ ದಿನಗಳಿಂದ ಆಶೀರ್ವಚನಗಳನ್ನು ಆಲಿಸುತ್ತ ಬಂದಿದ್ದೀರಿ ನಿನ್ನೆಯ ದಿನ ಭಾವಾಗಮಸ್ಥಲದ ಕೆಲವೊಂದು ವಿಚಾರಗಳನ್ನು ತಿಳಿದು ಕೊಂಡವರಾಗಿದ್ದೀರಿ ಇಂದು ಅದೇ ಸ್ಥಲದ ಅವಶಿಷ್ಟ ಭಾಗವನ್ನು ಕುರಿತು ಪರ್ಯಾಲೋಚಿಸೋಣ.

ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ಶಿವಪ್ರೀತಿಗಾಗಿ ಭಾವಿಸಿ ಆಚರಿಸಿದರೆ ಸಂಗರಹಿತನಾಗುತ್ತಾನೆ ಎಂಬ ವಿಷಯವನ್ನು ನಿರೂಪಿಸಲೋಸುಗ ಪೂಜ್ಯಪಾದರು ಪುನಃ-

ಭಾವಯೇತ್ ಸರ್ವಕರ್ಮಾಣಿ ನಿತ್ಯನೈಮಿತ್ತಿಕಾನಿ ಚ ।
ಶಿವಪ್ರೀತಿಕರಾಣ್ಯೇವ ಸಂಗರಾಹಿತ್ಯಸಿದ್ಧಯೇ ॥

(ಸಿ. ಶಿ. ೧೬-೭೩)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ವರ್ಣಿಸಿದ್ದಾರೆ. ನಿತ್ಯ ಮತ್ತು ನೈಮಿತ್ತಿಕ ಕರ್ಮಗಳನ್ನು ಆಚರಿಸುವಾಗ ಮನಸ್ಸಿನಲ್ಲಿ ಬೇರಾವ ಪ್ರಯೋಜನೆಯ ಭಾವನೆಯನ್ನು ತಾಳದೆ ಶಿವಾರ್ಪಣ ಬುದ್ಧಿಯಿಂದ ಆಚರಿಸಿದರೆ ಆಚರಿಸುವ ವ್ಯಕ್ತಿಯು ಸಾಂಸಾರಿಕ ಬಂಧನದಿಂದ ಬದ್ಧಿತನಾಗಲಾರನು ಎಂಬುದು ಪೂಜ್ಯಪಾದರ ಆಶಯವಾಗಿದೆ.

'ಗಹನಾ ಕರ್ಮಣೋಗತಿಃ' ಎಂಬ ಉಕ್ತಿಗನುಸಾರವಾಗಿ ಕರ್ಮದ ಗತಿಯು ಅತ್ಯಂತ ರಹಸ್ಯಾತ್ಮಕವಾಗಿರುತ್ತದೆ. ಕರ್ಮಸೂತ್ರದಿಂದ ಕಟ್ಟಲ್ಪಟ್ಟ ಜೀವಿಯು ಯಾವಾಗ ಅವನ ಗತಿಯು ''ಏನಾಗುವದೆಂಬುದು ಯಾರಿಗೂ ತಿಳಿದಿರುವದಿಲ್ಲ. ಈ ಕರ್ಮಬಂಧನದಿಂದ ಬಿಡುಗಡೆಯನ್ನು ಹೊಂದಬೇಕಾಗಿದ್ದರೆ ತಾನು ಮಾಡ ಬೇಕಾಗಿರುವ ನಿತ್ಯ ನೈಮಿತ್ತಿಕ ಮುಂತಾದ ಕರ್ಮಗಳನ್ನು ಆಚರಿಸುವಾಗ ಮನದಲ್ಲಿ ಯಾವದೇ ಪ್ರಕಾರದ ಅಪೇಕ್ಷೆಯನ್ನು ಇಡದೆ ಶಿವಸಂಪ್ರೀತಿಗಾಗಿ ಅರ್ಥಾತ್ ಶಿವಾರ್ಪಣ ಬುದ್ಧಿಯಿಂದ ಆಚರಿಸಿದರೆ ಅವನು ಸಂಸಾರ ಸಂಗದಿಂದ ಮುಕ್ತನಾಗುತ್ತಾನೆ. ಸಂಸಾರದ ಸಂಗವನ್ನು ಬಿಡಬೇಕಾದರೆ ಭಗವಂತನ ಸಂಗವನ್ನು ಮಾಡಬೇಕಾಗುವದು.

ಕರ್ಮಗಳು ಸಂಗಹೇತುಗಳಾಗಿರುವದರಿಂದ ಅವುಗಳನ್ನು ಆಚರಿಸಿಯೂ ಮನುಷ್ಯನು ಹೇಗೆ ನಿಸ್ಸಂಗಿಯಾಗಬಲ್ಲನು ? ಎಂಬ ಪ್ರಶ್ನೆಯು ಉದ್ಭವಿಸಿದಾಗ ಪೂಜ್ಯಪಾದರು–

> ಶಿವೇ ನಿವೇಶ್ಯ ಸಕಲಂ ಕಾರ್ಯಾಕಾರ್ಯಂ ವಿವೇಕತಃ ।
> ವರ್ತತೇ ಯೋ ಮಹಾಭಾಗಃ ಸ ಸಂಗರಹಿತೋ ಭವೇತ್ ॥
>
> (ಸಿ. ಶಿ. ೧೬–೭೮)

ಈ ರೀತಿಯಾಗಿ ಉಪದೇಶಿಸಿದ್ದಾರೆ. ವಿವೇಕಿಯಾದ ವ್ಯಕ್ತಿಯು ಕಾರ್ಯ ಹಾಗೂ ಅಕಾರ್ಯದ ಎಲ್ಲ ಭಾರವನ್ನು ಶಿವನ ಮೇಲಿರಿಸಿ ಕರ್ಮಗಳನ್ನು ಮಾಡುತ್ತಿರುತ್ತಾನೆಯೋ ಅವನು ಆ ಕರ್ಮಗಳ ಫಲಾಫಲಗಳಿಂದ ಸಂಬಂಧಿತನಾಗುವದಿಲ್ಲ ಎಂಬುದು ಪೂಜ್ಯರ ಆಶಯವಾಗಿದೆ.

ಈ ಪ್ರಪಂಚದಲ್ಲಿದ್ದೂ ಪುಣ್ಯಾಪುಣ್ಯಗಳನ್ನು ಮಾಡಿಯೂ ಅವುಗಳಿಂದ ಮುಕ್ತನಾಗಿರುವ ಒಂದು ಕರ್ಮದ ಕಲೆಯನ್ನು ಪೂಜ್ಯರು ಇಲ್ಲಿ ತಿಳಿಸಿಕೊಟ್ಟಿದ್ದಾರೆ. ಯಾವಾತನು ಕರ್ತಾ, ಕಾರಯಿತಾ, ಕರ್ಮ ಹಾಗೂ ಅದರ ಫಲ ಇವೆಲ್ಲವುಗಳು ಶಿವಸ್ವರೂಪವೆಂದು ಭಾವಿಸಿ ವಿವೇಕಿಯಾಗಿ ಕರ್ಮಗಳನ್ನು ಮಾಡುತ್ತಾನೆಯೋ ಅವನು ಆ ಕರ್ಮದ ಫಲಗಳಿಂದ ಲಿಪ್ತನಾಗುವದಿಲ್ಲ, ಸಂಪೂರ್ಣ ಶಿವಭಾವನೆಯಿಂದ ಕೂಡಿ ದವನಿಗೆ, ಕರ್ಮದಲೇಪವಾಗುವದಿಲ್ಲವೆಂದರ್ಥ. ಯಾವ ವ್ಯಕ್ತಿಯಲ್ಲಿ 'ಅಹಂ ಕರ್ತಾ' ನಾನು ಕರ್ಮವನ್ನು ಮಾಡುವವನು ಎಂಬ ಭಾವನೆಯು ಪ್ರಾದುರ್ಭವಿಸುವದೋ ಅವನು ಮಾತ್ರ ಕರ್ಮದ ಫಲಗಳಿಂದ ಲಿಪ್ತನಾಗುತ್ತಾನೆ. ಆ ಭಾವವಿಲ್ಲದವನಿಗೆ ಅವುಗಳ ಲೇಪವಾಗುವುದಿಲ್ಲ. ತುಳಸೀದಾಸರು ಜ್ಞಾನಿಯ ಈ ಅಲಿಪ್ತ ಸ್ಥಿತಿಯನ್ನು–

> ತುಲಸೀ ಜಗಮೇಇೂ ರಹೋ ಜೋ ರಸನಾ ಮುಖಮಾಹಿ ।
> ಖಾತೀ ಘೀ ಔರ ತೇಲ ನಿತ ಫಿರ್‌ಭೀ ಚಿಕನೀ ನಾಹಿ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ವರ್ಣಿಸಿದ್ದಾರೆ. ನಮ್ಮ ಬಾಯಿಯೊಳಗಿನ ನಾಲಿಗೆಯು ದಿನಾಲೂ ಎಣ್ಣೆ-ತುಪ್ಪಗಳನ್ನು ತಿನ್ನುತ್ತಿದ್ದರೂ ಅದಕ್ಕೆ ಜಿಡ್ಡುತನವು ಹೇಗೆ ಅಂಟಿಕೊಳ್ಳುವದಿಲ್ಲವೋ ಹಾಗೆ ಜ್ಞಾನಿಯಾದವನು ಕರ್ಮಗಳನ್ನು ಮಾಡಿಯೂ ಸಹ ಅಕರ್ತೃತ್ವ ಭಾವನೆ ಯುಳ್ಳವನಾಗಿ ರೋಣದರಿಂದ ಅವನಿಗೆ ಅದರ ಲೇಪವಾಗುವದಿಲ್ಲ, ಶರೀರವು ಸಂಸಾರದಲ್ಲಿದ್ದರೂ ಮನವು ಅದರಿಂದ ಅಲಿಪ್ತವಾಗಿದ್ದರೆ ಇದುವೇ ಒಂದು ಜೀವನದ ಕಲೆಯು. ಈ ಕಲೆಯು ಯಾರಿಗೆ ಕರಗತವಾಗಿರುತ್ತದೆಯೋ ಅವರು ಸಂಸಾರದಲ್ಲಿದ್ದೂ ಇಲ್ಲದಂತೆ ಇರುತ್ತಾರೆ. ಜನಕನು ರಾಜನಾಗಿಯೂ, ಕೃಷ್ಣನು ಭೋಗಿಯಾಗಿಯೂ ಅಲಿಪ್ತರಾಗಿದ್ದ ರೆಂಬುದಕ್ಕೆ ಉದಾಹರಣೆಯಾಗಿದ್ದಾರೆ.

ಶಿವದರ್ಶನವಾಗದೆ ಸಂಸಾರದ ನಿಸ್ಸಂಗತೆಯು ಪ್ರಾಪ್ತವಾಗುವದಿಲ್ಲವೆಂಬ ವಿಚಾರವನ್ನು ತಿಳಿಸಲೋಸುಗ ಪೂಜ್ಯರು ಪುನಃ-

ಆತ್ಮಾನಮಖಿಲಂ ವಸ್ತು ಶಿವಮಾನಂದಚಿನ್ಮಯಮ್ ।
ಏಕ ಭಾವೇನ ಸತತಂ ಸಂಪಶ್ಯನ್ನೇವ ಪಶ್ಯತಿ ॥

(ಸಿ. ಶಿ. ೧೬-೭೫)

ಈ ವಿಧವಾಗಿ ವಿವರಿಸಿದ್ದಾರೆ. ತನ್ನನ್ನು ಸಂಪೂರ್ಣವಾದ ವಿಶ್ವವನ್ನು ಮತ್ತು ಚಿದಾನಂದ ರೂಪನಾದ ಶಿವನನ್ನು ಯಾರು ಏಕಭಾವದಿಂದ ಸದಾ ಭಾವಿಸುತ್ತಿರುತ್ತಾರೆಯೋ ಅವರೇ ಶಿವನನ್ನು ಕಾಣುತ್ತಾರೆ ಎಂಬುದು ಪೂಜ್ಯರ ಆಶಯವಾಗಿದೆ.

ಪರಮಾತ್ಮ ಸಾಕ್ಷಾತ್ಕಾರವು ಯಾರಿಗೆ ಉಂಟಾಗುತ್ತದೆಯೆಂದರೆ ಯಾರು ಜೀವ, ಶಿವ ಮತ್ತು ಜಗತ್ತುಗಳನ್ನು ಏಕರೂಪವಾಗಿ ಭಾವಿಸುತ್ತಾರೆಯೋ ಅವರಿಗೆ ಉಂಟಾಗುತ್ತದೆ ಎಂಬುದಾಗಿ ತಿಳಿದುಕೊಳ್ಳಬೇಕು. ಜೀವ, ಶಿವ ಮತ್ತು ಜಗತ್ತುಗಳು ಮೂರೂ ಬೇರೆ ಬೇರೆಯಾಗಿ ತೋರುತ್ತಿದ್ದರೂ ಮೂಲತಃ ಇವು ಒಂದೇ ಆಗಿರುತ್ತವೆ. ಒಬ್ಬನೇ ಆದ ಶಿವನು ಜೀವನಾಗಿಯೂ, ಜಗತ್ತಾಗಿಯೂ ಲೀಲೆಯನ್ನು ಮಾಡುತ್ತಿರು ತ್ತಾನೆ. ಇದರ ರಹಸ್ಯವನ್ನರಿತ ಜ್ಞಾನಿಯು ಈ ಜಗತ್ತು ಶಿವರೂಪವಾಗಿದೆ ಶಿವನಿಗಿಂತಲೂ ಅನ್ಯವಾದುದು ಬೇರೊಂದಿಲ್ಲ, ನಾನೂ ಸಹ ಶಿವಸ್ವರೂಪನೇ ಆಗಿದ್ದೇನೆ ಎಂಬ ದಿವ್ಯ ಜ್ಞಾನವನ್ನು ಪಡೆದುಕೊಂಡಾಗ ಅವನಿಗೆ ಸರ್ವತ್ರ ಶಿವನ ಹೊರತಾಗಿ ಬೇರೊಂದು ವಸ್ತುವು ಕಾಣುವದೇ ಇಲ್ಲ, ಹೀಗೆ ಕಾಣುವದೇ ನಿಜವಾದ ಶಿವದೃಷ್ಟಿಯೆಂಬುದಾಗಿ ತಿಳಿದುಕೊಳ್ಳಬೇಕು.

ಇಲ್ಲಿಯವರೆಗೆ ಈ ಭಾವಾಚಾರ ಸ್ಥಲದಲ್ಲಿ ಬರುವ ಅನೇಕ ವಿಷಯಗಳನ್ನು ನೀವೆಲ್ಲ ಶ್ರವಣ ಮಾಡಿದ್ದೀರಿ. ಶ್ರವಣ ಮಾಡಿದ ವಿಷಯವನ್ನೇ ಮನನಾದಿಗಳ ಮೂಲಕ ಅದನ್ನು ದೃಢಪಡಿಸಿಕೊಳ್ಳಿರೆಂಬುದಾಗಿ ತಿಳಿಯಪಡಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯುತ್ತೇವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ : ೧೫ ಅಗಷ್ಟ್ ೯೯೩

(ಜ್ಞಾನಮಂದಿರ ಜಂಗಮವಾಡಿಮಠ ವಾರಾಣಸಿ)

■■

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೀರ್ವಚನ-೨೦

ಜ್ಞಾನಾಚಾರಸ್ಥಲ

ಜಿಜ್ಞಾಸುಗಳಾದ ಸದ್ಭಕ್ತರೇ !

ಶ್ರೀಕಾಶೀ ಮಹಾಕ್ಷೇತ್ರದಲ್ಲಿ ಶ್ರಾವಣಮಾಸದ ನಿಮಿತ್ತವಾಗಿ ಶ್ರೀ ಮಹಾ ಸನ್ನಿಧಿಯ ತಪೋನುಷ್ಠಾನ ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಆಶೀರ್ವಚನ ಕಾರ್ಯ ಕ್ರಮಗಳು ಸಾಂಗಮಂಗಲವಾಗಿ ಸಾಗುತ್ತಲಿವೆ. ನೀವುಗಳೆಲ್ಲ ದಿನಾಲೂ ಕ್ಷೇತ್ರ ಮಹಿಮೆಯನ್ನು ಆಲಿಸುತ್ತಿದ್ದೀರಿ. ಪ್ರಾಚೀನವಾದ ಈ ಕಾಶೀ ಕ್ಷೇತ್ರ ವಾದ ೨೫ ಕೋಸು ಅಂದರೆ (೫೦) ಐವತ್ತು ಮೈಲುಗಳಷ್ಟು ವಿಸ್ತೀರ್ಣವಾಗಿತ್ತು. ಈ ಕ್ಷೇತ್ರದ ಅಂಗ-ಅಂಗಗಳಲ್ಲಿ ಅನೇಕ ದೇವರುಗಳ ನಿವಾಸವಿದೆ. ಕಾಶಿಯ ರೋಮ ರೋಮಗಳಲ್ಲಿ ತೀರ್ಥಗಳ ನಿವಾಸವಿದೆ. ಮೂವತ್ತು ಮೂರು ಕೋಟಿ ದೇವತೆಗಳೆಲ್ಲ ಇಲ್ಲಿ ಬಂದು ನಿವಾಸಗೈದಿರುವದಾಗಿ ಶಾಸ್ತ್ರಗಳು ಪ್ರತಿಪಾದಿಸುತ್ತಿವೆ. ಹೀಗೆ ದೇವತೆಗಳ ಹಾಗೂ ತೀರ್ಥಗಳ ನಿವಾಸವಾದ ಈ ಕ್ಷೇತ್ರಕ್ಕೆ ಬಂದ ಭಕ್ತಾದಿಗಳು ಇಲ್ಲಿರುವ ತೀರ್ಥಸ್ನಾನ ಮತ್ತು ದೇವದರ್ಶನದ ಉದ್ದೇಶದಿಂದ ಕಾಶಿಯನ್ನು ಪರಿಕ್ರಮ ಮಾಡುವ ಒಂದು ಯಾತ್ರೆಯು ಇಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿ ಬಂದಿದೆ. ಅದುವೇ ಪಂಚಕ್ರೋಶಿ ಯಾತ್ರೆಯು. ಒಂದು ದಿವಸಕ್ಕೆ ಐದು ಕ್ರೋಶ (೫ ಕೋಸ್) ಅಂದರೆ ಹತ್ತು ಮೈಲಿನ ಪ್ರಕಾರ ಐದು ದಿನಗಳಲ್ಲಿ ಈ ಯಾತ್ರೆಯು ಪೂರ್ಣಗೊಳ್ಳುವದು. ಅಂತೆಯೇ ಇದಕ್ಕೆ ಪಂಚಕ್ರೋಶೀ ಯಾತ್ರೆಯೆಂದು ಕರೆಯುತ್ತಾರೆ. ಈ ಯಾತ್ರೆಯನ್ನು ಒಂದು ದಿನ, ಎರಡು ದಿನ, ಮೂರು ದಿನ, ನಾಲ್ಕು ದಿನ, ಐದು ದಿನ ಮತ್ತು ಏಳು ದಿನಗಳಲ್ಲಿ ಪೂರ್ಣಗೊಳಿಸುವ ಒಂದು ವಿಧಾನವು ರೂಢಿಯಲ್ಲಿದೆ. ಇವುಗಳಲ್ಲಿ ಐದು ದಿನಗಳ ಯಾತ್ರೆಯೇ ಹೆಚ್ಚು ಪ್ರಚಲಿತದಲ್ಲಿ ಇದೆ.

ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಪ್ರಮುಖ ಮಂದಿರವೆಂದರೆ ಭಗವಾನ್ ವಿಶ್ವೇಶ್ವರ ಮಂದಿರವೇ. ಅದರ ಜೊತೆಗೆ ಓಂಕಾರೇಶ್ವರ, ತ್ರಿಲೋಚನೇಶ್ವರ, ಕೇದಾರೇಶ್ವರ ಮತ್ತು ಮಹಾಮೃತ್ಯುಂಜಯ ಮೊದಲಾದ ದೇವ ಮಂದಿರಗಳು ಸುಪ್ರಸಿದ್ಧವಾಗಿವೆ. ಪಾಪ ವಿಮೋಚಿನಿಯಾದ ಗಂಗಾನದಿಯ ಪಶ್ಚಿಮ ದಂಡೆಯಲ್ಲಿ ಸ್ಥಾಪಿಸಲ್ಪಟ್ಟ ಈ ನಗರದ ನದಿಯ ದಂಡೆಗೆಲ್ಲ ಅನೇಕ ಘಾಟುಗಳು ಕಟ್ಟಲ್ಪಟ್ಟಿರುತ್ತವೆ. ಇವುಗಳಲ್ಲಿ ದಶಾಶ್ವಮೇಧ, ಮಣಿಕರ್ಣಿಕಾ, ಪಂಚಗಂಗಾ, ಕೇದಾರೇಶ್ವರ ಮತ್ತು ಹರಿಶ್ಚಂದ್ರ ಘಾಟುಗಳು ಸುಪ್ರಸಿದ್ಧವಾದವುಗಳು. ಈ ಎಲ್ಲಾ ಘಾಟುಗಳಲ್ಲಿ ಗಂಗಾನದಿಯ ಜಲವೇ ಇದ್ದರೂ ಆಯಾ ಘಾಟುಗಳಲ್ಲಿ ಸ್ನಾನಮಾಡಿದ ಪುಣ್ಯವಿಶೇಷವು ಭಿನ್ನ ಭಿನ್ನವಾಗಿದೆ. ಬೇರೆ ಬೇರೆ ಪರ್ವಗಳಲ್ಲಿ ಬೇರೆ ಬೇರೆ ಘಾಟುಗಳಲ್ಲಿ ಸ್ನಾನಮಾಡುವ ಪರಂಪರೆಯು ರೂಢಿಯಲ್ಲಿದೆ. ಇಲ್ಲಿರುವ ತೀರ್ಥಗಳಲ್ಲಿ ಮಣಿಕರ್ಣಿಕಾ ತೀರ್ಥ, ಪಿಶಾಚತೀರ್ಥ, ಮತ್ತು ಕಪಾಲ ಮೋಚನ ತೀರ್ಥಗಳು ಪ್ರಮುಖವಾದವುಗಳು. ಕಾಶೀ ಮಹಾಕ್ಷೇತ್ರ ದಲ್ಲಿ ಗಂಗಾನದಿಯ ಆಗಮನದ ಪೂರ್ವದಲ್ಲಿ ಇಲ್ಲಿರುವ ಮಣಿಕರ್ಣಿಕಾ ತೀರ್ಥ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಲ್ಲಿಯೇ ಭಕ್ತಾದಿಗಳು ಸ್ನಾನಮಾಡುತ್ತಿದ್ದರು. ವಿಷ್ಣು ಭಗವಂತನು ಈ ತೀರ್ಥದ ದಡದ ಮೇಲೆ ನಿಂತುಕೊಂಡು ಅತಿ ಘೋರವಾದ ತಪಸ್ಸನ್ನು ಅನೇಕ ವರ್ಷಗಳವರೆಗೆ ಆಚರಿಸಿದ್ದನು. ಈತನ ತಪಸ್ಸಿಗೆ ಪ್ರಸನ್ನನಾದ ಶಿವನು ಅಲ್ಲಿ ಪ್ರಕಟನಾಗಿ ಸಂತೋಷದ ಭರದಲ್ಲಿ ತನ್ನ ಮಸ್ತಕವನ್ನು ಅಲ್ಲಾಡಿಸಿದ ಸಂದರ್ಭದಲ್ಲಿ ಆತನ ಕರ್ಣದೊಳಗಿನ ರುದ್ರಾಕ್ಷ ಮಣಿಗಳು ಆ ಕುಂಡದಲ್ಲಿ ಬಿದ್ದ ಕಾರಣ ಅದಕ್ಕೆ ಮಣಿಕರ್ಣಿ ಕುಂಡವೆಂದು ಕರೆಯುತ್ತಾರೆ. ಆಗ ಪ್ರಸನ್ನನಾದ ಶಿವನು, ವಿಷ್ಣು ಭಗವಂತನಿಗೆ ಜಗದ್‌ರಕ್ಷಣೆಗಾಗಿ ಸುದರ್ಶನ ಚಕ್ರವನ್ನು ಅನುಗ್ರಹಿಸಿದನೆಂಬ ಇತಿಹಾಸವಿದೆ. ವಿಷ್ಣು ಭಗವಂತನು ನಿಂತು ತಪಸ್ಸು ಮಾಡಿದ ಆ ಸ್ಥಾನದಲ್ಲಿ ಆತನ ಪಾದ ಚಿಹ್ನೆಗಳು ಮೂಡಿರುವದನ್ನು ಈಗಲೂ ಕಾಣಬಹುದು. ಆ ಸ್ಥಾನದಲ್ಲಿಯೇ ಶವಗಳಿಗೆ ಅಗ್ನಿ ಸಂಸ್ಕಾರವನ್ನು ಕೊಡುತ್ತಾರೆ. ಅಂತೆಯೇ ಮಣಿಕರ್ಣಿಕಾ ಘಾಟು ಕಾಶೀಯ ಒಂದು ಪ್ರಮುಖವಾದ ಸ್ಮಶಾನ ಸ್ಥಾನವು. ಇಲ್ಲಿ ಚಿತಾಗ್ನಿಯು ಅಖಂಡವಾಗಿ ಉರಿಯುತ್ತಿರುತ್ತದೆ. ಇದರಂತೆ ಹರಿಶ್ಚಂದ್ರ ಘಾಟೂ ಸಹ ಸ್ಮಶಾನಭೂಮಿಯೆಂಬುದಾಗಿ ಸುಪ್ರಸಿದ್ಧವಾಗಿದೆ. ಕಾಶಿಯಲ್ಲಿ ಅಥವಾ ಕಾಶಿಯ ಸುತ್ತಲಿನ ಪರಿಸರದಲ್ಲಿ ಶರೀರ ಬಿಟ್ಟ ಜೀವಿಗಳ ದೇಹಗಳನ್ನು ಅಂತ್ಯಕ್ರಿಯೆಯನ್ನು ಇವೆರಡೂ ಸ್ಮಶಾನಗಳಲ್ಲಿ ನೆರವೇರಿಸುತ್ತಾರೆ.

ಕಾಶಿಯಲ್ಲಿರುವ ಪಿಶಾಚಮೋಚನ ತೀರ್ಥದಲ್ಲಿ ಸ್ನಾನಮಾಡಿ ತರ್ಪಣ ಶ್ರಾದ್ಧಾದಿಗಳನ್ನು ಮಾಡಿದರೆ ಆ ವ್ಯಕ್ತಿಯ ಪಿತರರು ಅರ್ಥಾತ್ ಪೂರ್ವಜರು ಪಿಶಾಚಯೋನಿಯಲ್ಲಿದ್ದರೂ ಅವರಿಗೆ ಅದರಿಂದ ಮುಕ್ತಿದೊರೆಯುವದೆಂಬುದಾಗಿ ಪ್ರತಿಪಾದಿಸಲಾಗಿದೆ. ಇನ್ನು ಇಲ್ಲಿರುವ ಕಪಾಲ ಮೋಚನ ತೀರ್ಥದಲ್ಲಿ ಸ್ನಾನ ಮಾಡಿದಾಗ ಬ್ರಹ್ಮಹತ್ಯಾ ಮೊದಲಾದ ಬಹು ದೊಡ್ಡ ದೊಡ್ಡ ಪಾಪಗಳಿಂದ ಜೀವಾತ್ಮನು ಮುಕ್ತಿಯನ್ನು ಪಡೆಯುತ್ತಾನೆ.

ಶ್ರೀಕಾಶೀ ಮಹಾಕ್ಷೇತ್ರವು ಮೂರು–ನಾಲ್ಕು ಸಾವಿರ ವರ್ಷಕ್ಕಿಂತಲೂ ಅತಿ ಪ್ರಾಚೀನವಾದ ನಗರವೆಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಇಷ್ಟು ವರ್ಷಗಳಿಂದ ಅಖಂಡ ಪರಂಪರೆಯನ್ನು ಹೊಂದಿದ ವಿಶ್ವದಲ್ಲಿಯೇ ಅತಿ ಪುರಾತನವಾದ ನಗರವೆಂದರೆ ಕಾಶೀ ಕ್ಷೇತ್ರವೇ ಆಗಿದೆ. ಅತಿ ಪ್ರಾಚೀನಕಾಲದಲ್ಲಿ ದಿವೋದಾಸನೆಂಬ ರಾಜನು ಈ ಕಾಶೀಕ್ಷೇತ್ರ ಹಾಗೂ ಸುತ್ತಮುತ್ತಲಿನ ಭೂಪ್ರದೇಶವನ್ನು ಆಳುತ್ತಿದ್ದನೆಂದು ಮಹಾಭಾರತದ ಅನುಶಾಸನ ಪರ್ವದಿಂದ ತಿಳಿದುಬರುತ್ತದೆ. ಇವನೊಬ್ಬ ಬಹುದೊಡ್ಡ ಆಯುರ್ವೇದ ಪಂಡಿತನಿದ್ದನು. ಇವನಿಗೆ ಎರಡನೆಯ ಧನ್ವಂತರಿಯೆಂಬುದಾಗಿ ಕರೆಯುತ್ತಿದ್ದರು. ಕಾಶೀ ರಾಜರ ಪರಂಪರೆಯು ಇಂದಿಗೂ ಅಕ್ಷುಣ್ಣವಾಗಿಯೇ ಇದೆ.

ಈ ಮಹಾಕ್ಷೇತ್ರದಲ್ಲಿ ವೀರಶೈವ, ದಶನಾಮೀ, ಗೋರಖಪಥೀ, ಶಂಕರ, ರಾಮಾನುಜ, ನಿಂಬಾರ್ಕ ಮಾಧ್ವ, ಗೌಡೀಯ, ರಾಮಾನಂದೀ, ಕಬೀರಪಂಥೀ, ಗರೀಬದಾಸೀ, ದಾದೂ ಪಂಥೀ, ಪೀಸಾಪಂಥೀ, ಸ್ವಾಮಿನಾರಾಯಣ, ನಿರ್ಮಲ, ಉದಾಸೀನ, ಸಖೀಸಂಪ್ರದಾಯ, ಆರ್ಯಸಮಾಜೀ, ಅವಧೂತ, ಹರಿಹರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪ್ರದಾಯ, ಶೀಖ, ಜೈನ, ಬೌದ್ಧ ಮೊದಲಾದ ವಿಭಿನ್ನ ಧರ್ಮ ಸಂಪ್ರದಾಯಗಳ ಮೂರು ನೂರಕ್ಕಿಂತಲೂ ಹೆಚ್ಚು ಮಠಗಳು ಇರುತ್ತವೆ. ಇದೂ ಅಲ್ಲದೆ ಇಲ್ಲಿ ಅಂದಾಜು ಹದಿನೈದುನೂರು (೧೫೦೦)ಕ್ಕಿಂತಲೂ ಹೆಚ್ಚು ಮಂದಿರಗಳಿವೆ. ನಮ್ಮ ದೇಶದ ಬೇರೆ ಊರುಗಳೊಂದಿಗೆ ತುಲನೆಯನ್ನು ಮಾಡಿದಾಗ ಎಲ್ಲಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸನ್ಯಾಸಿಗಳೂ ಸಾಧುಸಂತರು ಮತ್ತು ಯೋಗಿಪುಂಗವರೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ.

ಇಲ್ಲಿರುವ ಮಠಗಳಲ್ಲಿ ಅತ್ಯಂತ ಪುರಾತನವಾದ ಮಠವೆಂದರೆ ಶ್ರೀಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ ಜಂಗಮವಾಡಿ ಮಹಾಮಠವೇ ಆಗಿದೆ. ಈ ಜ್ಞಾನಪೀಠದ ಕಲಿಯುಗದ ಆಚಾರ್ಯರಾದ ಶ್ರೀಜಗದ್ಗುರು ವಿಶ್ವಾರಾಧ್ಯರು ಹನ್ನೊಂದುನೂರು ವರ್ಷಗಳವರೆಗೆ ಇದ್ದು ಅನೇಕ ಲೀಲೆಗಳನ್ನು ಮಾಡಿ ಉತ್ತರ ಪ್ರದೇಶದಲ್ಲಿ ವೀರಶೈವ ಧರ್ಮ ತತ್ತ್ವಗಳನ್ನು ಪ್ರತಿಷ್ಠಾಪಿಸಿ ಪ್ರಸಾರಗೊಳಿಸಿದರು. ನಂತರ ತಮ್ಮ ಶಿಷ್ಯನಾದ ಮಲ್ಲಿಕಾರ್ಜುನ ಶಿವಾಚಾರ್ಯರೆಂಬವರಿಗೆ ಜ್ಞಾನಪೀಠದ ಅಧಿಕಾರವನ್ನು ವಹಿಸಿಕೊಟ್ಟು ಅವರು ಪುನಃ ವಿಶ್ವೇಶ್ವರ ಜ್ಯೋತಿರ್ಲಿಂಗದಲ್ಲಿಯೇ ವಿಲೀನರಾದರು. ಪೀಠಾಧಿಕಾರವನ್ನು ವಹಿಸಿಕೊಂಡ ಶ್ರೀಜಗದ್ಗುರು ಮಲ್ಲಿಕಾರ್ಜುನ ಭಗವತ್ಪಾದರು ತಮ್ಮ ಶಿವಯೋಗಸಾಮರ್ಥ್ಯದಿಂದ ಮುನ್ನೂರಾ ಹನ್ನೊಂದು (೩೧೧) ವರ್ಷಗಳವರೆಗೆ ಪೀಠಾಧ್ಯಕ್ಷರಾಗಿದ್ದು ಕೊನೆಗೆ ಸಜೀವ ಸಮಾಧಿಯನ್ನು ತೆಗೆದುಕೊಂಡಿದ್ದಾರೆ. ಅವರ ಆ ಸಮಾಧಿಯೇ ಶ್ರೀ ಜಂಗಮವಾಡಿ ಮಹಾಮಠದ ಕರ್ತೃಗದ್ದಿಗೆಯಾಗಿ ಇಂದಿಗೂ ಪೂಜೆಗೊಳ್ಳುತ್ತಲಿದೆ.

ಇವರ ನಂತರ ಈ ಪೀಠಪರಂಪರೆಯಲ್ಲಿ ಬಂದ ಎಲ್ಲ ಜಗದ್ಗುರುಗಳಿಗೆ ಮಲ್ಲಿಕಾರ್ಜುನ ಶಿವಾಚಾರ್ಯರೆಂಬ ನಾಮಾಂಕಿತವನ್ನು ಮಾಡುವ ಪರಂಪರೆಯು ರೂಢಿಯಲ್ಲಿ ಬಂದಿದೆ. ಈ ಪೀಠ ಪರಂಪರೆಯ ಐವತ್ತೊಂದನೆಯ (೫೧)ನೇ ಪೀಠಾಧಿಪತಿಗಳ ಕಾಲದಲ್ಲಿ ಕಾಶೀ ನರೇಶನಾದ ಜಯನಂದದೇವನು ಭೂದಾನವನ್ನು ಮಾಡಿದಂತೆ ನೇಪಾಳದ ಅರಸನಾದ ವಿಶ್ವಮಲ್ಲನೂ ಸಹ ಕ್ರಿ.ಶ. ೬೩೫ರಲ್ಲಿ ನೇಪಾಳದಲ್ಲಿರುವ ಕಾಶೀ ಪೀಠದ ಜಂಗಮ ಮಠಕ್ಕೆ ಭೂದಾನವನ್ನು ಮಾಡಿದ್ದಾನೆ. ನೇಪಾಳ ದೇಶದ ಅತಿ ಪ್ರಾಚೀನವಾದ ಭಕ್ತಪುರದಲ್ಲಿ ಆ ಮಠ ಹಾಗೂ ಶಿಲಾಶಾಸನಗಳು ಇಂದಿಗೂ ಉಪಲಬ್ಧವಾಗಿವೆ. ಈ ಕಾಶೀ ಮಹಾಪೀಠಕ್ಕೆ ಕೊಡಗು, ಕೆಳದಿ, ಮೈಸೂರು ಮೊದಲಾದ ಕರ್ನಾಟಕದ ರಾಜರುಗಳು ದಾನ ಮಾಡಿದ್ದಲ್ಲದೆ ಮಧ್ಯ ಪ್ರದೇಶದ ರೀವಾ ಮತ್ತು ಮೈಹರಗಳ ರಾಜರುಗಳು ದಾನ ಮಾಡಿದ ಉಲ್ಲೇಖಗಳಿವೆ. ಇದೇ ಪ್ರಕಾರ ಮೊಗಲ ಶಾಸಕರಾದ ಹುಮಾಯೂನ, ಅಕಬರ, ಜಹಾಂಗೀರ, ಶಹಾಜಹಾನ್ ಔರಂಗಜೇಬ ಮತ್ತು ಮಹಮ್ಮದ ಶಹಾ ಮೊದಲಾದ ಚಕ್ರವರ್ತಿಗಳು ಕ್ರಿ.ಶ. ೧೫೩೦ ರಿಂದ ೧೯೬೮ ರ ವರೆಗೆ ಕೊಡಲ್ಪಟ್ಟ ಅನೇಕ ಫರ್ಮಾನ್ (ದಾನಪತ್ರ)ಗಳು ಶ್ರೀ ಪೀಠದಲ್ಲಿ ಉಪಲಬ್ಧ ಇವೆ. ಹೀಗೆ ಹಿಂದೂ ಹಾಗೂ ಮುಸ್ಲಿಂ ಚಕ್ರವರ್ತಿಗಳಿಂದ ಮನ್ನಣೆಯನ್ನು ಪಡೆದ ಕಾಶೀ ಮಹಾಕ್ಷೇತ್ರದಲ್ಲಿ ಗೌರವಾನ್ವಿತವೂ ಸರ್ವರ ಶ್ರದ್ಧಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಥಾನವೂ ಆದ ಈ ಜಂಗಮವಾಡಿ ಮಹಾಮಠದಲ್ಲಿ ನೀವುಗಳೆಲ್ಲ ಒಂದು ತಿಂಗಳವರೆಗೆ ನಿವಾಸಗೈದು ಇಲ್ಲಿಯ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೀರಿ.

ವೀರಶೈವಂಗೆ ಶ್ರೀ ಕಾಶೀಕ್ಷೇತ್ರವು ಕೇವಲ ದೇವಕ್ಷೇತ್ರವಾಗಿರದೆ ಒಂದು ಗುರು ಕ್ಷೇತ್ರವೂ ಆಗಿದೆ. ಇಂಥ ಈ ಗುರುಕ್ಷೇತ್ರವಾದ ಜಂಗಮವಾಡಿ ಮಹಾಮಠದಲ್ಲಿ ಶ್ರೀ ಸಿದ್ಧಾಂತಶಿಖಾಮಣಿಯ ಲಿಂಗಷಟ್‌ಸ್ಥಲಾಂತರ್ಗತವಾದ ಮಾಹೇಶ್ವರಸ್ಥಲದ ಅವಾಂತರ ಸ್ಥಲಗಳ ಬಗ್ಗೆ ಆಲಿಸುತ್ತ ಬಂದಿದ್ದೀರಿ. ಇಂದು ಈ ಸ್ಥಲದಕೊನೆಯದಾದ ಜ್ಞಾನಾಚಾರ ಸ್ಥಲದ ಬಗ್ಗೆ ಪರ್ಯಾಲೋಚಿಸೋಣ. ಧರ್ಮಾಚಾರ ಹಾಗೂ ಭಾವಾ ಚಾರಗಳು ಮನುಷ್ಯನ ಆಧ್ಯಾತ್ಮಿಕ ಜೀವನಕ್ಕೆ ಎಷ್ಟು ಅವಶ್ಯಕವಾದವುಗಳೋ ಜ್ಞಾನವೂ ಸಹ ಅಷ್ಟೇ ಅವಶ್ಯಕವಾಗುತ್ತದೆ. ಅಂತಹ ಜ್ಞಾನದ ಸ್ವರೂಪವನ್ನು ತಿಳಿಸುವ ಸ್ಥಲವೇ ಜ್ಞಾನಾಚಾರ ಸ್ಥಲವು. ಅದನ್ನೇ ಪೂಜ್ಯಪಾದರು–

ಅಸ್ಯ ಜ್ಞಾನಸಮಾಚಾರೋ ಯೋಗಿನಃ ಸರ್ವದೇಹಿವಾಮ್ ॥
ಜ್ಞಾನಾಚಾರೋ ಯದುಕ್ತೋಽಯಂ ಜ್ಞಾನಾಚಾರಃ ಸ ಕಥ್ಯತೇ ॥

(ಸ.ಶಿ. ೧೬–೭೬)

ಈ ತೆರನಾಗಿ ಉಪದೇಶಿಸಿದ್ದಾರೆ. ಭಾವಾಚಾರ ಸಂಪನ್ನನಾದ ಶಿವಯೋಗಿಯಲ್ಲಿ ಉಂಟಾಗಿರುವ ಜ್ಞಾನವು ಎಲ್ಲರಿಗೂ ಪ್ರಾಪ್ತಿಮಾಡಿಕೊಳ್ಳಲು ಯೋಗ್ಯವಾಗಿರೋಣದ ರಿಂದ ಅದನ್ನು ತಿಳಿಸುವ ಸ್ಥಲವೇ ಜ್ಞಾನಾಚಾರ ಎಂಬುದಾಗಿ ಹೇಳಲ್ಪಡುತ್ತದೆ.

'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ಶ್ರುತಿವಚನದಂತೆ ಪರಶಿವ ಬ್ರಹ್ಮವು ಸದ್ರೂಪವೂ ಚಿದ್ರೂಪವೂ ಮತ್ತು ಆನಂದ ರೂಪವೂ ಆಗಿರುತ್ತದೆ. ಅದನ್ನು ಪಡೆಯಬೇಕಾದರೆ ಅದರ ಜ್ಞಾನವನ್ನು ಮಾಡಿಕೊಳ್ಳಬೇಕಾಗುತ್ತದೆ. ಇಂತಹ ಜ್ಞಾನವು ಸರ್ವರಿಗೂ ಅವಶ್ಯಕವಾಗಿರೋಣದರಿಂದ ಅದರ ಸ್ವರೂಪವನ್ನು ಪೂಜ್ಯರು–

ಶಿವಾದ್ವೈತಪರಂ ಜ್ಞಾನಂ ಜ್ಞಾನಮಿತ್ಯುಚ್ಯತೇ ಬುಧೈಃ।
ಸಿದ್ಧೇನ ವಾಪ್ಯಸಿದ್ಧೇನ ಫಲಂ ಜ್ಞಾನಾಂತರೇಣ ಕಿಮ್? ॥

ನಿರ್ಮಲಂ ಹಿ ಶಿವಜ್ಞಾನಂ ನಿಃಶ್ರೇಯುಸಕರಂ ಪರಮ್ ।
ರಾಗದ್ವೇಷಾದಿಕಲುಷಂ ಭೂಯಃ ಸಂಸೃತಿಕಾರಣಮ್ ॥

(ಸಿ.ಶಿ.೧೬, ೭೭–೭೮)

ಹೀಗೆ ವಿವರಿಸಿದ್ದಾರೆ. ಶಿವಾದ್ವೈತ ಜ್ಞಾನವೇ ಜ್ಞಾನ ಎಂಬುದಾಗಿ ಜ್ಞಾನಿಗಳು ಕರೆದಿದ್ದಾರೆ. ಆ ಜ್ಞಾನವು ಪ್ರಾಪ್ತವಾದ ನಂತರ ಬೇರೊಂದು ಜ್ಞಾನವು ಪ್ರಾಪ್ತವಾಗಲಿ ಅಥವಾ ಆಗದೇ ಇರಲಿ ಅದರಿಂದ ಯಾವ ಪ್ರಯೋಜನವು ಇರುವದಿಲ್ಲ. ಶಿವಾದ್ವೈತ ಜ್ಞಾನವು ನಿರ್ಮಲವಾದುದಾಗಿದೆ. ಅಂತೆಯೇ ಅದರಿಂದ ಸರ್ವೋತ್ಕೃಷ್ಟವಾದ ಮೋಕ್ಷವು ಪ್ರಾಪ್ತವಾಗುವದು. ಅದ ಕ್ಕಿಂತಲೂ ಭಿನ್ನವಾದ ಲೌಕಿಕವಾದ ಜ್ಞಾನವು ಯಾವದೇ ಇದ್ದರೂ ಅದು ರಾಗ–ದ್ವೇಷಾದಿಗಳಿಂದ ಕಲುಷಿತವಾಗಿರೋಣದರಿಂದ ಅದುವೇ ಪುನಃ ಸಂಸಾರಕ್ಕೆ ಕಾರಣೀಭೂತವಾಗಿರುತ್ತದೆ ಎಂಬುದು ಪೂಜ್ಯರ ಆಶಯವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಯೊಬ್ಬ ವ್ಯಕ್ತಿಯಲ್ಲಿ ಒಂದಿಲ್ಲೊಂದು ವಿಧವಾದ ಜ್ಞಾನವು ಇದ್ದೇ ಇರುತ್ತದೆ. ಆದರೆ ಯಾವ ಜ್ಞಾನದಿಂದ ಕೇವಲ ಹೊಟ್ಟೆ–ಬಟ್ಟೆಗಳ ವ್ಯವಸ್ಥೆಯಾಗುತ್ತದೆಯೋ ಅದಕ್ಕೆ ನಿಜವಾದ ಜ್ಞಾನವೆಂದು ಕರೆಯಲಾಗುವದಿಲ್ಲ. ಇನ್ನು ಯಾವ ಜ್ಞಾನದಿಂದ ಜೀವಾತ್ಮನು ಸಂಸಾರದ ಪಾಶಗಳಿಂದ ಮುಕ್ತನಾಗಿ ಮುಕ್ತಿಯನ್ನು ಪಡೆಯುವನೋ ಆ ಶಿವಾದ್ವೈತ ಜ್ಞಾನವೇ ನಿಜವಾದ ಜ್ಞಾನವೆಂಬುದು ಜ್ಞಾನಿಗಳ ಅಭಿಮತವಾಗಿರುತ್ತದೆ. ಈ ಜ್ಞಾನವೊಂದನ್ನು ಉಳಿದು ಗಣಿತ, ವಿಜ್ಞಾನ ಹಾಗೂ ಅನೇಕ ಭಾಷೆಗಳ ಪಾಂಡಿತ್ಯವನ್ನು ಪಡೆದಿದ್ದಾಗಲೂ ಅವುಗಳು ಪ್ರಯೋಜನಕಾರಿಗಳಾಗಲಾರವು.

ಒಂದಾನೊಂದು ಸಮಯದಲ್ಲಿ ಸಕಲಶಾಸ್ತ್ರ ಪಾರಂಗತನಾದ ಓರ್ವ ಪಂಡಿತನು ಪಾದಯಾತ್ರೆಯನ್ನು ಮಾಡುತ್ತ ಒಂದು ನದೀ ದಂಡೆಗೆ ಬಂದನು. ಮಳೆಗಾಲದ ಸಮಯ ನದಿ ತುಂಬಿ ಹರಿಯುತ್ತಿತ್ತು ಆದರಿಂದ ದಾಟಿ ಹೋಗಲೋಸುಗ ಅಲ್ಲಿರುವ ನಾವಿಕನ ಬಳಿಹೋಗಿ ಆಚೆಯ ದಡಕ್ಕೆ ಹೋಗುವ ವಿಚಾರವನ್ನು ತಿಳಿಸಿದನು. ನಾವಿಕನು ಅದಕ್ಕೆ ಒಪ್ಪಿಕೊಂಡು ಪಂಡಿತನನ್ನು ತನ್ನ ನೌಕೆಯಲ್ಲಿ ಕೂಡ್ರಿಸಿಕೊಂಡು ಪ್ರಯಾಣ ಹೊರಟನು. ನೌಕೆಯು ಸಾಗುತ್ತಿರುವಾಗ ಪಂಡಿತನು ಅಂಬಿಗನನ್ನು ಉದ್ದೇಶಿಸಿ ನೀನು ವ್ಯಾಕರಣ ಶಾಸ್ತ್ರವನ್ನು ಓದಿರುವಿಯಾ? ಎಂಬುದಾಗಿ ಪ್ರಶ್ನಿಸಿದನು.

ನಾವಿಕನು :–ಇಲ್ಲ ಪಂಡಿತರೆ ! ನಾನು ಅದನ್ನು ಓದಿಲ್ಲ.

ಪಂಡಿತ:– ಹಾಗಾದರೆ ಸಾಹಿತ್ಯವನ್ನೇನಾದರೂ ಓದಿರುವೆಯಾ ?

ನಾವಿಕ:– ಇಲ್ಲ ಅದನ್ನೂ ಓದಿಲ್ಲ.

ಪಂಡಿತ :– ದರ್ಶನಶಾಸ್ತ್ರವನ್ನೇನಾದರೂ ಓದಿರುವೆಯಾ ?

ನಾವಿಕ :– ಇಲ್ಲ ಗುರುಗಳೇ ! ನಾನು ಏನನ್ನೂ ಓದಿಯೇ ಇಲ್ಲ.

ಪಂಡಿತ :– ಹಾಗಾದರೆ ನಿನ್ನ ಅರ್ಧ ಜೀವನ ವ್ಯರ್ಥವಾಗಿ ಹೋಯಿತು.

ಈ ರೀತಿಯಾಗಿ ಇವರೀರ್ವರಲ್ಲಿ ಸಂಭಾಷಣೆ ನಡೆಯುರುತ್ತಿರುವಾಗಲೇ ಬಿರುಗಾಳಿಯು ಪ್ರಾರಂಭಿಸಿ ನಾವು ಅಲ್ಲೋಲ–ಕಲ್ಲೋಲವಾಗತೊಡಗಿತು. ಇನ್ನೇನು ನಾವಿನಿಂದ ಆ ದಡವನ್ನು ಸೇರುವದು ಅಸಾಧ್ಯವೆಂಬುದು ನಾವಿಕನಿಗೆ ಖಚಿತವಾದಾಗ ಅವನು ಪಂಡಿತನನ್ನುದ್ದೇಶಿಸಿ ನಿಮಗೆ ಈಜಲು ಬರುತ್ತದೆಯಾ? ಎಂಬುದಾಗಿ ಪ್ರಶ್ನಿಸಿದನು. ಆಗ ಪಂಡಿತನು ಗಾಬರಿಯಾಗಿ ಇಲ್ಲ ನನಗೆ ಈಜಲು ಬರುವದಿಲ್ಲ ಎಂಬುದಾಗಿ ಗದ್ಗದ ಕಂಠದಿಂದ ನುಡಿದನು. ಆಗ ನಾವಿಕನು ಪಂಡಿತರೇ ! ಹಾಗಾದರೆ ನಿಮ್ಮ ಸಂಪೂರ್ಣವಾದ ಜೀವನವೇ ಇಂದು ವ್ಯರ್ಥವಾಯಿತು ಎಂಬುದಾಗಿ ಹೇಳಿ ನಾವಿನಿಂದ ಜಿಗದು ಈಜಿ ಪಾರಾಗಿ ಹೋದನು. ಇತ್ತ ಸಕಲಶಾಸ್ತ್ರ ಪಾರಂಗತನಾಗಿದ್ದರೂ ಆ ಪಂಡಿತನು ಈಜೊಂದು ಬಾರದ ಕಾರಣದಿಂದಾಗಿ ಕೈಬಡೆಯುತ್ತ ಕಾಲು ಬಡೆಯುತ್ತ ನೀರು ಕುಡಿಯುತ್ತ ನದಿಯ ತಳವನ್ನು ಸೇರಿದನು.

ನೀರಿನಲ್ಲಿ ಪ್ರಯಾಣ ಮಾಡುವಾಗ ಎಲ್ಲ ವಿದ್ಯೆಗಳಲ್ಲಿ ಬಲ್ಲಿದನಾಗಿದ್ದರೂ ಈಜು ವಿದ್ಯೆ ಬಾರದ ಕಾರಣ ಆ ಪಂಡಿತನು ಮೃತ್ಯುಮುಖವನ್ನು ಸೇರಿದಂತೆ ಬೇರೆ ಬೇರೆ ಲೌಕಿಕ ವಿದ್ಯೆಗಳನ್ನು ಕಲಿತಿದ್ದರೂ ಶಿವಾದ್ವೈತ ಜ್ಞಾನವನ್ನು ಪಡೆಯದ ವ್ಯಕ್ತಿಯು ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಸಾರ ಸಾಗರದಲ್ಲಿ ಮುಳುಗಿ ಹೋಗುತ್ತಾನೆ. ಆದ್ದರಿಂದ ಇದೊಂದು ಜ್ಞಾನವಿದ್ದು ಬೇರಾವ ಜ್ಞಾನವಿರದಿದ್ದರೂ ಅವನಿಗೆ ಆದಾವ ಹಾನಿಯೂ ಉಂಟಾಗುವದಿಲ್ಲ. ಶಿವಾದ್ವೈತ ಜ್ಞಾನವು ಸಕಲ ದೋಷರಹಿತವಾಗಿರೋಣದರಿಂದ ಅದು ಸರ್ವೋತ್ಕೃಷ್ಟವಾದ ಮುಕ್ತಿಯನ್ನು ಪ್ರಾಪ್ತಿಮಾಡಿಕೊಡುತ್ತದೆ. ಉಳಿದ ಲೌಕಿಕ ಜ್ಞಾನಗಳು ರಾಗ–ದ್ವೇಷಾದಿಗಳಿಂದ ಕಲುಷಿತವಾಗಿರೋಣದರಿಂದ ಅವುಗಳನ್ನು ಪಡೆದವನು ಆದಾವನೇ ಇದ್ದರೂ ಅವನು ಪುನಃ ಪುನಃ ಸಂಸಾರದಲ್ಲಿ ಬರಬೇಕಾಗುತ್ತದೆ.

ಈ ಜಗತ್ತಿನಲ್ಲಿ ಲೌಕಿಕ ವಿದ್ಯೆಯನ್ನು ಕಲಿತ ವ್ಯಕ್ತಿಗಳಲ್ಲಿ ಪರಸ್ಪರ ಸ್ಪರ್ಧೆ ಇರುವದನ್ನು ಕಾಣುತ್ತೇವೆ. ನಾ ಮುಂದೆ ನೀಮುಂದೆ ಎಂದು ಸಾಗುತ್ತಿರುವಾಗ ಪರಸ್ಪರರಲ್ಲಿ ರಾಗದ್ವೇಷಾದಿಗಳು ಉತ್ಪನ್ನವಾಗುವದು ಸಹಜವೇ. ಆತ್ಮಜ್ಞಾನ ಸಂಪನ್ನನಾದ ಶಿವಯೋಗಿಯಲ್ಲಿ ಭೇದ ಜ್ಞಾನವೇ ಇಲ್ಲದಾಗಿ ಹೋಗಿರೋಣದರಿಂದ ಅವನಲ್ಲಿ ಅನುಕೂಲ–ಪ್ರತಿಕೂಲ ಭಾವನೆಗಳು ಬರಲಾರವು. ಈ ಭಾವನೆಗಳು ಬಾರದ್ದರಿಂದಲೇ ಇಲ್ಲಿ ರಾಗ–ದ್ವೇಷಾದಿಗಳಿಗೆ ಅವಕಾಶವಿರುವದಿಲ್ಲ. ಆದ್ದರಿಂದ ಶಿವಾದ್ವೈತ ಜ್ಞಾನವು ಶುದ್ಧವಾಗಿ ಮುಕ್ತಿಗೆ ಸಾಧನವಾದರೆ ರಾಗ–ದ್ವೇಷಾದಿಗಳಿಂದ ಕಲುಷಿತವಾದ ಲೌಕಿಕ ಜ್ಞಾನವು ಪುನಃ ಸಂಸಾರಕ್ಕೆ ಕಾರಣವಾಗಿರುತ್ತದೆ.

ಇಲ್ಲಿಯವರೆಗೆ ಪೂಜ್ಯಪಾದರು ಜ್ಞಾನದ ಸ್ವರೂಪವನ್ನು ವಿವರಿಸಿ ಇನ್ನು ಅದರ ಆಚಾರ ಸ್ವರೂಪವನ್ನೂ ತಿಳಿಸಲೋಸುಗ–

ಪರಿಪೂರ್ಣಂ ಮಹಾಜ್ಞಾನಂ ಪರತತ್ತ್ವಪ್ರಕಾಶಕಮ್ ।
ಅವಲಂಬ್ಯ ಪ್ರವೃತ್ತೋ ಯೋ ಜ್ಞಾನಾಚಾರಃ ಸ ಉಚ್ಯತೇ ॥

ನಿರ್ವಿಕಲ್ಪೇ ಪರೇ ಧಾಮ್ನಿ ನಿಷ್ಕಲೇ ಶಿವನಾಮನಿ
ಜ್ಞಾನೇನ ಯೋಜಯೇತ್ ಸರ್ವಂ ಜ್ಞಾನಾಚಾರೀ ಪ್ರಕೀರ್ತಿತಃ ॥

(ಸಿ.ಶಿ. ೧೬, ೭೯ – ೮೦)

ಈ ವಿಧವಾಗಿ ಉಪದೇಶಿಸಿದ್ದಾರೆ. ಪರತತ್ತ್ವವನ್ನು ಪ್ರಕಾಶಗೊಳಿಸುವ ಪರಿಪೂರ್ಣ ವಾದ ಶಿವಾದ್ವೈತ ಜ್ಞಾನವನ್ನು ಅವಲಂಬಿಸಿ ಯಾವ ಆಚಾರವು ಪ್ರತಿಪಾದಿಸಲ್ಪಡುತ್ತದೆಯೋ ಅದಕ್ಕೆ ಜ್ಞಾನಾಚಾರವೆಂದು ಕರೆಯುತ್ತಾರೆ. ಇನ್ನು ನಿರವಯವನಾದ ಭೇದರಹಿತನಾದ ಶಿವವೆಂಬ ಪರವಸ್ತುವಿನಲ್ಲಿ ಸಂಪೂರ್ಣವಾದ ಜಗಜ್ಜಾಲವನ್ನೂ ಅಭೇದ ಜ್ಞಾನದಿಂದ ಯಾರು ಸಂಬಂಧಗೊಳಿಸುವರೋ ಅವರಿಗೆ ಜ್ಞಾನಾಚಾರಿ ಎನ್ನುತ್ತಾರೆ.

ವೀರಶೈವ ಸಿದ್ಧಾಂತದಲ್ಲಿ ಪ್ರಪಂಚವನ್ನೇ ಮೊದಲು ಮಾಡಿಕೊಂಡು ಪರಮಾತ್ಮನವರೆಗಿರುವ ಎಲ್ಲ ಪದಾರ್ಥಗಳಿಗೆ ತತ್ತ್ವ ಎಂಬುದಾಗಿ ಪ್ರತಿಪಾದಿಸಲಾಗಿದೆ. ಪೃಥ್ವಿಯನ್ನೇ ಮೊದಲು ಮಾಡಿಕೊಂಡು ಶಿವನವರೆಗೆ ಒಟ್ಟು ಮೂವತ್ತಾರು ತತ್ತ್ವಗಳು ಪ್ರತಿಪಾದಿಸಲ್ಪಟ್ಟಿವೆ. ಈ ಎಲ್ಲ ತತ್ತ್ವಗಳಲ್ಲಿ ಶಿವತತ್ತ್ವವೇ ಸರ್ವೋತ್ಕೃಷ್ಟವಾದುದು. ಅಂತೆಯೇ ಅದು ಪರಿಪೂರ್ಣವಾಗಿರುತ್ತದೆ. ಪ್ರಪಂಚದೊಳಗಿನ ಎಲ್ಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಸ್ತುಗಳು ಅಪೂರ್ಣಗಳೇ ಆಗಿವೆ. ಅವುಗಳೆಲ್ಲ ಕಾಲ, ವಸ್ತು ಮತ್ತು ದೇಶಗಳಿಂದ ಪರಿಚ್ಛಿನ್ನಗಳಾಗಿರುತ್ತವೆ. ಈ ಕಾಲದಲ್ಲಿದ್ದು ಇನ್ನೊಂದು ಕಾಲದಲ್ಲಿ ಇಲ್ಲದಿರುವದು ಕಾಲಪರಿಚ್ಛೇದವು, ಒಂದು ಸ್ಥಾನದಲ್ಲಿ ಇದ್ದು ಇನ್ನೊಂದು ಸ್ಥಾನದಲ್ಲಿ ಇಲ್ಲದಿರುವದೇ ದೇಶ ಪರಿಚ್ಛೇದವು. ಘಟವು ಪಟವಲ್ಲ ಪಟವು ಘಟವಲ್ಲವೆಂಬ ವಸ್ತುಗಳ ಅನ್ಯೋನ್ಯಾಭಾವಕ್ಕೆ ವಸ್ತು ಪರಿಚ್ಛೇದವೆನ್ನುವರು. ಹೀಗೆ ಯಾವದು ಅಪೂರ್ಣವಾದುದೋ ಅದು ಪರಿಚ್ಛಿನ್ನವಾಗಿರುತ್ತದೆ. ಇನ್ನು ಯಾವದು ಪರಿಪೂರ್ಣವಾದುದೋ ಅದು ಅಪರಿಚ್ಛಿನ್ನವಾಗಿರುತ್ತದೆ. ಶಿವತತ್ತ್ವವು ಪರಿಪೂರ್ಣವಾಗಿರುವದರಿಂದ ಅದು ಅಪರಿಚ್ಛಿನ್ನವೆಂದು ಭಾವಿಸಬೇಕು. ಹೀಗೆ ಪರಿಪೂರ್ಣವಾದ ಪರಮಾತ್ಮನ ಜ್ಞಾನವನ್ನು ಅವಲಂಬಿಸಿ ಪ್ರವೃತ್ತವಾದ ಆಚಾರಕ್ಕೆ ಜ್ಞಾನಾಚಾರವೆಂದು ಕರೆಯುತ್ತಾರೆ.

ಎಲ್ಲವೂ ಪರಮಾತ್ಮಸ್ವರೂಪವಾಗಿದ್ದರೂ ನಮಗೆ ಪ್ರತಿಯೊಂದು ವಸ್ತುವು ಭಿನ್ನ ಭಿನ್ನವಾಗಿಯೇ ತೋರುತವೆಯಲ್ಲಾ? ಇದಕ್ಕೇನು ಮಾಡಬೇಕು? ಎಂಬ ಪ್ರಶ್ನೆಯುದ್ಭವಿಸಿದಾಗ ತೋರುವ ಪ್ರತಿಯೊಂದು ವಸ್ತುವಿನಲ್ಲಿಯೂ ಸತ್ತು ಚಿತ್ತು ಆನಂದ ರೂಪನಾಗಿ ಓರ್ವನೇ ಆದ ಪರಮಾತ್ಮನು ಇದ್ದಾನೆಂಬುದಾಗಿ ಮನನ ಮಾಡುತ್ತ ಹೋದರೆ ಸರ್ವವೆಲ್ಲವೂ ಶಿವರೂಪವಾಗಿಯೇ ಅನುಭವ ಗೋಚರವಾಗುವವು. ಹೀಗೆ ತನ ಗುಂಟಾದ ಶಿವಾದ್ವೈತ ಜ್ಞಾನವನ್ನು ಮನನ ಮಾಡುವವನಿಗೆ ಜ್ಞಾನಾಚಾರಿ ಎಂಬುದಾಗಿ ಕರೆಯುತ್ತಾರೆ.

ಹೀಗೆ ಜ್ಞಾನಾಚಾರಿಯಾದ ಶಿವಯೋಗಿಗೆ ಕರ್ಮದ ಕಟ್ಟಳೆ ಇರುವದಿಲ್ಲ ಎಂಬ ವಿಷಯವನ್ನು ಪೂಜ್ಯರು ಪುನ–

> ಜ್ಞಾನಂ ಮುಕ್ತಿಪ್ರದಂ ಪ್ರಾಪ್ಯ ಗುರುದೃಷ್ಟಿಪ್ರಸಾದತಃ ।
> ಕಃ ಕುರ್ಯಾತ್ ಕರ್ಮಕಾರ್ಪಣ್ಯೇ ವಾಂಛಾಂ ಸಂಸಾರವರ್ಧನೇ ॥
>
> ಕರ್ಮಜ್ಞಾನಾಗ್ನಿನಾ ದಗ್ಧಂ ನ ಪ್ರರೋಹೇತ್ ಕಥಂಚನ ।
> ಯದಾಹುಃ ಸಂಸೃತೇರ್ಮೂಲಂ ಪ್ರವಾಹಾನುಗತಂ ಬುಧಾಃ ॥
>
> (ಸಿ.ಶಿ. ೧೬, ೮೧–೮೨)

ಈ ಪ್ರಕಾರವಾಗಿ ವಿವರಿಸಿದ್ದಾರೆ. ಗುರುವಿನ ಕೃಪಾದೃಷ್ಟಿ ಪ್ರಸಾದದಿಂದ ಮುಕ್ತಿಪ್ರದವಾದ ಜ್ಞಾನವನ್ನು ಪಡೆದಬಳಿಕ ಸಂಸಾರದ ವೃದ್ಧಿಗೆ ಕಾರಣೀಭೂತವಾದ ಕರ್ಮವನ್ನು ಮಾಡಲು ಅದಾರಿಗೆ ತಾನೇ ಇಚ್ಛೆಯುಂಟಾದೀತು ? ಯಾರಿಗೂ ಆಗುವದಿಲ್ಲವೆಂಬ ತಾತ್ಪರ್ಯವು. ಇನ್ನು ಸಂಸಾರದ ಪ್ರವಾಹಕ್ಕೆ ಮೂಲ ಕಾರಣವಾಗಿರುವ ಕರ್ಮವು ಜ್ಞಾನಾಗ್ನಿಯಿಂದ ದಗ್ಧವಾಗಿರೋಣದರಿಂದ ಅದು ಮುಂದಿನ ಸಂಸಾರದ ಪ್ರವಾಹಕ್ಕೆ ಕಾರಣವಾಗಲಾರದು.

ಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳಲು ತನ್ನ ಪರಿಶ್ರಮ ಹಾಗೂ ಸಾಧನೆಗಳು ಎಷ್ಟು ಮುಖ್ಯವಾದವುಗಳೋ ಗುರುವಿನ ಕೃಪಾದೃಷ್ಟಿಯೂ ಸಹ ಅಷ್ಟೇ ಪ್ರಮುಖವಾದುದು. ಗುರು ಕೃಪೆಯನ್ನು ಸಂಪಾದಿಸದವನು ಅದೆಷ್ಟು ಅಭ್ಯಾಸವನ್ನು ಮಾಡಿದರೂ ಅವನ ಆ ಶ್ರಮವು ನಿರರ್ಥಕವಾಗುವದು. ಆದ ಕಾರಣ ಮುಕ್ತಿಯ ಪ್ರಾಪ್ತಿಯಲ್ಲಿ ಜ್ಞಾನದಷ್ಟೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುವಿನ ಅನುಗ್ರಹವೂ ಸಹ ಕಾರಣವೆಂಬುದಾಗಿ ತಿಳಿದುಕೊಳ್ಳಬೇಕು. ಹೀಗೆ ಗುರುಕೃಪೆ ಹಾಗೂ ಸ್ವಪ್ರಯತ್ನ ಮೂಲಕ ಪ್ರಾಪ್ತವಾದ ಜ್ಞಾನದಿಂದ ಮುಕ್ತಿಯನ್ನು ಸಂಪಾದಿಸಿದ ವ್ಯಕ್ತಿಗೆ ಸಂಸಾರವನ್ನು ವರ್ಜಿಸುವ ಕರ್ಮಗಳಲ್ಲಿ ಇಚ್ಛೆಯು ಉಂಟಾಗುವದಿಲ್ಲ. ಇನ್ನು ಈ ಶಿವಯೋಗಿಯಲ್ಲಿ ಉತ್ಪನ್ನವಾಗಿರುವ ಜ್ಞಾನಾಗ್ನಿಯು ಸಂಚಿತ ಕರ್ಮಗಳನ್ನೆಲ್ಲ ಸುಟ್ಟುಹಾಕೋಣದರಿಂದ ಆ ಕರ್ಮಗಳು ಪುನಃ ಈತನ ಜನ್ಮಗಳಿಗೆ ಕಾರಣಗಳಾಗುವದಿಲ್ಲ. ಇನ್ನು ಇವನಲ್ಲಿ ಅಕರ್ತೃತ್ವ ಭಾವನೆಯು ಪ್ರಾದುರ್ಭವಿಸಿರೋಣದರಿಂದ ಹೊಸ ಕರ್ಮಗಳು ಸಹ ಉತ್ಪನ್ನಗಳಾಗಲಾರವು. ಹೀಗೆ ಜ್ಞಾನಿಯು ಪುನರ್ಜನ್ಮಕ್ಕೆ ಕಾರಣೀಭೂತವಾಗಿರುವ ಕರ್ಮದಿಂದ ನಿರ್ಮುಕ್ತನಾಗಿರುತ್ತಾನೆ.

ಜ್ಞಾನಿಗಳಿಗೆ ಕರ್ಮಗಳು ಬಂಧಿಸುವದಿಲ್ಲವೆಂದ ಬಳಿಕ ಈ ಕರ್ಮಬಂಧನವು ಯಾರಿಗೆ ? ಎಂಬ ಪ್ರಶ್ನೆಯುದ್ಭವಿಸಿದಾಗ ಪೂಜ್ಯಪಾದರು ಪುನಃ–

ಜ್ಞಾನೇನ ಹೀನಃ ಪುರುಷಃ ಕರ್ಮಣಾ ಬದ್ಧ್ಯತೇ ಸದಾ ।
ಜ್ಞಾನಿನಃ ಕರ್ಮಸಂಕಲ್ಪಾ ಭವಂತಿ ಕಿಲ ನಿಷ್ಫಲಾಃ ॥

(ಸಿ.ಶಿ. ೧೬–೮೩)

ಈ ರೀತಿಯಾಗಿ ಪ್ರತಿಪಾದಿಸಿದ್ದಾರೆ. ಜ್ಞಾನಹೀನನಾದ ವ್ಯಕ್ತಿಯು ಕರ್ಮಜಾಲದಿಂದ ಕಟ್ಟಲ್ಪಡುತ್ತಾನೆ. ಆದರೆ ಜ್ಞಾನಿಗಳಿಂದ ಉಂಟಾಗುವ ಕರ್ಮಗಳು ನಿಷ್ಫಲಗಳಾಗಿರೋಣದರಿಂದ ಅವುಗಳು ಬಂಧನಕಾರಿಗಳಾಗಲಾರವು.

ಅಜ್ಞರಾದ ಜೀವಿಗಳು ಕರ್ಮ ಬಂಧನಕ್ಕೊಳಗಾಗುವರೇ ವಿನಃ ಜ್ಞಾನಿಗಳು ಅದರಿಂದ ಮುಕ್ತರಾಗುತ್ತಾರೆ. ''ಯಥಾ ಪುಷ್ಕರಪಲಾಶ ಆಪೋ ನ ಶ್ಲಿಷ್ಯಂತೇ'' ಅಂದರೆ ಸರೋವರದ ನೀರು ಅಲ್ಲಿರುವ ಕಮಲದ ಎಲೆಗೆ ಸೋಂಕದಿರುವಂತೆ ಜ್ಞಾನಿಯಾದ ವ್ಯಕ್ತಿಗೆ ಕರ್ಮವು ಸೋಂಕುವದಿಲ್ಲ. ಆದರೆ ಜ್ಞಾನಹೀನನಾದ ವ್ಯಕ್ತಿಯು ಮಾತ್ರ ಕರ್ಮಬಂಧನದಲ್ಲಿ ಸಿಲುಕಿಕೊಳ್ಳುತ್ತಾನೆ.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಈ ಜ್ಞಾನಾಚಾರ ಸ್ಥಲವನ್ನು ಪರಿಸಮಾಪ್ತಿಗೊಳಿಸುತ್ತ ಕೊನೆಯದಾಗಿ–

ಶುದ್ಧಾಚಾರೇ ಶುದ್ಧಭಾವೋ ವಿವೇಕೀಜ್ಯೋತಿಃ ಪಶ್ಯನ್ ಸರ್ವತಶ್ಚೈವ ಮೇಕಮ್ ।
ಜ್ಞಾನಧ್ವಸ್ತಪ್ರಾಕೃತಾತ್ಮಪ್ರಪಂಚೋ ಜೀವನ್ಮುಕ್ತಶ್ಚೇಷ್ಟತೇ ದಿವ್ಯಯೋಗೀ ॥

(ಸಿ.ಶಿ. ೧೬–೮೪)

ಹೀಗೆ ವಿವರಿಸಿದ್ದಾರೆ. ಶುದ್ಧಾಚಾರಿಯು ಹಾಗೂ ಶುದ್ಧಭಾವನೆಯುಳ್ಳ ವಿವೇಕಿಯು ಸರ್ವತ್ರ ಒಂದೇಯಾದ ಜ್ಯೋತಿಯನ್ನು ಕಾಣುತ್ತಿರುತ್ತಾನೆ. ಈ ಜ್ಯೋತಿಯ ಸಾಕ್ಷಾತ್ಕಾರ ರೂಪವಾದ ಜ್ಞಾನದಿಂದ ಪ್ರಾಕೃತ ಪ್ರಪಂಚವನ್ನು ಧ್ವಂಸ ಮಾಡಿಕೊಂಡ ಆ ದಿವ್ಯ ಯೋಗಿಯು ಜೀವನ್ಮುಕ್ತನಾಗಿದ್ದು ಸಾಮಾನ್ಯ ಜನರಂತೆ ವ್ಯವಹರಿಸುತ್ತಿರುತ್ತಾನೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜ್ಯಪಾದರು ಈ ಕೊನೆಯದಾದ ಉಪದೇಶದಲ್ಲಿ ಶುದ್ಧ ಆಚಾರ ಶುದ್ಧ ಭಾವನೆ ಹಾಗೂ ಪರಿಶುದ್ಧ ಜ್ಞಾನಗಳ ಒಂದು ಸಮನ್ವಯ ಸ್ವರೂಪವನ್ನು ಇಲ್ಲಿ ಉಪದೇಶಿಸಿದ್ದಾರೆ. ಶಾಸ್ತ್ರದಲ್ಲಿ ಉಪದೇಶಿಸಲ್ಪಟ್ಟ ವಿಹಿತ ಕರ್ಮಗಳನ್ನು ಆಚರಿಸುವದೇ ಶುದ್ಧಾಚಾರವು. ಈ ಕರ್ಮಗಳನ್ನು ಆಚರಿಸುವಾಗ ಅಹಂಭಾವನೆಯನ್ನು ತಾಳದಿರುವದೇ ಶುದ್ಧಭಾವನೆಯು. ಇನ್ನು ಶರೀರ, ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳಿಗಿಂದಲೂ ವ್ಯತಿರಿಕ್ತವಾದ ಆತ್ಮಸ್ವರೂಪವನ್ನು ತಿಳಿಯುವದೇ ವಿವೇಕವು. ಹೀಗೆ ಶುದ್ಧ ಆಚಾರ, ಶುದ್ಧಭಾವನೆ ಹಾಗೂ ವಿವೇಕದಿಂದ ಕೂಡಿದ ದಿವ್ಯ ಯೋಗಿಯು ಎಲ್ಲೆಡೆಯಲ್ಲಿ ಆತ್ಮಜ್ಯೋತಿಯನ್ನೇ ಕಾಣುತ್ತ ತನ್ನ ಪ್ರಾಕ್ತನ ಪ್ರಾಕೃತ ಪ್ರಪಂಚವನ್ನು ಇಲ್ಲದಾಗಿಸಿಕೊಂಡು ಜೀವನ್ಮುಕ್ತಾವಸ್ಥೆಯಲ್ಲಿ ತಾನಿದ್ದರೂ ನೋಡುವವರಿಗೆ ಸಾಮಾನ್ಯ ವ್ಯಕ್ತಿಗಳಂತೆ ತೋರುತ್ತಿರುತ್ತಾನೆ.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಲಿಂಗಷಟ್‌ಸ್ಥಲಾಂತರ್ಗತವಾದ ಈ ಮಾಹೇಶ್ವರ ಸ್ಥಲದಲ್ಲಿ ಕ್ರಿಯಾಗಮ, ಭಾವಾಗಮ, ಜ್ಞಾನಾಗಮ, ಸಕಾಯ, ಅಕಾಯ, ಪರಕಾಯ ಧರ್ಮಾಚಾರ, ಭಾವಾಚಾರ ಮತ್ತು ಜ್ಞಾನಾಚಾರ ಸ್ಥಲಗಳ ಬಗ್ಗೆ ಬಹು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಇಲ್ಲಿಯ ಪ್ರತಿಯೊಂದು ಅವಾಂತರ ಸ್ಥಲಗಳಲ್ಲಿ ಬಂದಿರುವ ರಹಸ್ಯಾರ್ಥವನ್ನು ಪ್ರತಿಯೊಬ್ಬರು ಅರ್ಥಮಾಡಿಕೊಂಡು ಅದರಂತೆ ಆಚರಿಸಿ ಈ ಸ್ಥಲದ ಕೊನೆಯಲ್ಲಿ ಹೇಳಿದ ಜೀವನ್ಮುಕ್ತನ ವಿಲಕ್ಷಣವಾದ ಸ್ಥಿತಿಯನ್ನು ಪಡೆದುಕೊಳ್ಳುವ ಯೋಗ್ಯತೆಯು ನಿಮ್ಮೆಲ್ಲರಿಗೂ ಪ್ರಾಪ್ತವಾಗಲೆಂಬುದಾಗಿ ಅನುಗ್ರಹಿಸಿ ಇಂದಿನ ಆಶೀರ್ವಚನಕ್ಕೆ ವಿರಾಮವನ್ನೀಯಲಾಗುವದು.

ಓಂ ಶಾಂತಿಃ ಶಾಂತಿಃ ಶಾಂತಿ :

ಇಂತು ಶ್ರೀ ಸಿದ್ಧಾಂತ ಶಿಖಾಮಣಿಯ ಹದಿನಾರನೇ ಪರಿಚ್ಛೇದವು ಪೂರ್ಣವಾದುದು.

ದಿನಾಂಕ : ೧೬ ಅಗಷ್ಟ ೧೯೯೩

ಜ್ಞಾನಮಂದಿರ, ಜಂಗಮವಾಡಿ ಮಠ ವಾರಾಣಸಿ

...ADGURU VISHWARADHYA
..NA SIMHASAN JNANAMANDIR
LIBRARY
Jangamawadi Math, Varanasi
Acc. No. ....7204..............

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Ṣarayu Trust. Funding by MoE-IKS

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ಜಗತ್ತಿನ ಸಮಸ್ತ ಮಾನವರನ್ನು ಕುರಿತು ಉಪದೇಶಮಾಡಿದ ದಿವ್ಯ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿಯು. ಇದನ್ನು ಸಂಗ್ರಹಿಸಿ ಬರೆದವರೇ ಶ್ರೀ ಶಿವಯೋಗಿ ಶಿವಾಚಾರ್ಯರು. ಇಪ್ಪತ್ತೆಂಟು ಶಿವಾಗಮಗಳ ಸಾರಸರ್ವಸ್ವವಾಗಿರುವ ಈ ಗ್ರಂಥದಲ್ಲಿ ಪ್ರಸಂಗಾನುಸಾರವಾಗಿ ವೈದಿಕ ಮಂತ್ರಗಳನ್ನು ಪ್ರಮಾಣವಾಗಿ ಉದಾಹರಿಸಲಾಗಿದೆ. ಅಂತೆಯೇ "ಶ್ರೀ ವೇದಾಗಮ ವೀರಶೈವಸರಣೇಂ" ಎಂಬುದಾಗಿ ಶ್ರೀ ಶಿವಯೋಗಿ ಶಿವಾಚಾರ್ಯರೇ ಹೇಳುವಂತೆ ಈ ಗ್ರಂಥವು ವೇದಾಗಮಗಳಲ್ಲಿ ಬರುವ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದೆ.

ಸಂಸ್ಕೃತ ಭಾಷೆಯಲ್ಲಿರುವ ಈ ಸಿದ್ಧಾಂತ ಗ್ರಂಥವು ಸಾಮಾನ್ಯ ಜನರಿಗೂ ತಿಳಿಯಬೇಕೆಂಬ ಸದುದ್ದೇಶದಿಂದ ಶ್ರೀಮತ್ ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸನ್ನಿಧಿಯವರು ಪೂರ್ವಾಶ್ರಮದಲ್ಲಿ ಗುಳೇದಗುಡ್ಡ ಅಮರೇಶ್ವರ ಮಠದ ಪಟ್ಟಾಧ್ಯಕ್ಷರಾಗಿದ್ದಾಗಲೇ "ಶ್ರೀ ಸಿದ್ಧಾಂತ ಶಿಖಾಮಣಿ - ಪ್ರವಚನ ಪ್ರಭೆ" ಎಂಬ ಪ್ರವಚನ ಮಾಲಿಕೆಯನ್ನು ಪ್ರಾರಂಭಿಸಿದ್ದು ಸದ್ಯಃ ಉಳಿದೆಲ್ಲ ಕಿರಣಗಳು ಪ್ರಕಟವಾಗುತ್ತಲಿವೆ. ಪೂಜ್ಯ ಜಗದ್ಗುರುಗಳು ಅನೇಕ ಯುಕ್ತಿ ದೃಷ್ಟಾಂತಗಳ ಮೂಲಕ ಕಠಿಣ ವಿಷಯವನ್ನು ಸರಲೀಕರಿಸಿದ್ದಾರೆ.

ಶ್ರೀ ಮಹಾಸನ್ನಿಧಿಯವರು ಆಶೀರ್ವಚನಗಳನ್ನು ಸಂಗ್ರಹಿಸಿ ಸಂಪಾದಿಸುವಲ್ಲಿ ಬಬಲೇಶ್ವರ ಬೃಹನ್ಮಠ "ವೇದಾಂತಾಚಾರ್ಯ" ಶ್ರೀ ಷ.ಬ್ರ. ಡಾ. ಮಹಾದೇವ ಶಿವಾಚಾರ್ಯರ ಪಾತ್ರ ಬಹು ಮುಖ್ಯವಾದುದು. ಕನ್ನಡ ನಾಡಿನ ಜನತೆ ಶ್ರೀ ಮಹಾಸನ್ನಿಧಿಯ ಆಶೀರ್ವಚನಗಳನ್ನು ಧ್ವನಿ ಸುರುಳಿಯಲ್ಲಿ ಆಲಿಸುವಂತೆ ಗ್ರಂಥವನ್ನು ಅವಲೋಕಿಸಿಯೂ ಸುಖಿಗಳಾಗಲಿ.

CC0. In Public Domain. Jangamwadi Math Collection, Varanasi